BROWN BOOK

UNIVERSAL LIBRARY
OU_198244
UNIVERSAL LIBRARY

ಇಪ್ಪತ್ತೆಂಟನೇ ಪ್ರಕಟನೆ:

ಗಾಂಧೀ ವಿಚಾರದೋಹನ

– ಗಾಂಧಿಜಿಯವರ ಅನುಮತಿಯಿಂದ ಪ್ರಕಟಿಸಿದ್ದು –

ಲೇಖಕರು:

ಶ್ರೀ. ಕಿಶೋರ್‌ಲಾಲ್ ಮಶ್ರುವಾಲಾ

ಅನುವಾದಕರು:

ಗುರುನಾಥ ಜೋಶಿ

(ಹಿಂದೀ ಜ್ಞಾನಯಾತ್ರೀ ಮಂಡಳ)

ಸಂಪಾದಕರು:

ರಂಗನಾಥ ರಾ. ದಿವಾಕರ

Post Graduate Library

College of Arts & Commerce, O. U.

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಪ್ರಕಾಶಕರು:
ಮ. ಗೋವಿಂದರಾವ್
ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಮೊದಲನೆಯ ಮುದ್ರಣ: ೧೯೩೬ನೇ ಸಪ್ಟೆಂಬರ್
ಎರಡನೆಯ ಮುದ್ರಣ: ೧೯೪೬ನೇ ಜನೆವರಿ
ಮೂರನೆಯ ಮುದ್ರಣ: ೧೯೫೧ನೇ ಜೂನ್
ನಾಲ್ಕನೆಯ ಮುದ್ರಣ: ೧೯೬೨ನೇ ಫೆಬ್ರುವರಿ

ಬೆಲೆ: ೩-೦೦

ಮುದ್ರಕರು:
ಆರ್. ಬಿ. ವೈದ್ಯ
ಸಾಧನಾ ಪ್ರೆಸ್, ಧಾರವಾಡ

ಪ ರಿ ವಿ ಡಿ

		ಪುಟ
ಮೂರನೇ ಮುದ್ರಣಕ್ಕೆ ಪ್ರಕಾಶಕರ ಎರಡು ಮಾತು	...	6
ಗಾಂಧಿಜಿಯವರ ಒಪ್ಪಿಗೆ	....	7
ಮೊದಲನೇ ಮುದ್ರಣದ ಮುನ್ನುಡಿ	... ...	8–9
ಎರಡನೇ ಮುದ್ರಣದ ಮುನ್ನುಡಿ	....	9
ಶ್ರೀ. ಕಿಶೋರ್‌ಲಾಲರ ನಿವೇದನ	... ...	10–12
ಅನುವಾದಕರ ನಾಲ್ಕು ಮಾತು	... ...	13–14
ಗಾಂಧೀ ವಿಚಾರದೋಹನ	....	೧–೧೯

ಪ್ರಥಮ ಖಂಡ: **ಧರ್ಮ** ೧–೨೦

೧. ಪರಮಾತ್ಮ ೨. ಸತ್ಯ ೩. ಅಹಿಂಸೆ ೪. ಬ್ರಹ್ಮಚರ್ಯ ೫. ಅಸ್ವಾದ ೬. ಅಸ್ತೇಯ ೭. ಅಪರಿಗ್ರಹ ೮. ಶಾರೀರಿಕ ಶ್ರಮ ೯. ಸ್ವದೇಶಿ ೧೦. ಅಭಯ ೧೧. ನಮ್ರತೆ ೧೨. ವ್ರತ-ಪ್ರತಿಜ್ಞೆ ೧೩. ಉಪಾಸನೆ–ಪ್ರಾರ್ಥನೆ ೧೪. ವ್ರತಗಳ ಸಾಧನೆ.

ದ್ವಿತೀಯ ಖಂಡ: **ಧರ್ಮಮಾರ್ಗಗಳು** ೨೦–೨೫

೧. ಸರ್ವಧರ್ಮ ಸಮಭಾವ ೨. ಧರ್ಮ ಮತ್ತು ಅಧರ್ಮ ೩. ಸತ್ಯಾಗ್ರಹ ೪. ಹಿಂದೂ ಧರ್ಮ ೫. ಗೀತೆ–ರಾಮಾಯಣ.

ತೃತೀಯ ಖಂಡ: **ಸಮಾಜ** ೨೫–೪೨

೧. ವರ್ಣಾಶ್ರಮ ೨. ವರ್ಣಧರ್ಮ ೩. ಆಶ್ರಮ ೪. ಸ್ತ್ರೀ-ಜಾತಿ ೫. ಅಸ್ಪೃಶ್ಯತೆ ೬. ಖಾದ್ಯಾಖಾದ್ಯ ವಿವೇಕ ೭. ವಿವಾಹ ೮. ಸಂತತಿ ನಿಯಮನ ೯. ದಂಪತಿಗಳಲ್ಲಿ ಬ್ರಹ್ಮಚರ್ಯ ೧೦. ವಿಧವಾ-ವಿವಾಹ ೧೧. ವರ್ಣಾಂತರ ವಿವಾಹ.

ಚತುರ್ಥ ಖಂಡ: **ಸತ್ಯಾಗ್ರಹ** ೪೨–೬೯

೧. ಸತ್ಯಾಗ್ರಹ-ಧರ್ಮ ೨. ಸತ್ಯಾಗ್ರಹಿಯ ಕಾರ್ಯಮರ್ಯಾದೆ ೩. ಸತ್ಯಾಗ್ರಹದ ಮೂಲ ಸಿದ್ಧಾಂತಗಳು ೪. ಸತ್ಯಾಗ್ರಹದ ಸಾಮಾನ್ಯ ಲಕ್ಷಣಗಳು ೫. ಸತ್ಯಾಗ್ರಹದ ಸಂದರ್ಭಗಳು ೬. ಸತ್ಯಾಗ್ರಹದ ಪ್ರಕಾರಗಳು ೭. ತಿಳಿಸಿ ಹೇಳುವಿಕೆ ೮. ಉಪವಾಸ ೯. ಅಸಹಕಾರ ೧೦. ಸವಿನಯ ಕ್ಯಾದೆಭಂಗ

೧೧. ಕೋರ್ಟಿನಲ್ಲಿ ಸತ್ಯಾಗ್ರಹಿಯ ನಡತೆ ೧೨. ಸೆರೆಮನೆಯಲ್ಲಿ ಸತ್ಯಾಗ್ರಹಿಯ ನಡತೆ ೧೩. ಸತ್ಯಾಗ್ರಹಿಯ ನಿಯಮಾವಲಿ ೧೪. ಸತ್ಯಾಗ್ರಹಿಗೆ ಅವಶ್ಯವಿರುವ ಗುಣಗಳು ೧೫. ಸಾಮುದಾಯಿಕ ಕ್ಷ್ಯಾದೆಭಂಗ.

ಪಂಚಮ ಖಂಡ: **ಸ್ವರಾಜ್ಯ** ೬೯–೮೧

೧. ರಾಮರಾಜ್ಯ ೨. ತಂತ್ರ-ಸುಧಾರಣೆ ಮತ್ತು ರಾಜ್ಯ-ಶಾಸನ ಸುಧಾರಣೆ ೩. ಜಾತಿಜಾತಿಗಳಲ್ಲಿ ಐಕ್ಯ ೪. ಬ್ರಿಟಿಷರೊಡನೆ ಸಂಬಂಧ ೫. ದೇಶೀ ರಾಜ್ಯಗಳು ೬. ದೇಶದ ಸಂರಕ್ಷಣೆ.

ಷಷ್ಠ ಖಂಡ: **ವಾಣಿಜ್ಯ** ೮೧–೧೦೦

೧. ಪಾಶ್ಚಾತ್ಯ ಅರ್ಥಶಾಸ್ತ್ರ ೨. ಭಾರತೀಯ ಅರ್ಥಶಾಸ್ತ್ರ ೩. ಗ್ರಾಮ-ದೃಷ್ಟಿ ೪. ಧನೇಚ್ಛೆ ೫. ವ್ಯಾಪಾರ ೬. ಸಾವುಕಾರಿಕೆ ೭. ಜೀವನ-ವೇತನ ೮. ಕೂಲಿಕಾರರ ಪ್ರಶ್ನೆಗಳು ೯. ಸ್ವಾವಲಂಬನವೂ ಶ್ರಮ-ವಿಭಾಗವೂ ೧೦. ಸ್ವದೇಶಿ ೧೧. ಯಾಂತ್ರಿಕ ಸಾಧನಗಳು ೧೨. ಅಂತರ್-ರಾಷ್ಟ್ರೀಯ ವ್ಯಾಪಾರ.

ಸಪ್ತಮ ಖಂಡ: **ಉದ್ಯೋಗ** ೧೦೦–೧೧೨

೧. ಒಕ್ಕಲುತನ ೨. ಪೋಷಕ ಇಲ್ಲವೆ ಪೂರಕ ಉದ್ಯೋಗಗಳು ೩. ಸಂಪೂರ್ಣ ಸ್ವದೇಶಿ ೪. ವಿಶೇಷ ಉದ್ಯೋಗಗಳು ೫. ಹಾನಿಕರ ಉದ್ಯೋಗಗಳು ೬. ಉಪಯುಕ್ತ ಉದ್ಯೋಗಗಳು ೭. ಲಲಿತ ಕಲೆಗಳು.

ಅಷ್ಟಮ ಖಂಡ: **ಗೋಪಾಲನೆ** ೧೧೩–೧೧೮

೧. ಧಾರ್ಮಿಕ ದೃಷ್ಟಿ ೨. ಅನ್ಯ ಪ್ರಾಣಿಗಳ ಪಾಲನೆ ೩. ಪ್ರಾಣಿಗಳ ಬಗೆಗೆ ಕ್ರೂರತನ ೪. ಗೋವಧೆ ೫. ಸತ್ತ ದನಗಳು.

ನವಮ ಖಂಡ: **ಖಾದಿ** ೧೧೯–೧೩೩

೧. ರಾಟಿಯ ಗುಣಗಳು ೨. ರಾಟಿಯನ್ನು ಕುರಿತ ತಪ್ಪು-ವಿಚಾರಗಳು ೩. ಖಾದಿ ಮತ್ತು ಗಿರಣಿ ಬಟ್ಟೆ ೪. ರಾಟಿಯೂ ಕೈಮಗ್ಗವೂ ೫. ಖಾದೀ ಉತ್ಪತ್ತಿಯ ಕ್ರಿಯೆಗಳು ೬. ಸ್ವಾವಲಂಬಿಯಾದ ಮತ್ತು ಕೂಲಿ ಖಾದಿ ೭. ನೂಲುವುದು ಒಂದು ಯಜ್ಞ-ಕಾರ್ಯ ೮. ಖಾದೀ ಕಾರ್ಯ.

ದಶಮ ಖಂಡ: **ಸ್ವಚ್ಛತೆಯೂ ಆರೋಗ್ಯವೂ** ೧೩೪-೧೫೨

೧. ಶಾರೀರಿಕ ಸ್ವಚ್ಛತೆ ೨. ಒಳ್ಳೆಯ ಮತ್ತು ಸ್ವಚ್ಛ ರೂಢಿಗಳು ೩. ಬಾಹ್ಯ ಸ್ವಚ್ಛತೆ ೪. ಶೌಚ ೫. ಜಲಾಶಯಗಳು ೬. ರೋಗಗಳು ೭. ಉಪಚಾರಗಳು. ೮. ಆಹಾರ ೯. ವ್ಯಾಯಾಮ.

ಏಕಾದಶ ಖಂಡ: **ಶಿಕ್ಷಣ** ೧೫೩-೧೭೫

೧. ಶಿಕ್ಷಣದ ಧ್ಯೇಯ ೨. ಅರಾಷ್ಟ್ರೀಯ ಶಿಕ್ಷಣ ೩. ರಾಷ್ಟ್ರೀಯ ಶಿಕ್ಷಣ ೪. ಉದ್ಯೋಗದ ಮೂಲಕ ಶಿಕ್ಷಣ ೫. ಮಕ್ಕಳ ಶಿಕ್ಷಣ ೬. ಹಳ್ಳಿಗರ ಶಿಕ್ಷಣ ೭. ಸ್ತ್ರೀ-ಶಿಕ್ಷಣ ೮. ಧಾರ್ಮಿಕ ಶಿಕ್ಷಣ ೯. ಶಿಕ್ಷಣದ ಮಾಧ್ಯಮ ೧೦. ಇಂಗ್ಲಿಷ್ ಭಾಷೆ ೧೧. ಭಾಷಾ-ಜ್ಞಾನ ೧೨. ರಾಷ್ಟ್ರಭಾಷೆ ೧೩. ಇತಿಹಾಸ ೧೪. ಶಿಕ್ಷಣದ ಅನ್ಯ ವಿಷಯಗಳು ೧೫. ಶಿಕ್ಷಕ ೧೬. ವಿದ್ಯಾರ್ಥಿ ೧೭. ವಿದ್ಯಾರ್ಥಿ ನಿಲಯ ೧೮. ಶಿಕ್ಷಣದ ವೆಚ್ಚ ೧೯ ಉಪಸಂಹಾರ.

ದ್ವಾದಶ ಖಂಡ: **ಸಾಹಿತ್ಯವೂ ಕಲೆಯೂ** ೧೭೫-೧೮೧

೧. ಸಾಮಾನ್ಯ ಟೀಕೆ ೨. ಸಾಹಿತ್ಯದ ಶೈಲಿ ೩. ಭಾಷಾಂತರಗಳು ೪. ಶುದ್ಧ-ಲೇಖನ ೫. ವೃತ್ತಪತ್ರಿಕೆಗಳು ೬. ಕಲೆ.

ತ್ರಯೋದಶ ಖಂಡ: **ಲೋಕ-ಸೇವಕ** ೧೮೧-೧೮೯

೧. ಲೋಕ-ಸೇವಕನ ಸಾಮಾನ್ಯ ಲಕ್ಷಣಗಳು ೨. ಗ್ರಾಮ-ಸೇವಕನ ಕರ್ತವ್ಯಗಳು.

ಚತುರ್ದಶ ಖಂಡ: **ಸಂಸ್ಥೆಗಳು** ೧೮೯-೧೯೪

೧. ಸಂಸ್ಥೆಯ ಸಫಲತೆ ೨. ಸಂಸ್ಥೆಯ ಸಂಚಾಲಕ ೩. ಸಂಸ್ಥೆಯ ಸದಸ್ಯರು ೪. ಸಂಸ್ಥೆಯ ಆರ್ಥಿಕ ವ್ಯವಹಾರ.

ಮೂರನೇ ಮುದ್ರಣಕ್ಕೆ
ಪ್ರಕಾಶಕರ ಎರಡು ಮಾತು

ಮಾನ್ಯ ದಿವಾಕರ ರಂಗರಾಯರು, ಮೊದಲನೆಯ ಆವೃತ್ತಿಯ ಪುಸ್ತಕವನ್ನು ಪರಿಶೋಧಿಸಿ ಶೈಲಿಯು ಹೆಚ್ಚು ಸುಲಭ, ಸ್ಪಷ್ಟ, ಸರಳ, ಆಗುವಂತೆ ಸಂಪಾದಿಸಿರುವುದಾಗಿ ಎರಡನೆಯ ಮುದ್ರಣದ ಮುನ್ನುಡಿಯಲ್ಲಿ ಹೇಳಿದ್ದಾರೆ. ಮೊದಲನೆಯ ಆವೃತ್ತಿಯ ಶೈಲಿಯೊಳಗಿನ ದೋಷಗಳು ನುಸುಳಿಕೊಂಡು ಇನ್ನೂ ಕೆಲವು ಉಳಿದಿರುವುದಾಗಿ ತೋರಿದ್ದರಿಂದ ಈ ಮೂರನೆಯ ಮುದ್ರಣದಲ್ಲಿ ಮತ್ತೆ ಅನಿವಾರ್ಯವಾಗಿ ಅಲ್ಲಲ್ಲಿ ತಿದ್ದಬೇಕಾಯಿತು. ಹಾಗೆ ತಿದ್ದುವಾಗ, ಪ್ರಾದೇಶಿಕ ಮತ್ತು ಕನ್ನಡೇತರ ಶೈಲಿಯನ್ನೂ ಪ್ರಯೋಗಗಳನ್ನೂ ಶಬ್ದಗಳನ್ನೂ ಬಿಟ್ಟುಕೊಟ್ಟು, ಆ ಸ್ಥಳದಲ್ಲಿ ಕನ್ನಡದ ಶೈಲಿ, ಪ್ರಯೋಗಗಳು, ಶಬ್ದಗಳು, ಮುಂತಾದ್ದಕ್ಕೆ ಸಾಧ್ಯವಾದಷ್ಟು ಪ್ರಾಶಸ್ತ್ಯ ಕೊಟ್ಟಿದೆ. ಇದರಿಂದ ಅರ್ಥವು ಇನ್ನೂ ಹೆಚ್ಚು ಸುಲಭ, ಸ್ಪಷ್ಟ, ಮತ್ತು ಸರಳವಾಗುವುದೆಂದು ನಂಬಿದ್ದೇವೆ. ಓದುಗರು ಈ ಪುಸ್ತಕದ ಈ ಆವೃತ್ತಿಯನ್ನೂ ಆದರದಿಂದ ಸ್ವೀಕರಿಸುವುದರಲ್ಲಿ ಸಂದೇಹವಿಲ್ಲ.

ಪ್ರಕಾಶಕ

ಗಾಂಧಿಜಿಯವರ ಒಪ್ಪಿಗೆ

ಈ ವಿಚಾರದೋಹನವನ್ನು ನಾನು ಓದಿ ಮುಗಿಸಿದ್ದೇನೆ. ಬಂಧು ಕಿಶೋರ್‌ಲಾಲರಿಗೆ ನನ್ನ ವಿಚಾರಗಳ ಅಸಾಧಾರಣ ಪರಿಚಯವಿದೆ. ಪರಿಚಯವಿರುವಂತೆಯೇ, ಅವರ ಗ್ರಹಣ-ಶಕ್ತಿಯೂ ಅಸಾಧಾರಣವಾಗಿದೆ. ಅತಃ ನಾನು ತೀರ ಕಡಮೆ ಸ್ಥಾನಗಳಲ್ಲಿ ತಿದ್ದುಪಡೆ ಮಾಡಬೇಕಾಯಿತು. ನಮ್ಮಿಬ್ಬರಲ್ಲಿ ಅನೇಕ ವಿಷಯಗಳನ್ನು ಕುರಿತು ವಿಚಾರಗಳ ಐಕ್ಯವಿರುವುದರಿಂದ, ಭಾಷೆಯು ಬಂಧು ಕಿಶೋರ್‌ಲಾಲರದಾದರೂ, ಪ್ರತಿಯೊಂದು ಪ್ರಕರಣಕ್ಕೂ ಒಪ್ಪಿಗೆ ಕೊಡಲು ನನಗೆ ಯಾವ ಅಡ್ಡಿಯೂ ಎನಿಸಲಿಲ್ಲ. ಬಹಳ ವಿಷಯಗಳನ್ನು ಸ್ವಲ್ಪದರಲ್ಲಿ ಹೇಳಲು ಬಂಧು ಕಿಶೋರ್‌ಲಾಲರು ಸಮರ್ಥರಾಗಿದ್ದಾರೆ. ಇದೇ ಈ ದೋಹನದ ವೈಶಿಷ್ಟ್ಯ.

ಬೋರ್‌ಸದ್

೨೦–೫–೧೯೩೫ **ಮೋಹನ್‌ದಾಸ್ ಕರ್‌ಮಚಂದ್ ಗಾಂಧಿ**

ಮೊದಲನೇ ಮುದ್ರಣದ ಮುನ್ನುಡಿ

ಇದು 'ಗಾಂಧೀ ವಿಚಾರದೋಹನ' ಎಂಬ ಮೂಲ ಗುಜರಾತೀ ಪುಸ್ತಕದ ಕನ್ನಡ ವೇಷಾಂತರ. ಮೂಲವನ್ನು ಬರೆದವರು ಶ್ರೀ. ಕಿಶೋರ್‌ಲಾಲ್ ಮಶ್‌ರುವಾಲಾ. ಯುಗಪುರುಷರೂ ಅದ್ವಿತೀಯ ಮಹಿಮಾಶಾಲಿಗಳೂ ಅನುಪಮ ಚಾರಿತ್ರ್ಯವಂತರೂ ಜೀವನಸಮಸ್ಯೆಗಳನ್ನು ಸತ್ಯ ಮತ್ತು ಅಹಿಂಸೆ ಎಂಬ ಎರಡು ಕಣ್ಣುಗಳಿಂದ ನೋಡಿ, ಬಿಡಿಸಿ, ತಮ್ಮ ಅಂತಃಪ್ರೇರಣೆಯಂತೆ ಸದೈವ ನಡೆಯುತ್ತಿರುವವರೂ ಆದ ಮಹಾತ್ಮಾ ಗಾಂಧಿಯವರ ತತ್ವಗಳನ್ನು ಆಮೂಲಾಗ್ರವಾಗಿ ತಿಳಿದುಕೊಂಡು, ಅರಗಿಸಿ, ಆಚರಣೆಯಲ್ಲಿ ತಂದ ಸಾತ್ವಿಕ ಶಿರೋಮಣಿಗಳಲ್ಲಿ ಕಿಶೋರ್‌ಲಾಲರು ಒಬ್ಬರು. ಆದುದರಿಂದ ಈ ಪುಸ್ತಕ ವನ್ನು ಬರೆಯಲು ಅವರು ಯಥಾಯೋಗ್ಯರು.

ಅವರು ಅತ್ಯಂತ ಸರಲವಾದ ಶೈಲಿಯಲ್ಲಿ ಗಾಂಧೀ ವಿಚಾರಗಳನ್ನು ಜನ ರೆದುರಿಗೆ ಇಡಲು ಯತ್ನಿಸಿದ್ದಾರೆ. ಆ ಯತ್ನಕ್ಕೆ ಮಹಾತ್ಮರ ಆಶೀರ್ವಾದವೂ ದೊರೆತಿದೆ. ಇಂಥ ಪುಸ್ತಕವನ್ನು ಕನ್ನಡಿಸುವ ಧೈರ್ಯವನ್ನು ಶ್ರೀ. ಗುರುನಾಥ ಜೋಶಿಯವರು ಮಾಡಿರುವರು. ಅವರು ಮೂಲದಲ್ಲಿರುವ ಸರಲತೆ ಸುಲಭತೆ ಗಳನ್ನು ತಮ್ಮ ಭಾಷೆಯಲ್ಲಿಯೂ ತರಲು ಶಕ್ತಿಮೀರಿ ಯತ್ನಿಸಿದ್ದಾರೆ. ಹಾಗೂ ಆ ಕಾರ್ಯದಲ್ಲಿ ಒಳ್ಳೆಯ ಯಶಸ್ಸನ್ನು ಸಂಪಾದಿಸಿದ್ದಾರೆ.

ಗಾಂಧಿಜಿಯವರ ವಿಚಾರಸರ್ವಸ್ವದ ತಿರುಳನ್ನು ಒತ್ತಟ್ಟಿಗೆ ನೋಡ ಬೇಕಾಗಿದ್ದರೆ ಇದರ ಹೊರ್ತು ಇನ್ನೊಂದು ಪುಸ್ತಕವಿಲ್ಲ. ಇಂಥ ಪುಸ್ತಕವು ಈ ಹೊತ್ತು ಕನ್ನಡ-ರೂಪವನ್ನು ತಾಳುತ್ತಿರುವುದು ಕನ್ನಡಿಗರ ಸುದೈವವೇ ಎಂದು ಹೇಳಬಹುದು. ಈ ಹೊತ್ತು ಗಾಂಧಿಜಿಯವರು ಕೇವಲ ಒಂದೇ ಒಂದು ಹಿಂದುಸ್ತಾನದವರಲ್ಲ—ಅವರು ಜಗದ್ವ್ಯಕ್ತಿಗಳು. ಅವರ ತತ್ವ, ವಿಚಾರ, ಜೀವನ, ಆಚಾರ, ಇವುಗಳ ಅಭ್ಯಾಸವು ಈಗ ಪ್ರತಿ ದೇಶದಲ್ಲೂ ಆಸ್ಥೆಯಿಂದ ಆಗುತ್ತಿರುವುದು. ಇಂಥ ಸಮಯದಲ್ಲಿ ಕೇವಲ ಕನ್ನಡವನ್ನೇ ಬಲ್ಲವರಿಗೆ ಈ ಪುಸ್ತಕವು ಅಮೌಲಿಕವಾದ ಸೊತ್ತು ಸಿಕ್ಕಂತೆಯೆ ಸರಿ.

ಆದರೆ ಈ ಪುಸ್ತಕವೆಂದರೊಂದು ಸ್ಮೃತಿಗ್ರಂಥವೆಂದು ಮಾತ್ರ ಯಾರೂ ತಿಳಿಯಕೂಡದು. ಗಾಂಧಿಜಿಯವರು ವಿಕಸನಶೀಲರಾದ ಅತ್ಯಂತ ತೇಜಸ್ವಿ

ಜೀವ ಎಂದು ಹೇಳಬಹುದು. ತಮ್ಮದೊಂದು ಸಾಂಪ್ರದಾಯವಿಲ್ಲ, ಹಾಗೂ, ತಮ್ಮದೊಂದು ಸಾಂಪ್ರದಾಯವಾಗಕೂಡದು, ಎಂದು ಅವರು ಯಾವಾಗಲೂ ಎಚ್ಚರಪಡುತ್ತಿರುವರು ಆದುದರಿಂದ ಅವರು ಜೀವದಿಂದಿರುವಾಗಲೆ ಗ್ರಂಥಸ್ಥವಾದ ಹಲವು ಮಾತುಗಳನ್ನು ನಾವು ಶಾಸ್ತ್ರದಂತೆ ಮನ್ನಿಸಲಾರಂಭಿಸುವುದು ಅವರ ಮನಸ್ಸಿಗೆ ಬರುವುದಿಲ್ಲ. ಈ ಪುಸ್ತಕವೆಂದರೆ ಅವರ ವಿಚಾರಗಳ ದಿಕ್ಕನ್ನು ತೋರುವ ಕೈದೀಪ, ಅವರು ಹೋಗುತ್ತಿರುವ ಮಾರ್ಗವನ್ನು ನಿರ್ದೇಶಿಸುವ ಕೈಗಂಬ.

ಅವರ ನಿಜವಾದ ಜಾಜ್ವಲ್ಯ ಜೀವನ-ತೇಜವನ್ನು ಗ್ರಹಿಸಬೇಕಾದರೆ ಅವರ ನಿತ್ಯಜೀವನದ ಕಡೆಗೇ ನೋಡಿ, ನಮಗೆ ಬೇಕಾದ ಪ್ರಶ್ನೆಗಳನ್ನು ಅವರೆದುರಿಗೆ ಇಟ್ಟು, ನಾವು ಸಮಾಧಾನಮಾಡಿಕೊಳ್ಳಬೇಕು; ಹಾಗೂ ಸ್ಫೂರ್ತಿ ಶಕ್ತಿಗಳನ್ನು ಪಡೆದು ನಮ್ಮ ಜೀವನವನ್ನೂ ಪ್ರಕಾಶಮಾನ ಮಾಡಿಕೊಳ್ಳಬೇಕು. ಹಾಗೆ ಮಾಡುವಾಗ ಈ ಪುಸ್ತಕವು ಅತ್ಯಂತ ಉಪಯುಕ್ತವು, ಒಳ್ಳೇ ಮಾರ್ಗದರ್ಶಕವು ಎಂಬಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಇಷ್ಟೇ ಹೇಳಿ ಈ ಸತ್ಕೃತಿಯನ್ನು ಮನ್ನಿಸಬೇಕೆಂದು ಕನ್ನಡಿಗರಿಗೆ ಬಿನ್ನವಿಸುತ್ತೇನೆ.

ಬೆಳಗಾಂವಿ, ೩-೬-೩೬ **ರಂ. ರಾ. ದಿವಾಕರ**

ಎರಡನೇ ಮುದ್ರಣದ ಮುನ್ನುಡಿ

ಮೊದಲನೆ ಮುದ್ರಣವಾಗಿ ೯ ವರುಷಗಳಾಗಿಹೋದುವು. ತತ್ವವಿಚಾರದಲ್ಲಿ ಯಾವ ಬದಲೂ ಮಾಡುವ ಪ್ರಸಂಗವಿಲ್ಲ. ಆದರೆ ೧೯೪೦ರಲ್ಲಿ ಪ್ರಕಟವಾದ ಮರಾಠೀ ಅನುವಾದವನ್ನು ನೋಡಿ, ಮೂಲ ಲೇಖಕರು ಮಾಡಿದ ಹಲವು ಮಾರ್ಪಾಡುಗಳನ್ನು, ಬರೆದ ಹೆಚ್ಚಿನ ವಿಷಯವನ್ನು, ಈ ಮುದ್ರಣದಲ್ಲಿ ಸೇರಿಸಿರುವೆ. ಅಲ್ಲದೆ ಪುಸ್ತಕವನ್ನು ಆಮೂಲಾಗ್ರವಾಗಿ ಪರಿಶೋಧಿಸಿ ಹೆಚ್ಚು ಸುಲಭ, ಸ್ಪಷ್ಟ, ಸರಳ ಆಗುವಂತೆ ಸಂಪಾದಿಸಿದ್ದೇನೆ. ಗಾಂಧೀ ವಿಚಾರಗಳನ್ನು ಸೂತ್ರರೂಪದಿಂದ ತಿಳಿದುಕೊಳ್ಳಲು ಇದು ಅಮೌಲಿಕ ಸಾಧನ-ವಿಶೇಷವು.

೨೫-೧೧-೪೪ **ರಂಗನಾಥ ದಿವಾಕರ**

ಶ್ರೀ. ಕಿಶೋರ್‌ಲಾಲರ ನಿವೇದನ

ವಿಲೆಪಾರ್ಲೆಯ ಗಾಂಧೀ ವಿದ್ಯಾಲಯವೆ ಈ ಚಿಕ್ಕ ಹೊತ್ತಿಗೆಯ ಉತ್ಪತ್ತಿಗೆ ನಿಮಿತ್ತ ಕಾರಣ. ಹಳ್ಳಿಗಳಿಗೆ ಹೋಗಿ ಹಳ್ಳಿಗರ ಸೇವೆ ಮಾಡಲು ಬಯಸುವ ತರುಣರಿಗೋಸ್ಕರ ಈ ವಿದ್ಯಾಲಯದಲ್ಲಿ ಒಂದು ಶಿಕ್ಷಣವರ್ಗವು ತೆರೆಯಲ್ಪಟ್ಟಿತ್ತು. ಕೆಲವು ತಿಂಗಳ ಮಟ್ಟಿಗೆ ಮಾತ್ರ ಈ ವಿದ್ಯಾಲಯದಲ್ಲಿ ಮಹಾರಾಷ್ಟ್ರೀಯ ವಿದ್ಯಾರ್ಥಿಗಳೇ ಹೆಚ್ಚಾಗಿ ಇದ್ದರು. ಗಾಂಧಿಜಿಯವರ ವಿಚಾರಗಳ ಪರಿಚಯವು ಗುಜರಾತಿನಲ್ಲಿದ್ದಷ್ಟು ಮಹಾರಾಷ್ಟ್ರದಲ್ಲಿಲ್ಲ. ಅತಃ ಈ ವಿದ್ಯಾಲಯದಲ್ಲಿ 'ಗಾಂಧಿಜಿಯವರ ಸಿದ್ಧಾಂತ ಹಾಗೂ ವಿಚಾರಗಳ ಪರಿಚಯ'ವೆಂಬ ವಿಷಯವೂ ಇಡಲ್ಪಟ್ಟಿತ್ತು. ಈ ವಿಷಯವನ್ನು ಹೇಳುವುದು ನನ್ನ ಪಾಲಿಗೆ ಬಂತು. ಈ ವಿಷಯನಿರೂಪಣೆಗಾಗಿ ನಾನು ಯಾವ ತಯಾರಿಮಾಡಬೇಕಾಯಿತೋ ಅದರೊಳಗಿಂದಲೇ ಈ ಪುಸ್ತಕದ ಉತ್ಪತ್ತಿಯಾಯಿತು.

ಬಳಿಕ ಈ ಪುಸ್ತಕದ ವಿಷಯವನ್ನು ಕಾಕಾ ಸಾಹೇಬರ ಎದುರಿನಲ್ಲಿಟ್ಟೆ. ಅದು ಅವರ ಮನಸ್ಸಿಗೆ ಬಂತು. ಅವರೊಡನೆ ಚರ್ಚೆ ಮಾಡುವಾಗ, ಇದನ್ನು ಬರೆಬರೆದಂತೆ ಇದರ ಪ್ರಕರಣಗಳನ್ನು ಗಾಂಧಿಜಿಯವರಿಗೆ ಕಳಿಸುತ್ತ ಹೋಗಬೇಕು, ಗಾಂಧಿಜಿಯವರು ಅವನ್ನು ಪರಿಶೀಲಿಸಿ ತಮ್ಮ ಪ್ರಮಾಣಭೂತ ಒಪ್ಪಿಗೆಯನ್ನು ಕೊಟ್ಟರೆ ಅವರ ವಿಚಾರ ಸರಣಿಯನ್ನು ಜನರೆದುರು ಇಡುವಂಥ ಒಂದು ಚಿಕ್ಕ ಪುಸ್ತಕವು ಸಿದ್ಧವಾಗುವುದು ಎಂದು ನಿಶ್ಚಯಿಸಲ್ಪಟ್ಟಿತು.

ಗಾಂಧಿಜಿ ಇದಕ್ಕೆ ತಮ್ಮ ಒಪ್ಪಿಗೆ ಕೊಟ್ಟರು. ಆದರೆ ದೇಶದ ಮತ್ತು ಪರದೇಶದ ಕಾರ್ಯಭಾರವು ಅವರ ಮೇಲೆ ವಿಶೇಷವಾಗಿದ್ದುದರಿಂದ, ಎಲ್ಲ ಪ್ರಕರಣಗಳನ್ನೂ ಪರಿಶೀಲಿಸ ಲಿಕ್ಕೆ ಅವರಿಗೆ ಸಮಯವು ಸಿಕ್ಕಲಿಲ್ಲ. ಅಲ್ಲದೆ ಅವರು ೧೯೩೨ನೇ ಜನೆವರಿ ೪ರಂದು ಸೆರೆಹಿಡಿಯಲ್ಪಟ್ಟರು. ಹೀಗಾಗಿ ಈ ಪುಸ್ತಕದ ಮೊದಲನೆ ಆವೃತ್ತಿಯನ್ನು ಅವರ ತಿದ್ದುಪಡೆ ಇಲ್ಲದೆ ಮುದ್ರಿಸಬೇಕಾಯಿತು. ಆದರೆ ಈಗ ಗಾಂಧಿಜಿಯವರು ಇದನ್ನು ಆಮೂಲಾಗ್ರ ವಾಗಿ ಪರಿಶೀಲಿಸಿರುವರಲ್ಲದೆ ತಿದ್ದುಪಡೆಯನ್ನೂ ಮಾಡಿದ್ದಾರೆಂದು ತಿಳಿಸಲು ಆನಂದವೂ ಸಂತೋಷವೂ ಆಗುತ್ತದೆ. ಅವರು ಮಾಡಿದ ಎಲ್ಲ ತಿದ್ದುಪಡೆಗಳು ಇದರಲ್ಲಿ ಅಡಕ ವಾಗಿವೆಯೆಂದು ಹೇಳಲು ಸಂದೇಹವೇನಿದೆ? ಪುನಃ ನಾನೂ ನನ್ನ ಗೆಳೆಯರೂ ಇನ್ನೊಂದು ಸಲ ಇದನ್ನು ನಿರೀಕ್ಷಿಸಿದೆವು, ಭಾಷೆಯಲ್ಲಿ ಮಾರ್ಪಾಟು ಮಾಡಿ ಹೊಸ ಪ್ರಕರಣಗಳನ್ನು ಜೋಡಿಸಿದೆವು. ಅಲ್ಲದೆ ಎಷ್ಟೋ ಹಳೆಯ ಪ್ರಕರಣಗಳನ್ನು ಮತ್ತೆ ಮೊದಲಿನಿಂದ ಬರೆದೆವು. ಆ ಮೇಲೆ ಅವೆಲ್ಲವುಗಳನ್ನೂ ಗಾಂಧಿಜಿಯವರು ಮತ್ತೊಮ್ಮೆ ನೋಡಿದ್ದಾರೆ.

ಈ ಪುಸ್ತಕದಲ್ಲಿ ಗಾಂಧಿಜಿಯವರ ಲೇಖನಗಳ ಉದ್ಧರಣವು ಸ್ವಲ್ಪೇ ಇದೆ. ಆದುದ ರಿಂದ ಇದು ಅವರ ಭಾಷೆಯೆಂದೂ ಅವರ ಶಬ್ದಗಳ ದೋಹನವೇ ಎಂದೂ ಎನ್ನಲಾಗುವು ದಿಲ್ಲ. ಎಷ್ಟೋ ಜನಗಳಿಗೆ ಗಾಂಧಿಜಿಯವರ ಲೇಖನಗಳಲ್ಲಿ ಇವನ್ನು ತಾವು ಓದಿಯೆ ಇಲ್ಲವೆಂದೂ ಎನಿಸಬಹುದು. ವಾಸ್ತವಿಕವಾಗಿ ನಾನು ಗಾಂಧಿಜಿಯವರ ಹೃದಯವನ್ನೂ

ವಿಚಾರಗಳನ್ನೂ ಯಾವ ರೀತಿಯಾಗಿ ಅರಿತುಕೊಂಡಿದ್ದೇನೋ, ವಿಶೇಷತಃ ಅವನ್ನು ಆ ನನ್ನ ರೀತಿಯಲ್ಲಿ ಮತ್ತು ನನ್ನ ಭಾಷೆಯಲ್ಲಿಯೆ ಈ ಪುಸ್ತಕದಲ್ಲಿ ಮಂಡಿಸಿದ್ದೇನೆ. ಆದ್ದರಿಂದ ಈ ಪುಸ್ತಕವು ಗಾಂಧಿಜಿಯವರಿಂದ ಪರಿಶೀಲಿಸಲ್ಪಟ್ಟಿದ್ದರೂ ಅವರ ಲೇಖನಗಳಷ್ಟೆ ಪ್ರಮಾಣಭೂತವಾದದ್ದೆಂದು ಎಣಿಸಲ್ಪಡಲಾರದು.

ಗಾಂಧಿಜಿಯವರ ಪ್ರೇರಣೆಯಿಂದ ಈ ಯುಗದಲ್ಲಿ ಎಷ್ಟೋ ಸಣ್ಣಪುಟ್ಟ ಸಂಸ್ಥೆಗಳು ಜನ್ಮತಾಳಿವೆ. ಅವುಗಳಲ್ಲಿ ಅನೇಕ ಕಾರ್ಯಕರ್ತರು ವಿವಿಧ ರಚನಾತ್ಮಕ ಪ್ರವೃತ್ತಿಗಳನ್ನೂ ಹುಟ್ಟಿಸಿದ್ದಾರೆ. ಅಲ್ಲದೆ ಆತ್ಮಶುದ್ಧಿಗಾಗಿಯೂ ಸ್ವರಾಜ್ಯಕ್ಕಾಗಿಯೂ ತಳಮಳಿಸುತ್ತಿರುವ ಬಹು-ಜನ ಸಮುದಾಯವು ಗಾಂಧಿಜಿಯವರ ವಿಚಾರಗಳನ್ನು ಅರಿತುಕೊಳ್ಳಲು ತವಕ ಪಡುತ್ತಿದೆ. ಅಂಥವರಿಗೋಸ್ಕರ ಅನೇಕ ಬಗೆಯಿಂದ ಉಪಯೋಗಿಯೂ ಮಾರ್ಗದರ್ಶಕವೂ ಆಗುವಂಥ ಸಂಪೂರ್ಣ ಪ್ರಮಾಣಭೂತ ಪುಸ್ತಕವು ಇದಾಗದಿದ್ದರೂ, ಇಂದಿನ ಪ್ರಶ್ನೆ ಪ್ರಮೇಯಗಳನ್ನು ಕುರಿತು ಗಾಂಧಿಜಿಯವರ ವಿಚಾರಸರಣಿಯನ್ನು ಚನ್ನಾಗಿ ವ್ಯಕ್ತಮಾಡುವಂಥದಿದೆಯೆಂದು ನಿರ್ವಿವಾದವಾಗಿ ಹೇಳಬಹುದು.

ಮೊದಲನೆ ಆವೃತ್ತಿಯು ಪ್ರಕಟವಾಗುವ ಪೂರ್ವದಲ್ಲೆ ಇದರ ಎರಡು ಖಂಡಗಳಿಗೆ 'ಗುಜರಾತೀ' ಪತ್ರಿಕೆಯ ವ್ಯವಸ್ಥಾಪಕರು ಆ ಪತ್ರಿಕೆಯ 'ಗಾಂಧೀ ಸಂಚಿಕೆ'ಯಲ್ಲಿಯೂ ದೀಪಾವಳೀ ಸಂಚಿಕೆಯಲ್ಲಿಯೂ ಸ್ಥಾನಕೊಟ್ಟು ಪುಸ್ತಕದ ಪ್ರಸಿದ್ಧಿಗೆ ಕೊಂಚ ನೆರವಾದರು. ಇದಕ್ಕಾಗಿ ನಾನು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಗೋಕುಲ್‌ಭಾಯಿ ಭಟ್ಟರು ಗಾಂಧೀ ವಿದ್ಯಾಲಯವನ್ನು ಪ್ರಾರಂಭಿಸಲು ಹಟ ತೊಡದಿದ್ದರೆ, ಕಾಕಾಜಿಯವರು ಅದಕ್ಕೆ ಆಗ್ರಹದ ಒತ್ತಾಯ ಮಾಡದಿದ್ದರೆ, ಈ ಪುಸ್ತಕದ ಕಲ್ಪನೆಯು ಕೂಡ ಹುಟ್ಟುತ್ತಿರಲಿಲ್ಲವೆನ್ನಬಹುದು. ಆದ್ದರಿಂದ ಇವರಿಬ್ಬರಿಗೂ, ನನಗೆ ಮೊದಲನೆಯ ಆವೃತ್ತಿಯ ಕಾಲಕ್ಕೆ ಅತ್ಯಂತ ಪ್ರೋತ್ಸಾಹನೆ ಕೊಟ್ಟ ಸ್ವಾಮೀ ಆನಂದರಿಗೂ ನಾನು ಕೃತಜ್ಞನಾಗಿದ್ದೇನೆ. ಈ ಪುಸ್ತಕದ ಮೊದಲನೆಯ ಆವೃತ್ತಿಯನ್ನು ಮುದ್ರಿಸುವ ಹೊಣೆಯನ್ನು ಒಪ್ಪಿಕೊಂಡದ್ದಕ್ಕಾಗಿಯೂ, ಎರಡನೆ ಆವೃತ್ತಿಯನ್ನು ಪ್ರಸಿದ್ಧಿಸಲು ನವಜೀವನ ಪ್ರಕಾಶನ ಮಂದಿರದವರಿಗೆ ಒಪ್ಪಿಸಿ ತಮ್ಮ ಉದಾರತೆಯನ್ನು ತೋರಿಸಿದ್ದಕ್ಕಾಗಿಯೂ ನಾನು ಬಂಧು ರಣ್‌ಛೋಡ್‌ಜಿ ಮಿಶ್ರಿಯವರಿಗೆ ಋಣಿಯಾಗಿದ್ದೇನೆ.

ಗಾಂಧಿಜಿಯವರ ಲೇಖನಗಳಲ್ಲಿ ಇಲ್ಲದ್ದು ಎಷ್ಟೋ ಈ ಪುಸ್ತಕದಲ್ಲಿ ಇದೆಯೆಂದು ಎಷ್ಟೋ ಜನಗಳಿಗೆ ಎನಿಸುವುದು. ಇದು ಗಾಂಧಿಜಿಯವರ ಅಂತರಂಗದ ಮಂಡಳದಲ್ಲಿ ಆಗುತ್ತಿರುವ ಚರ್ಚೆಯೊಳಗಿನದೆ?– ಎಂಬ ಸಂಶಯವೂ ಯಾರಿಗಾದರೂ ಬರುವುದು. ಆದರೆ ಹಾಗೇನೂ ಅಲ್ಲವೆಂದು ಇಲ್ಲಿ ಹೇಳಬಯಸುತ್ತೇನೆ. ಯಾವ ಸತ್ಪುರುಷರ ವಿಚಾರಗಳನ್ನೂ ಕೇವಲ ಅವರ ಪುಸ್ತಕಗಳನ್ನು ಅಭ್ಯಸಿಸಿ ಸಂಪೂರ್ಣವಾಗಿ ತಿಳಿದುಕೊಳ್ಳಲಾಗುವುದಿಲ್ಲವೆಂದು ನನ್ನ ಮತ. ಇದಕ್ಕಾಗಿ ಅವರ ಸಹವಾಸ ಬೇಕು. ಸಹವಾಸವು ದೊರೆತ ಬಳಿಕ ಅವರ ಹೃದಯವನ್ನು ಅರಿತುಕೊಳ್ಳಲಿಕ್ಕೂ ಅವರ ಸಮಗ್ರ ವಿಚಾರಸರಣಿಯ ಮೂಲವನ್ನು ಕಂಡುಹಿಡಿಯಲಿಕ್ಕೂ ಪ್ರಯತ್ನ ಬೇಕು. ಭೂಮಿತಿಯ ಒಂದು ಸಿದ್ಧಾಂತ

ದಿಂದ ಹೇಗೆ ಅನೇಕ ಸಿದ್ಧಾಂತಗಳು ಗೊತ್ತಾಗುವವೋ, ಹಾಗೆಯೆ ಒಮ್ಮೆ ಅವರ ವಿಚಾರಸರಣಿಯ ಮೂಲವು ಗೊತ್ತಾಯಿತೆಂದರೆ ಅವರ ಸಮಗ್ರ ವಿಚಾರದ ದೃಷ್ಟಿಯೂ ಗೊತ್ತಾಗುವುದು. ಗಾಂಧಿಜಿಯವರನ್ನು ನಾನು ಅರಿತದ್ದು ಈ ಮಾರ್ಗದಿಂದ. ನನಗೆ ಇದರಲ್ಲಿ ಸಫಲತೆಯು ಎಷ್ಟು ಸಿಕ್ಕಿದೆಯೆಂಬುದನ್ನು ಗಾಂಧಿಜಿಯವರೂ, ನನ್ನಂತೆಯೆ ಅವರ ಜೊತೆಯಲ್ಲಿ ಇದ್ದವರೂ ಹೇಳಬಲ್ಲರು.

ಈ ಪುಸ್ತಕವನ್ನು ಬರೆಯಲು ಪಟ್ಟ ಪ್ರಯತ್ನದ ಮುಖಾಂತರವಾಗಿಯೆ ನಾನು ಗಾಂಧಿಜಿಯವರನ್ನು ಸ್ಪಷ್ಟವಾಗಿ ಕಂಡಿದ್ದೇನೆ. ಈ ಪ್ರಯತ್ನದಿಂದ ನನಗೆ ಲಾಭವಾಗಿದೆ. ಆದ್ದರಿಂದ ವಾಚಕರಿಗೂ ಇದು ಲಾಭದಾಯಕವಾಗುವುದೆಂದು ಆಶಿಸುತ್ತೇನೆ.

ಕೊನೆಯಲ್ಲಿ, ನಾನು ಯಾರ ವಿಚಾರಗಳ ದೋಹನವನ್ನು ಮಾಡಲು ಯತ್ನ ಮಾಡಿರುವೆನೊ, ಯಾರ ಪ್ರೇಮದಿಂದ ಮತ್ತು ಸಮಾಗಮದಿಂದ ಸದಾ ಅನುಗ್ರಹೀತನಾಗಿರುವೆನೊ, ಆ ಪೂಜ್ಯ ಬಾಪೂಜಿಯವರ ಚರಣಗಳಲ್ಲಿ ನಮ್ರತೆಯಿಂದ ವಂದಿಸುವೆನು.

—ಕಿಶೋರ್‌ಲಾಲ್ ಘ. ಮಶ್‌ರುವಾಲಾ

ಅನುವಾದಕರ ನಾಲ್ಕು ಮಾತು

ಮಹಾತ್ಮಾ ಗಾಂಧಿಜಿಯವರ ತಪಃಪ್ರಭಾವದಿಂದ ಸನ್ ೧೯೩೨ರಲ್ಲಿ ಹಿಂದುಸ್ತಾನದ ಸೆರೆಮನೆಗಳು ಸಾಧು-ಸತ್ಪುರಷರ ಯೋಗಿ-ತ್ಯಾಗಿಗಳ ಶಾಂತಿ ನಿಕೇತನಗಳಾದುವು. ಇವುಗಳಲ್ಲಿ ಹೆಸರುವಾಸಿಯಾದುದು ಎರವಡಾ ಮಂದಿರ. ಅದನ್ನು ಕಾಣುವ, ಹಾಗೂ ಅದರಲ್ಲಿ ಕೆಲವೊಂದು ಕಾಲ ವಾಸಿಸುವ ಸೌಭಾಗ್ಯವು ನನಗೆ ದೊರಕಿತು. ಅಲ್ಲಿ ಸಾಬರ್‌ಮತಿಯ ಸತ್ಯಾಗ್ರಹಾಶ್ರಮದ ಕೆಲ ಸತ್ಯಾನ್ವೇಷಿಗಳ ದರ್ಶನ ಪರಿಚಯಗಳಾಗಿ, ನಾನು ಗುಜರಾತೀ ಭಾಷೆಯನ್ನು ಕಲಿತೆನು. ಮಹಾತ್ಮಾಜಿಯವರ ನಗು ಹೇಗೊ ಹಾಗೆಯೆ ಅವರ ಭಾಷೆಯು ಕೂಡ ಅಷ್ಟು ಸರಳ, ಅಷ್ಟು ಮನೋಹರ. ಅವರು ತಮ್ಮ ಆಶ್ರಮವಾಸಿಗಳನ್ನು ಕುರಿತು ಬರೆದ 'ಮಂಗಲ್ ಪ್ರಭಾತ್'. 'ಆಶ್ರಮ್‌ವಾಸೀ ಪ್ರತ್ಯೇ' ಎಂಬ ಪತ್ರಗಳ ಸಂಗ್ರಹವನ್ನು ಓದಿದೆನು. ಅವುಗಳಿಂದ ನನಗೆ ಒಂದು ಬಗೆಯ ಆನಂದವುಂಟಾಯಿತು. ಅಲ್ಲದೆ ಮಹಾತ್ಮರ ವಿಚಾರಗಳನ್ನು ಆಮೂಲಾಗ್ರವಾಗಿ ಓದಬೇಕು, ಅರಿತುಕೊಂಡು ಆನಂದಹೊಂದಬೇಕು, ಮಹಾತ್ಮರ ವಿಚಾರಗಳನ್ನು ಸಂಪೂರ್ಣವಾಗಿ ಅರಿಯದ ನನ್ನ ಕನ್ನಡ ಬಂಧುಗಳಿಗೆ ತಿಳಿಸಿ ಕೊಡಬೇಕು, ಎಂಬ ಹಂಬಲು ಹೆಚ್ಚಾಯಿತು. ಆದರೆ ಅವರ ವಿಚಾರಗಳೆಲ್ಲ ಒಂದೆಡೆ ಸಿಕ್ಕುವುದೆಲ್ಲಿ? ಗುಜರಾತೀ ಬಂಧುಗಳನ್ನು ವಿಚಾರಿಸಿದೆ. ನಾನು ಸೆರೆಮನೆಯಿಂದ ಹೊರಬಿದ್ದು ತೌರೂರಿಗೆ ಬರುತ್ತಲೆ ಅವರು ಪ್ರಸ್ತುತ ಪುಸ್ತಕದ ಪ್ರಥಮ ಸಂಸ್ಕರಣದ ಪ್ರತಿಯೊಂದನ್ನು ಕಳಿಸಿಕೊಟ್ಟರು. ಅದನ್ನು ಅಭ್ಯಸಿಸುತ್ತ ಕನ್ನಡಕ್ಕೆ ಪರಿವರ್ತಿಸಿ ಮುಗಿಸುವಷ್ಟರಲ್ಲಿ ಎರಡನೆಯ ಆವೃತ್ತಿಯು ಹೊರಟಿತು. ಅದರಲ್ಲಿ ಗಾಂಧಿಜಿಯವರು ಅಲ್ಲಲ್ಲಿ ತಿದ್ದುಪಡೆಗಳನ್ನು ಮಾಡಿ ಕೆಲವು ಹೊಸ ಪ್ರಕರಣಗಳನ್ನು ಜೋಡಿಸಿದ್ದರಿಂದ ಎರಡನೆಯ ಆವೃತ್ತಿಯು ಸುಮಾರು ನೂರು ಪುಟಗಳಷ್ಟು ಬೆಳೆದುಹೋದದ್ದರಿಂದಲೂ, ಆದರಣೀಯ ದಿವಾಕರರು ನನ್ನ ಮೊದಲನೆಯ ಅನುವಾದವನ್ನು ನೋಡಿ ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದರಿಂದಲೂ, ಪುನಃ ಪುಸ್ತಕವನ್ನು ಮೊದಲಿನಿಂದ ಕೊನೆಯವರೆಗೂ ಅನುವಾದಿಸಬೇಕಾಗಿ ಬಂತು. ಇಲ್ಲದೆ ಹೋಗಿದ್ದರೆ ಈ ಪುಸ್ತಕವು ಕನ್ನಡಿಗರ ಕೈಸೇರಿ ಒಂದು ವರ್ಷದ ಮೇಲಾಗುತ್ತಿತ್ತು. ಇರಲಿ. ಗುಜರಾತಿಯಿಂದ ಕನ್ನಡಕ್ಕೆ ನಾನು ಅನುವಾದಿಸಿದ ಮೊಟ್ಟಮೊದಲನೆಯ ಗ್ರಂಥವು ಇದಾಗಿರುವುದರಿಂದ ಅನುವಾದ

ದಲ್ಲಿಯೂ ಭಾಷೆಯಲ್ಲಿಯೂ ತಪ್ಪುಗಳಾಗಿರಲು ಸಾಕು. ಅವೆಲ್ಲವುಗಳಿಗೂ ನಾನು ಹೊಣೆಗಾರನೇ ಹೊರತು ಮೂಲ ಲೇಖಕರಲ್ಲ. ಕರ್ನಾಟಕದ ಬುಧ ಸಂಕುಲವು ತಪ್ಪುಗಳನ್ನು ತೋರಿಸಿಕೊಟ್ಟರೆ ಮುಂದಿನ ಸಂಸ್ಕರಣದಲ್ಲಿ ತಿದ್ದಿಕೊಳ್ಳುವೆನು. ಅನುವಾದಿಸುವುದು ಹಗುರಾದ ಕಾರ್ಯವಲ್ಲ. ಅದರಲ್ಲಿಯೂ ಇಂಥ ಪುಸ್ತಕವನ್ನು ಅನುವಾದಿಸುವುದಂತೂ ಇನ್ನಿಷ್ಟು ಬಿಗಿಯಾದ ಕೆಲಸ. ಈ ಅನುವಾದದಲ್ಲಿ ನನಗೆಷ್ಟು ಸಫಲತೆಯು ಸಿಕ್ಕಿದೆಯೆಂಬುದನ್ನೂ ವಾಚಕರೆ ಹೇಳಬೇಕು.

ಈ ಕಾರ್ಯದಲ್ಲಿ ನನಗೆ ಅನೇಕರು ಅನೇಕ ರೀತಿಯಿಂದ ನೆರವಾದರು. ಅವರೆಲ್ಲರ ಉಪಕಾರವನ್ನು ಸ್ಮರಿಸಿ ಅವರಿಗೆ ಅಭಿನಂದನೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ನನಗೆ ಗುಜರಾತಿಯನ್ನು ಕಲಿಸಿ, ಈ ಪುಸ್ತಕವನ್ನು ಕಳಿಸಿ, ಇದನ್ನು ಕನ್ನಡಕ್ಕೆ ಪರಿವರ್ತಿಸಲು ಗುಜರಾತೀ ಬಂಧುಗಳು ಪ್ರೋತ್ಸಾಹಿಸಿದರು. ಶ್ರೀಮಾನ್ ಕಿಶೋರ್‌ಲಾಲ್ ಮಶ್‌ರುವಾಲಾರವರು ಈ ಅನುವಾದ ಕಾರ್ಯಕ್ಕೆ ಸಂತೋಷದಿಂದ ಒಪ್ಪಿಗೆ ಕೊಟ್ಟು ಕರುಣಿಸಿದರು. ಶ್ರೀಮಂತ ಅಂದಾನಪ್ಪ ದೊಡ್ಡಮೇಟಿಯವರು ಅನುವಾದಕ್ಕೆ ಸಮಯವನ್ನು ಒದಗಿಸಿಕೊಟ್ಟು ಪುಸ್ತಕವನ್ನು ಬೇಗನೆ ಮುಗಿಸಲು ಪ್ರೀತಿಯಿಂದ ಒತ್ತಾಯಪಡಿಸಿದರು. ಶ್ರೀ. ಕರಮರಕರ ದತ್ತರಾಯರು ಅನೇಕ ಯೋಗ್ಯ ಸಲಹೆಗಳನ್ನು ಕೊಟ್ಟರು. ಸನ್ಮಾನನೀಯ ದಿವಾಕರ ರಂಗನಾಥರಾಯರು ನನ್ನ ಮೇಲಿನ ಪ್ರೀತಿಯಿಂದ ತಮ್ಮ ಅಮೂಲ್ಯ ಸಮಯವನ್ನು ವೆಚ್ಚಮಾಡಿ ಅನುವಾದವನ್ನು ತಿದ್ದಿ, ಸುಂದರವಾದ ಮುನ್ನುಡಿಯನ್ನು ಬರೆದುಕೊಟ್ಟು, ಅನುಗ್ರಹಿಸಿದರು. ಈ ಬಗೆಯಿಂದ ನನಗೆ ನೆರವಾದ ಮಹನೀಯರುಗಳಿಗೆ ನನ್ನ ಕೃತಜ್ಞತಾಪೂರ್ವಕ ಅಭಿನಂದನೆಗಳು. ತನ್ನ ಈ ಓರ್ವ ವಿದ್ಯಾರ್ಥಿಯ ಮೇಲಿನ ಮಮತೆ ಮತ್ತು ಅಭಿಮಾನದಿಂದ ಈ ಪುಸ್ತಕವನ್ನು ಅಚ್ಚುಹಾಕಿಸಿ, ಪ್ರೋತ್ಸಾಹಿಸಿ, ಕನ್ನಡನಾಡಿನ ಮತ್ತು ನುಡಿಯ ಸೇವೆಗಾಗಿ ನನ್ನನ್ನು ಅಣಿಮಾಡಿದ ನನ್ನ ಮಾತೃಸಂಸ್ಥೆಯಾದ ಕರ್ನಾಟಕ ಶಿಕ್ಷಣ ಸಮಿತಿಗೆ ನಾನು ಚಿರ ಋಣಿಯಾಗಿರುವೆನು.

ಜಕ್ಕಲಿ
೨೪-೪-೧೯೩೭

ಕನ್ನಡಿಗರ ಸೇವಕ
—ಗುರುನಾಥ ಜೋಶಿ

ಗಾಂಧೀ ವಿಚಾರದೋಹನ

ಗಾಂಧೀ ವಿಚಾರದೋಹನ

ಪ್ರಥಮ ಖಂಡ

ಧರ್ಮ

— ✣ —

೧ ಪರಮಾತ್ಮ

೧ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವುದೊಂದೇ ಮಾನವೀ ಜೀವನದ ಯೋಗ್ಯವಾದ ಗುರಿಯು. ಜೀವನದ ಉಳಿದ ಎಲ್ಲ ಕಾರ್ಯಕಲಾಪಗಳು ಈ ಗುರಿಯನ್ನು ಸಾಧಿಸುವುದಕ್ಕಾಗಿಯೆ ಇರತಕ್ಕದ್ದು.

೨ ಈ ಗುರಿಗೆ ವಿರುದ್ಧವಿರುವ ಎಲ್ಲ ಪ್ರವೃತ್ತಿಗಳು ಸ್ಥೂಲದೃಷ್ಟಿಯಿಂದ ಎಷ್ಟೇ ಫಲವನ್ನು ಕೊಡುವಂತಹವೂ ಮನವನ್ನು ಸೆಳೆಯುವಂತಹವೂ ಲಾಭಕರವೂ ಎನಿಸಿದರೂ ಅವು ತ್ಯಾಜ್ಯವೆಂದೇ ತಿಳಿಯತಕ್ಕದ್ದು.

೩ ಈ ಗುರಿಗೆ ಸಾಧನೀಭೂತವಾಗಿರುವ ಪ್ರವೃತ್ತಿ ಹಾಗೂ ಕಾರ್ಯಗಳು ಎಷ್ಟೇ ಕಠಿಣ, ಸಂಕಟಮಯ, ಸ್ಥೂಲದೃಷ್ಟಿಯಿಂದ ಹಾನಿಕರವೆನಿಸಿದರೂ ಅವು ಅವಶ್ಯವಾಗಿ ಆಚರಿಸಲು ಯೋಗ್ಯವೆಂದು ತಿಳಿಯತಕ್ಕದ್ದು.

೪ ಪರಮಾತ್ಮಸ್ವರೂಪವು ವಾಙ್ಮನಕ್ಕಗೋಚರವು. ಅವನು ಅನಂತನೂ ಅನಾದಿಯೂ ಏಕರೂಪನೂ ವಿಶ್ವಕ್ಕೆ ಆತ್ಮರೂಪನೂ ಅಥವಾ ಆಧಾರ ರೂಪನೂ ಮತ್ತು ವಿಶ್ವದ ಕಾರಣನೂ ಇರುವನು. ಅವನು ಚಿನ್ಮಯನು, ಅಥವಾ ಜ್ಞಾನಸ್ವರೂಪನು. ಅವನು ಮಾತ್ರ ಸನಾತನನು. ಅವನ ಹೊರತಾಗಿ ಉಳಿದುದೆಲ್ಲವೂ ನಶ್ವರವು. ಒಂದು ಚಿಕ್ಕ ಶಬ್ದದಿಂದ ಅವನನ್ನು ಅರಿತುಕೊಳ್ಳುವುದಕ್ಕಾಗಿ ನಾವು ಅವನನ್ನು **ಸತ್ಯ** ಎಂದು ಸಂಬೋಧಿಸುವಾ.

೫ ಇಂತು ಪರಮಾತ್ಮನೇ ಸತ್ಯವು ಮತ್ತು ಸತ್ಯವೇ ಪರಮಾತ್ಮನು.

೬ ಈ ಜ್ಞಾನವು ಸತ್ಯರೂಪ ಪರಮಾತ್ಮನ ನಿರ್ಗುಣ ಸ್ವರೂಪವು.

೭ ನನಗೆ ಯಾವುದು ಇವತ್ತು ಧರ್ಮವೂ ನ್ಯಾಯವೂ ಯೋಗ್ಯವೂ

ಎಂದು ಎನಿಸುವುದೊ, ಯಾವುದನ್ನು ಮಾಡಲು, ಸ್ವೀಕರಿಸಲು ಮತ್ತು ಪ್ರಕಟಿಸಲು ನಾಚಿಕೆಯಾಗುವುದಿಲ್ಲವೊ, ಯಾವುದನ್ನು ನಾನು ಮಾಡಲೇ ಬೇಕಾಗುವುದೊ, ಯಾವುದನ್ನು ನಾನು ಮಾಡದಿದ್ದರೆ ಕತ್ತನ್ನೆತ್ತಿಕೊಂಡು ತಿರುಗಾಡಲಾರೆನೊ ಅದೇ ನನ್ನ ಮಟ್ಟಿಗೆ ಸತ್ಯವು. ಅದೇ ನನಗಾಗಿ ಪರಮಾತ್ಮನ ಸಗುಣ ಸ್ವರೂಪವು.

೮ ಸತ್ಯವನ್ನು ಎಡೆಬಿಡದೆ ಹುಡುಕಾಡುತ್ತಿರುವುದು, ತಿಳಿದಷ್ಟು ಮಟ್ಟಿಗೆ ಅದನ್ನು ಸತತ ತನು-ಮನದಿಂದ ಕಾರ್ಯರಂಗಕ್ಕೆ ತರುವುದು, ಇದೇ ಸತ್ಯದ ಆಗ್ರಹವು. ಇದು ಪರಮಾತ್ಮಸಾಕ್ಷಾತ್ಕಾರದ ಸಾಧನಪಥವು.

೯ ಸತ್ಯವು ಅನಂತವು, ಹಾಗೂ ವಿಶ್ವವು ಅಪಾರವಾಗಿರುವುದರಿಂದ ಈ ಸತ್ಯಶೋಧಕ್ಕೆ ಕೊನೆಯೇ ಇಲ್ಲ. ಈ ರೀತಿ ನೋಡಿದರೆ ಪರಮೇಶ್ವರನನ್ನು ಸಂಪೂರ್ಣವಾಗಿ ಸಾಕ್ಷಾತ್ಕರಿಸುವುದು ಸಾಮಾನ್ಯತಃ ಸಾಧ್ಯವೆಂದೆನಿಸುವುದಿಲ್ಲ. ಸಾಧಕನು ಈ ಮೂಲಕ ನಿರುತ್ಸಾಹಿಯಾಗಕೂಡದು; ಅಪಾರನಾದ ಪರಮಾತ್ಮನನ್ನು ಬೇಕು ಬೇಕಾದಲ್ಲಿ ಹುಡುಕುತ್ತ ಕುಳಿತುಕೊಳ್ಳಕೂಡದು. ಆದರೆ ತನ್ನ ಜೀವನದಲ್ಲಿ ಮಾಡಬೇಕಾಗಿರುವ ಸಣ್ಣ ದೊಡ್ಡ, ಮಹತ್ವದ ಮತ್ತು ಕ್ಷುಲ್ಲಕ ಪ್ರವೃತ್ತಿಗಳಲ್ಲಿ ಹಾಗೂ ಕ್ರಿಯೆಗಳಲ್ಲಿಯೆ ಸತ್ಯವನ್ನು ಹುಡುಕಬೇಕು; ಸತ್ಯದ ಪ್ರಯೋಗಗಳನ್ನು ಮಾಡಬೇಕು. ಎಂದರೆ 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ' ಎಂಬ ನ್ಯಾಯದಂತೆ ಅವನಿಗೆ ಸತ್ಯದ ಅನುಭವವು ಬರುತ್ತ ಹೋಗುವುದು.

೧೦ ತನ್ನ ಸುತ್ತುಮುತ್ತಲು ನಡೆಯುತ್ತಿರುವ ಅನ್ಯಾಯ, ಅಸತ್ಯ, ಅಥವಾ ಅಧರ್ಮ ಇವುಗಳನ್ನು ಉದಾಸೀನವೃತ್ತಿಯಿಂದ ನೋಡುತ್ತಿರುವ ಮನುಷ್ಯನು ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಲಾರನು. ಆದ್ದರಿಂದ ಸತ್ಯಶೋಧಕನು ಅಸತ್ಯ, ಅನ್ಯಾಯ, ಮತ್ತು ಅಧರ್ಮ, ಇವುಗಳ ಸಂಪೂರ್ಣ ನಾಶವನ್ನು ಮಾಡಲು ಹೆಣಗುವನು; ಸತ್ಯಾದಿ ಸಾಧನಗಳಿಂದ ಇವುಗಳನ್ನು ನಷ್ಟಪಡಿಸುವ ಕಾರ್ಯದಲ್ಲಿ ಯಶಸ್ಸು ಸಿಕ್ಕುವ ವರೆಗೆ ಸತ್ಯದ ಸಾಧನೆಯು ಅಪೂರ್ಣವೆಂದೇ ತಿಳಿಯುವನು. ಆದ್ದರಿಂದ ಅಸತ್ಯ, ಅನ್ಯಾಯ, ಮತ್ತು ಅಧರ್ಮ ಇವುಗಳ ಪ್ರತಿಕಾರವು ಕೂಡ ಸತ್ಯಾಗ್ರಹದ ಅಂಗವೇ.

೧೧ ಅಸತ್ಯ, ಹಿಂಸೆ ಮುಂತಾದುವುಗಳಿಂದ ಕೂಡಿದ ಸಾಧನಗಳಿಂದ ಸತ್ಯದ ಸಾಕ್ಷಾತ್ಕಾರವು ಅಶಕ್ಯವೆಂದು ಎಲ್ಲ ಧರ್ಮಗಳು ಹೇಳುತ್ತವೆ,

ಇತಿಹಾಸವು ಸಾಕ್ಷಿ ಕೊಡುತ್ತದೆ. ಅನುಭವವೂ ಹೀಗೆಯೇ ಇದೆ. ಅದೇ ರೀತಿ ಸಂಯಮ, ವ್ರತ, ಉಪಾಸನೆ ಮುಂತಾದ ಚಿತ್ತಶುದ್ಧಿಯ ಮಾರ್ಗಗಳ ಹೊರತು ಸತ್ಯದ ಜ್ಞಾನವಾಗಲಾರದು. ಆದ್ದರಿಂದ ಇನ್ನು ಮುಂದೆ ಹೇಳಿದ ವ್ರತ ಮುಂತಾದುವು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಅತ್ಯವಶ್ಯಕವಾದ ಸಾಧನಗಳೆಂದು ಎಣಿಸಲ್ಪಟ್ಟಿವೆ.

೨ ಸತ್ಯ

೧ ಸತ್ಯವೆಂದರೆ ಪರಮಾತ್ಮನು ಎಂಬುದು ಸತ್ಯದ ಪರ ಅಥವಾ ಉಚ್ಚವಾದ ಅರ್ಥವಾಯಿತು. ಇದರ ಅಪರ ಅಥವಾ ಸಾಮಾನ್ಯ ಅರ್ಥವು ಸತ್ಯವೆಂದರೆ ಸತ್ಯ-ವಿಚಾರ, ಸತ್ಯ-ಉಚ್ಚಾರ, ಮತ್ತು ಸತ್ಯ-ಆಚಾರ ಎಂದಾಗುವುದು.

೨ ದೂರದೃಷ್ಟಿಯಿಂದ ನೋಡಿದರೆ ಸತ್ಯವಿದ್ದುದೇ ಒಳಿತಾದುದೂ ಹಿತಕರವಾದುದೂ ಇರುವುದು. ಆದುದರಿಂದ ಸತ್ಯದ ಅಥವಾ ಸತ್ತಿನ ಅರ್ಥವು ಒಳಿತು ಎಂದೂ ಆಗುವುದು; ಯಾವ ಆಗ್ರಹವು, ವಿಚಾರವು, ಉಚ್ಚಾರವು ಮತ್ತು ಆಚಾರವು ಸತ್ಯವಿರುವುದೋ ಅದೇ ಸದಾಗ್ರಹವು, ಸದ್ವಿಚಾರವು, ಸದ್‌ವಾಣಿಯು, ಸತ್ಕರ್ಮವು ಎನಿಸುವುದು.

೩ ಯಾವ ಸತ್ಯ ಮತ್ತು ಸನಾತನ ನಿಯಮಗಳಿಂದ ವಿಶ್ವದ ಜಡ ಚೇತನ ಯಂತ್ರವು ನಡೆಯುತ್ತಿದೆಯೋ ಅದನ್ನು ಶೋಧಿಸುತ್ತಿರುವುದು. ಅವುಗಳಂತೆ ತನ್ನ ಜೀವನವನ್ನು ಮಾರ್ಪಡಿಸುತ್ತಿರುವುದು, ಹಾಗೂ ಅಸತ್ಯವನ್ನು ಸತ್ಯಾದಿ ಸಾಧನಗಳಿಂದ ಪ್ರತಿಭಟಿಸುವುದು ಸತ್ಯಾಗ್ರಹವೆನಿಸುವುದು.

೪ ಕೊನೆಯ ವರೆಗೆ, ಇಲ್ಲವೆ ಕಲ್ಪಿಸಬಹುದಾದ ಆ ಆ ಪ್ರಸಂಗಗಳಲ್ಲಿ, ಶಕ್ಯವಿದ್ದಷ್ಟು ಬಹುಕಾಲದ ವರೆಗೆ, ನಮ್ಮ ರಾಗ-ದ್ವೇಷರಹಿತ, ನಿಷ್ಪಕ್ಷಪಾತಿಯಾದ, ಶ್ರದ್ಧಾಭಕ್ತಿಯುಕ್ತ ಬುದ್ಧಿಗೆ ಯೋಗ್ಯವೂ ನ್ಯಾಯವೂ ಎನಿಸಿದ ವಿಚಾರವೇ ನಮ್ಮ ಮಟ್ಟಿಗೆ ಸತ್ಯ-ವಿಚಾರವು.

೫ ಹೇಳುವ ಕರ್ತವ್ಯವು ಒದಗಿದಾಗ ನಮಗೆ ಗೊತ್ತಿದ್ದ ಸಂಗತಿಯನ್ನು ಇದ್ದಕ್ಕಿದ್ದ ಹಾಗೆ ನುಡಿಯುವಂತಹ ವಾಣಿಯು, ಅದರಲ್ಲಿ ಬೇರೆ ಆಭಾಸವು ಹುಟ್ಟುವಂತೆ ಎಳ್ಳಷ್ಟೂ ಹೆಚ್ಚು-ಕಡಮೆ ಸಹ ಮಾಡಲು ಪ್ರಯತ್ನಿಸದಂತಹ ವಾಣಿಯು ಸತ್ಯ-ವಾಣಿಯು, ಸತ್ಯ-ಉಚ್ಚಾರವು.

೬ ವಿಚಾರದಿಂದ ಸತ್ಯವೆಂದೆನಿಸಿದುದನ್ನು ವಿವೇಕದಿಂದ ಆಚರಿಸುವುದೇ ಸತ್ಯಮಾರ್ಗವು, ಸದಾಚಾರವು.

೭ ಪರಸತ್ಯವನ್ನು–ಪರಮಾತ್ಮನನ್ನು–ಅರಿತುಕೊಳ್ಳಲು ಅಪರ-ಸತ್ಯವು ಸಾಧನವೆಂದು ಎನ್ನಬಹುದು; ಅಥವಾ ಸತ್ಯ-ವಿಚಾರ, ಸತ್ಯ-ವಾಣಿ, ಮತ್ತು ಸತ್ಯ-ಕರ್ಮ ಇವುಗಳ ಮೂಲಕ ಅಪರ ಸತ್ಯದ ಪಾಲನೆಮಾಡಿ ದೊರೆತ ಪೂರ್ಣ-ಸಿದ್ಧಿಯೇ ಪರಮಾತ್ಮನ ಸಾಕ್ಷಾತ್ಕಾರವು ಎನ್ನಲು ಯಾವ ಅಡ್ಡಿಯೂ ಬಾರದು. ಸಾಧಕನ ಮಟ್ಟಿಗೆ ಇವೆರಡರಲ್ಲಿ ಭೇದವಿಲ್ಲ.

೩ ಅಹಿಂಸೆ

೧ ಸಾಮಾನ್ಯವಾಗಿ ಜನರು ಸತ್ಯವೆಂದರೆ ಸತ್ಯ ಮಾತಾಡುವುದು ಎಂದು ಸ್ಥೂಲವಾಗಿ ತಿಳಿಯುವರು. ಆದರೆ ಬರೀ ಸತ್ಯ ನುಡಿಯುವುದರಿಂದ ಸತ್ಯದ ಪೂರ್ಣ ಪಾಲನೆಯಾಗುವುದಿಲ್ಲ. ಹಾಗೆಯೇ, ಸಾಮಾನ್ಯವಾಗಿ ಬೇರೆ ಜೀವವನ್ನು ಕೊಲ್ಲದಿರುವುದೇ ಅಹಿಂಸೆ ಎಂದೂ ತಿಳಿಯುವರು. ಆದರೆ ಪ್ರಾಣವನ್ನು ತೆಗೆದುಕೊಳ್ಳದೆ ಇರುವುದರಿಂದ ಮಾತ್ರ ಅಹಿಂಸೆಯ ಸಾಧನೆಯು ಪೂರ್ಣವಾಗುವುದಿಲ್ಲ.

೨ ಅಹಿಂಸೆಯು ಬರೀ ಆಚರಿಸಲು ಬರುವಂತಹ ಒಂದು ಕೇವಲ ಸ್ಥೂಲವಾದ ನಿಯಮವಲ್ಲ. ಅದು ಮನಸ್ಸಿನ ಒಂದು ವೃತ್ತಿ. ಯಾವ ವೃತ್ತಿಯಲ್ಲಿ ದ್ವೇಷದ ಗಂಧವು ಕೂಡ ಇರುವುದಿಲ್ಲವೋ ಅದೇ ಅಹಿಂಸೆ.

೩ ಇಂತಹ ಅಹಿಂಸೆಯು ಸತ್ಯದಷ್ಟೇ ವ್ಯಾಪಕವಿರುವುದು. ಇಂತಹ ಅಹಿಂಸೆಯ ಸಿದ್ಧಿಯಾದ ಹೊರತು ಸತ್ಯದ ಸಿದ್ಧಿ ಆಗದು. ಆದ್ದರಿಂದ ಎರಡನೇ ದೃಷ್ಟಿ-ಬಿಂದುವಿನಿಂದ ನೋಡಿದರೆ ಸತ್ಯವು ಅಹಿಂಸೆಯ ಪರಾಕಾಷ್ಠೆಯೇ ಇರುವುದು. ಪೂರ್ಣ ಸತ್ಯ ಮತ್ತು ಪೂರ್ಣ ಅಹಿಂಸೆಯಲ್ಲಿ ಭೇದವಿಲ್ಲ. ಆದ್ದರಿಂದ ಅರಿತುಕೊಳ್ಳಲು ಅನುಕೂಲವಾಗಬೇಕೆಂದು ಸತ್ಯವು ಸಾಧ್ಯವೆಂದೂ ಅಹಿಂಸೆಯು ಸಾಧನವೆಂದೂ ಎಣಿಸಲಾಗಿದೆ.

೪ ಒಂದೇ ನಾಣ್ಯಕ್ಕೆ ಇಕ್ಕೆಲಗಳಿರುವಂತೆ ಸತ್ಯವೂ ಅಹಿಂಸೆಯೂ ಒಂದೇ ಸನಾತನ ವಸ್ತುವಿನ ಇಕ್ಕೆಲಗಳು.

೫ ಪರಮಾತ್ಮನು ಪ್ರೇಮಸ್ವರೂಪನೆಂದು ಅನೇಕ ಧರ್ಮಗಳಲ್ಲಿ ಹೇಳಿದೆ. ಆ ಪ್ರೇಮವೂ ಈ ಅಹಿಂಸೆಯೂ ಭಿನ್ನವಲ್ಲ.

೬ ಪ್ರೇಮದ ಶುದ್ಧ ವ್ಯಾಪಕ ಸ್ವರೂಪವೇ ಅಹಿಂಸೆ. ಯಾವ ಪ್ರೇಮದಲ್ಲಿ ಅನುರಾಗದ ಅಥವಾ ಮೋಹದ ಬೆರಿಕೆ ಇರುವುದೋ ಅದು ಅಹಿಂಸೆಯಲ್ಲ. ರಾಗ-ಮೋಹಗಳಿದ್ದೆಡೆ ದ್ವೇಷದ ಬೀಜ ಇದ್ದೇ ಇರುವುದು. ಪ್ರೇಮದಲ್ಲಿ ಅನೇಕ ಸಲ ರಾಗ-ದ್ವೇಷಗಳು ಕಂಡುಬರುವವು. ಆದುದರಿಂದ ತತ್ವ-ಜ್ಞಾನಿಗಳು ಪ್ರೇಮ ಎಂಬ ಶಬ್ದವನ್ನು ಉಪಯೋಗಿಸವೆ ಅಹಿಂಸೆ ಎಂಬ ಶಬ್ದವನ್ನು ಯೋಜಿಸಿ ಅದನ್ನು ಪರಮಧರ್ಮವೆಂದು ಕರೆದಿರುವರು.

೭ ಎರಡನೆಯವರ ಶರೀರಕ್ಕೆ ಅಥವಾ ಮನಸ್ಸಿಗೆ ದುಃಖವನ್ನು ಅಥವಾ ನೋವನ್ನುಂಟುಮಾಡದಿರುವುದಷ್ಟೇ ಅಹಿಂಸಾ-ಧರ್ಮವಲ್ಲ. ಆದರೆ ಅದು ಅಹಿಂಸಾಧರ್ಮದ ಕಣ್ಣಿಗೆ ಕಾಣಿಸುವಂತಹ ಲಕ್ಷಣವೆಂದು ಸಾಮಾನ್ಯವಾಗಿ ಹೇಳಬಹುದು. ಯಾವುದೊಂದು ಕರ್ಮದಿಂದ ಬೇರೆಯವರಿಗೆ ಸ್ಥೂಲ ದೃಷ್ಟಿಯಿಂದ ನೋಡಿದರೆ ನೋವಾಗುತ್ತಿರುವುದೆಂಬ ಜ್ಞಾನವು ನಮಗೆ ಇದ್ದರೂ ನಾವು ಶುದ್ಧ ಅಹಿಂಸೆಯ ಪಾಲನೆಯನ್ನು ಮಾಡುತ್ತಿರುವುದು ಶಕ್ಯವುಂಟು. ಆದರೆ ಇದಕ್ಕೆ ಪ್ರತಿಯಾಗಿ ದುಃಖವನ್ನು, ಅಥವಾ ನೋವನ್ನುಂಟುಮಾಡಿದ ಆಕ್ಷೇಪಣೆಗೆ ನಾವು ಗುರಿಯಾಗದಿದ್ದರೂ ಹಿಂಸಾ ದೋಷಕ್ಕೆ ಪಾತ್ರರಾಗಬಹುದು. ಅಹಿಂಸಾವೃತ್ತಿಯು ಕಣ್ಣಿಗೆ ಕಾಣುವಂತಹ ಪರಿಣಾಮದಲ್ಲಿಯೇ ಇರುವುದೆಂದಲ್ಲ. ಆದರೆ ಅದು ಅಂತಃಕರಣದ ರಾಗ-ದ್ವೇಷ ರಹಿತವಾದ ಸ್ಥಿತಿಯಲ್ಲಿ ಇರುವುದು.

೮ ಆದರೂ ಕಣ್ಣಿಗೆ ಕಾಣುವಂತಹ ಪರಿಣಾಮಗಳ ಕಡೆಗೆ ನಾವು ದುರ್ಲಕ್ಷಮಾಡುವಂತಿಲ್ಲ. ಏಕೆಂದರೆ ಅದು ಸ್ಥೂಲವಾದ ಸಾಧನವಿದ್ದರೂ ತನ್ನ ಅಥವಾ ಬೇರೆಯವರ ಹೃದಯದಲ್ಲಿ ಅಹಿಂಸಾವೃತ್ತಿಯು ಎಷ್ಟು ವಿಕಾಸಗೊಂಡಿರುವುದು ಎಂಬುದು ಈ ಲಕ್ಷಣದಿಂದ ಸಾಮಾನ್ಯವಾಗಿ ಗೊತ್ತಾಗುವುದು. ಸಾಮಾನ್ಯ-ಜೀವನದಲ್ಲಿ ಇತರ ಭೂತ-ಪ್ರಾಣಿಗಳಿಗೆ ಉದ್ವೇಗವನ್ನುಂಟುಮಾಡುವಂತಹ ಎಷ್ಟು ಕರ್ಮ ಹಾಗೂ ವಾಣಿ ಕಂಡುಬರುತ್ತದೋ ಅದರ ಮೇಲಿಂದ ಆ ಆ ಮನುಷ್ಯನಲ್ಲಿ ಅಹಿಂಸೆಯು ಎಷ್ಟು ವಿಕಾಸಹೊಂದಿರುವುದು ಎನ್ನುವುದನ್ನು ಪ್ರತ್ಯಕ್ಷವಾಗಿ ಗುರುತಿಸಲಿಕ್ಕಾಗುವುದು. ಅಹಿಂಸಾಮಯವಾದ, ದುಃಖವನ್ನೀಯುವಂತಹ ಪ್ರಸಂಗವು ಅಪರೂಪವಾಗಿಯೇ ಬರುವುದು. ಆದರೆ ಆಗ ಅವನಲ್ಲಿದ್ದ ಅಹಿಂಸೆಯು ಸ್ಪಷ್ಟವಾಗಿ ಗೋಚರವಾಗುವುದು. ಸ್ವಾರ್ಥದ ಲೇಶ-ಮಾತ್ರವಿದ್ದಲ್ಲಿ

ಅಹಿಂಸೆಯಿರುವುದು ಅಸಂಭವನೀಯ.

೯ ಆದರೆ ಇಷ್ಟರಿಂದಲೇ ಅಹಿಂಸೆಯ ಸಾಧನೆ ಪೂರ್ಣವಾಯಿತೆಂದು ಭಾವಿಸಬಾರದು. ಅಹಿಂಸೆಯ ಸಾಧಕನು ಪ್ರಾಣಿಗಳಿಗೆ ಕೇವಲ ಉದ್ವೇಗವನ್ನು ಹುಟ್ಟಿಸುವಂತಹ ನುಡಿಯನ್ನಾಡದಿದ್ದರೆ, ಅಥವಾ ಅಂತಹ ಕೆಲಸವನ್ನು ಮಾಡದಿದ್ದರೆ, ಮತ್ತು ಮನದಲ್ಲಿ ಭೂತ-ಮಾತ್ರದ ವಿಷಯವಾಗಿ ದ್ವೇಷ-ಭಾವನೆಯನ್ನು ಬರಗೊಡದಿದ್ದರೆ, ತಾನು ಯಶಸ್ಸನ್ನು ಪಡೆಪೆನೆಂದು ಸಂತೋಷಪಡಕೂಡದು. ಆವರೆ ಜಗತ್ತಿನಲ್ಲಿ ಪ್ರಚಲಿತವಿದ್ದ ದುಃಖಗಳನ್ನು ಅರಿತುಕೊಂಡು, ಅವುಗಳನ್ನು ಹೋಗಲಾಡಿಸುವ ಉಪಾಯಗಳನ್ನು ಸತತ ಯೋಜಿಸುತ್ತಿರಬೇಕು. ಅಹಿಂಸೆ ಎಂಬುದು ಕೇವಲ ನಿವೃತ್ತಿ-ರೂಪ ಕರ್ಮವಲ್ಲ, ಅಥವಾ ನಿಷ್ಕ್ರಿಯೆಯಲ್ಲ. ಅದು ಬಲವಾದ ಪ್ರವೃತ್ತಿ, ಪ್ರಕ್ರಿಯೆ.

೧೦ ಅಹಿಂಸೆಯಲ್ಲಿ ಕಾರ್ಯವನ್ನು ಅತ್ಯಂತ ಬೇಗನೆ ಸಾಧಿಸುವ ಶಕ್ತಿಯಿದೆ. ಇದರಲ್ಲಿರುವ ಅಪಾರ ಶಕ್ತಿಯ ಸಂಪೂರ್ಣ ಸಂಶೋಧನೆ ಈ ವರೆಗೂ ಆಗಿಲ್ಲ. 'ಅಹಿಂಸೆಯ ಪ್ರಭಾವವು ವ್ಯಕ್ತವಾದಾಗ ಎಲ್ಲ ಕಪಟವೂ ವೈರವೂ ತಣ್ಣಗಾಗಿ ಹೋಗುತ್ತದೆ' ಎಂಬ ಸೂತ್ರವು ಪುಸ್ತಕದೊಳಗಿನ ಶಬ್ದಮಾತ್ರವಲ್ಲ; ಅದು ಋಷಿಗಳ ಅನುಭವವಾಕ್ಯ. ಈ ಶಕ್ತಿಯ ಸಂಪೂರ್ಣ ವಿಕಾಸವನ್ನು ಹೇಗೆ ಮಾಡಬೇಕು, ಸರ್ವಕಾರ್ಯ ಹಾಗೂ ಪ್ರಸಂಗಗಳಲ್ಲಿ ಹೇಗೆ ಆಚರಿಸಬೇಕು ಎಂಬ ಬಗೆಗೆ ಇನ್ನೂ ಪೂರ್ಣ ಪ್ರಯೋಗಗಳಾಗಿಲ್ಲ. ಹಿಂಸೆಯ ಮಾರ್ಗವನ್ನು ನಿಷ್ಕಂಟಕ ಮಾಡಲು ಜನರು ಎಷ್ಟು ದೀರ್ಘ ಉದ್ಯೋಗ ಮಾಡುವರೋ, ಅವುಗಳಿಗೆ ಶಾಸ್ತ್ರ ಸ್ವರೂಪವನ್ನು ತಂದುಕೊಡುವ ವಿಷಯದಲ್ಲಿ ಎಷ್ಟು ಯಶಸ್ಸನ್ನು ಪಡೆದಿರುವರೋ, ಅಷ್ಟೇ ಉದ್ಯೋಗವನ್ನು ಅಹಿಂಸೆಯ ಶಕ್ತಿಯನ್ನು ಬೆಳೆಸುವುದರಲ್ಲಿ ಉಪಯೋಗಿಸಿದರೆ, ಮನುಷ್ಯ-ಜಾತಿಯ ದುಃಖಗಳ ನಿವಾರಣೆಗಾಗಿ ಎಂದೆಂದಿಗೂ ವ್ಯರ್ಥವಾಗದಂತಹ, ಉಭಯ ಪಕ್ಷಗಳ ಕಲ್ಯಾಣವಾಗುವಂತಹ ಒಂದು ಅಮೂಲ್ಯ ಸಾಧನವು ಸಿದ್ಧವಾಗುವುದು.

೧೧ ವಿಜ್ಞಾನಿಯು ಹೇಗೆ ಶ್ರದ್ಧೆ ಮತ್ತು ಉದ್ಯೋಗದಿಂದ ಸೃಷ್ಟಿಯ ಶಕ್ತಿಗಳ ಶೋಧನೆ ಮಾಡಿ ಅವುಗಳನ್ನು ನಾನಾ ರೀತಿಯಿಂದ ವ್ಯವಹಾರದಲ್ಲಿ ಉಪಯೋಗಿಸಲು ಪ್ರಯತ್ನಿಸುತ್ತಾನೋ, ಹಾಗೆಯೇ ಶ್ರದ್ಧೆ ಮತ್ತು ಉದ್ಯೋಗದಿಂದ ಅಹಿಂಸೆಯ ಶಕ್ತಿಯನ್ನು ಶೋಧಿಸುವುದು, ಮತ್ತು ಅದರ

ನಿಯಮಗಳನ್ನು ವ್ಯವಹಾರದಲ್ಲಿ ತರುವುದು ಅವಶ್ಯಕ.

೪ ಬ್ರಹ್ಮಚರ್ಯ

೧ ಅಹಿಂಸೆಯ ಹೊರತು ಹೇಗೆ ಸತ್ಯದ ಸಾಕ್ಷಾತ್ಕಾರವಾಗುವ ಸಂಭವವಿಲ್ಲವೊ, ಹಾಗೆಯೇ ಬ್ರಹ್ಮಚರ್ಯದ ಹೊರತು ಸತ್ಯದ, ಅಹಿಂಸೆಯ ಪೂರ್ಣ ಆಚರಣವು ಅಶಕ್ಯ.

೨ ಬ್ರಹ್ಮಚರ್ಯವೆಂದರೆ ಬ್ರಹ್ಮನ ಕಡೆಗೆ ಅಥವಾ ಪರಮಾತ್ಮನ ಕಡೆಗೆ ಸಾಗುವುದು—ಅರ್ಥಾತ್ ಪರಮಾತ್ಮನನ್ನು ಪಡೆಯುವ ಸಾಧನ-ಮಾರ್ಗದಲ್ಲಿ ಇಂದ್ರಿಯವನ್ನೂ ಮನಸ್ಸನ್ನೂ ತೊಡಗಿಸುವುದು.

೩ ರಾಗಾದಿ ವಿಕಾರಗಳ ಹೊರತು ಅ-ಬ್ರಹ್ಮಚರ್ಯವು, ಎಂದರೆ ಇಂದ್ರಿಯ-ಪರಾಯಣತೆಯು, ಸಂಭವಿಸಲಾರದು. ವಿಕಾರೀ ಮನುಷ್ಯನು ಸತ್ಯದ ಹಾಗೂ ಅಹಿಂಸೆಯ ಪೂರ್ಣ ಪಾಲನೆಯನ್ನು ಮಾಡಲಾರನು, ಅಧ್ಯಾತ್ಮಿಕ ಪೂರ್ಣತೆಯನ್ನು ಪಡೆಯಲಾರನು.

೪ ಆದುದರಿಂದ ಬ್ರಹ್ಮಚರ್ಯವೆಂದರೆ ಬರಿಯ ವೀರ್ಯರಕ್ಷಣೆ, ಅಥವಾ ಕಾಮಜಯವಲ್ಲ. ಬ್ರಹ್ಮಚರ್ಯ-ಪಾಲನೆಯಲ್ಲಿ ಸರ್ವೇಂದ್ರಿಯಗಳ ಸಂಯಮ ಅವಶ್ಯಕ.

೫ ಜನರು, ಸತ್ಯದ ಸ್ಥೂಲ ಅರ್ಥವು ಸತ್ಯವಾಣಿಯೆಂದೂ ಅಹಿಂಸೆಯ ಸ್ಥೂಲ ಅರ್ಥವು ಪ್ರಾಣವನ್ನು ತೆಗದುಕೊಳ್ಳದಿರುವುದೆಂದೂ ತಿಳಿದಿರುವಂತೆ, ಬ್ರಹ್ಮಚರ್ಯವೆಂದರೆ ಕಾಮ-ಜಯವೆಂದು ಮಾತ್ರ ತಿಳಿದಿರುತ್ತಾರೆ. ಕಾಮ ಜಯವೇ ಕಠಿಣತಮವಾದ ಇಂದ್ರಿಯ-ಜಯವೆಂದು ಮನುಷ್ಯನಿಗೆ ಎನಿಸುತ್ತಿರುವುದೇ ಇದಕ್ಕೆ ಕಾರಣ.

೬ ವಾಸ್ತವಿಕವಾಗಿ, ಜೀವನವನ್ನು ಸುಖರೂಪವಾಗಿ ನಡೆಯಿಸಲು ಅನ್ಯ ಇಂದ್ರಿಯಗಳ ಸ್ವಲ್ಪವೇ ಭೋಗವಾದರೂ ಆವಶ್ಯಕ. ಆದರೆ ಬ್ರಹ್ಮಚರ್ಯದಿಂದ ಜೀವನವು ಅಶಕ್ಯವಾಗುವುದಿಲ್ಲ. ಇಷ್ಟೇ ಅಲ್ಲ, ಅದು ಚನ್ನಾಗಿಯೂ ತೇಜಸ್ವಿಯಾಗಿಯೂ ಸಾಗುವುದು.

೭ ಜೀವನದ ಪೂರ್ಣತೆಯನ್ನೂ ಪರಮಾನಂದದ ಪ್ರಾಪ್ತಿಯನ್ನೂ ಪಡೆದುಕೊಳ್ಳಲು ಆಜೀವ ನೈಷ್ಠಿಕ ಬ್ರಹ್ಮಚಾರಿಗೆ ಯಾವ ಆಶೆ ಅನುಕೂಲತೆಗಳು ಇರುವವೋ ಅವು ಅ-ಬ್ರಹ್ಮಚಾರಿಗೆ ಇರುವುದಿಲ್ಲ. ಇಂಥ ಸ್ತ್ರೀ ಪುರುಷರ

ಜೀವನವು ಅವಿವಾಹಿತರಿಗೂ ವಿವಾಹಿತರಿಗೂ ಕೈದೀಪದಂತೆಯೇ ಇರುತ್ತದೆ.

೮ ಮನುಷ್ಯನು ಆಹಾರ ವಿಹಾರದಲ್ಲಿ ಅನ್ಯ ಪ್ರಾಣಿಗಳಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಭೋಗಿಸುವನು. ಆದುದರಿಂದಲೇ ಅವನು ಸರ್ವ ವಿಷಯಗಳ ಭೋಗವನ್ನೂ ಯಥೇಷ್ಟವಾಗಿ ಮಾಡುವನು. ಈ ಮೂಲಕ ಅವನಿಗೆ ಕಾಮದ ಉದ್ರೇಕವು ವರ್ಷದ ವಿಶಿಷ್ಟ ದಿನಗಳಲ್ಲಿ ಉಂಟಾಗುವ ಬದಲು ನಿರಂತರವೂ ತೋರುವುದು. ಇಂತು ಕಾಮ-ವಿಕಾರವು ಅವನ ನಿರಂತರ ರೋಗವಾಗಿರುವುದರಿಂದ ಅದನ್ನು ಜಯಿಸುವುದು ಅತ್ಯಂತ ಕಠಿಣವಾಗಿರುವುದು.

೯ ಅನ್ಯ ಇಂದ್ರಿಯಗಳನ್ನು ಪೋಷಿಸದಿದ್ದರೆ ಕಾಮಕ್ಕೆ ಹೆಚ್ಚು ಪೋಷಣೆ ಸಿಕ್ಕುವುದಿಲ್ಲವೆಂದೂ ಅನ್ಯ ಇಂದ್ರಿಯಗಳನ್ನು ಗೆದ್ದ ಹೊರತು ಕಾಮವನ್ನು ಗೆಲ್ಲ ಬಯಸುವುದು ವ್ಯರ್ಥವೆಂದೂ ವಿಚಾರೀ ಪುರುಷನು ಅರಿತುಕೊಳ್ಳುವನು.

೧೦ ಈ ರೀತಿ ಪ್ರಯತ್ನಶೀಲರಾದ ಸ್ತ್ರೀ ಪುರುಷರಿಗೆ ಬ್ರಹ್ಮಚರ್ಯಪಾಲನೆ ಈಗ ಜನರು ತಿಳಿದಿರುವಷ್ಟು ಕಠಿಣವಿಲ್ಲ.

೫ ಅಸ್ವಾದ

ಈ ತೆರನಾಗಿ ಒಂದು ವ್ರತವು ಇನ್ನೊಂದರೊಳಗಿಂದ ಹುಟ್ಟುವುದು.

೧ ಒಂದು ಇಂದ್ರಿಯವು ಸ್ವಚ್ಛಂದವಾದರೆ ಅದು ಇತರ ಇಂದ್ರಿಯಗಳ ಮೇಲಿನ ಹಿಡಿತವನ್ನೂ ಸಡಲಿಸಿಬಿಡುವುದು. ಮೇಲಾಗಿ ಬ್ರಹ್ಮಚರ್ಯದ ದೃಷ್ಟಿಯಿಂದ ಎಲ್ಲ ಇಂದ್ರಿಯಗಳಿಗಿಂತಲೂ ಸ್ವಾದೇಂದ್ರಿಯವು ಮಹತ್ವದ್ದು ಮತ್ತು ಗೆಲ್ಲಲು ಕಠಿಣವಾದದ್ದು. ಇದರ ಕಡೆಗೆ ಸರಿಯಾದ ಗಮನವಿರಬೇಕೆಂದು ವ್ರತಗಳಲ್ಲಿ ಸ್ವಾದ-ಜಯಕ್ಕೆ ವಿಶಿಷ್ಟವಾದ ಸ್ಥಾನವು ಕೊಡಲ್ಪಟ್ಟಿರುವುದು.

೨ ಶರೀರದೊಳಗಿನ ಸವೆದುಹೋಗುತ್ತಲಿರುವ ತತ್ವಗಳನ್ನು ಪುನಃ ಪೂರೈಸಲಿಕ್ಕೂ, ದೇಹವನ್ನು ಕೆಲಸ ಮಾಡುವಂತಹ ಸ್ಥಿತಿಯಲ್ಲಿ ಇಡುವುದಕ್ಕೂ ಆಹಾರದ ಅವಶ್ಯಕತೆಯು ಇರುವುದು. ಆದ್ದರಿಂದ ಇದೇ ಉದ್ದೇಶವನ್ನಿಟ್ಟುಕೊಂಡು, ಯಾವ ತರದ ಆಹಾರವು ಎಷ್ಟು ಆವಶ್ಯಕವೋ ಅಷ್ಟನ್ನು ಮಾತ್ರವೇ ಸೇವಿಸಬೇಕು. ಸ್ವಾದದ ಸಲುವಾಗಿ–ನಾಲಿಗೆಯು ಬಯಸುವುದೆಂದು–ಏನನ್ನಾದರೂ ಉಣ್ಣುವುದು, ಅಥವಾ ರುಚಿಗಾಗಿ ಆಹಾರದಲ್ಲಿ ಏನನ್ನಾದರೂ ಸೇರಿಸುವುದು, ಅಥವಾ ಹೆಚ್ಚು ಆಹಾರವನ್ನು ತೆಗೆದುಕೊಳ್ಳುವುದು ಅಸ್ವಾದವ್ರತಕ್ಕೆ ಭಂಗವನ್ನು ತರುವುದು.

೩ ಅಸ್ವಾದವ್ರತವನ್ನು ಆಚರಿಸುತ್ತಿರುವಾಗ ಆ ವೃತ್ತಿಯಿಂದ ಆಹಾರವನ್ನು ಸಿದ್ಧಪಡಿಸುತ್ತಿರುವ ಅಡಿಗೆಯ ಮನೆಗೆ ಹೋಗಿ, ಅಲ್ಲಿ ಸಿದ್ಧವಾದ ಆಹಾರದೊಳಗಿಂದ ನಾವು ಬಿಟ್ಟುಕೊಡದೆ ಇದ್ದ ಆಹಾರವನ್ನು ತೆಗೆದುಕೊಂಡು, ಅದು ಪರಮಾತ್ಮನ ಅನುಗ್ರಹವೆಂದು ಭಾವಿಸಿ, ಮನಸ್ಸಿನಲ್ಲಿ ಕೂಡ ಟೀಕೆ ಮಾಡದೆ, ಸಂತೋಷಪೂರ್ವಕವಾಗಿ, ಶರೀರಕ್ಕೆ ಅವಶ್ಯವಿದ್ದಷ್ಟು ಮಾತ್ರ ಉಣ್ಣುವುದು ಅಸ್ವಾದವ್ರತಕ್ಕೆ ಹೆಚ್ಚು ಸಹಾಯವನ್ನೀಯುವುದು.

೬ ಅಸ್ತೇಯ

೧ ಅಸ್ತೇಯವೆಂದರೆ ಅನ್ಯರ ಒಡೆತನದ ವಸ್ತುವನ್ನು ತೆಗೆದುಕೊಳ್ಳದಿರುವುದಷ್ಟೇ ಅಲ್ಲ, ತನ್ನದಾಗಿದ್ದರೂ, ತನಗೆ ಅವಶ್ಯವಿಲ್ಲದ ವಸ್ತುವನ್ನು ಉಪಯೋಗಿಸುವುದು ಕೂಡ ಕಳ್ಳತನವೇ ಸೈ. ಅನ್ಯರ ಒಡವೆಗಳ ಮೇಲೆ ಲೋಭದೃಷ್ಟಿಯನ್ನಿಡುವುದು ಮಾನಸಿಕ ಕಳ್ಳತನವೆನಿಸುವುದು. ಅನ್ಯರ ವಿಚಾರವನ್ನು ಅಥವಾ ಶೋಧವನ್ನು ಅರಿತುಕೊಂಡು, ಅದು ತನ್ನದೆಂದು ಹೇಳುವುದು ಕೂಡ ವಿಚಾರದ ಕಳ್ಳತನವೇ ಸರಿ.

೨ ಜಗತ್ತಿನೊಳಗಿನ ಎಲ್ಲ ವಸ್ತುಗಳು ಪರಮಾತ್ಮನ ಒಡೆತನಕ್ಕೆ ಒಳಪಟ್ಟವೆಂದು ಭಾವಿಸಬೇಕು. ಪ್ರಾಣಿಮಾತ್ರವೆಲ್ಲವೂ ಅವನ ಸರ್ವಾಧಿಕಾರಕ್ಕೊಳಗಾದ ವಿಶಾಲ ಕುಟುಂಬವೆಂದು ಭಾವಿಸಬೇಕು. ಎಂದರೆ ಮಾತ್ರ, ಜಗತ್ತಿನೊಳಗಿನ ಎಲ್ಲ ಆವಶ್ಯಕ ವಸ್ತುಗಳ ಉಪಭೋಗವನ್ನು ಮಾಡಲು ನಮಗೆ ಅಧಿಕಾರವು ಉಂಟಾಗುವುದು. ಅವುಗಳ ಮೇಲೆ ತನ್ನ ಅಧಿಕಾರವು ಇದಕ್ಕಿಂತ ಅಧಿಕವಿರುವುದೆಂದು ತಿಳಿಯುವುದು ಸಹ ಕಳ್ಳತನ.

೭ ಅಪರಿಗ್ರಹ

೧ ಅಸ್ತೇಯ ಮತ್ತು ಅಪರಿಗ್ರಹದ ನಡುವೆ ಸ್ವಲ್ಪ ಮಾತ್ರ ಭೇದವಿದೆ. ತನಗೆ ಇವತ್ತು ಅಗತ್ಯವಿಲ್ಲದ ವಸ್ತು ನಾಳೆ ಬೇಕಾಗುವುದೆಂದು, ಅಥವಾ ಮುಂದೆ ಯಾವಾಗಲಾದರೂ ಬೇಕಾಗುವುದೆಂದು ಬಗೆದು ಸಂಗ್ರಹಿಸುವುದು ಪರಿಗ್ರಹವೆನಿಸುವುದು. ಪರಮಾತ್ಮನನ್ನು ನೆಚ್ಚಿದವನು ಅತ್ಯಂತ ಅವಶ್ಯವಿದ್ದ ವಸ್ತುಗಳನ್ನು ಅತ್ಯಂತ ಆವಶ್ಯಕತೆಯುಂಟಾದಾಗ ಪರಮಾತ್ಮನೇ ಒದಗಿಸಿ ಕೊಡುವನೆಂದು ತಿಳಿದುಕೊಳ್ಳುವನು. ಆದುದರಿಂದಲೆ ಅವನು ಯಾವ ವಸ್ತುವನ್ನೂ ಸಂಗ್ರಹಿಸಿಡುವ ಗೊಂದಲದಲ್ಲಿ ಬೀಳುವುದಿಲ್ಲ.

೨ ಶಕ್ತಿಯಿದ್ದರೂ ಕೆಲಸಮಾಡದಿರುವವನ ಅವಶ್ಯಕತೆಗಳನ್ನು ಪರಮಾತ್ಮನು ಪೂರೈಸಿಕೊಡುವನೆಂದು ಇದರ ಅರ್ಥವಲ್ಲ. ಶ್ರಮವನ್ನು ಮಾಡಲು ಮುಂದಾಗದಿರುವವನು, ಶ್ರಮವು ಒಂದು ದೊಡ್ಡ ಕುತ್ತೆಂದು ಭಾವಿಸುವವನು, ತನಗೆ ಪರಮಾತ್ಮನು ಅವಶ್ಯವಿದ್ದ ವಸ್ತುಗಳನ್ನು ಒದಗಿಸಿ ಕೊಡುವನೆಂಬುದನ್ನು ನಂಬದೆ ತನ್ನ ಪರಿಗ್ರಹಶಕ್ತಿಯನ್ನೇ ಅವಲಂಬಿಸುವನು. ಆದರೆ ಬಲವಿರುವ ವರೆಗೆ ಪೂರ್ಣಶ್ರಮವನ್ನು ಮಾಡುವವನ, ಶ್ರಮಪಡುವುದ ರಲ್ಲಿ ಸ್ವಾಭಿಮಾನವೂ ಪ್ರತಿಷ್ಠೆಯೂ ಇರುವುದೆಂದು ಅರಿಯುವವನ, ಮತ್ತು ವಸ್ತುಗಳನ್ನು ಸಂಗ್ರಹಿಸಿಡುವ ಗೋಜಿಗೆ ಹೋಗದವನ ನಿರ್ವಾಹದ ಚಿಂತೆ ಯನ್ನು ಪರಮಾತ್ಮನೇ ಮಾಡುವನು.

೩ ಆದರೆ ಸಮಾಜದಲ್ಲಿದ್ದುಕೊಂಡು ಅಪರಿಗ್ರಹ ವ್ರತದ ಪಾಲನೆ ಮಾಡಲು ಬಯಸುವ ಮನುಷ್ಯನು, ತನ್ನಲ್ಲಿ ಇರುವ ಮತ್ತು ಬರುವ ವಸ್ತುಗಳನ್ನು ಕೆಡಿಸಿ ಬಿಡಬೇಕೆಂದು, ಇಲ್ಲವೆ ಬೀದಿಯ ಮೇಲೆ ಬಿಸುಡಬೇಕೆಂದು ಇದರ ಅರ್ಥವಲ್ಲ. ತಾನು ಆ ವಸ್ತುಗಳ ಸಂರಕ್ಷಕನೆಂದು ತಿಳಿದುಕೊಂಡು ಅವುಗಳನ್ನು ಚನ್ನಾಗಿ ಜೋಪಾನದಿಂದ ಇಡಬೇಕು; ಆದರೆ ತಾನು ಅವುಗಳ ಒಡೆಯನೆಂದು ಒಂದು ನಿಮಿಷವಾದರೂ ಭಾವಿಸಕೂಡದು. ಆ ವಸ್ತುಗಳು ಯಾರಿಗೆ ಅತ್ಯಂತ ಅವಶ್ಯಕವೋ, ಅವರಿಗೆ ಉಪಯೋಗಿಸಲು ಅವನ್ನು ಯಾವ ಅಡ್ಡಿಯೂ ಇಲ್ಲದೆ ಕೊಡಬೇಕು. ತನ್ನ ಅಥವಾ ತನ್ನ ಮಕ್ಕಳು-ಮರಿಗಳ ಉಪಯೋಗಕ್ಕೆ ಬರುವು ದೆಂದು ಭಾವಿಸಿ ಒಂದು ಚಿಂದಿಯನ್ನು ಕೂಡ ಕಟ್ಟಿಡುವಂತಹ, ಬೇರೆಯವರಿಗೆ ಅತ್ಯಂತ ಅವಶ್ಯಕವಿದ್ದರೂ ಅವನ್ನು ಕೊಡದಿರುವಂತಹ ಮನುಷ್ಯನು ಪರಿಗ್ರಹಿಯು. ಇಂತಹ ವೃತ್ತಿಯಿಲ್ಲದವನು ಲಕ್ಷಗಟ್ಟಲೆ ರೂಪಾಯಿಗಳ ಒಡೆಯನಾಗಿದ್ದರೂ ಅವನು ಅಪರಿಗ್ರಹಿ.

೮ ಶಾರೀರಿಕ ಶ್ರಮ

೧ ಜೀವನಕ್ಕೆ ಅವಶ್ಯವಿದ್ದ ಪದಾರ್ಥಗಳನ್ನು ಉತ್ಪನ್ನ ಮಾಡಲು ಸ್ವತಃ ಶಾರೀರಿಕ ಶ್ರಮವನ್ನು ಮಾಡತಕ್ಕದ್ದು ಎಂಬ ನಿಯಮವು ಅಸ್ತೇಯ ಮತ್ತು ಅಪರಿಗ್ರಹಗಳೆಂಬ ಎರಡು ತತ್ವಗಳಿಂದ ಸಹಜವಾಗಿಯೆ ಹೊರಡುವುದು. ಪರಿ ಶ್ರಮವನ್ನು ಮಾಡಿದ ಹೊರತು ಯಾವ ಪದಾರ್ಥಗಳು ಹುಟ್ಟುವುದಿಲ್ಲವೋ, ಯಾವ ಪದಾರ್ಥಗಳ ಹೊರತು ಜೀವನನಿರ್ವಾಹವು ಸಾಗುವುದಿಲ್ಲವೋ, ಅವುಗಳ

ಉತ್ಪನ್ನಕ್ಕಾಗಿ ಸ್ವತಃ ಶಾರೀರಿಕ ಶ್ರಮವನ್ನು ಮಾಡದೆ ಅವುಗಳ ಉಪಭೋಗ ಮಾಡಿದರೆ ನಾವು ಕಳ್ಳರೆಂದೆನಿಸುವೆವು.

೨ ಇಂತಹ ಪರಿಶ್ರಮವನ್ನು ಪಾರಮಾರ್ಥಿಕ ಭಾವನೆಯಿಂದ ಮಾಡುವುದೇ ಯಜ್ಞವೆಂದೆನಿಸುವುದು. ತನ್ನ ಶಾರೀರಿಕ ಶ್ರಮದಿಂದ ಉತ್ಪನ್ನವಾದ ಪದಾರ್ಥಗಳ ಉಪಭೋಗವನ್ನು ತಾನೇ ಮಾಡಬೇಕೆಂದು ಅಭಿಲಾಷೆಗೊಂಡರೆ ಅದಕ್ಕೆ ಸಕಾಮ ಕರ್ಮವೆಂದೆನ್ನುವರು. ಆ ಅಭಿಲಾಷೆಯನ್ನು ತೊರೆದು, ಜಗತ್ತಿನ ಸಲುವಾಗಿ ಇಷ್ಟು ಪದಾರ್ಥಗಳು ಉತ್ಪನ್ನವಾಗಲೇಬೇಕೆಂದು ಅವುಗಳಿಗಾಗಿ ಪರಿಶ್ರಮವನ್ನು ಮಾಡಿದರೆ ಅದು ನಿಷ್ಕಾಮ ಕರ್ಮವಾಗುವುದು. ಅದೇ ಯಜ್ಞವು.

೩ ಕಸ-ಕಡ್ಡಿ ಮುಂತಾದ ಹೊಲಸು ಹಾಗೂ ಹಾನಿಕರವಾದ ಪದಾರ್ಥಗಳ ಯೋಗ್ಯ ವ್ಯವಸ್ಥೆಗಾಗಿ ಮಾಡಿದ ಪರಿಶ್ರಮವು ಕೂಡ ಯಜ್ಞದ ಒಂದು ಪ್ರಕಾರವೇ ಎನಿಸುವುದು. ಇಂತಹ ಪರಿಶ್ರಮವನ್ನು ಪ್ರತಿಯೊಬ್ಬನೂ ಮಾಡತಕ್ಕದ್ದು.

೪ ಈ ದೃಷ್ಟಿಯಿಂದ ಯೋಚಿಸಿದರೆ ಸುಶಿಕ್ಷಿತರಾದ ನಾವು, ನಮ್ಮ ಶಾರೀರಿಕ ಶ್ರಮದಿಂದ ಉತ್ಪನ್ನ ಮಾಡಬಲ್ಲ ಪದಾರ್ಥಗಳಿಗಿಂತ ಹೆಚ್ಚು ಪದಾರ್ಥಗಳನ್ನು ಉಪಭೋಗಿಸುವೆವು. ಅಲ್ಲದೆ ನಿರರ್ಥಕವಾಗಿ ಸಂಗ್ರಹಿಸಿ ಇಡುವೆವು. ಅನರ್ಥಕಾರಿಯಾದ ವಸ್ತುಗಳ ಯೋಗ್ಯ ವ್ಯವಸ್ಥೆಗಾಗಿ ಕೂಡ ನಾವು ಅಪರೂಪವಾಗಿ ದುಡಿಯುವೆವು. ಇದರಿಂದ ಅನೇಕ ಪ್ರಾಣಿಗಳಿಗೆ ಕೊರತೆಯುಂಟಾಗಿ ಅವು ಬೇನೆಯಿಂದ ಬಳಲಬೇಕಾಗುವುದು. ಇದರಿಂದ ನಾವು ಕ್ಷಣ ಕ್ಷಣಕ್ಕೆ ಅಸ್ತೇಯ ಮತ್ತು ಅಪರಿಗ್ರಹ ವ್ರತದ ಭಂಗ ಮಾಡಿದಂತಾಗುವುದು.

೫ ಆದ್ದರಿಂದ ನಮ್ಮ ಅವಶ್ಯಕತೆಗಳನ್ನೂ ಪರಿಗ್ರಹವನ್ನೂ ಸಾಧ್ಯವಾದಷ್ಟು ಕಡಮೆ ಮಾಡುವುದು, ಉತ್ಪಾದಕ ಶ್ರಮಕ್ಕಾಗಿಯೂ ಹಾನಿಕರವಾದ ಪದಾರ್ಥಗಳ ಯೋಗ್ಯ ವ್ಯವಸ್ಥೆಗಾಗಿಯೂ, ಫಲಾಪೇಕ್ಷೆ ಇಲ್ಲದೆ ಯಜ್ಞಬುದ್ಧಿಯಿಂದ ನಿಯಮಿತವಾಗಿ ಕೆಲಸ ಮಾಡುವುದು ಅಸ್ತೇಯಾದಿ ವ್ರತಗಳಿಗೆ ಸಹಾಯಕವಾಗುವುದು.

೬ ಈ ದೃಷ್ಟಿಯಿಂದ ಇಂದಿನ ಭರತವರ್ಷದ ಸ್ಥಿತಿಯನ್ನು ನೋಡಿ ನೂಲುವುದೂ ಮಲ ಮೂತ್ರವನ್ನು ಸ್ವಚ್ಛಮಾಡಿ ಅದರ ಯೋಗ್ಯ ವ್ಯವಸ್ಥೆ ಮಾಡುವುದೂ ಸತ್ಯಾಗ್ರಹ ಆಶ್ರಮದಲ್ಲಿ ಯಜ್ಞಕರ್ಮಗಳೆಂದು ಎಣಿಸಲ್ಪಟ್ಟಿವೆ. ಇವುಗಳನ್ನು ಕುರಿತು ಮುಂದೆ ಹೆಚ್ಚು ಯೋಚಿಸಲಾಗಿದೆ.

೯ ಸ್ವದೇಶಿ

೧ ಶಾರೀರಿಕ ಪರಿಶ್ರಮದ ಸಿದ್ಧಾಂತದಿಂದಲೆ ಸ್ವದೇಶೀ ಧರ್ಮವು ಹುಟ್ಟು ವುದು.

೨ ಅಸ್ತೇಯ ಮತ್ತು ಅಪರಿಗ್ರಹದ ಗುರಿಯನ್ನಿಟ್ಟುಕೊಂಡ ಮನುಷ್ಯನು ಅನ್ಯರ ಪರಿಶ್ರಮದ ಉಪಭೋಗವನ್ನು ಕ್ವಚಿತ್ತಾಗಿ ಮಾಡುವನು. ಅಡಿಗೆ ಮಾಡುವುದು, ಬಟ್ಟೆ ಒಗೆಯುವುದು, ಮಲ ಮೂತ್ರ ಸ್ವಚ್ಛ ಮಾಡುವುದು, ಪಾತ್ರೆ ತಿಕ್ಕುವುದು, ಕ್ಷೌರ ಮಾಡಿಕೊಳ್ಳುವುದು, ಕಸಗೂಡಿಸುವುದು, ಮುಂತಾದ ಕಾರ್ಯಗಳು ಕೀಳೆಂದು ಬಗೆದು ಎರಡನೆಯವರಿಂದ ಮಾಡಿಸಿಕೊಳ್ಳ ಬಾರದು. ಇವುಗಳನ್ನು ಮಾಡಿಸಿಕೊಳ್ಳುವುದರಲ್ಲಿಯೇ ಸ್ವಾಭಿಮಾನವೂ ಪ್ರತಿ-ಷ್ಠೆಯೂ ಇರುವುದೆಂದು ತಿಳಿದುಕೊಳ್ಳಕೂಡದು. ತಾನು ಅಶಕ್ತನಿದ್ದಾಗ, ಗೆಳೆಯರು ಪ್ರೇಮದಿಂದ ಮಾಡಿದರೆ, ಇಲ್ಲವೆ ಕೆಲವರು ಸೇರಿ ಹಂಚಿಕೊಂಡು ಕೆಲಸ ಮಾಡುವಾಗ ಈ ಕಾರ್ಯಗಳನ್ನು ಅನ್ಯರಿಂದ ಮಾಡಿಸಿಕೊಳ್ಳಬಹುದು. ಆದರೆ ಇವುಗಳಲ್ಲಿ ಒಂದು ಕೆಲಸ ದೊಡ್ಡದು, ಇನ್ನೊಂದು ಚಿಕ್ಕದು; ಒಂದು ಕೀಳು, ಇನ್ನೊಂದು ಮೇಲು; ಉಚ್ಚವಾದ ಕೆಲಸವನ್ನು ಮಾಡುವವನು ಮನ್ನಣೆಗೆ ಯೋಗ್ಯನು, ಉಳಿದವರೆಲ್ಲರೂ ತುಚ್ಛರು ಎಂಬ ಭಾವನೆಯು ಎಳ್ಳಷ್ಟೂ ಇರ ಕೂಡದು.

೩ ಮೇಲೆ ಸೂತ್ರರೂಪದಿಂದ ಹೇಳಿದುವು ಆದರ್ಶ ಸಿದ್ಧಾಂತಗಳು. ಆದರೆ ಸಹಕಾರ-ತತ್ವದ ದೃಷ್ಟಿಯಿಂದ ಮತ್ತು ಜಗತ್ತಿನ ವ್ಯವಹಾರದ ದೃಷ್ಟಿಯಿಂದ ಯೋಚಿಸಿ ನೋಡಿದರೆ ನಮ್ಮ ಎಷ್ಟೋ ಅವಶ್ಯಕತೆಗಳನ್ನು ಪೂರೈಸಿಕೊಳ್ಳು ವುದಕ್ಕಾಗಿ ಪರಿವಾರದವರ ಅಥವಾ ಗೆಳೆಯರ ಸಹಕಾರೀ ಶ್ರಮವಷ್ಟೇ ಸಾಕಾ ಗುವುದಿಲ್ಲ. ನೆರೆಹೊರೆಯವರ ಮತ್ತು ಗ್ರಾಮನಿವಾಸಿಗಳ ಸಂಗಡ ಸಹಕರಿಸಿ ಅವರೊಡನೆ ಕೆಲಸ ಮಾಡಬೇಕಾಗುವುದು. ಸ್ವದೇಶೀಧರ್ಮವು ಇದರಿಂದಲೇ ಅಂಕುರಿಸುವುದು.

೪ ಸ್ವದೇಶೀ ವ್ರತವು ಹುಟ್ಟಿದ್ದು ಕೇವಲ ದೇಶಾಭಿಮಾನದ ವಿಚಾರ ದಿಂದ ಅಲ್ಲ. ಅದು ಹುಟ್ಟಿದ್ದು ಧಾರ್ಮಿಕ ವಿಚಾರದಿಂದ. ವಿಶ್ವಬಂಧುತ್ವವನ್ನು ಬೆಳೆಸುವುದಕ್ಕಾಗಿ ನಾವು ಪ್ರಯತ್ನವನ್ನು ಮಾಡಬೇಕು. ಆದರೆ ಇದಕ್ಕೂ ಪೂರ್ವದಲ್ಲಿ, ನಾವು ಯಾವ ನೆರೆಹೊರೆಯವರ ಮಧ್ಯದಲ್ಲಿ ಹಗಲೂ ಇರುಳೂ ಬಾಳುವೆವೋ, ಮತ್ತು ಯಾರೊಡನೆ ನೂರಾರು ಕೆಲಸಗಳಲ್ಲಿ ನಮ್ಮ ಸಂಬಂಧ

ಗಳು ಉಂಟಾಗುವವೋ, ಅವರೊಡನೆ ಯೋಗ್ಯ ರೀತಿಯಿಂದ ವ್ಯವಹಾರವನ್ನು ಮಾಡತಕ್ಕದ್ದು ನಮ್ಮ ಧರ್ಮವು. ಇದನ್ನು ಬಿಟ್ಟು ವಿಶ್ವಬಂಧುತ್ವವನ್ನು ಸ್ಥಾಪಿಸಲು ಹೊರಟರೆ ಅದು ಡಂಭಾಚಾರವಾಗುವುದು. ಅಲ್ಲದೆ ವಿಶ್ವದೊಡನೆ ಬಂಧುತ್ವವೂ ಬೆಳೆಯಲಾರದು.

೫ ಕೇವಲ ರಾಷ್ಟ್ರೀಯ ಭಾವನೆಯಿಂದ ಹುಟ್ಟಿದ ಸ್ವದೇಶಿಯ ವೃತ್ತಿಯು ಪರದೇಶೀಯರ ಹಿತವನ್ನು ದುರ್ಲಕ್ಷಿಸಬಹುದು. ಅವರಿಗೆ ಅಹಿತವನ್ನು ಮಾಡುವ ಪ್ರಸಂಗಗಳನ್ನು ಕೂಡ ಹುಡುಕುವ ಸಂಭವವುಂಟು. ಆದರೆ ಧರ್ಮ-ಭಾವನೆಯಿಂದ ಹುಟ್ಟಿದ ಸ್ವದೇಶಿಯು ಸ್ವದೇಶದ ಕಲ್ಯಾಣ ಮಾಡುತ್ತಿದ್ದರೂ ಪರ ರಾಷ್ಟ್ರಗಳ ಅಕಲ್ಯಾಣವನ್ನು ಬಯಸದು, ಅಹಿತವನ್ನೂ ಮಾಡದು.

೧೦ ಅಭಯ

೧ ತನ್ನ ಮನಸ್ಸಿನ ವಿಕಾರಗಳಿಗೆ ಹೆದರದೆ ಉಳಿದ ಆಪತ್ತುಗಳಿಗೆ ಹೆದರುವ ಮನುಷ್ಯನು ಅಹಿಂಸೆಯನ್ನು ಪಾಲಿಸಲಾರನು. ಅಭಯವು ದೈವೀಸಂಪತ್ತುಗಳಲ್ಲಿ ಒಂದು ಪ್ರಧಾನ ಗುಣ. ಅದನ್ನು ಮೊಟ್ಟಮೊದಲು ದೊರಕಿಸಿಕೊಳ್ಳತಕ್ಕದ್ದು.

೨ ಮನುಷ್ಯನು ಸಾಮಾನ್ಯವಾಗಿ ಸಾವು, ಬೇನೆ, ಧನನಾಶ, ಕಲಹ, ಬಲಾತ್ಕಾರ, ಅತ್ಯಾಚಾರ, ಮಾನಹಾನಿ, ಲೋಕನಿಂದೆ, ಕುಟುಂಬಕ್ಲೇಶ, ಅಥವಾ ಕುಟುಂಬಿಗಳಿಗೆ ದುಃಖವಾಗುವುದೆಂಬ ಚಿಂತೆ, ಮತ್ತು ಕಾಲ್ಪನಿಕ ಸಂಶಯ, ಮುಂತಾದುವುಗಳಿಗೆ ಅಂಜುತ್ತಿರುವನು. ಅಂಜುವ ಮನುಷ್ಯನು ಧರ್ಮಾಧರ್ಮದ ಆಳವಾದ ವಿಚಾರವನ್ನು ಮಾಡಲು ಅಸಮರ್ಥನು. ಅವನು ಸತ್ಯವನ್ನು ಶೋಧಿಸಲಾರನು. ಶೋಧಿಸಿದರೂ ಅದಕ್ಕೆ ಅಂಟಿಕೊಂಡಿರಲಾರನು. ಇಂತು ಸತ್ಯದ ಪಾಲನೆಯು ಪುಕ್ಕನಿಂದಾಗದು.

೩ ಮನುಷ್ಯನು ಒಂದೇ ಒಂದು ವಸ್ತುವಿಗೆ ಹೆದರಬೇಕು– ತನ್ನ ವಿಕಾರೀ ಚಿತ್ತಕ್ಕೆ. ಆ ಹೆದರಿಕೆಗೆ ಪರಮಾತ್ಮನ ಹೆದರಿಕೆ, ಅಧರ್ಮದ ಹೆದರಿಕೆ, ಅಥವಾ ತನ್ನ ವಿಕಾರರೂಪೀ ಶತ್ರುವಿನ ಭಯ ಎನ್ನಬಹುದು. ಅದೆಲ್ಲವೂ ಒಂದೇ. ವಿಕಾರಗಳಿಲ್ಲದಿದ್ದರೆ ಅಧರ್ಮವಿಲ್ಲ. ಅಧರ್ಮವಿಲ್ಲದಿದ್ದರೆ ಪರಮಾತ್ಮನ ಹೆದರಿಕೆ ಎಲ್ಲಿಯದು?

೧೧ ನಮ್ರತೆ

೧ ನಮ್ರತೆಯು ಅಹಿಂಸೆಯ ಒಂದು ಅಂಗ. ಅಹಂಕಾರದಿಂದ ನಮ್ರತೆಗೆ ಕುಂದು ಬರುವುದು; ಅಹಂಕಾರಿಯು ಸರ್ವಾತ್ಮಭಾವವನ್ನಿಡಲಾರನು. ಇದರಿಂದ ಅವನ ಅಹಿಂಸಾವ್ರತಕ್ಕೆ ಕುಂದುಂಟಾಗುವುದು.

೨ ಶೂನ್ಯದಂತೆ ಇರುವುದೇ ನಮ್ರತೆಯ ಪರಾಕಾಷ್ಠೆ. ತಾನು ಹೆಚ್ಚಿನವನು, ತನ್ನಲ್ಲಿ ವೈಶಿಷ್ಟ್ಯವಿದೆ; ತನ್ನ ಶರೀರ, ಮನಸ್ಸು, ಬುದ್ಧಿ, ವಿದ್ಯೆ, ಕಲೆ, ಚಾತುರ್ಯ, ಪಾವಿತ್ರ್ಯ, ಜ್ಞಾನ, ಭಕ್ತಿ, ವೈರಾಗ್ಯ, ಔದಾರ್ಯ, ವ್ರತಪಾಲನೆ, ಇವು ಶ್ರೇಷ್ಠ; ವಿನಯಾದಿ ಗುಣಗಳೂ ತನ್ನಲ್ಲುಂಟು ಎಂದು ಅಭಿಮಾನ ಪಡುವುದೇ ಅಹಂಕಾರ. ಈ ಮೂಲಕ ತನ್ನ ಅಸ್ತಿತ್ವವೂ ಭಾರವೆನಿಸಿದರೆ ಅದೂ ಅಹಂಕಾರ. ತನ್ನ ಅವಯವಗಳು ಆರೋಗ್ಯದಿಂದಿದ್ದಾಗ ಹೇಗೆ ಭಾರವೆನಿಸುವುದಿಲ್ಲವೋ, ಹಾಗೆಯೇ ಈ ಗುಣಗಳ ಬಗ್ಗೆ ಅತ್ಯಂತ ಕಡಮೆ ಅಭಿಮಾನವಿರುವುದೂ ಶೂನ್ಯವತ್ ಸ್ಥಿತಿ. ಅದೇ ನಮ್ರತೆ.

೩ ಇಂತಹ ನಮ್ರತೆಯನ್ನು ಕಲಿತು ಪಡೆಯುವುದು ಅಶಕ್ಯ. ಆದರೆ ಇದು ಸದ್ಗುಣಮಯ, ವಿಚಾರಮಯ ಜೀವನದಿಂದ ತನ್ನಷ್ಟಕ್ಕೆ ತಾನೇ ಸ್ವಭಾವದಲ್ಲಿ ಒಡಮೂಡುವುದು. ನಮ್ರ ಮನುಷ್ಯನಿಗೆ ತನ್ನ ನಮ್ರತೆಯ ಅರಿವು ಕೂಡ ಇರುವುದಿಲ್ಲ.

೪ ಎಷ್ಟೋ ಸಲ ವ್ಯಕ್ತವಾಗುವ ನಮ್ರತೆಯ ಮರೆಯಲ್ಲಿ ಸೂಕ್ಷ್ಮ ಮತ್ತು ತೀವ್ರ ಅಭಿಮಾನವು ಅಡಗಿರುವುದು. ಇದು ನಮ್ರತೆಯಲ್ಲ.

೫ ತನ್ನ ಯೋಗ್ಯತೆಯನ್ನರಿತುಕೊಂಡು, ಅದರ ಎಲ್ಲೆಯನ್ನು ಮೀರದೆ, ಅದರಲ್ಲಿಯೇ ಇರುವುದೊಂದು ನಮ್ರತೆಯ ಅವಶ್ಯಕ ಲಕ್ಷಣ.

೬ ನಮ್ರ ಮನುಷ್ಯನು ಜಗತ್ತಿನ ಎಲ್ಲ ಕಾರ್ಯಗಳನ್ನೂ ಮಾಡಿಬಿಡುವೆನೆಂಬ ಹೆಮ್ಮೆಯವನಿರಬಾರದು. ತನ್ನ ಯೋಗ್ಯತೆಯನ್ನರಿತು, ತನ್ನ ಕಾರ್ಯದಲ್ಲಿ ಯೋಗ್ಯತೆಯನ್ನು ಪಡೆಯುವ ವರೆಗೆ ಮುಂದೆ ಹೆಜ್ಜೆ ಇಡಬಾರದು.

೭ ಸತ್ಯ, ಅಹಿಂಸೆ, ಬ್ರಹ್ಮಚರ್ಯ ಮುಂತಾದ ವ್ರತಗಳ ಸಾಧಕನು ಅವನ್ನು ಪಾಲಿಸುವಾಗ ತನ್ನ ಶಕ್ತಿಯು ಎಷ್ಟಿದೆಯೆಂಬುದನ್ನು ತಿಳಿದುಕೊಂಡರೆ ತಾನಾಗಿಯೇ ನಮ್ರನಾಗುವನು.

೮ ಸಾಧಕನು ಸತ್ಯ, ಅಹಿಂಸೆ, ಮುಂತಾದುವುಗಳೊಳಗಿನ ಶಕ್ತಿಯ ಬಗ್ಗೆ ಇದ್ದ ತನ್ನ ಶ್ರದ್ಧೆಯನ್ನು ಕಡಮೆ ಆಗಗೊಡುವುದಿಲ್ಲ. ಅವುಗಳ ಪರಾಕಾಷ್ಠೆ

ಯನ್ನು ಮುಟ್ಟುವುದಕ್ಕೆ ತನ್ನ ಶಕ್ತಿ ಸಾಕಾಗದೆಂಬುದನ್ನು ನೋಡಿ ಎಂದೂ ನಿರುತ್ಸಾಹಿಯಾಗುವುದಿಲ್ಲ. ನಮ್ರತೆಯಿಂದ ತನ್ನ ಆಳವನ್ನರಿತುಕೊಂಡು, ಸರ್ವ ಜೀವನದಲ್ಲಿಯೂ ನಮ್ರತೆಯುಂಟಾಗುವಂತೆ ಮಾಡಲು ಪ್ರಯತ್ನಿಸುತ್ತಿರುವನು.

೯ ಆದರ್ಶವನ್ನು ಮುಟ್ಟಬೇಕೆನ್ನುವ ನಮ್ರ ಮನುಷ್ಯನು ತನ್ನ ಕುಂದು ಕೊರತೆಗಳ ಕಡೆಗೆ ಅಲಕ್ಷ್ಯ ಮಾಡುವುದಿಲ್ಲ. ತನ್ನ ಕೊರತೆಗಳನ್ನು ಒಪ್ಪಿಕೊಳ್ಳುವನು. ಅವನ್ನು ಮುಚ್ಚಿಕೊಳ್ಳಲು ಬಯಸುವುದಿಲ್ಲ.

೧೨ ವ್ರತ – ಪ್ರತಿಜ್ಞೆ

೧ ಯಾವ ಆಚರಣೆಯು ಸತ್ಯವಿಚಾರವನ್ನು ಅನುಸರಿಸುವಂತಹದೆಂದು ಎನಿಸುವುದೋ, ಅದಕ್ಕೇ ಅಂಟಿಕೊಂಡು, ವಿರುದ್ಧವಾದ ಆಚರಣೆಯನ್ನು ಮಾಡುವುದಿಲ್ಲ ಎಂದು ಮಾಡಿದ ಪ್ರತಿಜ್ಞೆಯೇ ವ್ರತ.

೨ ಈ ವ್ರತಾಚರಣೆಯಲ್ಲಿ ಸಡಿಲು ಉಂಟಾದಷ್ಟೂ ಸತ್ಯದ ಸಾಕ್ಷಾತ್ಕಾರಕ್ಕೆ ತಡೆಯುಂಟಾಗುವುದು.

೩ ಯಾವಾಗಲೂ ಸತ್ಯರೂಪಿ ಪರಮಾತ್ಮನಲ್ಲಿಯೇ ಲೀನವಾಗಿರುವುದಕ್ಕಾಗಿ, ಅರ್ಥಾತ್ ಮನ-ವಚನ-ಕರ್ಮದಿಂದ ಸತ್ಯನಿಷ್ಠನಾಗಿ ಇರುವುದಕ್ಕಾಗಿ ಇಂತಹ ಪ್ರತಿಜ್ಞೆಗಳನ್ನು ಮಾಡುವುದು ಅವಶ್ಯ.

೪ ಅರಿವು ಇಲ್ಲದಿರುವಾಗ ದುಸ್ಸಂಗ, ಅಥವಾ ಪೂರ್ವದ ದುಷ್ಟ ಕು-ಸಂಸ್ಕಾರಗಳ ಮೂಲಕ, ಮನಸ್ಸು ತಾನು ಮಾಡಿದ ನಿಶ್ಚಯಗಳಂತೆ ಸ್ಥಿರವಾಗಿ ನಿಲ್ಲಲಾರದು; ಆದ್ದರಿಂದ ಮನಸ್ಸನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ವ್ರತರೂಪೀ ಬೇಡಿಗಳಿಂದ ನಮ್ಮನ್ನು ನಾವೇ ಬಂಧಿಸಿಕೊಳ್ಳುವುದು ಇಷ್ಟವಾದುದು, ಉತ್ತಮವಾದುದು.

೫ ಆಗ್ರಹ, ವಿಚಾರ, ವಾಣಿ, ಮತ್ತು ಕರ್ಮ, ಇವು ಸತ್ಯವಾಗಿದ್ದರೆ ಅವುಗಳ ಪಾಲನೆಗಾಗಿ ವ್ರತವನ್ನು ಹಿಡಿಯಬಹುದು. ಆದರೆ ಅಸತ್ಯ-ಆಗ್ರಹ, ಅಸತ್ಯ-ವಿಚಾರ, ಅಸತ್ಯ-ವಾಣಿ, ಮತ್ತು ಅಸತ್ಯ-ಕರ್ಮಗಳನ್ನು ಮಾಡಲು ಎಂದೂ ವ್ರತವನ್ನು ಹಿಡಿಯಕೂಡದು. ಒಂದು ವೇಳೆ ಹಾಗೆ ವ್ರತವನ್ನು ಹಿಡಿದಿದ್ದರೆ ಅದನ್ನು ಬಿಟ್ಟುಬಿಡಬೇಕಾಗುವುದು. ಪ್ರತಿ-ವ್ರತದಲ್ಲಿ ಊರ್ಧ್ವಗಮನವಿರತಕ್ಕದ್ದು. ಅಸತ್ಯದಲ್ಲಿ, ಭೋಗದಲ್ಲಿ ವ್ರತ ಇರಲಾರದು. ಭೋಗವು

ವ್ರತವಾಗಲರಿಯದು.

೬ ಅಸತ್ಯವಿಲ್ಲದಿದ್ದರೆ ಒಮ್ಮೆ ಕೈಕೊಂಡ ವ್ರತವನ್ನು ಎಂದಿಗೂ ಬಿಡಕೂಡದು. ಅದನ್ನು ಪಾಲಿಸುವಾಗ ಬಂದ ಸಂಕಟಗಳನ್ನೆಲ್ಲ ಸಾಧಕನು ಸಹಿಸಲೇಬೇಕು.

೧೩ ಉಪಾಸನೆ - ಪ್ರಾರ್ಥನೆ

೧ ಉಪಾಸನೆಯೆಂದರೆ ಪರಮಾತ್ಮನ ಸಾನ್ನಿಧ್ಯದಲ್ಲಿರುವುದು. ಅವನ ಸಾನ್ನಿಧ್ಯದಲ್ಲಿರುವುದೆಂದರೆ ತದ್ರೂಪವಾಗುವುದು. ಪರಮೇಶ್ವರನೆಂದರೆ ಸತ್ಯ. ಆದ್ದರಿಂದ ಸತ್ಯರೂಪವಾಗುವುದೇ ಉಪಾಸನೆ. ಸತ್ಯರೂಪನಾಗುವುದಕ್ಕೋಸ್ಕರ ಉತ್ಕಟ ಇಚ್ಛೆಯುಳ್ಳವನಾಗುವುದೇ, ಭಗವಂತನನ್ನು ಬಿನ್ನವಿಸಿಕೊಳ್ಳುವುದೇ ಪ್ರಾರ್ಥನೆ.

೨ ಸತ್ಯರೂಪನಾಗುವುದೆಂದರೆ ನಿರ್ವಿಕಾರನಾಗುವುದು. ನಿರ್ವಿಕಾರನಾಗಬೇಕಾದರೆ ವಿಕಾರೀ ವಿಚಾರಗಳನ್ನು ಮನಸಿನಲ್ಲಿ ಬರಗೊಡಕೂಡದು. ಮನಸ್ಸು ಎಂದೂ ತೆರವು ಇರಲಾರದು. ಅದು ವಿಕಾರೀ ವಿಚಾರಗಳ ಕಡೆಗಾದರೂ ಒಲೆಯುವುದು. ಸತ್ಯದ ಕಡೆಗಾದರೂ ಹೋಗುವುದು. ಆದ್ದರಿಂದ ರಾಮಕೃಷ್ಣಾದಿಗಳ ಸ್ಮರಣೆಯನ್ನು ಮಾಡಬೇಕು. ಏಕೆಂದರೆ ಅವರು ಸತ್ಯದ ಮೂರ್ತಿಗಳು. ಅವರ ಸ್ಮರಣೆಯೇ ನಾಮಸ್ಮರಣೆ. ಅಂತಃಕರಣ ಪೂರ್ವಕವಾಗಿ ಅವರ ಸ್ಮರಣೆ ಮಾಡಿದರೆ ಸ್ಮರಿಸುವವನು ತದ್ರೂಪನಾಗುವನು.

೩ ಉಪಾಸನೆಯು ಬುದ್ಧಿಯ ವಿಷಯವಲ್ಲ, ಶ್ರದ್ಧೆಯ ವಿಷಯ. ಉಪಾಸನೆಯನ್ನು ಮಾಡುತ್ತ ಮಾಡುತ್ತ ಶುದ್ಧನಾಗಿಯೆಬಿಡುವೆನೆಂಬ ಶ್ರದ್ಧೆಯನ್ನಿಟ್ಟುಕೊಂಡು ದಿನಾಲು ಉಪಾಸನೆ ಮಾಡಬೇಕು. ಅನ್ನಾದಿಗಳು ಶರೀರವನ್ನು ಪೋಷಿಸುವಂತೆ ಉಪಾಸನೆ ಆತ್ಮನನ್ನು ಪೋಷಿಸುವುದು.

೪ ಸತ್ಯರೂಪ ಪರಮಾತ್ಮನು ಸರ್ವಾಂತರ್ಯಾಮಿ. ಆದ್ದರಿಂದ ಸಾಧಕನು ಜೀವಮಾತ್ರರೊಡನೆ ಐಕ್ಯವನ್ನನುಭವಿಸತಕ್ಕದ್ದು. ಈ ಮೂಲಕ ವ್ಯಕ್ತಿಗತ ಉಪಾಸನೆಯೂ ಬೇಕು, ಸಾಮುದಾಯಿಕ ಉಪಾಸನೆಯೂ ಬೇಕು.

ಜೀವಮಾತ್ರರೊಡನೆ ಐಕ್ಯದ ಅನುಭವವೆಂದರೆ ಜೀವಮಾತ್ರದ ಸೇವೆ ಮಾಡುವುದು. ಆದ್ದರಿಂದ ಜೀವಮಾತ್ರದ ನಿಷ್ಕಾಮ ಸೇವೆಯೂ ಉಪಾಸನೆಯೆಂದೆನಿಸುವುದು *

* ಈ ಪ್ರಕರಣವನ್ನು ಗಾಂಧೀಜಿಯವರು ಸ್ವತಃ ಬರೆದಿದ್ದಾರೆ.

೧೪ ವ್ರತಗಳ ಸಾಧನೆ

೧ ಹಸುವನ್ನು ಬದುಕಿಸುವುದಕ್ಕಾಗಿ ಸುಳ್ಳು ಹೇಳಬೇಕೊ ಬಾರದೊ? ಹಾವು ಮುಂತಾದ ಪ್ರಾಣಿಗಳನ್ನು ಕೊಲ್ಲಬೇಕೊ ಬಾರದೊ? ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಮಾಡುವವರನ್ನು ಪಶುಬಲದಿಂದ ವಿರೋಧಿಸಬೇಕೊ ಬಾರದೊ?– ಇಂತಹ ತಾರ್ಕಿಕ ಪ್ರಶ್ನೆಗಳಲ್ಲಿ ಮನಸ್ಸನ್ನು ತೊಡಗಿಸುವುದರಿಂದ ವ್ರತಸಾಧನೆಯಾಗಲಾರದು. ಇಂತಹ ಪ್ರಶ್ನೆಗಳನ್ನು ಬುದ್ಧಿ-ಚಾತುರ್ಯದಿಂದ ಬಿಡಿಸುವ ಕಾಲ ಬಂದಾಗ ಬಿಡಿಸಬಹುದು. ಸಾಮಾನ್ಯವಾದ, ಹಾಗೂ ದೈನಿಕ ಸಂದರ್ಭಗಳಲ್ಲಿ ವ್ರತಗಳನ್ನು ಚನ್ನಾಗಿ ಪಾಲಿಸುತ್ತ ಹೋದರೆ ಕಠಿಣ ಸಂದರ್ಭಗಳಲ್ಲಿ ನಾವೇನು ಮಾಡಬೇಕೆನ್ನುವುದು ತಾನಾಗಿಯೆ ಹೊಳೆಯುವುದು.

೨ ದೈನಿಕ ಹಾಗೂ ಸಾಮಾನ್ಯವಾದ ಸಂದರ್ಭಗಳು ಕೆಳಗಿನಂತಿವೆ:

(ಅ) ಅಸತ್ಯಾಚರಣೆಯ ಸಂದರ್ಭಗಳು: ಒಬ್ಬನು ಕೆಟ್ಟವನೆಂದು ಗೊತ್ತಿದ್ದರೂ ಒಳ್ಳೆಯವನೆಂದು ಹೇಳುವುದು; ಒಳ್ಳೆಯವನೆಂದು ಎನಿಸಿಕೊಳ್ಳುವ ಇಚ್ಛೆಯಿಂದ ತನ್ನಲ್ಲಿ ಇಲ್ಲದ ಗುಣಗಳ ವಿಷಯವಾಗಿ ಹೇಳಿಕೊಳ್ಳುವುದು; ಅತಿಶಯೋಕ್ತಿ ಮಾಡುವುದು; ಮಾಡಿದ ದೋಷಗಳನ್ನು ಹೇಳಬೇಕಾದವರ ಎದುರಿನಲ್ಲಿ ಹೇಳದಿರುವುದು; ಗೆಳೆಯನ, ಹಿರಿಯರ ಪ್ರಶ್ನೆಗಳಿಗೆ ಹಾರಿಕೆಯ ಉತ್ತರಗಳನ್ನೀಯುವುದು; ಹೇಳಬೇಕಾದುದನ್ನು ಹೇಳದಿರುವುದು; ವಿಶ್ವಾಸ ಭಂಗವನ್ನು ಮಾಡುವುದು; ಕೊಟ್ಟ ಮಾತನ್ನು ಮುರಿಯುವುದು ಮುಂತಾದುವು.

(ಆ) ಹಿಂಸೆಯ ಸಂದರ್ಭಗಳು: ಒಬ್ಬರಿಗೆ ಅವಮಾನ ಮಾಡುವುದು; ಒಬ್ಬರನ್ನು ತಿರಸ್ಕರಿಸುವುದು; ಕೆಟ್ಟ ವಸ್ತುಗಳನ್ನು ಕೊಟ್ಟು ಒಳ್ಳೆಯವನ್ನು ತೆಗೆದುಕೊಳ್ಳುವುದು; ತಾನು ಮಾಡಬೇಕಾದ ಕೆಲಸಗಳನ್ನು ಗೆಳೆಯರಿಗೆ ಒಪ್ಪಿಸುವುದು; ನೆರೆಹೊರೆಯವರು, ಗೆಳೆಯರು ಬೇನೆಬಿದ್ದಾಗ ಅವರ ಸೇವೆ ಶುಶ್ರೂಷೆ ಮಾಡದಿರುವುದು; ತನ್ನಲ್ಲಿದ್ದರೂ ಹಸಿದವರಿಗೆ ಅನ್ನ ನೀರು ನೀಡದಿರುವುದು; ಅತಿಥಿ-ಸತ್ಕಾರ ಮಾಡದಿರುವುದು; ಕೂಲಿಕಾರರೊಡನೆ ಅಸಭ್ಯತನದಿಂದ ವರ್ತಿಸುವುದು; ದನಗಳನ್ನು ಬಾರುಕೋಲು-ಬೆತ್ತಗಳಿಂದ ಹೊಡೆಯುವುದು; ಅನ್ನ ಹಂಜಕ್ಕಿಯಾದರೆ, ಬೇಳೆಯಲ್ಲಿ ಉಪ್ಪು ಹೆಚ್ಚಾದರೆ, ಪಲ್ಯ ಸೇರದಿದ್ದರೆ ವ್ಯರ್ಥವಾಗಿ ಕೋಪಿಸುವುದು ಮುಂತಾದುವು. ಅನ್ಯ ವ್ರತಗಳ ವಿಷಯವೂ ಹೀಗೆಯೆ

ಎಂದು ತಿಳಿಯಬೇಕು.

೩. ಬ್ರಹ್ಮಚರ್ಯ ಪಾಲಿಸುವಾಗ ಕೆಳಗಿನ ಸೂಚನೆಗಳ ಉಪಯೋಗವಾಗುವುದು.

(ಅ) ಬಾಲಕ-ಬಾಲಿಕೆಯರು ಆಡಂಬರರಹಿತರಾಗಿ ಸ್ವಾಭಾವಿಕ ರೀತಿಯಿಂದ ಆಜನ್ಮ ನಿರ್ಮಲರಾಗಿರತಕ್ಕವರು ಎಂಬ ಭಾವನೆಯು ವಾತಾವರಣದಲ್ಲಿ ಬೆಳೆಯಬೇಕು.

(ಆ) ಮಸಾಲೆ, ಹಾಗೂ ಉಷ್ಣ ಪದಾರ್ಥಗಳನ್ನು ಸೇವಿಸಬಾರದು. ಸ್ನಿಗ್ಧ (fats)ಮಿಶ್ರಿತವಾದ ಭಾರವಾದ ಆಹಾರ, ಅತಿ ಸಿಹಿಯಾದ ಪಕ್ವಾನ್ನ, ಚಕ್ಕುಲಿ, ಕೋಡು-ಬಳೆ ಮುಂತಾದ ಕರೆದ ಖಾದ್ಯ-ಪದಾರ್ಥಗಳ ಸೇವನೆಯನ್ನು ಬಿಡಬೇಕು.

(ಇ) ಪತಿ-ಪತ್ನಿಯರು ಬೇರೆ ಬೇರೆ ಕೋಣೆಗಳಲ್ಲಿ ಮಲಗಬೇಕು; ಏಕಾಂತವಾಸವನ್ನು ಬಿಡಬೇಕು.

(ಈ) ಶರೀರ ಮತ್ತು ಮನವನ್ನು ಸತ್ಕಾರ್ಯಗಳಲ್ಲಿ ತೊಡಗಿಸಬೇಕು.

(ಉ) ಬೇಗನೆ ಮಲಗಿ ಬೇಗನೆ ಏಳುವ ನಿಯಮವನ್ನು ಸರಿಯಾಗಿ ಪಾಲಿಸಬೇಕು.

(ಊ) ಆವುದೇ ತರದ ಭೀಭತ್ಸ, ಕೀಳುತರದ ಸಾಹಿತ್ಯವನ್ನು ಓದಬಾರದು. ಮಲಿನ ವಿಚಾರಗಳಿಗೆ ನಿರ್ಮಲ ವಿಚಾರಗಳೇ ಔಷಧ.

(ಎ) ಮನೋವಿಕಾರಗಳನ್ನು ಚೇತರಿಸುವ ನಾಟಕ, ಸಿನೇಮಾ, ಮುಂತಾದ ತಮಾಷೆಗಳನ್ನು ನೋಡಬಾರದು.

(ಏ) ಸ್ವಪ್ನದೋಷವಾದರೆ ಹೆದರಕೂಡದು. ತಣ್ಣೀರಿನ ಸ್ನಾನವೇ ಇದಕ್ಕೆ ಮದ್ದು. ಸ್ವಪ್ನ-ದೋಷವನ್ನು ಹೋಗಲಾಡಿಸುವುದಕ್ಕೆ ಆಗಾಗ್ಗೆ ಸ್ತ್ರೀಸಂಗವು ಅವಶ್ಯವೆಂದು ತಿಳಿಯುವುದು ತೀರ ತಪ್ಪು.

(ಐ) ಪತಿ-ಪತ್ನಿಯರು ಸಂಯಮದಿಂದ ಇರುವುದು ಕಠಿಣವಾದುದು, ಒಂದು ವೇಳೆ ಸಂಯಮದಿಂದ ಇದ್ದರೆ ಅದರಿಂದ ಶರೀರಕ್ಕೂ ಮನಸ್ಸಿಗೂ ಹಾನಿಯಾಗುವುದು, ಆರೋಗ್ಯದ ದೃಷ್ಟಿಯಿಂದ ವಿಷಯ-ಭೋಗವು ಅವಶ್ಯಕವು, ಎಂಬೀ ಮಾತುಗಳಲ್ಲಿ ನಂಬಿಗೆಯನ್ನಿಡಬಾರದು. ಸಂಯಮವು ಸಾಮಾನ್ಯವಾದ, ಸ್ವಾಭಾವಿಕವಾದ ಸ್ಥಿತಿಯೆಂದು ತಿಳಿದು, ಆದರಂತೆ ವರ್ತಿಸುವುದೇ ಮಹತ್ವದ ಸಂಗತಿ.

(ಒ) ಪ್ರಾತಃಕಾಲದಲ್ಲಿ ಏಕಾಗ್ರ ಮನಸ್ಸಿನಿಂದ, ಪಾವಿತ್ರ್ಯವನ್ನೂ ನಿರ್ಮಲತೆಯನ್ನೂ ಕೊಡೆಂದು ಪರಮಾತ್ಮನನ್ನು ಪ್ರಾರ್ಥಿಸಬೇಕು. ಇದಕ್ಕಾಗಿ ರಾಮನಾಮದಂಥ ನಾಮದ ಸ್ಮರಣೆ ಮಾಡುವುದು ಅತ್ಯುತ್ತಮ. (ಈ ವಿಷಯವಾಗಿ ಹೆಚ್ಚಿಗೆ ತಿಳಿದುಕೊಳ್ಳಬೇಕೆನ್ನುವವರು 'ನೀತಿನಾಶನೆ ಮಾರ್ಗ' ಎಂಬ ಗುಜರಾಥೀ ಪುಸ್ತಕವನ್ನು ಓದಬೇಕು.)

೪ (ಅ) ಪ್ರಾರ್ಥನೆಯ ಕಾಲದಲ್ಲಿ ನಿದ್ದೆಬಂದರೆ, ನೈಪುರಿದರೆ, ತದೇಕ ಚಿತ್ತರಾಗದಿದ್ದರೆ, ವಿಚಾರಗಳು ಅತ್ತಿತ್ತ ಹರಿದಾಡಿದರೆ, ಪ್ರಾರ್ಥನೆಯಾಗಲಿಲ್ಲ ವೆಂದೂ ಪ್ರಾರ್ಥನೆಯು ವ್ಯರ್ಥವಾಯಿತೆಂದೂ ಭಾವಿಸಬೇಕು. ಈ ತರದ ಚಿತ್ತ ಚಾಂಚಲ್ಯ ಮತ್ತು ದೇಹಾಲಸ್ಯವನ್ನು ತಡೆಯಬೇಕು. ಪ್ರಾರ್ಥನೆಗೆ ಹೋಗುವ ಮೊದಲು ಮುಖಮಾರ್ಜನ ಮಾಡಿಕೊಳ್ಳಬೇಕು, ಹಲ್ಲುಜ್ಜಿಕೊಳ್ಳಬೇಕು, ಸ್ಫೂರ್ತಿಯಿಂದಿರಲು ಯತ್ನಿಸಬೇಕು. ಹಾಗಿದ್ದರೂ ಶರೀರದ ಮೇಲಿನ ಹಿಡಿತವು ತಪ್ಪಿದರೆ, ದೊಡ್ಡವನಿರಲಿ ಚಿಕ್ಕವನಿರಲಿ, ನಾಚದೆ ಎದ್ದು ನಿಲ್ಲಬೇಕು.

(ಆ) ಪ್ರಾರ್ಥನೆಗೆ, ಒರಗಿ ಕುಳಿತುಕೊಳ್ಳಕೂಡದು. ಸರಳವಾಗಿ, ಬೆನ್ನೆಲು-ಬನ್ನು ಬಗ್ಗಿಸದೆ ಕುಳಿತುಕೊಳ್ಳಬೇಕು. ಸಾವಕಾಶವಾಗಿ ದೀರ್ಘವಾಗಿ ಉಸುರಾಡಿಸುತ್ತಿರಬೇಕು.

(ಇ) ಪ್ರಾರ್ಥನೆಯ ಶ್ಲೋಕ, ಭಜನೆ, ಹಾಡುಗಳನ್ನು ಹೇಳುವ ರೀತಿ ಮುಂತಾದುವುಗಳನ್ನು ಕಲಿಯಲೆತ್ನಿಸಬೇಕು. ಧಾಟಿಯು ಚನ್ನಾಗಿ ಬರುವವರೆಗೆ ಪದ್ಯಗಳನ್ನು ಮನದಲ್ಲೇ ನುಡಿಯುತ್ತಿರಬೇಕು. ಎಷ್ಟು ಯತ್ನಿಸಿದರೂ ಬಾರದೆಹೋದರೆ ರಾಮನಾಮವನ್ನು ಭಜಿಸುತ್ತ ಹೋಗಬೇಕು.

(ಈ) ಪ್ರಾರ್ಥನೆಯಲ್ಲಿ ಶ್ಲೋಕ-ಪದ್ಯಗಳ ಅರ್ಥವನ್ನು ತಿಳಿದುಕೊಳ್ಳಬೇಕು, ಮನನಮಾಡಬೇಕು.

(ಉ) ವ್ಯಕ್ತಿಗತ ಮತ್ತು ಸಾಮುದಾಯಿಕ ಪ್ರಾರ್ಥನೆ, ಇವು ಎರಡೂ ಮಹತ್ವದವೆಂದು ಎಣಿಸಲ್ಪಟ್ಟಿವೆ. ಇವು ಒಂದನ್ನೊಂದು ಪೋಷಿಸುವವು. ವ್ಯಕ್ತಿಗತ ಪ್ರಾರ್ಥನೆಯು ಬೆಲೆ ತಿಳಿದ ಹೊರತು ಸಾಮೂಹಿಕ ಪ್ರಾರ್ಥನೆಯಲ್ಲಿ ರಸವುಂಟಾಗಲಾರದು. ಆದುದರಿಂದ ಪ್ರತಿಯೊಬ್ಬನೂ ವ್ಯಕ್ತಿಗತ ಪ್ರಾರ್ಥನೆಯನ್ನು ನಿಯಮದಿಂದ ಮಾಡುತ್ತಿರಬೇಕು.

(ಊ) ಪ್ರಾತಃಕಾಲ ಮತ್ತು ಸಾಯಂಕಾಲವು ಪ್ರಾರ್ಥನೆಗೆ ತಕ್ಕ ಸಮಯಗಳು. ವ್ಯಕ್ತಿಗತ ಪ್ರಾರ್ಥನೆಗಾಗಿ ಯಾವ ಸಮಯದ ಕಟ್ಟುನಿಟ್ಟೂ ಇಲ್ಲ.

ಪ್ರತಿಯೊಂದು ಕಾರ್ಯದಲ್ಲಿ ಪ್ರತಿ ನಿಮಿಷಕ್ಕೂ ಪರಮಾತ್ಮನನ್ನು ಸಾಕ್ಷಿಯಾಗಿ ಇಟ್ಟುಕೊಂಡು ಮಾಡುವ ಪ್ರಾರ್ಥನೆಯೇ ವ್ಯಕ್ತಿಗತ ಪ್ರಾರ್ಥನೆ. ಈ ಪ್ರಾರ್ಥನೆಗೆ ವಿಶೇಷವಾದ ಮಂತ್ರದ, ಜಪದ ಅಗತ್ಯವಿಲ್ಲ. ಬೇಕಾದ ಹೆಸರಿನಿಂದ, ಬೇಕಾದ ರೀತಿಯಿಂದ ಪರಮಾತ್ಮನನ್ನು ಸ್ಮರಿಸಿದರೆ ಮುಗಿಯಿತು. ರಾಮನಾಮವು ನಮ್ಮ ಪ್ರತಿಯೊಂದು ರೋಮ ರೋಮದಿಂದ ಹೊರಡಬೇಕು, ಪ್ರತಿಯೊಂದು ಶ್ವಾಸದೊಡನೆ ಕೇಳಿಸಬೇಕು. ಪ್ರಾರ್ಥನೆಯಿಂದ ನಾವು ಮುಟ್ಟಬೇಕಾದ ಗುರಿ ಇದೇ.

(೬) ಹೀಗೆ ಮಾಡುವುದರಿಂದ ಸಮಯವು ನಷ್ಟವಾಗುವುದೆಂದು ತಿಳಿಯ ಬಾರದು. ಇದಕ್ಕೆ ಪ್ರತ್ಯೇಕ ವೇಳೆಯ ಅಗತ್ಯವೇ ಇಲ್ಲ; ಸಂಪೂರ್ಣ ಅರಿವು, ಎಚ್ಚರ ಮತ್ತು ಶುದ್ಧತೆ ಮಾತ್ರ ಅತ್ಯಾವಶ್ಯಕ.

ದ್ವಿತೀಯ ಖಂಡ

ಧರ್ಮ ಮಾರ್ಗಗಳು

— o —

೧ ಸರ್ವಧರ್ಮ ಸಮಭಾವ

೧ ಸತ್ಯದ ಶೋಧಕರೂ ಜನತೆಯ ಕಲ್ಯಾಣಕ್ಕಾಗಿ ಹೆಣಗುವ ವಿಭೂತಿ ಗಳೂ ಸಾಧುಗಳೂ ಪ್ರತಿಯೊಂದು ಯುಗದಲ್ಲೂ ಪ್ರತಿಯೊಂದು ಜನಾಂಗ ದಲ್ಲೂ ಹುಟ್ಟುತ್ತಾರೆ. ಆ ಆ ಯುಗದ, ಜನಾಂಗದ, ಉಳಿದ ಜನರಿಗಿಂತಲೂ ಅವರಿಗೆ ಸತ್ಯದ ಸಾಕ್ಷಾತ್ಕಾರವು ಹೆಚ್ಚಾಗಿರುತ್ತದೆ. ಅವರಿಗೆ ಕೆಲವು ಮಟ್ಟಿಗೆ ಸನಾತನ ಸಿದ್ಧಾಂತಗಳ ದರ್ಶನವೂ, ಕೆಲಮಟ್ಟಿಗೆ ಆ ಆ ಪರಿಸ್ಥಿತಿಯ ಮೂಲಕ ಉದ್ಭವಿಸಿದ ಸಿದ್ಧಾಂತಗಳ ದರ್ಶನವೂ ಆಗುತ್ತದೆ. ಅವರಿಗೆ ಅನೇಕ ಸಿದ್ಧಾಂತಗಳು ತಮ್ಮ ಸನಾತನ ಸ್ವರೂಪದಲ್ಲೇ ತಿಳಿಯುವವಾದರೂ, ಅವು ಗಳಂತೆ ಆಚರಿಸುತ್ತ ಹೋಗುವಾಗ ಆ ಆ ಯುಗದ, ಜನಾಂಗದ ಪರಿಸ್ಥಿತಿಗೆ ಅನುರೂಪವಾದ ಒಂದು ವಿಶಿಷ್ಟ ಪದ್ಧತಿಯು ಅವರಿಗೆ ಹೊಳೆಯುವುದು. ಈ ಕ್ರಮದ ಮೂಲಕವೇ ಜಗತ್ತಿನ ಭಿನ್ನ ಭಿನ್ನ ಧರ್ಮಗಳು ಹುಟ್ಟಿರುವವು.

೨ ಹೀಗೆ ಯೋಚಿಸುವವನು, ಯಾವ ಧರ್ಮದಲ್ಲೂ ಸತ್ಯವು ಸರ್ವಥಾ ಇಲ್ಲವೆನ್ನಲಾರನು. ಹಾಗೆಯೇ, ಯಾವ ಧರ್ಮವೂ ಸಂಪೂರ್ಣ ಸತ್ಯವೆಂದು ತಿಳಿಯಲಾರನು. ಸರ್ವ ಧರ್ಮಗಳಲ್ಲಿ ಬದಲಾವಣೆಗೂ ವಿಕಾಸಕ್ಕೂ ಎಡೆ ಇದೆ ಎಂದು ಅವನು ಎಣಿಸುವನು. ಅಲ್ಲದೆ, ವಿವೇಕಪೂರ್ವಕವಾಗಿ ಪಾಲಿಸಿದರೆ ಪ್ರತಿಯೊಂದು ಧರ್ಮವೂ ಆ ಆ ಜನಾಂಗದ ಕಲ್ಯಾಣವನ್ನು ಮಾಡಲು, ಕಳಕಳಿಯಿದ್ದವನಿಗೆ ಸತ್ಯದ ಸಾಕ್ಷಾತ್ಕಾರವನ್ನು ಮಾಡಿಸಿ ಶಾಂತಿ-ಸಮಾಧಾನಗಳನ್ನೀಯಲು, ಸಮರ್ಥವಿದೆಯೆಂದು ಭಾವಿಸುವನು.

೩ ಇಂತಹ ಮನುಷ್ಯನು ತನ್ನ ಧರ್ಮವೇ ಶ್ರೇಷ್ಠವೆಂದೂ, ಮಾನವರೆಲ್ಲರೂ ತಮ್ಮ ಉದ್ಧಾರಕ್ಕಾಗಿ ತನ್ನ ಧರ್ಮವನ್ನೇ ಸ್ವೀಕರಿಸಬೇಕೆಂದೂ, ಹೆಮ್ಮೆಯಿಂದ ಎಂದೂ ಹೇಳಲಾರನು. ತನ್ನ ಧರ್ಮದ ಬಗ್ಗೆ ಒಣ ಹೆಮ್ಮೆಯನ್ನು ತಾಳಲಾರನು. ಅವನು ತನ್ನ ಧರ್ಮವನ್ನು ಎಂದೂ ಬಿಡನು. ಅದರಲ್ಲಿದ್ದ ದೋಷಗಳ ಕಡೆಗೆ ಎಂದೂ ದುರ್ಲಕ್ಷ್ಯ ಮಾಡನು. ಅವನು ತನ್ನ ಧರ್ಮದ ಬಗ್ಗೆ ತಾಳಿದಷ್ಟು ಆದರಭಾವವನ್ನು ಅನ್ಯ ಧರ್ಮಗಳ ಬಗೆಗೂ ಅನ್ಯ ಧರ್ಮಾವಲಂಬಿಗಳ ಬಗೆಗೂ ತಾಳುವನು. ಪ್ರತಿಯೊಬ್ಬನೂ ತನ್ನ ತನ್ನ ಧರ್ಮದ ಉತ್ತಮೋತ್ತಮವಾದ ಸಿದ್ಧಾಂತಗಳನ್ನು ಸರಿಯಾಗಿ ಪಾಲಿಸಬೇಕೆಂದು ಬಯಸುವನು.

೪ ನಿಂದಿಸುವ ಬುದ್ಧಿಯುಳ್ಳವನು ಪರ-ಧರ್ಮದೊಳಗಿನ ಹುಳುಕುಗಳನ್ನೇ ಹುಡುಕುವನು. ಆದರೆ ಸತ್ಯಶೋಧಕನು ಪ್ರತಿಯೊಂದು ಧರ್ಮದಲ್ಲಿ ಪ್ರಕಟವಾದ ಸತ್ಯಾಂಶವನ್ನು ಮಾತ್ರ ಗ್ರಹಿಸುವನು. ಆದುದರಿಂದ ಸತ್ಯಶೋಧಕನು ಪ್ರತಿಯೊಂದು ಧರ್ಮದವರಿಗೆ ಅವರ ಧರ್ಮದ ಸೇವಕನಂತೆಯೆ ತೋರುವನು. ಹೀಗೆ ಸತ್ಯಶೋಧಕನು ತನ್ನ ಜನ್ಮ-ಧರ್ಮವನ್ನು ಬಿಡದೆ ಸರ್ವಧರ್ಮಗಳ ಅನುಯಾಯಿಯಂತೆ ಕಂಗೊಳಿಸುವನು.

೨ ಧರ್ಮ ಮತ್ತು ಅಧರ್ಮ

೧ ಸತ್ಯಶೋಧಕನು ಸರ್ವ ಧರ್ಮಗಳು ಸರಿಸಮವೆಂದು ತಿಳಿಯುವನು. ಆದರೆ ತನ್ನ ಧರ್ಮದ ಹೆಸರಿನಿಂದಾಗಲಿ, ಅನ್ಯ ಧರ್ಮದ ಹೆಸರಿನಿಂದಾಗಲಿ, ಇಲ್ಲವೆ ಪ್ರತ್ಯೇಕವಾಗಿಯಾಗಲಿ, ಎಲ್ಲಿಯಾದರೂ ಅಧರ್ಮವಾಗುತ್ತಿದ್ದರೆ ಅದನ್ನು ವಿರೋಧಿಸುವನು.

೨ ಪ್ರತಿಯೊಂದು ಧರ್ಮದಲ್ಲೂ ಅಲ್ಪಸ್ವಲ್ಪ ಅಪೂರ್ಣತೆ ಇರುವುದರಿಂದ

ಪ್ರತಿಯೊಂದು ಧರ್ಮದಲ್ಲೂ ಧರ್ಮದ ಹೆಸರಿನಿಂದ ಅಧರ್ಮ ಸೇರಿಕೊಂಡಿದೆ. ಅದು ಧರ್ಮದ ಹೆಸರಿನಿಂದ ಸೇರಿದ ಕಾರಣ, ಧರ್ಮವಾವುದು ಅಧರ್ಮವಾವುದು ಎಂಬುದು ತಿಳಿಯದಂತಾಗಿದೆ. ಆದರೂ ಇದನ್ನು ಅರಿತುಕೊಳ್ಳಲೇಬೇಕಾಗುವುದು.

೩ ಯಾವುದಾದರೂ ಧರ್ಮದಲ್ಲಿ ಆಗಿಹೋದ ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಯಲ್ಲಿ ದೋಷವು ಕಂಡುಬಂದರೆ ಅದನ್ನೇ ಎತ್ತಿ ಆ ಧರ್ಮವನ್ನು ದೂಷಿಸುವುದು ನಿಂದಕನ ರೀತಿ. ಆದರೆ ಇಂತಹ ದೋಷವನ್ನೇ ಧರ್ಮದ ಕಟ್ಟಳೆ ಎಂದು ಯಾರಾದರೂ ಆಚರಿಸಲು ಹೇಳಿದರೆ ಅದನ್ನು ವಿರೋಧಿಸಬಹುದು.

೪ ಸಾಮಾನ್ಯವಾಗಿ ಯಾವ ಆಚಾರಗಳು ಸತ್ಯಾದಿ ಯಮನಿಯಮಗಳನ್ನು ವಿರೋಧಿಸಿ, ಧರ್ಮದ ಬೆಳವಣಿಗೆಯನ್ನು ಮಾಡದೆ, ಅದರ ಮಾರ್ಗದಲ್ಲಿ ಅಡ್ಡ ಬಂದು. ಅದನ್ನು ಕೆಡಿಸುವವೋ ಅವು ಅಧರ್ಮವೆಂದೆನಿಸುವವು. ಇದನ್ನು ನಿಶ್ಚಯಿಸುವುದು ಅತ್ಯಂತ ಕಠಿಣ. ಆದರೂ ಭಕ್ತಿವಂತನಾದ ವಿವೇಕೀ ಸತ್ಯಶೋಧಕನಿಗೆ ಇದು ಹೊಳೆಯುವುದು.

೫ ಸತ್ಯಶೋಧಕನು ಎಲ್ಲ ಕಡೆಗೂ ಅಧರ್ಮವನ್ನು ವಿರೋಧಿಸುವನು. ಆದರೆ ಅಧರ್ಮವು ಬೇರೆ, ಅದನ್ನು ಆಚರಿಸುವ ವ್ಯಕ್ತಿಯು ಬೇರೆ ಎಂದು ಅವನು ತಿಳಿಯುವನು. ಅಧರ್ಮವನ್ನು ವಿರೋಧಿಸುತ್ತಿದ್ದರೂ ಅದನ್ನು ಆಚರಿಸುವಂತಹ ವ್ಯಕ್ತಿಯನ್ನು ಅವನು ದ್ವೇಷಿಸುವುದಿಲ್ಲ. ಅವನು ಸತ್ಯಮಯ ಮತ್ತು ಅಹಿಂಸಾಮಯ ಮಾರ್ಗಗಳಿಂದಲೇ ಅಧರ್ಮವನ್ನು ವಿರೋಧಿಸುವನು. ಅಧರ್ಮದ ನಾಶಕ್ಕಾಗಿ ಅಸತ್ಯಮಯ, ಹಿಂಸಾಮಯ ಮಾರ್ಗವನ್ನು ಎಂದೂ ಅನುಸರಿಸನು.

೩ ಸತ್ಯಾಗ್ರಹ

೧ ಈ ರೀತಿಯಾಗಿ ನಾವು ಯೋಚಿಸುತ್ತ ಸತ್ಯಾಗ್ರಹತತ್ವದ ವರೆಗೆ ಬಂದೆವು. ಸತ್ಯಾದಿ ಧರ್ಮಗಳನ್ನು ಸ್ವತಃ ಪಾಲಿಸಲು ಆಗ್ರಹ ಹಿಡಿಯುವುದು, ಸತ್ಯಾದಿ ಸಾಧನಗಳಿಂದಲೇ ಅಧರ್ಮವನ್ನು ವಿರೋಧಿಸುವುದು ಸತ್ಯಾಗ್ರಹವೆನಿಸುವುದು. ಇದು ಸತ್ಯಾಗ್ರಹದ ಚಿಕ್ಕ ವ್ಯಾಖ್ಯೆಯು.

೨ ಅಧರ್ಮವನ್ನು ವಿರೋಧಿಸುವಾಗ ಅಹಿಂಸಾವ್ರತದ ಭಂಗವಾಗುವ ಸಂಭವವುಂಟು. ಆದ್ದರಿಂದ ಅಧರ್ಮವನ್ನು ಅಹಿಂಸಾಮಯವಾದ ಸಾಧನಗಳಿಂದಲೆ ವಿರೋಧಿಸುವುದು ಸತ್ಯಾಗ್ರಹವೆಂದು ಒತ್ತಿ ಒತ್ತಿ ಹೇಳಬೇಕಾಗಿದೆ.

ಇದು, 'ಸತ್ಯಾಗ್ರಹ'ದ ಹೆಸರಿನಿಂದ ಇಂದು ದೇಶದಲ್ಲಿ ನಡೆದಿರುವ ಯುದ್ಧದ ಶುದ್ಧ ಸ್ವರೂಪದ ಸ್ಥೂಲವಾದ ವ್ಯಾಖ್ಯೆ ಎನ್ನಬಹುದು.

೩ ಅಧರ್ಮವನ್ನು ವಿರೋಧಿಸುವುದಕ್ಕಾಗಿ ಹೂಡಬಹುದಾದ ಸತ್ಯಾಗ್ರಹ ಸಮರವನ್ನು ಕುರಿತು ಸವಿಸ್ತಾರವಾಗಿ ಮುಂದೆ ಯೋಚಿಸಲಾಗಿದೆ. ಸತ್ಯಾದಿ ಧರ್ಮಗಳ ಪಾಲನೆಗಾಗಿ ತೊಟ್ಟ ಆಗ್ರಹದಲ್ಲಿ ಸಾಧಕನಿಗೆ ಎಷ್ಟು ಸಿದ್ಧಿಯು ಸಿಗುವುದೋ ಆ ಮಟ್ಟಿಗೆ ಅಧರ್ಮವನ್ನು ವಿರೋಧಿಸಲು, ಸತ್ಯಾಗ್ರಹವನ್ನು ಹೂಡಲು, ಅವನಿಗೆ ಶಕ್ತಿಯು ಉಂಟಾಗುವುದು. ಅಲ್ಲದೆ ಸತ್ಯಾಗ್ರಹದ ಯೋಗ್ಯ ರೀತಿಯೂ ಅವನಿಗೆ ಸಕಾಲಕ್ಕೆ ಹೊಳೆಯುವುದು.

೪ ಅವನಿಗೆ ಇಂತಹ ಶಕ್ತಿಯು ದೊರೆಯುವುದು ಸತ್ಯಾಗ್ರಹೀ-ಜೀವನದಿಂದ. ಈ ಜೀವನದ ದೃಶ್ಯಫಲವು ಇದೇ. ಈ ಫಲವು ದೊರೆಯಲಿ ಬಿಡಲಿ, ಸತ್ಯರೂಪೀ ಪರಮಾತ್ಮನ ಸಾಕ್ಷಾತ್ಕಾರವೇ ಈ ಜೀವನದ ಕೊನೆಯಲ್ಲಿ ದೊರೆಯತಕ್ಕ ಫಲ.

೪ ಹಿಂದೂ ಧರ್ಮ

೧ ಹಿಂದೂ ಧರ್ಮಾವಲಂಬಿಗೆ ಹಿಂದೂ ಧರ್ಮವು ತಕ್ಕಷ್ಟು ಪರಿಪೂರ್ಣವಿದೆ. ತನ್ನ ಅಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಲು ಸತ್ಯಶೋಧಕನಿಗೆ ಈ ಧರ್ಮದಲ್ಲಿ ಸಾಕಷ್ಟು ಸಾಧನ-ಸಾಮಗ್ರಿ ಸಿಕ್ಕುವುದು.

೨ ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ, ಸಂತರ ಸಂಸ್ಕೃತ ಪ್ರಾಕೃತ ವಚನಗಳು, ಮೊದಲಾದುವು ಹಿಂದೂ ಧರ್ಮದ ಧರ್ಮ-ಗ್ರಂಥಗಳು. ಈ ಗ್ರಂಥಗಳಲ್ಲಿ ಬೇರೆ ಬೇರೆ ಋಷಿಗಳು, ಮುನಿಗಳು, ಕವಿಗಳು, ಮತ್ತು ವಿಚಾರಿಗಳು ಧರ್ಮದ ಭಿನ್ನ ಭಿನ್ನ ಅಂಗಗಳನ್ನು ನಾನಾ ವಿಧದಿಂದ ವಿವೇಚಿಸಿ ತಿಳಿಸಿರುವರು. ಈ ಎಲ್ಲರ ವಚನಗಳ ಬೆಲೆ ಒಂದೇ ಸಮನಾಗಿದೆಯೆಂದು ಹೇಳಲಿಕ್ಕಾಗುವುದಿಲ್ಲ. ಅವುಗಳಲ್ಲಿ ಗ್ರಹಿಸಲಿಕ್ಕೆ ಅಯೋಗ್ಯವಾದುವುಗಳೂ ಎಷ್ಟೋ ಉಂಟು. ನೀರಕ್ಷೀರ ನ್ಯಾಯದಿಂದ ನೋಡುವ ಜಿಜ್ಞಾಸುವಿಗೆ, ತನ್ನ ಧರ್ಮ-ಪ್ರವೃತ್ತಿಗೆ ಪೋಷಕವಾಗುವಂತಹ ಸಾಕಷ್ಟು ಸಾಹಿತ್ಯ ಈ ಧರ್ಮ-ಗ್ರಂಥಗಳಲ್ಲಿ ಸಿಕ್ಕುವುದು.

೩ ಸನಾತನ ಹಿಂದೂ ಧರ್ಮಕ್ಕೆ ಓರ್ವ ಸಚ್ಚಿದಾನಂದ ಪರಮಾತ್ಮನೇ ಮಾನ್ಯನು. ಅವನು ಮನಕ್ಕೂ ವಾಣಿಗೂ ನಿಲುಕದವನು. ಎಲ್ಲವೂ ಪರಮಾತ್ಮ ರೂಪವು ಎಂಬುದೊಂದು ಸಿದ್ಧಾಂತವಿದೆ. ಈ ಮೂಲಕ, ಹಾಗೂ

ವಿಭೂತಿಗಳ ಸಿದ್ಧಾಂತದ ಮೂಲಕ, ಹಿಂದೂ ಧರ್ಮದಲ್ಲಿ ಉಪಾಸಕನು ತನ್ನ ರುಚಿಗನುಸಾರವಾಗಿ ನಾನಾ ಬಗೆಯ ಕಲ್ಪನೆಗಳಿಂದ, ಮತ್ತು ಉಪಮೆಗಳಿಂದ ನಾನಾ ತರದ ಆದರ್ಶಗಳನ್ನು ತೋರಿಸುವಂತಹ ದೇವದೇವಿಯರನ್ನು ಸ್ತುತಿಸ ಲಿಕ್ಕೂ, ಐತಿಹಾಸಿಕ ಪುರುಷರು ಅವತಾರಿ ಪುರುಷರೆಂದು ವರ್ಣಿಸಲಿಕ್ಕೂ, ಅವರ ಹಾಗೂ ಸದ್ಗುರುವಿನ ಉಪಾಸನೆಯನ್ನು ಮಾಡಲಿಕ್ಕೂ ಸ್ವತಂತ್ರನು. ಸನಾತನ ಹಿಂದೂ ಧರ್ಮವು ಈ ನಿರಾಕಾರ ಮತ್ತು ಸಾಕಾರ ಉಪಾಸನೆಗಳಲ್ಲಿ ಭೇದವನ್ನು ಕಲ್ಪಿಸದೆ ಇವೆರಡರಲ್ಲೂ ಐಕ್ಯವನ್ನುಂಟುಮಾಡುವುದು. ಆದುದ ರಿಂದಲೆ ಸನಾತನ ಹಿಂದೂ ಧರ್ಮದಲ್ಲಿ ಮೂರ್ತಿಪೂಜೆಯು ನಿಷೇಧಿಸಲ್ಪಟ್ಟಿಲ್ಲ.

೪ ಸನಾತನ ಹಿಂದೂ ಧರ್ಮಕ್ಕೆ ಪುನರ್ಜನ್ಮದ, ಮತ್ತು ಮೋಕ್ಷದ ಸಿದ್ಧಾಂತಗಳು ಸಮ್ಮತವಿರುವವು. ಹಿಂದೂ ಧರ್ಮದಲ್ಲಿ ಮೋಕ್ಷವೇ ಶ್ರೇಷ್ಠ ವಾದ ಅಂತಿಮ ಪುರುಷಾರ್ಥವೆಂದು ಎಣಿಸಲ್ಪಟ್ಟಿದೆ. ಯಮ ನಿಯಮ, ವ್ರತ ಸಂಯಮ, ತೀರ್ಥಯಾತ್ರೆ, ಮುಂತಾದುವು ಇದನ್ನು ಸಂಪಾದಿಸುವ ಸಾಧನ ಗಳೆಂದು ತಿಳಿಯಲ್ಪಟ್ಟಿವೆ.

೫ ಸನಾತನ ಹಿಂದೂ ಧರ್ಮದಲ್ಲಿ ವರ್ಣಾಶ್ರಮ-ವ್ಯವಸ್ಥೆಗೆ ಮಹತ್ವದ ಸ್ಥಾನ ವುಂಟು. ವರ್ಣಾಶ್ರಮ-ವ್ಯವಸ್ಥೆಯೇ ಹಿಂದೂ ಧರ್ಮದ ವೈಶಿಷ್ಟ್ಯವೆನ್ನಬಹುದು. ಹಿಂದೂ ಧರ್ಮಕ್ಕೆ ವರ್ಣಾಶ್ರಮ ಧರ್ಮವೆಂದರೂ ನಡೆಯುವುದು. ಇದೇ ರೀತಿ ಯಾಗಿ ಗೋರಕ್ಷಣೆ ಹಿಂದೂ ಧರ್ಮದ ಸ್ಥೂಲವಾದ ಬಾಹ್ಯ ಸ್ವರೂಪ ಎನ್ನ ಬಹುದು. ವರ್ಣಾಶ್ರಮ-ವ್ಯವಸ್ಥೆಯ ಬಗ್ಗೆ, ಮತ್ತು ಗೋರಕ್ಷಣೆಯ ಬಗ್ಗೆ ಮುಂದೆ ವಿಸ್ತಾರವಾಗಿ ವಿಚಾರ ಮಾಡಲ್ಪಟ್ಟಿದೆ.

೬ 'ವೈಷ್ಣವ ಜನ ತೋ ತೇನೆ ಕಹೀಯೆ' ಎಂಬ ಪದದಲ್ಲಿ ಕೊಟ್ಟಿರುವ ಲಕ್ಷಣಗಳು ಸನಾತನ ಹಿಂದೂ ಧರ್ಮದ ನಿಜವಾದ ಲಕ್ಷಣಗಳು.

೫ ಗೀತೆ-ರಾಮಾಯಣ

೧ ಹಿಂದೂ ಧರ್ಮದಲ್ಲಿ ಅನೇಕ ಮನನೀಯ ಗ್ರಂಥಗಳಿವೆ. ಅವುಗಳಲ್ಲಿ ನಿತ್ಯ ಉಪಯೋಗಕ್ಕಾಗಿ ಗಹನವಾದ ಅಭ್ಯಾಸವನ್ನೂ ಮನನವನ್ನೂ ಮಾಡಲು ಸಂಸ್ಕೃತದಲ್ಲಿ 'ಗೀತೆ' ಇದೆ, ಹಿಂದೀಯಲ್ಲಿ ಗೋಸ್ವಾಮೀ ತುಲಸೀದಾಸರ 'ರಾಮಚರಿತ ಮಾನಸ' ಇದೆ. ಇವೆರಡೂ ಅತ್ಯಂತ ಮಹತ್ವದ, ಸಾಮಾನ್ಯತಃ ಸಾಕಷ್ಟು ಪೂರ್ಣವಾದ ಗ್ರಂಥಗಳು.

೨ ತತ್ವಜ್ಞಾನ ನಿರೂಪಣೆಯು, ಮತ್ತು ಸೂಕ್ಷ್ಮ ವಿವೇಚನೆಯು ದೃಷ್ಟಿಯಿಂದ ನಮ್ಮಲ್ಲಿ ಗೀತೆಯುಂಟು. ಕಾವ್ಯಮಯ ಕತೆಗಳ ಮೂಲಕ ಸುಲಭ ಶೈಲಿಯಲ್ಲಿ ಧರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಮುಂತಾದುವನ್ನು ಸಾಮಾನ್ಯ ಜನರಿಗೂ ತಿಳಿಯುವಂತೆ ನಿರೂಪಿಸುವ ದೃಷ್ಟಿಯಿಂದ ತುಲಸೀದಾಸರ ರಾಮಾಯಣವುಂಟು. ಇವೆರಡೂ ಹಿಂದೂ ಧರ್ಮದ ಅದ್ವಿತೀಯ ಗ್ರಂಥಗಳು.

೩ ಅನಾಸಕ್ತಿಯೋಗವು ಗೀತೆಯ ಪಲ್ಲವಿ. ಕರ್ಮಫಲದಾಸೆಯನ್ನು ಬಿಟ್ಟು ಕರ್ತವ್ಯಕರ್ಮವನ್ನು ಸತತ ಮಾಡುತ್ತ ಹೋಗಬೇಕೆಂದು ಈ ಗ್ರಂಥವು ಎಂದೂ ಮರೆಯದಂತಹ ರೀತಿಯಲ್ಲಿ ಉಪದೇಶಿಸುತ್ತದೆ. ಇದರಲ್ಲಿ ಕರ್ಮಮಾತ್ರದ ನಿಷೇಧವಿಲ್ಲ. ಹಾಗೆಯೆ, ಕರ್ಮದಲ್ಲಿ ಒಳಿತು ಯಾವುದು ಕೆಡುಕು ಯಾವುದು ಎಂದು ಯೋಚಿಸಬಾರದೆಂದೂ ಹೇಳಿಲ್ಲ. ಇದರಲ್ಲಿ ದುಷ್ಕರ್ಮದ ನಿಷೇಧವೂ ಫಲಾಸಕ್ತಿಯನ್ನು ಬಿಟ್ಟು ಸತ್ಕರ್ಮವನ್ನು ಮಾಡುವ ವಿಧಿಯೂ ಉಕ್ತವಾಗಿದೆ. ಸತ್ಯ ಅಹಿಂಸಾದಿ ವ್ರತಗಳನ್ನು ಸಂಪೂರ್ಣವಾಗಿ ಪಾಲಿಸಿದ ಹೊರತು ಈ ಯೋಗದಲ್ಲಿ ಸಿದ್ಧಿಯನ್ನು ಪಡೆಯುವುದು ದುರ್ಲಭವು.

೪ ಗೀತೆಯ ಪಠನ, ವಾಚನ, ಮತ್ತು ಮನನ ಇವು ಎಂದೂ ಹಳೆಯವಾಗುವುದಿಲ್ಲ. ಇದರೊಳಗಿನ ತತ್ವಗಳನ್ನು ಯೋಚಿಸುತ್ತ ಹೋದಂತೆ, ಅವುಗಳಂತೆ ಕರ್ಮವನ್ನು ಮಾಡುತ್ತ ಹೋದಂತೆ, ಇದರ ಪುನರಾವೃತ್ತಿಯೊಳಗಿಂದ ಹೊಸ ಹೊಸ ಬೆಳಕು ತಲೆದೋರುವುದು. ಇಷ್ಟೇ ಅಲ್ಲ, ಗೀತೆಯಲ್ಲಿ ಬಂದಿರುವ ಮಹಾ ಶಬ್ದಗಳ ಅರ್ಥವು ಯುಗಯುಗಕ್ಕೂ ಬದಲಾವಣೆಯನ್ನು ಹೊಂದಿ ವಿಶಾಲವಾಗುವುದು.

ತೃತೀಯ ಖಂಡ

ಸಮಾಜ

—•—

೧ ವರ್ಣಾಶ್ರಮ

೧ ಹಿಂದೂ ಧರ್ಮದ ನಿಜವಾದ ಹೆಸರು ವರ್ಣಾಶ್ರಮ ಧರ್ಮವೆಂದು ಹಿಂದೆ ಹೇಳಲಾಗಿದೆ. ವರ್ಣವ್ಯವಸ್ಥೆಯೆ ಹಿಂದೂ ಧರ್ಮದ ವಿಶೇಷ ಲಕ್ಷಣವು. ಇದರ

ಮೂಲ ವೇದದಲ್ಲಿದೆ.

೨ ಪ್ರತಿಯೊಂದು ಧರ್ಮದಲ್ಲೂ ಒಂದಿಲ್ಲೊಂದು ವೈಶಿಷ್ಟ್ಯವು ಇದ್ದೇ ಇದೆ. ವರ್ಣಾಶ್ರಮ ಧರ್ಮವು ಹಿಂದೂ ಧರ್ಮದ ಜೀವಾಳವನ್ನು ಸೂಚಿಸುವ ಹೆಸರು.

೩ ಆದುದರಿಂದ ಹಿಂದೂ ಧರ್ಮಕ್ಕೆ ಸೇರಿದವನು ವರ್ಣಾಶ್ರಮವನ್ನು ಉಪೇಕ್ಷಿಸಲಾರನು. ಈ ರೂಢಿಯಲ್ಲಿ ಏನಾದರೂ ದೋಷವು ಕಂಡರೆ ಅದನ್ನು ಜ್ಞಾನಪೂರ್ವಕವಾಗಿ ಬಿಡುವುದು ಒಳಿತು. ಈ ರೂಢಿಯು ಹಿಂದೂ ಧರ್ಮದ ನಿರ್ದೋಷ ವೈಶಿಷ್ಟ್ಯವಾಗಿದ್ದ ಪಕ್ಷದಲ್ಲಿ (ಇದೆಯೆಂದೇ) ಅದನ್ನು ರಕ್ಷಿಸತಕ್ಕದ್ದು. ಅದರ ಪುನರುದ್ಧಾರವನ್ನು ಮಾಡತಕ್ಕದ್ದು.

೪ ವರ್ಣಾಶ್ರಮವ್ಯವಸ್ಥೆಯೆಂದರೆ ಮನಬಂದಂತೆ ಮಾಡಿದ ಸಮಾಜ ರಚನೆಯಲ್ಲ. ಇದರ ತಳಹದಿಯಲ್ಲಿ ಸಿದ್ಧಾಂತಗಳ ಜ್ಞಾನವುಂಟು—ಎಂದರೆ ಮಾನವ-ಸಮಾಜದ ಉನ್ನತಿಗೆ ಅವಶ್ಯವಿದ್ದ ನಿಯಮಗಳ ಜ್ಞಾನವಿದೆ.

೫ ಆದುದರಿಂದ ವರ್ಣಾಶ್ರಮವು ಹುಟ್ಟಿದ್ದು ಹಿಂದೂ ಧರ್ಮದಲ್ಲಿಯೇ ನಿಜವಾಗಿದ್ದರೂ ಅದರಲ್ಲಿರುವ ಸಿದ್ಧಾಂತಗಳು ಹಿಂದೂಗಳಿಗೆ ಮಾತ್ರ ಲಾಭದಾಯಕವಾದುವುಗಳು, ಉಳಿದ ಧರ್ಮದವರಿಗೆ ಲಾಭದಾಯಕವಲ್ಲ, ಎಂದು ಹೇಳಲಿಕ್ಕಾಗುವುದಿಲ್ಲ. ಇಂದಿಗೆ ಈ ಪದ್ಧತಿಯನ್ನು ಜಗತ್ತು ಸ್ವೀಕರಿಸಲಿಕ್ಕಿಲ್ಲ. ಸ್ವೀಕರಿಸದಿದ್ದರೆ ಆ ಮಟ್ಟಿಗೆ ಜಗತ್ತಿಗೇ ಹಾನಿಯಾಗುವುದು. ಇಂದಿಲ್ಲ ನಾಳೆಯಾದರೂ ಈ ವ್ಯವಸ್ಥೆಯನ್ನು ಎಲ್ಲರೂ ಸ್ವೀಕರಿಸಲೇ ಬೇಕಾಗುವುದು.

೬ ಆದರೆ ಇಂದು ವರ್ಣ ಮತ್ತು ಆಶ್ರಮ, ಈ ಎರಡೂ ವಸ್ತುಗಳ ಲೋಪವೂ ಆಗಿದೆ. ಇವುಗಳ ಹೆಸರು ಕೂಡ ಈಗ ಕೇಳಬರುವುದಿಲ್ಲ. ಇವುಗಳಂತೆ ಕರ್ಮವೂ ನಡೆಯುತ್ತಿರುವುದಿಲ್ಲ. ವರ್ಣದ ಹೆಸರಿನ ಲೋಪವಾಗದಿದ್ದರೂ ತದನುಸಾರ ಕರ್ಮದ ಲೋಪವಂತೂ ಆಗಿಯೆಹೋಗಿದೆ.

ನಾವು ಇವೆರಡನ್ನೂ ಕುರಿತು ಅನುಕ್ರಮವಾಗಿ ಯೋಚಿಸುವಾ.

೨ ವರ್ಣಧರ್ಮ

೧ ವರ್ಣವೆಂದರೆ ಉದ್ಯೋಗ, ಧಂದೆ, ಕಾಯಕ. ವರ್ಣಧರ್ಮದ ಸಿದ್ಧಾಂತವನ್ನು ಸಂಕ್ಷೇಪವಾಗಿ ಹೀಗೆ ಮಂಡಿಸಬಹುದು: ಯಾವನು ಯಾವ ಕುಟುಂಬದಲ್ಲಿ ಹುಟ್ಟಿರುವನೋ ಅವನು ಆ ಕುಟುಂಬದ ಕಸುಬನ್ನು, ಅದು ನೀತಿಗೆ ವಿರುದ್ಧವಾಗಿರದಿದ್ದರೆ, ಧರ್ಮಭಾವನೆಯಿಂದ ಮಾಡಬೇಕು. ಅದರಿಂದ ದೊರೆತ

ಲಾಭದಲ್ಲಿ ತನ್ನ ಉಪಜೀವನಕ್ಕೆ ಬೇಕಾಗುವಷ್ಟನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ಸಾರ್ವಜನಿಕ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು.

೨ ವರ್ಣವೆಂದರೆ ಅಧಿಕಾರವಲ್ಲ, ಒಂದು ಧರ್ಮ. ಪ್ರತಿಯೊಂದು ವರ್ಣವೂ ತನ್ನ ತನ್ನ ಕರ್ಮವನ್ನು ಧರ್ಮವೆಂದು ತಿಳಿದು ಮಾಡತಕ್ಕದ್ದು, ಇಷ್ಟೇ ಅದರ ತಾತ್ಪರ್ಯ. ಉದರ-ಪೋಷಣೆ ಎಂಬುದು ಇದರಿಂದ ಆಗುವ ಅಲ್ಪ ಫಲ ಮಾತ್ರ. ಇದು ದೊರೆಯುಲಿ ದೊರೆಯುದಿರಲಿ; ಇದನ್ನರಿತವರು ತಮ್ಮ ಧರ್ಮದಲ್ಲಿ ತೊಡಗಿರ ತಕ್ಕದ್ದು.

೩ ಈ ವರ್ಣಗಳಲ್ಲಿ ಒಂದು ನೀಚ, ಇನ್ನೊಂದು ಉಚ್ಚವೆಂಬ ಭೇದವಿಲ್ಲ. ಎಲ್ಲ ವರ್ಣಗಳೂ ಸರಿಸಮಾನ ಎಂಬುದೇ ಇದರ ಅರ್ಥ.

೪ ಸಾಮಾನ್ಯವಾಗಿ ಜನ್ಮದಿಂದಲೇ ವರ್ಣವನ್ನು ನಿಶ್ಚಯಿಸಬೇಕು. ಕೆಲವು ಕಡೆಗಳಲ್ಲಿ ಕರ್ಮದಂತೆ ವರ್ಣವನ್ನು ನಿಶ್ಚಯಿಸಬಹುದು. ಸಾಮಾನ್ಯವಾಗಿ ನೋಡಿದರೆ ತಂದೆ-ತಾಯಂದಿರು ಮಾಡುತ್ತ ಬಂದಿರುವ ಉದ್ಯೋಗವನ್ನು ಮಾಡುವ ಕಲೆಯೇ ಮನುಷ್ಯನ ಸ್ವಭಾವಕ್ಕೆ ಸಹಜವಾದುದು. ಈ ನಿಯಮವು ಸರ್ವವ್ಯಾಪಕವಾಗಿರುವುದು. ತಿಳಿದು ಅಥವಾ ತಿಳಿಯದೆ ಎಲ್ಲರೂ ತಕ್ಕಮಟ್ಟಿಗೆ ಇದನ್ನು ಪಾಲಿಸುವರು. ಹಿಂದೂ ಜನರ ಪೂರ್ವಜರು ಅತ್ಯಂತ ಕಠಿಣ ತಪಶ್ಚರ್ಯ ಮಾಡಿ ಈ ಮಹಾ ಧರ್ಮವನ್ನು ಕಂಡುಹಿಡಿದರು; ಕೈಲಾದ ಮಟ್ಟಿಗೆ ಅದನ್ನು ಆಚರಿಸಿದರು. ಜಗತ್ತು ಈ ಧರ್ಮವನ್ನು ಅನುಸರಿಸಿದರೆ ಎಲ್ಲ ಕಡೆಗಳಲ್ಲಿ ಶಾಂತಿಯು ನೆಲೆಗೊಳ್ಳುವುದು. ಹೊಟ್ಟೆಕಿಚ್ಚಿನಿಂದ ನಡೆಯುವ ಮೇಲಾಟಗಳು ನಿಲ್ಲುವವು. ಅಸೂಯೆಯು ಇಲ್ಲದಂತಾಗುವುದು. ಯಾರೂ ಅನ್ನಾನ್ನಗತಿಕರಾಗಿ ಸಾಯರು. ಜನನ-ಮರಣದ ಸಂಖ್ಯೆಯು ಸಮವಾಗುವುದು. ಅನೇಕ ದುಃಖಗಳು ದೂರಾಗುವವು.

೫ ಈ ಧರ್ಮವ್ಯವಸ್ಥೆಯಲ್ಲಿ ಬ್ರಾಹ್ಮಣನು ಬ್ರಹ್ಮನನ್ನು ಅರಿತುಕೊಳ್ಳುವುದರಲ್ಲೂ, ಜನರಿಗೆ ಬ್ರಹ್ಮನನ್ನು ಅರಿಯುವ ಮಾರ್ಗವನ್ನು ಉಪದೇಶಿಸುವುದರಲ್ಲೂ ಕಾಲ ಕಳೆಯುವನು. ತನ್ನ ಉಪಜೀವನವನ್ನು ಪರಮಾತ್ಮನೇ ಸಾಗಿಸುವನೆಂದು ತಿಳಿಯುವನು. ಕ್ಷತ್ರಿಯನು ಪ್ರಜಾ-ಪಾಲನೆಯೇ ತನ್ನ ಧರ್ಮವೆಂದು ತಿಳಿದು, ಅದಕ್ಕೆ ಪ್ರತಿಫಲವಾಗಿ ತನ್ನ ಉಪಜೀವನಕ್ಕೆ ಬೇಕಾಗುವಷ್ಟು ಮಾತ್ರ ದ್ರವ್ಯವನ್ನು ತೆಗೆದುಕೊಳ್ಳುವನು. ವೈಶ್ಯನು ಪ್ರಜರ ಕಲ್ಯಾಣಕ್ಕಾಗಿ ಒಕ್ಕಲುತನ, ಗೋಪಾಲನೆ ಮತ್ತು ವ್ಯಾಪಾರವನ್ನು ಮಾಡುವನು. ಇದರಿಂದ ಪ್ರಾಪ್ತ

ವಾದ ಧನದಲ್ಲಿ ತನ್ನ ಜೀವನನಿರ್ವಾಹಕ್ಕೆ ಬೇಕಾಗುವಷ್ಟನ್ನು ಮಾತ್ರ ತೆಗೆದು ಕೊಂಡು ಉಳಿದುದನ್ನೆಲ್ಲ ಜನಹಿತಕ್ಕಾಗಿ ವಿನಿಯೋಗಿಸುವನು. ಇದೇ ರೀತಿ ಶೂದ್ರನೂ ಸೇವೆಯು ತನ್ನ ಧರ್ಮವೆಂದು ತಿಳಿದು ಅದನ್ನು ಮಾಡುವನು.

೬ ಈ ವ್ಯವಸ್ಥೆಯ ಮೇರೆಗೆ ಆ ಆ ಮನುಷ್ಯನು ತನ್ನಲ್ಲಿದ್ದ ಯಾವುದೇ ಸೊತ್ತಿನ ಒಡೆಯನಾಗದೆ ಸಮಾಜದ ಸಲುವಾಗಿ ಅದರ ಧರ್ಮಧರ್ಶಿ (trustee) ಯಾಗುವನು. ತಾನು ಅದರ ಒಡೆಯನೆಂದು ಅವನು ತಿಳಿದುಕೊಳ್ಳಲಾಗದು. ರಾಜನು ತನ್ನ ಅರಮನೆಯ, ಹಾಗೂ ಪ್ರಜರಿಂದ ತೆಗೆದುಕೊಂಡ ಕರದ ಯಜಮಾನನಲ್ಲ- ಅವುಗಳ ಧರ್ಮಧರ್ಶಿ ಮಾತ್ರ. ತನ್ನ ಹೊಟ್ಟೆಬಟ್ಟೆಗೆ ಬೇಕಾಗುವಷ್ಟನ್ನು ತೆಗೆದುಕೊಂಡು ಉಳಿದುದೆಲ್ಲವನ್ನೂ ಪ್ರಜರ ಕಲ್ಯಾಣಕ್ಕಾಗಿ ವಿನಿ-ಯೋಗಿಸಲು ಅವನು ಬದ್ಧನು. ಕಾರ್ಯದಕ್ಷತೆಯಿಂದ ತನ್ನ ಉತ್ಪನ್ನವನ್ನು ಬೆಳೆಯಿಸಿಕೊಂಡು ಪ್ರಜರಿಗೆ ಒಂದಿಲ್ಲೊಂದು ರೀತಿಯಿಂದ ಆದಷ್ಟು ಹೆಚ್ಚಿಗೆ ಲಾಭವನ್ನು ಅವನು ಹಿಂತಿರುಗಿ ಕೊಡುವನು. ವೈಶ್ಯನೂ ಹಾಗೆಯೇ.

೭ ಶೂದ್ರನನ್ನು ಕುರಿತು ಏನು ಹೇಳೋಣ? ಅವನಲ್ಲಿ ಯಾವ ಆಸ್ತಿಯೂ ಇರುವುದಿಲ್ಲ. ಆದ್ದರಿಂದ ಯಾವ ಶೂದ್ರನು ಸೇವೆಯನ್ನು ತನ್ನ ಧರ್ಮವೆಂದು ತಿಳಿದು ಮಾಡುವನೋ, ಮತ್ತು ಒಡೆಯನಾಗಲು ಹವಣಿಸನೋ, ಅವನು ಆದರ-ವಂದನೆಗಳಿಗೆ ಪಾತ್ರನು. ಎಲ್ಲರಿಗಿಂತಲೂ ಅವನೇ ಶ್ರೇಷ್ಠನು.

೮ ಮೂರೂ ವರ್ಣದವರು ತಾವು ಪ್ರಜರ ಸೇವಕರೆಂದು ತಿಳಿದುಕೊಂಡು ತಮ್ಮಲ್ಲಿದ್ದ ಆಸ್ತಿಯನ್ನು ಸಾರ್ವಜನಿಕ ಕಾರ್ಯಕ್ಕಾಗಿ ಉಪಯೋಗಿಸುತ್ತಿದ್ದರೆ ಮಾತ್ರ ಶೂದ್ರನ ಸೇವಾಧರ್ಮವನ್ನು ಹೊಗಳಿದರೆ ಶೋಭಿಸುವುದು. ಅವನ ಮೇಲೆ ಈ ಸೇವಾಧರ್ಮವನ್ನು ಬಲದಿಂದ ಹೊರಿಸಲಿಕ್ಕಾಗದು.

೯ ವರ್ಣಧರ್ಮದ ಶೋಧಕರು, ವರ್ಣವು ಧರ್ಮವೆಂದು ತಿಳಿದು ಅದನ್ನು ಆಚ-ರಿಸಬೇಕೆಂದೂ ಆ ಆಚರಣೆಯಲ್ಲಿ ಬಲಾತ್ಕಾರವು ಎಳ್ಳಷ್ಟೂ ಇರಕೂಡದೆಂದೂ ಹೇಳುತ್ತಾರೆ. ಇದನ್ನು ಪಾಲಿಸುವುದರಿಂದಲೇ ಜಗತ್ತು ಜೀವಿಸಿರುವುದು, ಹಾಗೂ ಆದರ ಉದ್ಧಾರವಾಗುವುದು. ಪ್ರತಿಯೊಬ್ಬನೂ ಹೀಗೆ ತಿಳಿದು ಕೊಂಡು ತನ್ನ ತನ್ನ ವರ್ಣಧರ್ಮವನ್ನು ಪಾಲಿಸುವುದರಲ್ಲೇ ಸಾಯಬೇಕು. ಆದರೆ ಇದನ್ನು ಪಾಲಿಸಲು ಬೇರೆಯವರನ್ನು ಒತ್ತಾಯ ಪಡಿಸಬಾರದು.

೧೦ ಬಲ್ಲವರಿಗೆ ಈ ಧರ್ಮದ ಪಾಲನೆ ಬಹು ಸುಲಭ.

೧೧ ಈ ರೀತಿಯ ವರ್ಣಧರ್ಮವು ಸಮತೆಯ ಧರ್ಮವು. ಇದು ಬರಿಯ

ಸಾಮ್ಯ'ವಾದ'ವಲ್ಲ. ಈ ಧರ್ಮದಿಂದ ಜಗತ್ತಿನಲ್ಲಿರುವ ವೈಷಮ್ಯಗಳ ಬದಲು ಸರಿ-ಸಮಾನತೆಯು ಸಾಮ್ರಾಜ್ಯವುಂಟಾಗುವುದು. ಎಲ್ಲ ಕಸುಬುಗಳೂ ಉಚ್ಚವೆಂದೆನಿಸುವವು. ಎಲ್ಲವುಗಳ ಬೆಲೆಯೂ ಒಂದೇ ಆಗುವುದು. ಅರಸರು ಮಂತ್ರಿಗಳು ಮೊದಲುಗೊಂಡು ಭಂಗಿಯ ವರೆಗಿನವರೆಲ್ಲರೂ ಸರಿಸಮಾನರೆಂದು ಎಣಿಸಲ್ಪಡತಕ್ಕದ್ದು. ಅವರೆಲ್ಲರ ಗಳಿಕೆ, ಉತ್ಪನ್ನ, ಸರಿಸಮಾನವಿರತಕ್ಕದ್ದು. ಮೇಲಿನ ಮೂರು ವರ್ಣಗಳು ಹೆಚ್ಚು ಗಳಿಸುವುದು-ಶೂದ್ರನು ಕಡಮೆ ಗಳಿಸುವುದು, ಅಥವಾ ಕ್ಷತ್ರಿಯನು ಅರಮನೆಯಲ್ಲಿ ವಾಸಿಸುವುದು-ಬ್ರಾಹ್ಮಣನು ಭಿಕ್ಷುಕವೃತ್ತಿಯಿಂದ ಗುಡಿಸಲಿನಲ್ಲಿರುವುದು, ವೈಶ್ಯನು ದೊಡ್ಡ ದೊಡ್ಡ ಹೊಲ ಮನೆ ಮಾಡಿಕೊಂಡು ಇರುವುದು ವಖಾರಗಳನ್ನು ಕಟ್ಟಿಸಿಕೊಂಡಿರುವುದು- ಮತ್ತು ಶೂದ್ರನು ಮನೆ-ಮಾರು ಇಲ್ಲದೆ ಆಳಾಗಿರುವುದು, ಇಂತಹ ಕರುಣಾಜನಕ ಸ್ಥಿತಿಯು ವರ್ಣಧರ್ಮದ ಪಾಲನೆಯಾಗುತ್ತಿರುವ ಕಡೆಯಲ್ಲಿ ಇರಲಾರದು, ಇರಬಾರದು.

೧೨ ಈ ತರದ ವರ್ಣಧರ್ಮವು ಇಂದು ಇಲ್ಲದಂತಾಗಿದೆ. ಎಷ್ಟೋ ಜನರು ತಾವು ಬ್ರಾಹ್ಮಣರು, ಕ್ಷತ್ರಿಯರು, ಇಲ್ಲವೆ ವೈಶ್ಯರೆಂದುಕೊಳ್ಳುತ್ತಾರೆ. ಶೂದ್ರರೆನ್ನಿಸಿಕೊಳ್ಳಲು ಎಲ್ಲರೂ ನಾಚುತ್ತಾರೆ. ಇದರಿಂದ ವರ್ಣಗಳು ಹೆಸರಿಗೆ ಮಾತ್ರ ಉಳಿದಿವೆಯೆನ್ನಬಹುದು. ಆದರೂ ವ್ಯವಹಾರದಲ್ಲಿ ನಾವು 'ವರ್ಣ'ವನ್ನಿಡಬೇಕೆಂದರೆ, ನಾವೆಲ್ಲರೂ ಶೂದ್ರರೆನಿಸುವೆವು. ನಿಜವಾಗಿ ಶೂದ್ರರೂ ಅಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ ಶೂದ್ರವರ್ಣವೂ ಧರ್ಮವೇ. ಅದನ್ನು ಸ್ವೇಚ್ಛೆಯಿಂದ ಸ್ವೀಕರಿಸಬೇಕಾಗುವುದು. ಅಲ್ಲಿ ನಾಚಿಕೆಗೆ ಎಡೆಯಿಲ್ಲ. ಈ ರೀತಿಯಾಗಿ ಇಲ್ಲದೆ ಇದ್ದ ಮೇಲೆ ನಾವೂ ಕಾಲಮಾನಕ್ಕೆ ವಶರಾಗಿದ್ದೇವೆ, ಅರ್ಥಾತ್ ಗುಲಾಮರಾಗಿದ್ದೇವೆ ಎಂದ ಹಾಗಾಯಿತು.

೧೩ ಯಾವನು ಯಾವ ವರ್ಣದ ಕಾರ್ಯಮಾಡುವನೋ ಅವನು ಆ ವರ್ಣದವನೆಂದು ಎಣಿಸಬೇಕು. ಆ ಆ ವರ್ಣದವರು ಮಾಡತಕ್ಕ ಆ ಆ ಕಾರ್ಯಗಳು ನಡೆದೇ ಇರುವವು. ಆದ್ದರಿಂದ ವರ್ಣಧರ್ಮವು ಲೋಪವಾಗಿಲ್ಲ ಎಂದು ಹೇಳುವುದು ಸರಿಯೆನಿಸುವುದಿಲ್ಲ. ಯಾಕೆಂದರೆ ಕರ್ಮಗಳೆಲ್ಲ ಮಿಶ್ರವಾದಾಗ, ಎಲ್ಲ ಜನರು ತಮ್ಮ ಮನಸ್ಸಿಗೆ ಬಂದ ಕರ್ಮಗಳನ್ನು ಮಾಡುತ್ತಿರುವಾಗ, ಅಲ್ಲಿರುವುದು ವರ್ಣಧರ್ಮದ ಪಾಲನೆಯಲ್ಲ, ವರ್ಣದ ಸಂಕರ ಎನ್ನಬಹುದು.

೧೪ ವರ್ಣದಲ್ಲಿ ಉಚ್ಚನೀಚ ಭಾವನೆಗೆ ಎಡೆಯಿಲ್ಲ. ಆದರೆ ಬಹು ದಿನ

ಗಳಿಂದ ಹಿಂದೂ ಧರ್ಮದಲ್ಲಿ ಧರ್ಮದ ಹೆಸರಿನಲ್ಲಿ ಉಚ್ಚನೀಚವೆಂಬ ಭಾವನೆ ಬೇರೂರಿದೆ. ಇದು ಹಿಂದೂ ಧರ್ಮದ ಕು-ರೂಪ, ವಿಕಟರೂಪ. ಇಂದು ಪ್ರಪಂಚ ದಲ್ಲಿ ನಡೆದಿರುವ ಕಲಹಗಳಿಗೆಲ್ಲ ಈ ಉಚ್ಚನೀಚವೆಂಬ ಭಾವನೆಯೇ ಮುಖ್ಯ ಕಾರಣ. ಈ ಕಲಹಗಳು ಇಲ್ಲದಂತಾಗಬೇಕಾದರೆ ವರ್ಣಧರ್ಮದ ಪಾಲನೆ ಯಾಗಬೇಕು.

೧೫ ಶೂದ್ರರು ನೀಚರು ತಾವು ಉಚ್ಚರು ಎಂದು ಮೂರು ವರ್ಣದವರು ತಿಳಿದುಕೊಂಡರೆ, ಶೂದ್ರರು ಅವರನ್ನು ದ್ವೇಷಿಸುವರು; ಉಚ್ಚ ವರ್ಗದವರೆನ್ನಿಸಿ ಕೊಂಡವರು ಸಂಗ್ರಹಿಸಿದ ಸೊತ್ತನ್ನು ಪಡೆದುಕೊಳ್ಳಲು ಬಯಸುವರು. ಇದು ಸ್ವಾಭಾವಿಕವಾದುದು. ಇದರಲ್ಲಿ ಹೊಸದೇನೂ ಇಲ್ಲ. ಇದಕ್ಕಾಗಿ ನಾವು ದುಃಖಪಡಬೇಕಾದುದೂ ಇಲ್ಲ.

೧೬ ವರ್ಣಧರ್ಮವು ಇಂದು ಊಟ-ಉಡಿಗೆಯಲ್ಲಿ, ಮತ್ತು ವಿವಾಹದಲ್ಲಿ ಮಾತ್ರ ಉಳಿದುಕೊಂಡಿದೆ. ವ್ಯವಹಾರದಲ್ಲಿ ಖಾದ್ಯಾಖಾದ್ಯ ವಿವೇಕಕ್ಕೂ ವಿವಾಹದ ನಿಯಮಕ್ಕೂ ಸ್ಥಾನವುಂಟು. ಆದರೆ ವರ್ಣಧರ್ಮವು ನಿಂತದ್ದು ಇವೆರಡರ ಮೇಲೆಯೆ ಅಲ್ಲ. ಇವೆರಡನ್ನು ವರ್ಣಧರ್ಮದೊಡನೆ ಜೋಡಿಸಿಬಿಟ್ಟದ್ದ ರಿಂದ ಇಂದು ಹಿಂದೂ ಧರ್ಮಕ್ಕೆ ಹಾನಿ ತಟ್ಟಿದೆ.

೧೭ ವರ್ಣದ ಹಾಗೂ ಜಾತಿಯ ನಡುವೆ ಇಂದು ಭೂಮ್ಯಾಕಾಶದಷ್ಟು ಅಂತರವಿದೆ. ಈಗ ಕಾಣಬರುವ ಜಾತಿ ಉಪಜಾತಿಗಳು ವರ್ಣವ್ಯವಸ್ಥೆಯ ಹಾಳಾದ ಕುರುಹುಗಳು. ಇವುಗಳ ತಳಹದಿಯಲ್ಲಿ ವರ್ಣಭೇದದಂತಹ ವ್ಯಾಪಕ ನಿಯಮಗಳಿಲ್ಲ. ಇವು ಹುಟ್ಟಿದ್ದು ಆಕಸ್ಮಿಕ ಕಾರಣಗಳಿಂದ, ರೂಢಿಗಳಿಂದ. ಇವು ಜಾತಿ-ಬಂಧನಗಳೇ ಹೊರತು ವರ್ಣವ್ಯವಸ್ಥೆಯಲ್ಲ. ಇವುಗಳಿಂದ ಹಿಂದೂ ಧರ್ಮಕ್ಕೆ ಕೇಡುಂಟು. ಆದ್ದರಿಂದ ಇವನ್ನು ನಾಶಪಡಿಸತಕ್ಕದ್ದು.

೧೮ ವರ್ಣಗಳು ನಾಲ್ಕು ಎಂದು ಶಾಸ್ತ್ರಗಳಲ್ಲಿ ಹೇಳಿದೆ. ನಾಲ್ಕೇ ಇರ ಬೇಕು ಎನ್ನುವುದು ಆಗತ್ಯವಾದ ನಿರ್ಬಂಧವಲ್ಲ. ವರ್ಣಧರ್ಮದ ಪುನರುದ್ಧಾರದ ಕಾಲಕ್ಕೆ ನಾಲ್ಕಕ್ಕಿಂತ ಹೆಚ್ಚು ಬೇಕೆನ್ನಿಸಲೂ ಬಹುದು, ನಾಲ್ಕಕ್ಕಿಂತ ಕಡಮೆ ಮಾಡುವುದೂ ಅವಶ್ಯವೆನ್ನಿಸಬಹುದು.

೩ ಆಶ್ರಮ

೧ ಸೃಷ್ಟಿಯ ನಿಯಮಗಳನ್ನು ವ್ಯವಸ್ಥಿತವಾಗಿ ಆಚರಣೆಯಲ್ಲಿ ತರು ವುದಕ್ಕಾಗಿ ಮಾಡಿದ ಪ್ರಯತ್ನವೇ ಆಶ್ರಮ ವ್ಯವಸ್ಥೆ.

೨ ಎಲ್ಲ ವರ್ಣಗಳ ಜನರಿಗೆ ಎಲ್ಲ ಆಶ್ರಮಗಳ ಅಧಿಕಾರವುಂಟು.

೩ ನಾಲ್ಕೂ ಆಶ್ರಮಗಳು ಸರಪಳಿಯ ಕೊಂಡಿಗಳಂತೆ ಒಂದಕ್ಕೊಂದು ಸಂಬಂಧಪಟ್ಟಿವೆ. ಒಂದನ್ನು ಬಿಟ್ಟು ಇನ್ನೊಂದನ್ನು ಪಾಲಿಸಲಿಕ್ಕಾಗುವುದಿಲ್ಲ.

೪ ಹುಟ್ಟಿದಾರಭ್ಯ ಮನುಷ್ಯನು ಬ್ರಹ್ಮಚರ್ಯಾಶ್ರಮದಲ್ಲಿರುವನು. ಆದ್ದರಿಂದ ಈ ಆಶ್ರಮದ ನಿಯಮಗಳಿಗನುಸರಿಸಿ ವರ್ತಿಸುವುದು ಕರ್ತವ್ಯವೆನಿಸುವುದು. ಈ ಆಶ್ರಮವನ್ನು ಎಂದಿಗೂ ಬಿಡದಿರುವ, ಯಾವಜ್ಜೀವನವೂ ಬ್ರಹ್ಮಚರ್ಯವನ್ನು ಪಾಲಿಸುವ ಅಧಿಕಾರವು ಸರ್ವರಿಗೂ ಉಂಟು. ಪುರುಷರು ಕನಿಷ್ಠ ೨೫ ವರ್ಷಗಳ ವರೆಗೂ ಸ್ತ್ರೀಯರು ೧೮ ವರ್ಷಗಳ ವರೆಗೂ ಪವಿತ್ರರಾಗಿದ್ದುಕೊಂಡು ಈ ಬ್ರಹ್ಮಚರ್ಯಾಶ್ರಮವನ್ನು ಪಾಲಿಸಬೇಕು.

೫ ಈ ಆಶ್ರಮದಲ್ಲಿ ಆಚರಿಸಿದ ಪವಿತ್ರವಾದ ಹಾಗೂ ಸಂಯಮೀ ಜೀವನಕ್ರಮದ ಅಡಿಗಲ್ಲಿನ ಮೇಲೆಯೇ ಉಳಿದ ಆಶ್ರಮಗಳ ಉಜ್ವಲತೆಯು ಅವಲಂಬಿಸಿದೆ. ಆದುದರಿಂದ ಆಧ್ಯಾತ್ಮಿಕ ದೃಷ್ಟಿಯಿಂದಲೂ ಮೊದಲಿನ ಆಶ್ರಮವೇ ಮುಖ್ಯವಾದ ಆಶ್ರಮ. ಇದು ಲೋಪವಾಗಿರುವುದರಿಂದ ಹಿಂದೂ ಧರ್ಮಕ್ಕೂ ಹಿಂದೂ ಸಮಾಜಕ್ಕೂ ಬಹಳ ಹಾನಿ ತಗಲಿದೆ. ಈ ಆಶ್ರಮವನ್ನು ಹೆಚ್ಚು ಉಜ್ವಲಗೊಳಿಸುವುದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯ. ಈ ಹೊತ್ತು ಆ ಆಶ್ರಮವನ್ನು ಪಾಲಿಸುವವರು ತೀರ ವಿರಳ.

೬ ಗೃಹಸ್ಥಾಶ್ರಮದೊಳಗಿನ ವಿವಾಹ-ಧರ್ಮವನ್ನು ಕುರಿತು ಮುಂದಿನ ಪ್ರಕರಣಗಳಲ್ಲಿ ವಿಚಾರ ಮಾಡಲಾಗಿದೆ. ಧರ್ಮಮಾರ್ಗದಿಂದ ಪ್ರಜಾಸಂಪತ್ತನ್ನು ಬೆಳೆಸುವ ಭಾರವು ಈ ಆಶ್ರಮಕ್ಕೆ ಒಪ್ಪಿಸಲ್ಪಟ್ಟಿದೆ.

೭ ಗೃಹಸ್ಥಾಶ್ರಮವಿರುವುದು ಭೋಗಕ್ಕಾಗಿ ಎನ್ನುವುದು ತಪ್ಪು. ಹಿಂದೂ ಧರ್ಮದ ಎಲ್ಲ ವ್ಯವಸ್ಥೆಯು ಸಂಯಮವನ್ನು ಸಾಧಿಸುವುದಕ್ಕಾಗಿಯೇ ಇರುವುದು. ಆದ್ದರಿಂದ ಭೋಗವು ಎಂದಿಗೂ ಕರ್ತವ್ಯವೆನಿಸದು. ಸರಳತೆಯೂ ಸಂಯಮವೂ ಗೃಹಸ್ಥಾಶ್ರಮದ ದೂಷಣಗಳಲ್ಲ, ಭೂಷಣಗಳು.

ಆದರೆ ಎಷ್ಟೋ ಜನರು ಸಂಯಮವನ್ನೇ ಧ್ಯೇಯವನ್ನಾಗಿಟ್ಟುಕೊಂಡಿದ್ದರೂ ಭೋಗಗಳ ಕಡೆಗೆ ಹೋಗುವ ತಮ್ಮ ಮನಸ್ಸನ್ನು ಬಿಗಿಹಿಡಿಯಲಾರರು. ಗೃಹಸ್ಥಾಶ್ರಮದ ಧರ್ಮಗಳು ಈ ಭೋಗಗಳಿಗೆ ಎಲ್ಲೆಯನ್ನೂ, ಅವನ್ನು ಸೇವಿಸುವ ವಿಧಿಯನ್ನೂ ಹಾಕಿಕೊಡುವವು.

೮ ಇಂದು ಎಲ್ಲರೂ ಪಾಲಿಸುತ್ತಿರುವುದು ಗೃಹಸ್ಥ 'ವೃತ್ತಿ'-ಪ್ರಜಾ

ವೃದ್ಧಿಯು ಕಾರ್ಯವೇ–ಹೊರತು ಗೃಹಸ್ಥ 'ಧರ್ಮ'ವಲ್ಲ. ಇದರಿಂದ ಬಹಳವಾಗಿ ಸ್ವೇಚ್ಛಾಚಾರವೂ ವ್ಯಭಿಚಾರವೂ ಬೆಳೆಯುವವು.

೯ ವ್ಯಭಿಚಾರದಿಂದ, ಇಲ್ಲವೆ ಸ್ವೇಚ್ಛಾಚಾರದಿಂದ ಜೀವನವನ್ನು ಕಳೆದವರಿಗೆ ವಾನಪ್ರಸ್ಥವೂ ಸನ್ಯಾಸವೂ ಅತ್ಯಂತ ಕಠಿಣವಾಗುವವು ಎಂಬುದನ್ನು ನಾವು ಅರಿಯಬೇಕು.

೧೦ ಭೋಗಗಳನ್ನು ಕಡಮೆ ಮಾಡುತ್ತ ಹೋಗಿ, ಅವುಗಳ ಬಗ್ಗೆ ಇದ್ದ ಮೋಹವನ್ನು ಬಿಡುವ ಶಕ್ತಿಯು ಪ್ರಾಪ್ತವಾದ ಕೂಡಲೆ ಗೃಹಸ್ಥ–ದಂಪತಿಗಳು ಬ್ರಹ್ಮಚರ್ಯಾಶ್ರಮದ ವ್ರತಗಳನ್ನು ಕೈಕೊಂಡು, ಅಥವಾ ಪುನಃ ಅವನ್ನು ತೇಜಃಪುಂಜ ಮಾಡಿ ವಾನಪ್ರಸ್ಥರಾಗುವರು. ಯಾವನು ತನ್ನ ರಾಗದ್ವೇಷಗಳನ್ನು ಪೂರ್ಣವಾಗಿ ಗೆಲ್ಲದಿದ್ದರೂ ಇಂದ್ರಿಯಗಳನ್ನು ತಡೆದು ನಿಲ್ಲಿಸುವ ಶಕ್ತಿಯನ್ನು ಸಂಪಾದಿಸಿರುವನೊ, ಮತ್ತು ಯಾವನು ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವನೊ ಅವನೇ ವಾನಪ್ರಸ್ಥನೆನ್ನಿಸುವನು. ಈಗ ಈ ಆಶ್ರಮದ ಲೋಪವೇ ಆಗಿದೆ ಎನ್ನಬಹುದು.

೧೧ ರಾಗದ್ವೇಷಗಳನ್ನು ಸಂಪೂರ್ಣವಾಗಿ ಗೆದ್ದವನು, ಕಾಯಾ–ವಾಚಾ–ಮನಸಾ ಸತ್ಯ, ಅಹಿಂಸೆ, ಬ್ರಹ್ಮಚರ್ಯ ಮುಂತಾದ ಯಮಗಳನ್ನು ಪಾಲಿಸುವವನು ಸಂನ್ಯಾಸಿ ಎನಿಸುವನು. ಇಂಥ ಸಂನ್ಯಾಸಿಯು ನಿಷ್ಕಾಮ ಭಾವನೆಯಿಂದ ಕರ್ಮಮಾಡುವನು, ತನ್ನ ನಿರ್ವಾಹಕ್ಕಾಗಿ ಭಿಕ್ಷೆಯನ್ನು ಅವಲಂಬಿಸುವನು.

೧೨ ಆಶ್ರಮಗಳಿಗೂ ಬಾಹ್ಯ ವೇಷಗಳಿಗೂ ಏನೂ ಸಂಬಂಧವಿಲ್ಲ.

೪ ಸ್ತ್ರೀಜಾತಿ

೧ ಸ್ತ್ರೀಜಾತಿಯ ವಿಷಯವಾಗಿದ್ದ ಕೀಳು ಭಾವನೆಯು ಹಿಂದೂ ಧರ್ಮದಲ್ಲಿ ಒಳಸೇರಿದ ಕೆಸರು, ಕೊಳಕು. ಅದು ಧರ್ಮದ ಅಂಗವಲ್ಲ. ಧಾರ್ಮಿಕ ಪುರುಷರು ಕೂಡ ಸ್ತ್ರೀಜಾತಿಯನ್ನು ತಿರಸ್ಕಾರದ ದೃಷ್ಟಿಯಿಂದ ನೋಡುವರು. ಇದರಿಂದ ಹಿಂದೂ ಧರ್ಮದಲ್ಲಿ ಈ ಕೊಳಕು ಎಷ್ಟು ಆಳವಾಗಿ ಒಳಸೇರಿದೆ ಎನ್ನುವುದು ವ್ಯಕ್ತವಾಗುವುದು.

೨ ಸ್ತ್ರೀ ಮತ್ತು ಪುರುಷನಲ್ಲಿ ಪ್ರಾಕೃತಿಕ ಭೇದಗಳುಂಟು. ಆದುದರಿಂದ ನಿತ್ಯ-ಜೀವನದಲ್ಲೂ ಅವರು ಆಚರಿಸತಕ್ಕಂಥ ಕರ್ತವ್ಯಗಳಲ್ಲೂ ಭೇದಗಳುಂಟು.

ಇಬ್ಬರಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಇಬ್ಬರೂ ಸಮಾಜದ ಸಮಾನ, ಮಹತ್ವದ, ಮತ್ತು ಪ್ರತಿಷ್ಠೆಗೆ ಪಾತ್ರವಾದ ಅಂಗಗಳು.

೩ ಪುರುಷನು ಒಂದು ಕಡೆಯಿಂದ ಸ್ತ್ರೀಜಾತಿಯನ್ನು ಮೆಟ್ಟುವನು, ಅಜ್ಞಾನದಲ್ಲಿಡುವನು, ತಿರಸ್ಕರಿಸುವನು, ನಿಂದಿಸುವನು. ಇನ್ನೊಂದು ಕಡೆಯಿಂದ, ಅದು ತನ್ನ ಭೋಗೇಚ್ಛೆಯನ್ನು ತೃಪ್ತಿಪಡಿಸುವ ಸಾಧನವೆಂದು ಎಣಿಸುವನು. ಆದ್ದರಿಂದ ಗೊಂಬೆಯನ್ನು ಸಿಂಗರಿಸಿದ ಹಾಗೆ ತನ್ನ ಮನಬಂದಂತೆ ಅದನ್ನು ಸಿಂಗರಿಸುವನು. ಅದರ ಮನಸ್ಸನ್ನು ಸಂತೋಷಪಡಿಸಲು ಬೇಕಾದ್ದನ್ನು ಮಾಡುವನು. ಅದರ ಭೋಗವೃತ್ತಿಯನ್ನು ಜಾಗ್ರತಗೊಳಿಸಲೂ ಯತ್ನಿಸುವನು. ಈ ಮೂಲಕ ಸ್ತ್ರೀಜಾತಿಯ, ಪುರುಷನ, ಮತ್ತು ಇಡೀ ಸಮಾಜದ ಅಧಃಪತನವು ಬಹಳವಾಗಿದೆ.

೪ ಸಾಕುವುದರಲ್ಲೂ ಶಿಕ್ಷಣ ಕೊಡಿಸುವುದರಲ್ಲೂ ಹುಡುಗ ಹುಡುಗಿಯರಲ್ಲಿ ಭೇದವನ್ನು ಕಲ್ಪಿಸಿ ಹುಡುಗಿಯ ಕಡೆಗೆ ಕಡಿಮೆ ಲಕ್ಷ್ಯಗೊಟ್ಟು ತಮ್ಮ ಕರ್ತವ್ಯದಿಂದ ಪರಾಙ್ಮುಖರಾಗುವ ತಂದೆ-ತಾಯಿಂದಿರು ಪಾಪವನ್ನು ಮಾಡುವರು.

೫ ವಯಸ್ಸಿಗೆ ಬಂದ ಪುರುಷನು ಸ್ವಾತಂತ್ರ್ಯಕ್ಕೆ ಎಷ್ಟು ಅರ್ಹನೋ ಸ್ತ್ರೀಯಳೂ ಅಷ್ಟೇ ಅರ್ಹಳು.

೬ ಸ್ತ್ರೀಯು ಅಬಲೆಯಲ್ಲ. ಆಕೆ ತನ್ನ ಶಕ್ತಿಯನ್ನರಿತುಕೊಂಡರೆ ಪುರುಷನಿಗಿಂತಲೂ ಹೆಚ್ಚು ಬಲಶಾಲಿಯಾಗಬಲ್ಲಳು. ಅವಳು ತಾಯಿಯಾಗಿ ಯಾವ ರೀತಿ ಬಾಲಕನನ್ನು ರೂಪಿಸುವಳೋ, ಪತ್ನಿಯಾಗಿ ಪತಿಗೆ ದಾರಿ ತೋರುವಳೋ, ಆ ಸಂಸ್ಕಾರಗಳಿಗನುಸರಿಸಿಯೇ ಪುರುಷನು ಮಾರ್ಪಡುವನು.

೭ ಸ್ತ್ರೀಜಾತಿಯಲ್ಲಿದ್ದ ಅಪಾರವಾದ ಶಕ್ತಿಯು ವಿದ್ವತ್ತೆಯಿಂದಾಗಲಿ, ಶಾರೀರಿಕ ಬಲದಿಂದಾಗಲಿ ಬಂದುದಲ್ಲ. ಅದು ಅವಳಿಗೆ ಉತ್ಕಟ ಶ್ರದ್ಧೆಯಿಂದ, ಭಾವನೆಯಿಂದ, ಮತ್ತು ತ್ಯಾಗಶಕ್ತಿಯಿಂದ ಪ್ರಾಪ್ತವಾಗಿದೆ. ಅವಳು ಸ್ವಭಾವದಿಂದಲೇ ಕೋಮಲೆ, ಧಾರ್ಮಿಕ ವೃತ್ತಿಯವಳು. ಪುರುಷನು ಶ್ರದ್ಧೆಯನ್ನು ಕಳೆದುಕೊಂಡು ಕೈಕಾಲು ಬಿಟ್ಟಾಗ, ಸುಳ್ಳು ತರ್ಕದ ತೊಡಕಿನಲ್ಲಿ ಸಿಲುಕಿಕೊಂಡಾಗ, ಅವಳು ಧೀರಳಂತೆ ಸರಳವಾದ ಮಾರ್ಗದಲ್ಲಿ ಮುಂದಡಿಯನ್ನಿಡುತ್ತ ಸಾಗುವಳು.

೮ ಜಗತ್ತಿನಲ್ಲಿ ಧರ್ಮದ ರಕ್ಷಣೆಯು ಪ್ರಾಮುಖ್ಯವಾಗಿ ಸ್ತ್ರೀಜಾತಿಯಿಂದಲೇ

ಆಗಿರುವುದು.

೯ ಸ್ತ್ರೀಜಾತಿಯು ತನ್ನ ಬಲವನ್ನು, ಕಾರ್ಯಕ್ಷೇತ್ರದ ದಿಕ್ಕನ್ನು ಚನ್ನಾಗಿ ಅರಿತುಕೊಂಡರೆ ತಾನು ಪುರುಷನ ಗೊಂಬೆಯೆಂದು ಒಪ್ಪಿಕೊಳ್ಳುವುದೂ ಇಲ್ಲ, ಪುರುಷನನ್ನು ಹಾಗೂ ಅವನ ಪ್ರವೃತ್ತಿಗಳನ್ನು ಅನುಕರಿಸಬೇಕೆಂಬ ಗುರಿಯನ್ನೂ ಇಟ್ಟುಕೊಳ್ಳುವುದಿಲ್ಲ. ಪುರುಷನನ್ನು ಸಂತೋಷಪಡಿಸಲು, ಆಕರ್ಷಿಸಲು ಶರೀರವನ್ನು ಶೃಂಗರಿಸುವುದಿಲ್ಲ. ಜಾಣೆಯಾದ ಸ್ತ್ರೀ ತನ್ನ ಸದ್ಭಾವ ಸದ್ಗುಣಗಳಿಂದ ಶೋಭಿಸುವ ಯತ್ನ ಮಾಡುವಳು.

೧೦ ಸ್ತ್ರೀಜಾತಿಯು ಸಾರ್ವಜನಿಕ ಕಾರ್ಯಗಳಲ್ಲಿ ಪುರುಷನಷ್ಟೇ ಪಾಲುಗೊಳ್ಳಬೇಕು. ಮದ್ಯಪಾನ-ನಿಷೇಧ, ಪತಿತ ಸ್ತ್ರೀಯರ ಉದ್ಧಾರ, ಮುಂತಾದ ಅನೇಕ ಕಾರ್ಯಗಳಲ್ಲಿ ಸ್ತ್ರೀಯೇ ಹೆಚ್ಚು ಜಯವನ್ನು ಸಂಪಾದಿಸಬಲ್ಲಳು.

೧೧ ಸ್ತ್ರೀಯು ಮದುವೆಯಾಗಲೆಬೇಕೆನ್ನುವುದು ಮಿಥ್ಯಾ-ಭ್ರಮೆ. ಅವಳಿಗೂ ಆಜೀವನ ಬ್ರಹ್ಮಚರ್ಯದಿಂದ ಇರುವ ಹಕ್ಕು ಉಂಟು.

೧೨ ಸ್ತ್ರೀಯು ತನ್ನ ಇಚ್ಛೆಗೆ ವಿರುದ್ಧವಾಗಿ ಪತಿಯ ಕಾಮವಾಸನೆಯನ್ನು ತೃಪ್ತಿಪಡಿಸಲು ಬದ್ಧಳಲ್ಲ. ಸತಿಯ ಇಚ್ಛೆಯ ವಿರುದ್ಧ ತನ್ನ ಕಾಮವಾಸನೆಯನ್ನು ತೃಪ್ತಿಪಡಿಸಿಕೊಳ್ಳುವಂತಹ ಪತಿಯು ವ್ಯಭಿಚಾರದೋಷಕ್ಕೆ ಪಾತ್ರನು ಎಂದರೆ ತಪ್ಪಾಗದು.

೫ ಅಸ್ಪೃಶ್ಯತೆ

೧ ಅಸ್ಪೃಶ್ಯತೆಯು ಹಿಂದೂ ಧರ್ಮದ ಅಂಗವಲ್ಲ. ಅದು ಹಿಂದೂ ಧರ್ಮದಲ್ಲಿ ಒಳಸೇರಿದ ಹೊಲಸು, ಪಾಪ. ಇದನ್ನು ಹೋಗಲಾಡಿಸುವುದು ಪ್ರತಿಯೊಬ್ಬ ಹಿಂದುವಿನ ಧರ್ಮ, ಪರಮ ಕರ್ತವ್ಯ.

೨ ಅಸ್ಪೃಶ್ಯರೆನಿಸುವ ಜನರು ನಾಲ್ಕು ವರ್ಣಗಳಿಗೆ ಒಳಪಟ್ಟವರು, ಹಿಂದೂ ಧರ್ಮದ ಅಂಗಗಳು.

೩ ಅಸ್ಪೃಶ್ಯರಲ್ಲಿ ಹುಟ್ಟಿದ ಮಾತ್ರದಿಂದ ಅವರು ಅಸ್ಪೃಶ್ಯರೆಂದು ತಿಳಿದರೆ ಅಹಿಂಸಾಧರ್ಮವನ್ನೂ ಸರ್ವಭೂತಾತ್ಮ ಭಾವನೆಯನ್ನೂ ನಾವು ನಿಷೇಧಿಸಿದಂತಾಗುವುದು. ಈ ಅಸ್ಪೃಶ್ಯತೆಯ ಬುಡದಲ್ಲಿ ಸಂಯಮವಿಲ್ಲ; ಉಚ್ಚತನದ ಉದ್ಧಟ ಭಾವನೆಯುಂಟು. ಆದುದರಿಂದ ಇದು ಸ್ಪಷ್ಟವಾದ ಅಧರ್ಮ. ಇದು ಧರ್ಮದ ಹೆಸರಿನಿಂದ ಕೋಟಿಗಟ್ಟಲೆ ಜನರನ್ನು ಗುಲಾಮರೋಪಾದಿ

ಯಲ್ಲಿ ಮಾಡಿರುವುದು.

೪ ಸಾರ್ವಜನಿಕವಾದ ಜಾತ್ರೆ, ಪೇಟೆ, ಅಂಗಡಿ, ಪಾಠಶಾಲೆ, ಧರ್ಮಶಾಲೆ, ಮಂದಿರ, ಕೆರೆ-ಭಾವಿ, ಉಗೆಬಂಡಿ, ಮೋಟಾರು ಮುಂತಾದುವುಗಳಲ್ಲಿ ಉಳಿದ ಹಿಂದುಗಳಂತೆ ಅನಿರ್ಬಂಧವಾಗಿ ಹೋಗಲಿಕ್ಕೂ ಅವುಗಳಿಂದಾಗುವ ಲಾಭಗಳನ್ನು ಪಡೆಯಲಿಕ್ಕೂ ಅಸ್ಪೃಶ್ಯರಿಗೆ ಅಧಿಕಾರವು ಇದ್ದೇ ಇದೆ. ಅವರಿಂದ ಈ ಅಧಿಕಾರವನ್ನು ಕಸಿದುಕೊಳ್ಳುವ ಮನುಷ್ಯನು ಅನ್ಯಾಯವನ್ನು ಮಾಡಿದಂತೆ. ಅಸ್ಪೃಶ್ಯರಿಗೆ ಈ ಅಧಿಕಾರವು ಉಂಟೆಂದು ಒಪ್ಪಿಕೊಂಡವನು, ಅವರ ಮೇಲೆ ಉಪಕಾರ ಹೊರಿಸಿದಂತಾಗುವುದಿಲ್ಲ, ತನ್ನ ತಪ್ಪನ್ನು ತಾನೇ ಸುಧಾರಿಸಿಕೊಂಡಂತಾಗುವುದು.

೫ ನೂರಾರು ವರ್ಷಗಳಿಂದ ಅಸ್ಪೃಶ್ಯರನ್ನು ಅಮಾನುಷ ರೀತಿಯಿಂದ ನಡೆಯಿಸಿದ್ದರಿಂದಲೂ, ಸುಸಂಸ್ಕೃತ ಹಿಂದೂಗಳ ಸಂಸರ್ಗದಿಂದ ಅವರನ್ನು ದೂರ ಇಟ್ಟಿದ್ದರಿಂದಲೂ, ಅವರ ಸ್ಥಿತಿ ಅತ್ಯಂತ ಕರುಣಾಜನಕವಾಗಿದೆ. ಈಗ ಅವರನ್ನು ಉಳಿದ ವರ್ಣಗಳಷ್ಟು ಉಚ್ಚಕೋಟಿಗೆ ತರಬೇಕಾದರೆ ಸುಸಂಸ್ಕೃತ ಹಿಂದೂಗಳು ವಿಶೇಷವಾಗಿ ಪ್ರಯತ್ನಿಸಬೇಕಾಗುತ್ತದೆ. ಅಸ್ಪೃಶ್ಯರ, ಉಳಿದ ದಲಿತ ಜಾತಿಗಳ, ಅಥವಾ ಹಿಂದುಳಿದ ಜಾತಿಗಳ ಸೇವೆಯನ್ನು ಮಾಡಲು, ತಮ್ಮ ಜೀವನವನ್ನು ಅರ್ಪಣ ಮಾಡುವುದೂ ಈ ಕಾರ್ಯಕ್ಕೆ ಉದಾರ ಅಂತಃಕರಣದಿಂದ ನೆರವಾಗುವುದೂ ಈ ಯುಗದ ಸುಸಂಸ್ಕೃತ ಹಿಂದೂಗಳ ಪರಮ ಪವಿತ್ರವಾದ ಕರ್ತವ್ಯಕರ್ಮ

೬ ಈ ದೃಷ್ಟಿಯಿಂದ ದಲಿತ ವರ್ಗಗಳಿಗೋಸ್ಕರ ಪ್ರತ್ಯೇಕವಾಗಿ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೂ, ಅವುಗಳಿಗಾಗಿ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕೂ ಸಾಕಷ್ಟು ಅನುವು ಉಂಟು. ಇಂತಹ ಸಂಸ್ಥೆಗಳು ಈಗಾಗಲೇ ಸ್ಥಾಪಿಸಲ್ಪಟ್ಟಿದ್ದರೆ, ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದರೆ, ಉಳಿದ ಸಾರ್ವಜನಿಕ ಸಂಸ್ಥೆಗಳಿಂದಲೂ ಅನುಕೂಲತೆಗಳಿಂದಲೂ ಲಾಭಪಡೆದುಕೊಳ್ಳಲು ಇದ್ದ ಅವರ ಅಧಿಕಾರವು ಹೊರಟುಹೋಗುವುದಿಲ್ಲ.

೭ ಅಸ್ಪೃಶ್ಯರ ಸ್ಥಿತಿಯನ್ನು ಸುಧಾರಿಸಲು ಹೊರಟಾಗ ಅವರ ಪರಂಪರಾಗತ ಕಸುಬುಗಳನ್ನು ಅವರಿಂದ ಬಿಡಿಸಲು, ಇಲ್ಲವೆ ಅವುಗಳ ಬಗ್ಗೆ ತಿರಸ್ಕಾರ ಹುಟ್ಟಿಸಲು ಯತ್ನಿಸಕೂಡದು. ತಮ್ಮ ಕಸುಬಿನ ಬಗ್ಗೆ ಅವರಲ್ಲಿ ತಿರಸ್ಕಾರವನ್ನು ಹುಟ್ಟಿಸಿದರೆ ಅವರ ಸೇವೆಯನ್ನು ಮಾಡಿದಂತಾಗುವುದಿಲ್ಲ,

ಹಾನಿಯನ್ನು ಮಾಡಿದಂತಾಗುವುದು. ನೇಕಾರನು (ಹಲವು ಪ್ರಾಂತಗಳಲ್ಲಿ ನೇಕಾರರು ಅಸ್ಪೃಶ್ಯರೆನಿಸುವರು) ನೇಯುತ್ತಿರಬೇಕು, ಚರ್ಮಕಾರನು ಚರ್ಮದ ಕಾರ್ಯವನ್ನು ಮಾಡುತ್ತಿರಬೇಕು, ಮತ್ತು ಭಂಗಿಯು ಪಾಯಖಾನೆಗಳನ್ನು ಸ್ವಚ್ಛ ಮಾಡುತ್ತಿರಬೇಕು. ಹೀಗೆ ಅವರು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿದ್ದರೂ ಅವರು ಅಸ್ಪೃಶ್ಯರೆಂದು ಎಣಿಸಲ್ಪಡದೆ ಹೋದರೆ ನಿಜವಾಗಿ ಅಸ್ಪೃಶ್ಯತಾನಿವಾರಣೆಯಾಯಿತೆನ್ನಬಹುದು.

೮ ಭಂಗಿಯು ಸಮಾಜದ ಹೊಲಸನ್ನು ದೂರ ಮಾಡಿ ಅದನ್ನು ದಿನಾಲು ಸ್ವಚ್ಛವಿಡುವ ಪವಿತ್ರ ಕೆಲಸವನ್ನು ಮಾಡುವನು. ಈ ಕಾರ್ಯವನ್ನು ಅವನು ನಿಯಮಿತವಾಗಿ ಮಾಡದಿದ್ದರೆ ಇಡೀ ಸಮಾಜವೇ ಮರಣೋನ್ಮುಖವಾಗುವುದು. ತಮ್ಮ ಕಸುಬುಗಳನ್ನು ಮಾಡುತ್ತಿರುವುದರಿಂದ ಅವರು ಇಷ್ಟು ಅಸಂಸ್ಕೃತರೂ ನಿರ್ಬಲರೂ ಆಗಿರುವರೆಂದು ಹೇಳುವುದು ಯೋಗ್ಯವಾದುದಲ್ಲ. ಈ ಕಸುಬುಗಳೂ ಉಳಿದ ಕಸುಬುಗಳಷ್ಟೇ ಉಚ್ಚವೆಂದು ಭಾವಿಸಬೇಕು. ಉಳಿದವರ ಕಸುಬುಗಳಂತೆ ಇವರ ಕಸುಬುಗಳಲ್ಲಿಯೂ ಸುಧಾರಣೆ ಮಾಡುವುದು ಅವಶ್ಯವಾಗಿದೆ. ಆದರೆ ಇದು ಇಲ್ಲಿ ತೀರ ಅಪ್ರಸ್ತುತ ಪ್ರಶ್ನೆ. ಸುಸಂಸ್ಕೃತ ಹಿಂದೂಗಳು ಈ ಕಸುಬುಗಳನ್ನು ಮಾಡಿ ಅವುಗಳಲ್ಲಿ ಸುಧಾರಣೆ ಮಾಡಿ ತೋರಿಸಬಹುದು.

೯ ಸತ್ತ ದನಗಳ ಮಾಂಸವನ್ನು ತಿನ್ನುವ ರೂಢಿಯು ಅಸ್ಪೃಶ್ಯರಲ್ಲಿದೆ. ಇದರಿಂದ ಇವರು ಎಷ್ಟು ಕರುಣಾಜನಕವಾದ ಬಡತನದಲ್ಲಿದ್ದಾರೆ ಎನ್ನುವುದು ತಿಳಿಯುವುದು. ಅವರಿಗೆ ಚನ್ನಾಗಿ ತಿಳಿಹೇಳುವುದರಿಂದಲೂ ಅವರ ಬಡತನವನ್ನು ದೂರಮಾಡುವುದರಿಂದಲೂ ಈ ರೂಢಿಯು ಇಲ್ಲದಂತಾಗುವುದು.

೧೦ ಮನುಷ್ಯನು ತನ್ನ ಆಚರಣೆಯನ್ನು ಮಾತ್ರ ಸ್ವಚ್ಛವಾಗಿಟ್ಟುಕೊಂಡರೆ ಸುಸಂಸ್ಕೃತನೆನಿಸಲಾರನು. ತನಗೆ ಅಶುದ್ಧವೆನಿಸಿದ್ದನ್ನು ಅನ್ಯರು ಮಾಡಲೇಬೇಕಾಗುವಂತೆ ಆಚರಿಸುವುದು ಅಸಂಸ್ಕೃತತೆಯ ಲಕ್ಷಣ. ತಾವು ಸುಸಂಸ್ಕೃತರೆಂದು ತಿಳಿಯುವ ಜನರು ಅಸ್ಪೃಶ್ಯರಿಗೆ ತಮ್ಮ ಎಂಜಲನ್ನೂ, ತಂಗಳು ಅಶುದ್ಧ ಆಹಾರವನ್ನೂ ನೀಡುವರು. ಅವರು ಪಶುಗಳಿಗಿಂತಲೂ ಕೀಳೆಂದು ಭಾವಿಸಿ ಅವರೊಡನೆ ಅತ್ಯಂತ ಕೀಳಾಗಿ ವರ್ತಿಸುವರು. ಈ ಆಚರಣೆ ಅನಾಗರಿಕತೆಯನ್ನು ವ್ಯಕ್ತಮಾಡುವುದು, ಅಲ್ಲದೆ ಪಾಪಮಯವಾಗಿರುವುದು.

೬ ಖಾದ್ಯಾಖಾದ್ಯ ವಿವೇಕ

೧ ಮನುಷ್ಯನು ಪ್ರತಿಯೊಂದು ಪದಾರ್ಥವನ್ನೂ ತಿನ್ನತಕ್ಕ ಸರ್ವಭಕ್ಷಕ ಪ್ರಾಣಿಯಲ್ಲ. ಅವನು ತಿನ್ನಬೇಕಾದ ಪದಾರ್ಥಗಳಿಗೂ ಒಂದು ಎಲ್ಲೆ ಇದೆ. ವರ್ಣಧರ್ಮದೊಡನೆ ಇದರ ಸಂಬಂಧವೇನೂ ಇಲ್ಲ. ಆಹಾರ-ವಿಷಯದಲ್ಲಿ ಸ್ಪೃಶ್ಯಾಸ್ಪೃಶ್ಯತೆ ಪಾಲಿಸುವುದು ದೋಷಪೂರ್ಣವಾದುದು. ಆದರೆ ಇದರಲ್ಲಿ ಬೇಕು ಬೇಡ ಎಂಬ ತಾರತಮ್ಯವುಂಟು.

೨ ಸ್ವಚ್ಛತೆಯ ನಿಯಮಗಳನ್ನು ಪಾಲಿಸುತ್ತ, ತಿನ್ನಲು ಅರ್ಹವಾದದ್ದನ್ನು ಸರ್ವವರ್ಣದವರೂ ಒಂದೇ ಪಂಕ್ತಿಯಲ್ಲಿ ಕುಳಿತು ತಿಂದರೆ ಯಾವ ದೋಷವೂ ಇಲ್ಲ. ಇಂಥ ವರ್ಣದವನೇ ಅಡಿಗೆ ಮಾಡಬೇಕೆಂಬ ಆವಶ್ಯಕತೆಯೂ ಇಲ್ಲ.

೩ ಇಂದು ನಾವು ಭೋಜನ-ವ್ಯವಹಾರಕ್ಕೆ ಕೊಟ್ಟ ಮಹತ್ವವು ಮಡಿ ಮೈಲಿಗೆಯ ರೂಢಿಗೆ ಪೋಷಕವಾಗಿದೆ, ನಮ್ಮ ರುಚಿ-ಅರುಚಿಯ ಭಾವನೆಯನ್ನು ಬೆಳೆಸುತ್ತದೆ. ಇದರಿಂದ ಉತ್ತೇಜನ ದೊರೆಯುವುದು ಸಂಯಮಕ್ಕಲ್ಲ, ಭೋಗಕ್ಕೆ.

೪ ಆದುದರಿಂದ ಜಾತಿ, ಸಮಾಜ, ಧರ್ಮ, ಮುಂತಾದ ಭೇದಗಳ ದೃಷ್ಟಿಯಿಂದ ಮಾಡಿದ ಪಾಕವೂ ಪಂಕ್ತಿಭೇದವೂ ಧರ್ಮದ ಲಕ್ಷಣವಲ್ಲ. ಈ ಭೇದದಿಂದ ಹಿಂದೂ ಧರ್ಮಕ್ಕೆ ಹಾನಿಯಾಗಿದೆ.

೭ ವಿವಾಹ

೧ ವಿವಾಹದಿಂದ ಮನಬಂದಷ್ಟು ಸಂಭೋಗಿಸಲು ಸ್ವಾತಂತ್ರ್ಯ ದೊರೆಯುವುದೆಂಬ ಕಲ್ಪನೆಯು ಪಾಪಮಯ. ಸ್ತ್ರೀ-ಪುರುಷರಿಬ್ಬರೂ ಸಂತತಿಯ ಇಚ್ಛೆಯಿಂದ ಸಂಭೋಗ ಮಾಡಿದರೆ ಮಾತ್ರ ಅದು ಧರ್ಮಯುಕ್ತವಾಗಬಲ್ಲುದು. ಈ ಇಚ್ಛೆಯನ್ನು ಸಿದ್ಧಿಗೊಯ್ಯುವ ಶುದ್ಧ ರೀತಿಯೇ ವಿವಾಹ.

೨ ಲಗ್ನದ ಇಚ್ಛೆ ಇದ್ದ ಯುವಕ ಯುವತಿಯರು ತಮಗೆ ಯೋಗ್ಯರಾದ ವಧು ವರರನ್ನು ಸ್ವತಃ ಆರಿಸಿಕೊಳ್ಳುವುದು ಸಾಮಾನ್ಯವಾಗಿ ಅಷ್ಟು ಯೋಗ್ಯವೆಂದು ಎನಿಸುವುದಿಲ್ಲ. ಏಕೆಂದರೆ ಇದರಿಂದ ಆಗಾಗ್ಗೆ ಮಾನಸಿಕ ವ್ಯಭಿಚಾರವೂ ಕೆಲವು ಪ್ರಸಂಗಗಳಲ್ಲಿ ಶಾರೀರಿಕ ವ್ಯಭಿಚಾರವೂ ಆಗುವ ಸಾಧ್ಯತೆ ಇದೆ. ಅಲ್ಲದೆ ಕಡಮೆ ಅನುಭವವುಳ್ಳ ಯುವಾವಸ್ಥೆಯಲ್ಲಿ ಭೋಗೇಚ್ಛೆಯು ತೀವ್ರವಾಗಿದ್ದಾಗ ಸ್ವತಃ ವಧು ವರರನ್ನು ಆಯ್ದು ಒಪ್ಪಿ ಮಾಡಿಕೊಂಡ

ಮದುವೆ ಅಷ್ಟೊಂದು ಯೋಗ್ಯವಾಗುವುದೆಂದು, ಜಾಣ್ಮೆಯದಾಗುವುದೆಂದು ಹೇಳಲಾಗುವುದಿಲ್ಲ.

೩ ಆದ್ದರಿಂದ ವಿವಾಹಿತರಾಗುವವರು ತಮ್ಮ ಇಚ್ಛೆಯನ್ನೂ, ಮತ್ತು ವಿವಾಹದ ವಿಷಯವಾಗಿ ತಾವು ಮಾಡಿದ ಸಂಕಲ್ಪಗಳೇನಾದರೂ (ವಿಧವಾ ವಿವಾಹ, ಅಂತರ್ಜಾತೀಯ ವಿವಾಹ, ವರದಕ್ಷಿಣೆ ಕನ್ಯಾಶುಲ್ಕ ಇಲ್ಲದೆ ವಿವಾಹ ವಾಗುವ ಇಚ್ಛೆ ಮುಂತಾದುವು)ಇದ್ದರೆ ಅವನ್ನೂ, ತಮ್ಮ ಹಿರಿಯರಿಗೆ ಇಲ್ಲವೆ ಪಾಲಕರಿಗೆ ಹೇಳಿ ಯೋಗ್ಯರಾದ ವಧೂ ವರರನ್ನು ಹುಡುಕಲು ಬಿನ್ನವಿಸಿಕೊಳ್ಳಬೇಕು.

೪ ಹಿರಿಯರು ಯುವತಿಯ ಮತ್ತು ಯುವಕನ ಸ್ವಭಾವ, ಗುಣದೋಷ ಗಳನ್ನೂ ವಿಚಾರಗಳನ್ನೂ ಧ್ಯಾನದಲ್ಲಿಟ್ಟುಕೊಂಡು ಅವರಿಗೆ ಅನುರೂಪರಾದ ಜೊತೆಗಾರರನ್ನು ಹುಡುಕಲು ಯತ್ನಿಸಬೇಕು. ಇಬ್ಬರಿಗೂ ಅವರವರ ಗುಣ ದೋಷಗಳನ್ನು ತಿಳಿಸಬೇಕು. ಇಬ್ಬರ ಜೀವನದಲ್ಲಿಯೂ ಅವಶ್ಯವಾಗಿ ಅರಿತು ಕೊಳ್ಳಲೇಬೇಕಾದಂಥ ಸಂದರ್ಭಗಳು ಜರುಗಿದ್ದರೆ ಅವನ್ನೂ ತಿಳಿಸಬೇಕು. ಅಂಥ ಸಂಗತಿಗಳನ್ನು ಮುಚ್ಚಿಡಕೂಡದು.

೫ ಹಿರಿಯರಿಂದ ಎಲ್ಲ ಸಂಗತಿಗಳನ್ನು ತಿಳಿದುಕೊಂಡ ಮೇಲೆ ಪರಸ್ಪರ ಭೆಟ್ಟಿಯಾಗಿ ಪರಿಚಯ ಮಾಡಿಕೊಳ್ಳಬೇಕೆಂದೂ ಮಾತುಕತೆಯಾಡಬೇಕೆಂದೂ ಯುವಕ ಯುವತಿಯರು ಬಯಸಿದರೆ ಅವರಿಗೆ ಹಾಗೆ ಮಾಡಲು ಮರ್ಯಾದೆ ಯಿಂದ ಯೋಗ್ಯ ವ್ಯವಸ್ಥೆ ಮಾಡಿಕೊಡಬೇಕು.

೬ ಆ ಮೇಲೆ ಇಬ್ಬರೂ ವಿವಾಹಿತರಾಗಲು ನಿಶ್ಚಯಿಸಿದರೆ ವಿವಾಹವನ್ನು ಗೊತ್ತುಮಾಡಬೇಕು, ನಿಶ್ಚಯ ಮಾಡಬೇಕು. ಇಬ್ಬರಲ್ಲಿ ಯಾರಾದರೂ ಅನಿಶ್ಚಿತರಾಗಿ, ಅಸಂತುಷ್ಟರಾಗಿ ಇರುವ ವರೆಗೆ ನಿಶ್ಚಯ ಮಾಡಬಾರದು. ಹಿರಿಯರು ಎರಡನೇ ಕಡೆಗೆ ಹುಡುಕಲು ಪ್ರಯತ್ನಿಸಬೇಕು.

೭ ನಿಶ್ಚಯವಾದ ಬಳಿಕ, ಮತ್ತು ಮದುವೆಗಿಂತ ಮೊದಲು, ಪರಸ್ಪರ ಸ್ಪರ್ಶ ಮಾಡದೆ ಬ್ರಹ್ಮಚರ್ಯದಿಂದ ಇದ್ದು ಆಗ್ರಹದಿಂದ ಇಬ್ಬರೂ ಭೆಟ್ಟಿ ಯಾದರೆ, ಪತ್ರವ್ಯವಹಾರ ಮಾಡಿದರೆ ಅದು ದೋಷವೆನಿಸುವುದಿಲ್ಲ. ಸಂಯಮೀ ಸ್ತ್ರೀ-ಪುರುಷರು ಈ ಕಾಲದಲ್ಲಿ ತಮ್ಮ ಭಾವೀ ವಧು ವರರ ಕೂಡ ಭೋಗದ ಮಾತುಗಳನ್ನಾಡದಿರುವುದು, ಅಂಥ ಕಲ್ಪನೆಗಳ ಬಗ್ಗೆ ಚರ್ಚಿಸ ದಿರುವುದು ಲೇಸು. ಅವರು ತಮ್ಮ ಉತ್ಕರ್ಷವಾಗುವಂತಹ ಮಾತುಗಳನ್ನಾಡ

ಬೇಕು, ಆ ಬಗ್ಗೆ ಯೋಚಿಸಬೇಕು.

೮ ವಿವಾಹವಾದ ಮೇಲೆ ವಿವಾಹವು ಧರ್ಮವೆಂದು ಅವರು ತಿಳಿಯುವರು. ಧರ್ಮದಲ್ಲಿ ಮರ್ಯಾದೆ, ವಿವೇಕ ಮುಂತಾದುವು ಉಂಟು. ಮರ್ಯಾದೆಯಿಂದಲೂ ವಿವೇಕದಿಂದಲೂ ಇದ್ದರೆ ದಂಪತಿಗಳು ಗೃಹಸ್ಥ-ಧರ್ಮವನ್ನು ಪಾಲಿಸಿದಂತೆ. ಮರ್ಯಾದೆ ಬಿಟ್ಟು ನಡೆಯುವವರು ಧರ್ಮನಿಷ್ಠರಲ್ಲ, ಸ್ವೇಚ್ಛಾಚಾರಿಗಳು.

೯ ಸಂತತಿಯ ಇಚ್ಛೆ ಇಲ್ಲದೆ ವಿವಾಹಸಂಬಂಧವಾಗಲಾರದು. ಆದರೆ ವಿವಾಹಿತರಾದ ಮೇಲೆ ಇಬ್ಬರೂ ಸಂಯಮಿಗಳಾಗಿ ಇರಬೇಕೆಂದು ಬಯಸಿದರೆ ವಿವಾಹವು ವ್ಯರ್ಥವಾಯಿತೆಂದು ತಿಳಿಯಕೂಡದು. ಸ್ತ್ರೀ-ಪುರುಷರಿಬ್ಬರೂ ಕೂಡಿ ಮಾಡತಕ್ಕ ಸಾಮಾಜಿಕ ಕಾರ್ಯಗಳು ಎಷ್ಟೋ ಇವೆ. ಅಂಥ ಕಾರ್ಯಗಳನ್ನು ಇಬ್ಬರೂ ಸಹಧರ್ಮಚಾರಿಗಳಾಗಿ ಮಾಡಬಹುದು. ತಮ್ಮ ಅತ್ಯಂತ ನಿಕಟ ಸಂಬಂಧದ ಉಪಯೋಗವನ್ನು ಈ ಕಾರ್ಯಗಳಿಗಾಗಿ ಮಾಡಿಕೊಡಬಹುದು.

೧೦ ಪ್ರಜೋತ್ಪಾದನೆಯ ಇಚ್ಛೆ ಇಲ್ಲದಿರುವಾಗ, ಇಬ್ಬರಲ್ಲಿ ಒಬ್ಬರಿಗೆ ಪ್ರಜೆಯನ್ನು ಹುಟ್ಟಿಸುವ ಶಕ್ತಿ ಇಲ್ಲದಿದ್ದಾಗ, ಮತ್ತು ಪರಸ್ಪರರ ಸಮ್ಮತಿ ಇಲ್ಲದೆ ಪತಿ-ಪತ್ನಿಯರೇ ಸಂಭೋಗಿಸಿದರೂ ಅದು ಪಾಪಮಯವೇ ಸರಿ

೮ ಸಂತತಿ-ನಿಯಮನ

೧ ಯೋಚನೆ ಮಾಡದೆ ಸಂತತಿಯನ್ನು ಬಯಸುತ್ತಿರುವುದೂ ಬೆಳೆಸುತ್ತ ಹೋಗುವುದೂ ಜಡತೆಯ ಲಕ್ಷಣ.

೨ ಯೋಚನೆ ಮಾಡದೆ ಪ್ರಜಾವೃದ್ಧಿ ಮಾಡುತ್ತಿರುವುದನ್ನು ಇಂದು ತಡೆಗಟ್ಟುವುದು ಅವಶ್ಯವಿದೆ. ಇದಕ್ಕೆ ಧರ್ಮಮಾನ್ಯವಾದ ಒಂದೇ ಸಾಧನವೆಂದರೆ ಬ್ರಹ್ಮಚರ್ಯ.

೩ ಸಂತತಿ-ನಿಯಮನದ ಕೃತ್ರಿಮ ಉಪಾಯಗಳು ಧರ್ಮಕ್ಕೂ ನೀತಿಗೂ ವಿರುದ್ಧವಾಗಿವೆ. ಈ ಉಪಾಯಗಳು ಕೊನೆಗೆ ವಿನಾಶದ ಮಾರ್ಗಕ್ಕೆ ಒಯ್ಯುವಂತಹವು. ಇವುಗಳಿಂದ ಎಲ್ಲ ತರದಿಂದಲೂ ಪ್ರಜಾಹಾನಿಯೂ ಅಧಃಪತನವೂ ಆಗುವುದು.

೯ ದಂಪತಿಗಳಲ್ಲಿ ಬ್ರಹ್ಮಚರ್ಯ

೧ ವಿವಾಹಿತ ಸ್ತ್ರೀ-ಪುರುಷರು ಋತುಕಾಲದಲ್ಲಿ ಭೋಗಿಸಲೇಬೇಕೆಂದು

ತಿಳಿಯುವುದು ತಪ್ಪು. ಇಬ್ಬರಲ್ಲಿ ಒಬ್ಬರಿಗೆ ಇಚ್ಛೆ ಇಲ್ಲದಿದ್ದರೂ ಇನ್ನೊಬ್ಬರ ಭೋಗೇಚ್ಛೆಯನ್ನು ತೃಪ್ತಿಪಡಿಸಲೇಬೇಕೆಂದು ತಿಳಿಯುವುದೂ ತಪ್ಪು.

೨ ಆದ್ದರಿಂದ, ಇಬ್ಬರಲ್ಲಿ ಯಾರೊಬ್ಬರ ವಿಷಯೇಚ್ಛೆಯು ಶರೀರವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವಷ್ಟು ದುರ್ಬಲವಾಯಿತೆಂದರೆ ಬ್ರಹ್ಮಚರ್ಯ ವ್ರತವನ್ನು ಕೈಕೊಳ್ಳಲು ಅವರಿಗೆ ಅಧಿಕಾರವುಂಟು. ಹಾಗೆ ಮಾಡುವ ಕಾಲದಲ್ಲಿ ಅವರು ತಮ್ಮ ಸಹಚರಿಯ ಸಹಕಾರವನ್ನು ಅಪೇಕ್ಷಿಸುವರು. ಆದರೆ ಆಗ ಇನ್ನೊಬ್ಬರ ಸಂಮತಿ ಪಡೆಯುವುದು ಅವಶ್ಯವೆಂದು ಯಾರೂ ಭಾವಿಸಕೂಡದು.

೩ ಬ್ರಹ್ಮಚರ್ಯದಿಂದ ಇರಬೇಕೆಂದು ಸ್ತ್ರೀಯು ನಿಶ್ಚಯಿಸಿದರೆ, ಮತ್ತು ಅದಕ್ಕೆ ಪತಿಯು ಸಂಮತಿಯನ್ನೀಯದಿದ್ದರೆ, ಅವಳ ಸ್ಥಿತಿ ಕಠಿಣವಾಗುವ ಸಂಭವವುಂಟು. ಬ್ರಹ್ಮಚರ್ಯದಿಂದ ಇರುವುದೇ ತನ್ನ ಧರ್ಮವೆಂದು ಚನ್ನಾಗಿ ಅರಿತುಕೊಂಡ ಸ್ತ್ರೀಯು ಈ ಎಡರುಗಳನ್ನು ಸತ್ಯಾಗ್ರಹದ ಬಲದಿಂದ ಸಹಿಸಬೇಕು. ದುಃಖಗಳು ಬಂದರೆ ಅವನ್ನೂ ಸಹಿಸಬೇಕು.

೪ ಬ್ರಹ್ಮಚರ್ಯದಿಂದ ಇರಬೇಕೆಂದು ಪತಿಯು ನಿಶ್ಚಯಿಸಿದರೆ ತೀವ್ರ ಭೋಗೇಚ್ಛೆಯುಳ್ಳ ಸ್ತ್ರೀಯ ಸ್ಥಿತಿ ಬಹು ಕಠಿಣವಾಗುವುದು. ಕ್ಯಾದೆಯೂ ಲೋಕಮತವೂ ಪತ್ನಿಗೆ ಪ್ರತಿಕೂಲವಾಗಿರುವುದೇ ಇದಕ್ಕೆ ಕಾರಣ. ಆದರೆ ಧರ್ಮಭಾವನೆಯಿಂದ ಬ್ರಹ್ಮಚರ್ಯ-ವ್ರತವನ್ನು ಸ್ವೀಕರಿಸುವ ಪತಿಯು ತನ್ನ ಪತ್ನಿಯ ಮಾರ್ಗವನ್ನು ಸುಗಮಮಾಡಿಕೊಡುವನು. ಅವನು ಕ್ಯಾದೆಯ ಅಭಿಪ್ರಾಯವನ್ನು ಲೆಕ್ಕಿಸದೆ, ಇಂಥ ಸ್ತ್ರೀಯ ಸಂಗಡ ತಾನು ಧರ್ಮವಿವಾಹದಿಂದಲೆ ಕಟ್ಟಲ್ಪಟ್ಟವನೆಂದು ತಿಳಿಯುವಂಥ, ಸಮಾಜದಿಂದ ಹಾಗೂ ಕಟ್ಟಳೆಯ ಮೂಲಕ ಉಂಟಾಗುವ ಎಲ್ಲ ಸಂಕಟಗಳನ್ನು ಎದುರಿಸಿ ಸಹಿಸುವಂಥ, ಯೋಗ್ಯನಾದ ಪುರುಷನನ್ನು ಅವಳಿಗಾಗಿ ಹುಡುಕುವನು. ಇಂತು ಕ್ಯಾದೆ-ಸುಧಾರಣೆಯ ಮಾರ್ಗವನ್ನು ಸಹ ಅವನು ಸರಳಮಾಡಿಕೊಡುವನು. ಇಂಥ ಹೊಸ ಪತಿಯು ಸಿಗುವ ವರೆಗೆ ಅವಳನ್ನು ಅವನು ಆದರದಿಂದ ಗೆಳೆಯನಂತೆ ತನ್ನಲ್ಲಿಯೇ ಇಟ್ಟುಕೊಳ್ಳುವನು.

೧೦ ವಿಧವಾ-ವಿವಾಹ

೧ ಹಿಂದೂ ವಿಧವೆಯು ತ್ಯಾಗದ ಮತ್ತು ಪವಿತ್ರತೆಯ ಮೂರ್ತಿ. ಇವಳು

ತಾಯಿಯಂತೆ ಸರ್ವರಿಗೂ ಪೂಜ್ಯಳು. ಇವಳು ಅಶುಭಕಾರಿಯೆಂದು ತಿಳಿಯುವ ಹಿಂದೂ ಸಮಾಜವು ಬಹು ದೊಡ್ಡ ಅಪರಾಧವನ್ನು ಮಾಡುತ್ತಿರುವುದು. ಶುಭ-ಕಾರ್ಯಗಳಿಗೆ ಅವಳನ್ನು ಕರೆಸಿ ಅವಳಿಂದ ಆಶೀರ್ವಾದಗಳನ್ನು ಪಡೆಯಲು ಅವಶ್ಯವಾಗಿ ಪ್ರಯತ್ನಿಸಬೇಕು. ಪವಿತ್ರಳಾದ ವಿಧವೆಯು ಹಿಂದೂ ಸಮಾಜದ ಭೂಷಣವೆಂದು ತಿಳಿದು ಅವಳ ಮಾನ ಮರ್ಯಾದೆಯನ್ನೂ ಪ್ರತಿಷ್ಠೆಯನ್ನೂ ಹೆಚ್ಚಿಸಲು ಎಲ್ಲರೂ ಯತ್ನಿಸಬೇಕು.

೨ ಸ್ತ್ರೀಜಾತಿಯ ಬಗ್ಗೆ ಪ್ರಚಾರದಲ್ಲಿರುವ ಭಾವನೆಗಳು ವಿಧವೆಗೆ ಘೋರವಾದ ಅನ್ಯಾಯವನ್ನು ಮಾಡಿರುವವು. ಆದುದರಿಂದ ಹಿಂದೂ ವಿಧವೆಯ ಸ್ಥಿತಿಯೂ ಅಸ್ಪೃಶ್ಯರಂತೆ ಅತ್ಯಂತ ದಯಾಜನಕವಾಗಿದೆ.

೩ ವಿಧವೆಯು ತ್ಯಾಗದ ಮೂರ್ತಿ. ಆದರೆ ವೈಧವ್ಯವು ಬಲಾತ್ಕಾರದಿಂದ ಪಾಲಿಸಲು ಹಚ್ಚುವಂಥ ವ್ರತವಲ್ಲ. ಬಲಾತ್ಕಾರದಿಂದ ಮಾಡಿಸಿದ ತ್ಯಾಗವು ಅವಳಲ್ಲಿದ್ದ ದಿವ್ಯತೆಯನ್ನು ನಾಶಮಾಡುವುದು. ಅವಳನ್ನು ಪೂಜ್ಯಳನ್ನಾಗಿ, ಆದರ್ಶಭೂತಳನ್ನಾಗಿ ಮಾಡುವ ಬದಲು ದಯೆಗೆ ಪಾತ್ರಳನ್ನಾಗಿ ಮಾಡಿಬಿಡುವುದು.

೪ ಆದ್ದರಿಂದ ಪುನರ್ ವಿವಾಹವನ್ನು ಮಾಡಿಕೊಳ್ಳಲು ವಿಧುರರಿಗೆ ಎಷ್ಟು ಅಧಿಕಾರವಿರುವುದೋ ಅಷ್ಟೇ ಅಧಿಕಾರವು ವಿಧವೆಯರಿಗೂ ಇರುವುದು.

೫ ಬಾಲ್ಯವಿವಾಹದ ಸ್ವಾಭಾವಿಕ ಪರಿಣಾಮವೇ ಬಾಲವಿಧವೆ. ೧೫-೧೬ ವರ್ಷಕ್ಕಿಂತ ಮೊದಲು ಕನ್ಯೆಯ ವಿವಾಹವು ಆಗಕೂಡದು. ೧೫-೧೬ ವರ್ಷಕ್ಕಿಂತ ಚಿಕ್ಕವಳಿದ್ದ ಕನ್ಯೆಗೆ ಬಂದ ವೈಧವ್ಯ ವೈಧವ್ಯವೇ ಅಲ್ಲ. ಇಂತಹ ವಿಧವೆಯು ಕುಮಾರಿಯೆಂದು ತಿಳಿಯಬೇಕು. ಕುಮಾರೀ ಕನ್ಯೆಯ ಮದುವೆಯನ್ನು ಮಾಡಲು ಹಿರಿಯರು ಚಿಂತಿಸುವಂತೆ ಈ ಕುಮಾರೀ ವಿಧವೆಯ ಮದುವೆ ಮಾಡಲೂ ಚಿಂತಿಸಬೇಕು. ಕುಮಾರಿಯ ಮದುವೆಯಂತೆ ಇವಳ ಮದುವೆಯನ್ನೂ ಮಾಡಬೇಕು.

೬ ಮದುವೆಯಾಗಲಿಚ್ಛಿಸುವ ಹಿಂದೂ ಯುವಕರು ಇಂತಹ ಬಾಲ ವಿಧವೆಯರನ್ನೇ ಮದುವೆಯಾಗುವ ಹಟಹಿಡಿದರೆ ಅವರು ಹಿಂದೂ ವಿಧವೆಯರ ಕಲ್ಯಾಣ ಮಾಡಿದಂತಾಗುವುದು. ತರುಣರಾದ ವಿಧುರರು ಪುನಃ ಮದುವೆ ಮಾಡಿಕೊಳ್ಳಬಯಸಿದರೆ ವಿಧವೆಯರನ್ನೇ ಮದುವೆಯಾಗುವುದು ತಮ್ಮ ಧರ್ಮವೆಂದು ತಿಳಿಯಬೇಕು.

೧೧ ವರ್ಣಾಂತರ ವಿವಾಹ

೧ ಸಂಯಮ, ಸುಖ, ಮತ್ತು ವರ್ಣದ (ವರ್ಣ ಎಂದರೆ ಕಸುಬಿನ ಅಧಿಕಾರ) ದೃಷ್ಟಿಯಿಂದ ತನ್ನ ವರ್ಣದಲ್ಲಿಯೇ ಮದುವೆಯಾಗುವುದು ಒಳಿತು. ಆದರೆ ಈಗ ವರ್ಣವ್ಯವಸ್ಥೆಯು ಲೋಪವಾದದ್ದರಿಂದ ಸ್ವಧರ್ಮೀಯರಲ್ಲಿಯೇ ಗುಣಕರ್ಮಗಳನ್ನು ನೋಡಿ ಶರೀರ-ಸಂಬಂಧವನ್ನು ಬೆಳೆಸುವುದು ಯೋಗ್ಯ. ಇಂತಹ ವರ್ಣಾಂತರ-ವಿವಾಹವು ನಿರ್ದೋಷವಾಗಿರುವುದು.

೨ ಪರದೇಶೀಯರೊಡನೆ, ಪರಧರ್ಮೀಯರೊಡನೆ ವಿವಾಹವಾಗಲು ಧರ್ಮದ ಪ್ರತಿಬಂಧವೇನೂ ಇಲ್ಲ. ಆದರೆ ಅದರಲ್ಲಿ ಅನೇಕ ವಿಘ್ನಗಳು ಬರುವುದುಂಟು. ಆದ್ದರಿಂದ ಇಂಥ ಸಂಬಂಧಗಳು ಅಪರೂಪವಾಗಿ ನಡೆದರೆ ಮಾತ್ರ ಶೋಭಿಸುವವು. ಆದರೆ ಅವುಗಳ ಉದ್ದೇಶವು ಪಾರಮಾರ್ಥಿಕ ಆಗಿರಬೇಕು.

ಚತುರ್ಥ ಖಂಡ

ಸತ್ಯಾಗ್ರಹ

— ೦ —

೧ ಸತ್ಯಾಗ್ರಹ-ಧರ್ಮ

೧ ದ್ವಿತೀಯ ಖಂಡದಲ್ಲಿ ಸತ್ಯಾಗ್ರಹವನ್ನು ಕುರಿತು ಸಾಮಾನ್ಯವಾದ ಒಂದು ಪ್ರಕರಣವುಂಟು. ಈ ಪ್ರಕರಣವನ್ನು ಓದುವ ಮೊದಲು ಅದನ್ನು ಮತ್ತೊಮ್ಮೆ ಓದಿಕೊಳ್ಳಬೇಕು.

೨ ವ್ಯಕ್ತಿ ಮತ್ತು ಸಮಾಜಗಳ ನಡುವಿನ ಸಂಬಂಧವು ಹೀಗಿದೆ: ಯಾವ ಸಮಾಜದಲ್ಲಿ ಒಂದು ವ್ಯಕ್ತಿಯ ಜನ್ಮವಾಗುವುದೋ ಆ ಸಮಾಜದ ಒಟ್ಟಾರೆ ಧರ್ಮದಲ್ಲಿ ಆದ ಪ್ರಗತಿಗಿಂತ ಆ ವ್ಯಕ್ತಿಯ ಪ್ರಗತಿ ಬಹಳ ಹೆಚ್ಚಾಗಿ ಮುಂದುವರಿಯಲಾರದು. ಧರ್ಮವಿಚಾರದಲ್ಲಿ, ಅಥವಾ ಧರ್ಮಸಾಧನೆಯಲ್ಲಿ ಭೂತಕಾಲದ ಓರ್ವ ಮಹಾಪುರುಷನಿಗಿಂತ ಇಂದಿನ ಮಹಾಪುರುಷನು ಮುಂದುವರಿದಿದ್ದರೆ ಆ ಪ್ರಾಚೀನ ಮಹಾಪುರುಷನ ಕಾಲದ ಸಮಾಜಕ್ಕಿಂತಲೂ ಇಂದಿನ ಸಮಾಜವು ಧರ್ಮ-ವಿಚಾರದಲ್ಲೂ ಸಾಧನದಲ್ಲೂ ಮುಂದುವರಿದಿರುವುದೇ ಅದಕ್ಕೆ ಕಾರಣವೆನ್ನಬಹುದು. ಹೀಗೆ ಮಾನವ-ಸಮಾಜದಲ್ಲಿ ಧರ್ಮದ

ಉತ್ತರೋತ್ತರ ಶುದ್ಧಿಯಾಗುತ್ತಿರುವುದೆಂದು ನಿರೀಕ್ಷಿಸಬಹುದು.

೩ ಆದ್ದರಿಂದ, ಯಾರಾದರೂ ತಮ್ಮ ಸುತ್ತುಮುತ್ತಲು ಒಡೆದು ಕಾಣು ವಂತೆ ನಡೆಯುತ್ತಿರುವ ಅಧರ್ಮದ ಕಡೆಗೆ ಗಮನ ಕೊಡದೆ ತಮ್ಮ ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳಲು ಹೊರಟರೆ ಅದು ಶಕ್ಯವಾಗಲಾರದು.

೪ ಯಾವುದೊಂದು ವ್ಯಕ್ತಿಯು ಸ್ವತಃ ಸತ್ಯ ಅಹಿಂಸಾದಿ ಧರ್ಮಗಳಲ್ಲಿ ಸಿದ್ಧಿಯನ್ನು ಪಡೆದುಕೊಳ್ಳಬೇಕಾದರೆ ಸಮಾಜದಲ್ಲಿ ಆಗುತ್ತಿರುವ ಅಧರ್ಮ ವನ್ನು ವಿರೋಧಿಸುವುದು ಅವನ ಕರ್ತವ್ಯ.

೫ ತನ್ನಲ್ಲಿ ಸತ್ಯಾದಿ ಗುಣಗಳು ಎಷ್ಟು ಉತ್ಕರ್ಷಹೊಂದಿರುವವೋ, ಅಧ-ರ್ಮದ ವಿಷಯವಾಗಿ ಎಷ್ಟು ಸ್ಪಷ್ಟವಾದ ಕಟು ಅನುಭವವು ಉಂಟಾಗಿರು ವುದೋ, ಆ ಮಟ್ಟಿಗೆ ಸಮಾಜದೊಳಗಿನ ಅಧರ್ಮವನ್ನು ವಿರೋಧಿಸುವ ತನ್ನ ಕರ್ತವ್ಯವು ಅವನಿಗೆ ತಿಳಿಯುವುದು, ಆ ಕರ್ತವ್ಯಪಾಲನೆಗಾಗಿ ಅವನು ತನ್ನ ಶಕ್ತಿಯನ್ನೆಲ್ಲ ಉಪಯೋಗಿಸುವನು.

೨ ಸತ್ಯಾಗ್ರಹಿಯ ಕಾರ್ಯಮರ್ಯಾದೆ

೧ ಸತ್ಯಾಗ್ರಹವು ಇನ್ನೂ ಚನ್ನಾಗಿ ಸಂಶೋಧಿತವಾದ ಸಂಪೂರ್ಣ ಶಾಸ್ತ್ರ ವಾಗಿಲ್ಲ. ಇದರ ಪ್ರಯೋಗವು ಇನ್ನೂ ಅಷ್ಟು ಮುಂದುವರಿದಿಲ್ಲ, ಬಾಲ್ಯಾ ವಸ್ಥೆಯಲ್ಲೇ ಇದೆ. ಇದರ ಪ್ರಯೋಗ ಮಾಡುವಂತಹ, ಇದರ ಪೂರ್ಣ ಶಕ್ತಿ ಯನ್ನು ಕಂಡುಹಿಡಿದಂತಹ, ಮತ್ತು ಇದನ್ನು ಎಲ್ಲೆಲ್ಲಿಯೂ ಒರೆಗೆ ಹಚ್ಚು ವಂತಹ ಒಬ್ಬನಾದರೂ ಪಂಡಿತನು ಈ ವರೆಗೆ ಕಂಡುಬಂದಿಲ್ಲ.

೨ ಆದುದರಿಂದ ಸರ್ವಪ್ರಕಾರದ ಅಧರ್ಮ, ಅನ್ಯಾಯ, ಕಲಹ ಮುಂತಾ ದುವುಗಳನ್ನು ಕೂಡಲೇ ದೂರೀಕರಿಸಲು ಬರುವಂತಹ, ಈ ಕ್ಷಣಕ್ಕೆ ರೂಢಿಗೆ ತರಲು ಬರುವಂತಹ ಒಂದು ಅಹಿಂಸಾಮಾರ್ಗವು ಈಗಲೇ ಸಿಕ್ಕೀತೆಂದು ನಾವು ಆಶಿಸಬಾರದು. ಆದರೆ ಸತ್ಯದಲ್ಲೂ ಅಹಿಂಸೆಯಲ್ಲೂ ಇಂತಹದೊಂದು ಶಕ್ತಿಯುಂಟೆಂಬ ವಿಶ್ವಾಸವನ್ನೂ ಶ್ರದ್ಧೆಯನ್ನೂ ಇಟ್ಟು ಸತ್ಯಾಗ್ರಹಿಯು ಆ ಮಾರ್ಗವನ್ನು ಹುಡುಕಲು ಯತ್ನಿಸುತ್ತಿರಬೇಕು.

೩ ಆದರೆ ಈ ಅವಧಿಯಲ್ಲಿ ಇದರಿಂದ ಅನ್ಯಾಯ, ಅಧರ್ಮ, ಮತ್ತು ಕಲಹಗಳು ಕೂಡಲೆ ದೂರವಾಗದಿರುವುದನ್ನು ಕಂಡು ಸತ್ಯಾಗ್ರಹಿ ನಿರುತ್ಸಾಹಿ ಯಾಗಬಾರದು; ಕಿಂಕರ್ತವ್ಯಮೂಢನಾಗಿ ಕ್ರಿಯಾಶೂನ್ಯನೂ ಆಗಬಾರದು.

೪ ಅಧರ್ಮವನ್ನು ನಾಶಪಡಿಸುವುದಕ್ಕಾಗಿ ಸತ್ಯಾಗ್ರಹದ ಮಾರ್ಗವನ್ನು ಶೋಧಿಸಲಾರದವರು ಹಿಂಸಾತ್ಮಕ ಉಪಾಯಗಳನ್ನು ಕೈಕೊಳ್ಳಬಹುದು. ಸತ್ಯಾಗ್ರಹಿಯು ಅವನ್ನು ನಿಷೇಧಿಸಬೇಕು ಮಾತ್ರ. ಇಲ್ಲವೆ ಆರ್ಥಿಕ ಮತ್ತು ಶಾರೀರಿಕ ಸಹಾಯ ಮಾಡದೆ ತಟಸ್ಥನಾಗಿರಬೇಕು. ಆದರೆ ಇಷ್ಟರಿಂದಲೇ ಹಿಂಸೆಯ ಬಗ್ಗೆ ಇದ್ದ ಇವನ ನೈತಿಕ ಹೊಣೆಯು ಕಡಮೆಯಾಗುವುದಿಲ್ಲ. ಅಧರ್ಮಗಳನ್ನು ನಾಶಮಾಡಲು ಅಹಿಂಸಾತ್ಮಕ ಉಪಾಯಗಳನ್ನು ಹೇಳಿ, ಅವುಗಳಂತೆ ತಾನು ನಡೆದು, ಇವುಗಳಿಂದಲೇ ಅಧರ್ಮವು ದೂರವಾಗುವುದೆಂದು ಸಿದ್ಧಮಾಡಿ ತೋರಿಸಬೇಕು. ಎಂದರೆ ಮಾತ್ರ ಅವನು ಹೊಣೆಯಿಂದ ಮುಕ್ತನಾಗುವನು.

೫ ಇದರಿಂದ ಸತ್ಯಾಗ್ರಹಿಯು ಬರಿಯ ತಟಸ್ಥನಿರುವುದೂ ನಿಷೇಧಿಸುವುದೂ ಯಾವಾಗಲೂ ತಪ್ಪೇ ಎನ್ನಲಾಗುವುದಿಲ್ಲ. ಆದರೆ ಎಷ್ಟೋ ಸಲ ಇಷ್ಟೇ ಮಾಡಬೇಕಾಗುವುದು, ಮತ್ತು ಇಷ್ಟೇ ಮಾಡುವುದು ಕರ್ತವ್ಯವಾಗುವುದು.

೬ ಸತ್ಯಾಗ್ರಹಿಯು ಹಿಂಸೆಯಲ್ಲಿ ಅಲ್ಪ-ಸ್ವಲ್ಪ ಸೇರಿಕೊಳ್ಳಬೇಕಾಗುವ ಎಷ್ಟೋ ಸಂದರ್ಭಗಳು ಒದಗುವವು. ಉದಾಹರಣೆಗೆ: ಅಪರಾಧಿಗೆ ಶಿಕ್ಷೆ ವಿಧಿಸುವುದು; ಯುದ್ಧವು ಹೂಡಿದಾಗ ತನ್ನ ದೇಶಕ್ಕೆ ಸಹಾಯ ಮಾಡುವುದು; ತಾನು ಯಾವ ರಾಜ್ಯದಲ್ಲಿ ಇರುವನೊ, ಯಾವ ರಾಜ್ಯದಲ್ಲಿ ಸಂರಕ್ಷಿಸಲ್ಪಡುತ್ತಿರುವನೊ, ಆ ರಾಜ್ಯಕ್ಕೆ ಅಹಿಂಸಾಮಯವಾದ ಮಾರ್ಗಗಳನ್ನು ತೋರಿಸಲು ಅಸಮರ್ಥನಾಗಿ ಕೇವಲ ಹಿಂಸೆಯನ್ನು ನಿಷೇಧಿಸಿದರೆ, ಮತ್ತು ಅಸಹಕಾರವನ್ನು ಮಾಡಿದರೆ, ಅವನು ಹಿಂಸೆಯಲ್ಲಿ ಪಾಲುಗಾರನಾಗಲಿಲ್ಲವೆಂದು ಎಣಿಸಲಾಗದು.

೭ ಆದರೆ ಹೀಗೆ ಹಿಂಸೆಗೆ ಸಹಾಯ ಮಾಡುತ್ತಿರುವಾಗ ಇವನು ತನ್ನಲ್ಲಿರುವ ಸತ್ಯ-ನಿಷ್ಠೆಯನ್ನೂ ಅಹಿಂಸಾವೃತ್ತಿಯನ್ನೂ ತೋರಿಸಬೇಕು, ಅಹಿಂಸಾತ್ಮಕ ಮಾರ್ಗಗಳನ್ನು ಹುಡುಕಲು ಯತ್ನಿಸಬೇಕು.

೩ ಸತ್ಯಾಗ್ರಹದ ಮೂಲ ಸಿದ್ಧಾಂತಗಳು

೧ ಮನುಷ್ಯನು ಎಷ್ಟೇ ಸ್ವಾರ್ಥಿಯಾಗಿದ್ದರೂ, ಸ್ವಾರ್ಥಸಾಧನೆಗಾಗಿ ಮನಬಂದ ಕುಟಿಲ ಉಪಾಯಗಳನ್ನು ಮಾಡಲು ಸಿದ್ಧನಿದ್ದರೂ, ತನ್ನ ಅಂತರಾಳದಲ್ಲಿ ಸತ್ಯವೆಂಬ ಒಂದು ವಸ್ತುವಿದೆ ಎಂಬ ಅರಿವು ಅವನಿಗೆ ಇರುವುದು. ಅವ

ನಿಗೆ ಆದರ ವಿಷಯದಲ್ಲಿ ಆದರವೂ ಭಯವೂ ಇದ್ದೇ ಇರುವುದು. ಮನುಷ್ಯ-ಜಾತಿಯ ಹೃದಯದಲ್ಲಿರುವ ಈ ಗುಪ್ತಶ್ರದ್ಧೆ, ಆದರ, ಮತ್ತು ಭಯವೇ ಸತ್ಯಾಗ್ರಹಶಾಸ್ತ್ರದ ಅಡಿಗಲ್ಲು. ಮಾನವನ ಹೃದಯದಲ್ಲಿದ್ದ 'ಅಂತಃಕರಣದ ಧ್ವನಿ' ಎಂಬುದು ಇದೇ

೨ ಸ್ವಾರ್ಥಕ್ಕೆ ಬಲಿಯಾದ ಮನುಷ್ಯನು ಆದಷ್ಟು ಹೆಚ್ಚು ಹೊತ್ತು ಈ ಅಂತಃಕರಣದ ಧ್ವನಿಯನ್ನು ದುರ್ಲಕ್ಷಿಸಲು, ಇಲ್ಲವೆ ಮೆಟ್ಟಲು ಪ್ರಯತ್ನಿಸು ವನು. ಇಂಥವನನ್ನು ವಿರೋಧಿಸುವವನು ನಿಜವಾದ ಸತ್ಯಾಗ್ರಹಿಯಾಗಿದ್ದರೆ ಆ ಸ್ವಾರ್ಥಿಯು ಈ ಧ್ವನಿಗೆ ಕಿವಿಗೊಡದೆ ಇರಲಾರನು.

೩ ಈ ಧ್ವನಿಯು ಆವನೆದುರು ಅನೇಕ ರೂಪಗಳಲ್ಲಿ ನಿಲ್ಲುವುದು. ಅವ ನಿಗೆ ತನ್ನ ಅನ್ಯಾಯದ ಮನವರಿಕೆಯಾಗಿ ತನ್ನ ಈ ಸ್ವಾರ್ಥಕ್ಕಾಗಿ ಅವನಿಗೆ ಪಶ್ಚಾತ್ತಾಪವಾಗುವುದು. ಇದು ಈ ಧ್ವನಿಯ ಶ್ರೇಷ್ಠ ಪ್ರಕಾರವು. 'ಹೃದಯ ಪಲ್ಲಟ'ವೆಂದು ನಾವು ಯಾವುದಕ್ಕೆ ಎನ್ನುತ್ತೇವೋ ಅದೇ ಇದು.

೪ ಆದರೆ ಈ ಧ್ವನಿ ಇದಕ್ಕೂ ಮೆಲ್ಲಗೆ ಕೂಡ ಕೇಳುವುದು-ಲೋಕ ಲಜ್ಜೆಯ ರೂಪದಲ್ಲಿ, ಇಲ್ಲವೆ ಸರ್ವನಾಶವಾಗುವುದೆಂಬ ಭಯದ ರೂಪದಲ್ಲಿ.

೫ ಸತ್ಯಾಗ್ರಹಿಯನ್ನು ಒಂದೆರಡು ವ್ಯಕ್ತಿಗಳು ವಿರೋಧಿಸದೆ ಒಂದು ಸಮಾಜ, ಒಂದು ಜಾತಿ, ಇಲ್ಲವೆ ಒಂದು ತಂತ್ರವು ವಿರೋಧಿಸುವಾಗ ಈ ತರದ ಅಂತರ್ನಾದವು ಅವರೊಳಗಿನ ಹೆಚ್ಚು ಶುದ್ಧ ಚರಿತ್ರೆಯುಳ್ಳವನಿಗೆ ಮೊದಲು ಕೇಳಿಬರುವುದು. ಮೊದಲು ಅವನ ಹೃದಯಪಲ್ಲಟವಾಗುವುದು. ಬಳಿಕ ಅವನು ಅದನ್ನು ತನ್ನ ಜನರಿಗೆ ಕೇಳಿಸುವನು, ಮತ್ತು ಸತ್ಯದ ಪಕ್ಷವನ್ನು ಹಿಡಿದು ವಿರೋಧಿಸುವನು.

೬ 'ಅಂತಃಕರಣದ ಧ್ವನಿ'ಯನ್ನು ಕೇಳುವಂತೆ ವಿರೋಧಿಯ ಹೃದಯ ವನ್ನು ಎಚ್ಚರಿಸುವುದೇ ಪ್ರತಿಯೊಂದು ಸತ್ಯಾಗ್ರಹದ ಗುರಿ. ವಿರೋಧಿಯ ಹೃದಯವು ಒಮ್ಮೆ ಎಚ್ಚತ್ತಿತೆಂದರೆ, ಮುಂದೆ ಅನ್ಯಾಯದ ಪರಿಮಾರ್ಜನವೆಂದು, ತಾನು ಮಾಡತಕ್ಕದ್ದೆಲ್ಲ ಅವನಿಂದ ಸ್ವಾಭಾವಿಕವಾಗಿಯೇ ಮುಖ್ಯ ಸಾಧ್ಯದ ಫಲಶ್ರುತಿ ಎಂದು ಆಗುವುದು.

೪ ಸತ್ಯಾಗ್ರಹದ ಸಾಮಾನ್ಯ ಲಕ್ಷಣಗಳು

೧ ಅಧರ್ಮವನ್ನು ಸತ್ಯ-ಅಹಿಂಸಾದಿ ಸಾಧನಗಳಿಂದಲೇ ವಿರೋಧಿಸ

ಬೇಕೆಂಬ ನಿಯಮವು ಸಾರ್ವತ್ರಿಕವಾದುದು.

೨ ಅಧರ್ಮವನ್ನು ನಾಶ ಮಾಡುವ ಧರ್ಮಯುಕ್ತ ಉಪಾಯಗಳು ಇದ್ದೇ ಇವೆ ಎಂಬ ಶ್ರದ್ಧೆಯಿಂದಲೂ ಕಳಕಳಿಯಿಂದಲೂ ಯೋಚಿಸುವ ಸತ್ಯಾಗ್ರಹಿಗೆ ಆ ದಾರಿಗಳು ಹೊಳೆದೇ ಹೊಳೆಯುವವು.

೩ ಸತ್ಯಾಗ್ರಹ-ಧರ್ಮವನ್ನು ಆಚರಿಸುವಾಗ ಸತ್ಯಾಗ್ರಹಿಯೇ ಕಷ್ಟ ಸಹಿಸ ಬೇಕಾಗುವುದು. ವಿರೋಧೀ ಪಕ್ಷಕ್ಕೆ ದುಃಖ ಕೊಡಬೇಕೆಂಬ ಉದ್ದೇಶವು ಇದರಲ್ಲಿ ಇರುವುದೇ ಇಲ್ಲ. ಆದುದರಿಂದ ತಾನು ತಪ್ಪು ಮಾಡಿದರೆ ಸತ್ಯಾಗ್ರಹಿಯು ಅವಶ್ಯವಿದ್ದುದಕಿಂತ ಹೆಚ್ಚು ದುಃಖವನ್ನು ಅನುಭವಿಸಬೇಕಾಗ ಬಹುದು.

೪ ಆದರೆ ಸತ್ಯಾಗ್ರಹದಿಂದ ವಿರೋಧಿಯೊಡನೆ ದ್ವೇಷವು ಬೆಳೆಯುವ ಬದಲು ಕಡಮೆಯಾಗುವುದು. ಸತ್ಯಾಗ್ರಹದ ಕೊನೆಯಲ್ಲಿ ಎರಡೂ ಪಕ್ಷ ಗಳು ಒಂದಾಗಿ ಗೆಳೆತನವು ಬೆಳೆಯುವುದು.

೫ ಅಧರ್ಮವನ್ನು ವಿರೋಧಿಸಲು ಸತ್ಯಾಗ್ರಹದ ಯೋಗ್ಯ ಮಾರ್ಗಗಳು ಹೊಳೆಯುವ ವರೆಗೆ ಸತ್ಯಾಗ್ರಹಿಯು ಯಾವ ತರದಿಂದಲೂ ಮುಂದಡಿ ಇಡಲು ಆತುರನಾಗಬಾರದು. ಶಾಂತಿಯಿಂದ ಪರಮಾತ್ಮನನ್ನು ಪ್ರಾರ್ಥಿಸುತ್ತ ಜನರ ಸೇವೆ ಮಾಡುತ್ತಿರಬೇಕು. ಈ ರೀತಿಯಿಂದ ಇರುವಾಗ ಒಂದು ದಿನ ತನಗೆ ಸ್ಪಷ್ಟವಾದ ದಾರಿ ಹೊಳೆಯುವುದೆಂಬ, ಅದನ್ನು ಕಾರ್ಯರಂಗದಲ್ಲಿ ತರುವ ಬಲವೂ ತನಗೆ ದೊರಕುವುದೆಂಬ, ಇಲ್ಲವೆ ಪರಮಾತ್ಮನೇ ತನ್ನ ತರತರದ ಶಕ್ತಿಗಳಿಂದ ಆ ಅಧರ್ಮವನ್ನು ನಷ್ಟಪಡಿಸುವನೆಂಬ ನಂಬಿಗೆ, ಶ್ರದ್ಧೆ ಇರಬೇಕು.

೬ ಸತ್ಯಾಗ್ರಹದ ಶಸ್ತ್ರವು ಸಂಘ-ಬಲವನ್ನು ಅವಲಂಬಿಸಿಲ್ಲ. ಆದರೆ ಸಂಘ-ಬಲದಿಂದ ಇದರ ಶಕ್ತಿ ಬೆಳೆಯಬಹುದು. ನಿಜವಾದ ಸತ್ಯಾಗ್ರಹ ಮತ್ತು ಸುಳ್ಳು ಸತ್ಯಾಗ್ರಹ, ಇವುಗಳೊಳಗಿನ ಭೇದವನ್ನು ಪರೀಕ್ಷಿಸುವ ಬೀಗದ ಕೈ ಇದೊಂದು. ಸತ್ಯಾಗ್ರಹದ ಸೂಚನೆ ಕೊಡುವವನು, ತಾನು ಒಬ್ಬನೇ ಆಗಿ ಅದನ್ನು ಆಚರಿಸಲು ಸಿದ್ಧನಿರದಿದ್ದರೆ ಅವನು ನಿಜವಾದ ಸತ್ಯಾಗ್ರಹಿಯಲ್ಲ; ನಿಜವಾದ ಸತ್ಯಾಗ್ರಹಿ ತನಗೆ ಸ್ಪಷ್ಟವಾಗಿ ತೋರಿದ ಮಾರ್ಗವನ್ನು ಹಿಡಿಯಲು ತಾನು ಒಬ್ಬನೇ ಆದರೂ ಸಿದ್ಧನಿರುವನು.

೭ ತಾನೊಬ್ಬನೇ ಆದರೂ ಸತ್ಯಾಗ್ರಹಕ್ಕೆ ಸಿದ್ಧನಿರುವವನು ಯಾವಾಗಲೂ ಯೋಗ್ಯ ಮಾರ್ಗವನ್ನೇ ಹಿಡಿಯುವನೆಂದು ಹೇಳಲಾಗುವುದಿಲ್ಲ. ತಪ್ಪು

ಮಾಡಿದರೆ ಮೂರನೇ ಸೂತ್ರದಲ್ಲಿ ಹೇಳಿದಂತೆ ಅವನು ದುಃಖವನ್ನು ಅನುಭವಿಸಬೇಕಾಗುವುದು.

೮ ಸತ್ಯಾಗ್ರಹಿಯು ಒಣ ಪ್ರತಿಷ್ಠೆಯ ಕಡೆಗೆ ಗಮನಕೊಡುವುದಿಲ್ಲ. ತನ್ನ ವಿಚಾರ-ಸರಣಿಯಲ್ಲಾಗಲಿ ಯೋಚನೆಯಲ್ಲಾಗಲಿ ತಪ್ಪಿದೆ ಎಂದು ತಿಳಿದ ಕೂಡಲೇ, ತಾನು ಎಷ್ಟೇ ಮುಂದುವರಿದಿದ್ದರೂ ಅಲ್ಲಿಯೇ ನಿಂತುಬಿಡುವನು, ಇಲ್ಲವೆ ಹಿಂದೆ ಸರಿಯುವನು. ತಪ್ಪುಗಳನ್ನು ಒಪ್ಪಿಕೊಳ್ಳಲೂ, ಹಾನಿಯನ್ನು ಸಹಿಸಲೂ, ಅವಕ್ಕಾಗಿ ಪ್ರಾಯಶ್ಚಿತ್ತವನ್ನು ಪಡೆಯಲೂ, ಅವನು ನಾಚುವುದಿಲ್ಲ ಏಕೆಂದರೆ ಸತ್ಯದಿಂದ ಭಿನ್ನವಾದ ಯಾವ ವಿಚಾರವೇ ಆಗಲಿ, ಯಾವ ಕಾರಣವೇ ಆಗಲಿ, ಅದು ಸತ್ಯಕ್ಕಿಂತ ಕಡಮೆ ಮಹತ್ವದ್ದೆಂದು ಅವನು ತಿಳಿಯುವನು. ಇದರಿಂದ ಅವನ ಇಷ್ಟಕಾರ್ಯವು ಕೆಡುವುದರ ಬದಲು ಸುಧಾರಿಸುವುದು ಅವನು ನಿಜವಾಗಿಯೂ ಸರಿದುದು 'ಹಿಂದೆ' ಅಲ್ಲ, 'ಮುಂದೆ' ಎಂದು ಆ ಮೇಲೆ ಗೊತ್ತಾಗುವುದು.

೫ ಸತ್ಯಾಗ್ರಹದ ಸಂದರ್ಭಗಳು

ಕೆಳಗಿನ ನಿಯಮಗಳು ಮಾರ್ಗದರ್ಶಕವೆಂದು ಮಾತ್ರ ತಿಳಿಯಬೇಕು.

೧ ಸತ್ಯಾಗ್ರಹಿ, ತನ್ನ ಮೇಲೆ ಆದ ವ್ಯಕ್ತಿಗತ ಅನ್ಯಾಯಗಳ ವಿರುದ್ಧವಾಗಿ ಕೂಡಲೇ ಸತ್ಯಾಗ್ರಹ ಹೂಡಲಾಗದು. ಅವನು ತನಗಾದ ಅನ್ಯಾಯಗಳನ್ನು ಸಹಿಸಿಕೊಂಡು ವಿರೋಧಿಯನ್ನು ಪ್ರೇಮದಿಂದ ಗೆಲ್ಲಲು ಪ್ರಯತ್ನಿಸುವನು. ತನಗಾಗುತ್ತಿರುವ ಅನ್ಯಾಯಗಳಲ್ಲಿ ಸ್ವಲ್ಪವಾದರೂ ಸಾಮಾಜಿಕ ಅಹಿತವಿದ್ದುದು ಕಂಡುಬಂದರೆ ಮಾತ್ರ ಅವನ್ನು ಸತ್ಯಾಗ್ರಹದ ಮೂಲಕ ವಿರೋಧಿಸುವನು.

೨ ಇದೇ ರೀತಿಯಾಗಿ ವ್ಯಕ್ತಿಯಿಂದ ಆಗುವ ಅನ್ಯಾಯ, ಮತ್ತು ಸಮಾಜ ಇಲ್ಲವೆ ಸತ್ತಾಧಾರಿಗಳಿಂದ ಆಗುವ ಅನ್ಯಾಯ, ಇವುಗಳಲ್ಲಿ ಸತ್ಯಾಗ್ರಹಿಯು ತಾರತಮ್ಯವನ್ನು ಮಾಡಬೇಕಾಗುವುದು. ಬಲಿಷ್ಠ ವ್ಯಕ್ತಿಯು ನಿರ್ಬಲ ವ್ಯಕ್ತಿಯನ್ನು ಪೀಡಿಸುವುದು ಅಪೂರ್ಣವಾದ ಈ ಮಾನವ-ಸಮಾಜದಲ್ಲಿ ಇದ್ದೇ ಇದೆ. ಈ ತರದ ಎಲ್ಲ ಜಗಳಗಳಲ್ಲಿ ಬೀಳುವುದು ಸತ್ಯಾಗ್ರಹಿಗೆ ಅಶಕ್ಯ. ಇಲ್ಲಿ ಅವನು ತನ್ನ ಶಕ್ತಿ ಎಷ್ಟು, ತನ್ನ ಸೀಮೆ ಎಷ್ಟು, ಅನ್ಯಾಯವು ಯಾವ ತರದ್ದು, ಅದರ ತಾತ್ಕಾಲಿಕ ಮಹತ್ವವೆಷ್ಟು, ನ್ಯಾಯವನ್ನು ಸಂಪಾದಿಸುವ

ಸಾಮಾನ್ಯವಾದ ಮತ್ತು ಕಟ್ಟಳೆಬದ್ಧ ಮಾರ್ಗಗಳು ಯಾವುವು, ಮುಂತಾದ ವಿಷಯಗಳನ್ನು ಕುರಿತು ಯೋಚಿಸಬೇಕಾಗುವುದು. ಎಲ್ಲಿ ಸ್ಪಷ್ಟವಾಗಿ ಅನ್ಯಾಯವಾಗುವುದೆಂದು ಎನಿಸುವುದೋ, ಅಲ್ಲಿ ಅವನು ತನ್ನ ಪ್ರಾಣವನ್ನು ಈಡಾಡಿಯಾದರೂ ಅದನ್ನು ತಡೆಯಲು ಯತ್ನಿಸುವನು.

೩. ಸಾಮಾಜಿಕ ಹಾಗೂ ರಾಜಕೀಯ ಅನ್ಯಾಯಗಳಲ್ಲಿಯೂ ತಾರತಮ್ಯವನ್ನು ಮಾಡಬೇಕಾಗುವುದು. ಒಂದು ಅಧರ್ಮವು, ಅನ್ಯಾಯವು ಇಂತಹದಿದೆ: ಅದರಲ್ಲಿ ಅಧರ್ಮದ ಅಥವಾ ಅನ್ಯಾಯದ ಕಟ್ಟಳೆ ಇರುವುದಿಲ್ಲ. ಆದರೆ ಅದರ ಬಳಿಕೆ ಅಧರ್ಮದಿಂದ, ಇಲ್ಲವೆ ಅನ್ಯಾಯದಿಂದ ಆಗುವುದು; ಅದನ್ನು ಬಳಿಕೆಗೆ ತರುವವನು ತನ್ನ ಅನ್ಯಾಯವನ್ನು ಕಟ್ಟಳೆಯ ಹಿಂದೆ ಬಚ್ಚಿಡುವನು. ಇಲ್ಲವೆ ಕ್ಯಾದೆಯನ್ನೇ ತನ್ನ ಶಸ್ತ್ರವನ್ನಾಗಿ ಮಾಡಿಕೊಳ್ಳುವನು. ಅವನು ಇದರಲ್ಲಿ ತನ್ನ ನ್ಯಾಯದ ಬಗ್ಗೆ, ಧರ್ಮದ ಬಗ್ಗೆ, ದಂಭವನ್ನು ತಾಳಬೇಕಾಗುವುದು. ಮಾನವ-ಸಮಾಜದಲ್ಲಿ ಇದೂ ಜರಗತಕ್ಕದ್ದೇ. ಮಾನವ-ಸಮಾಜದಲ್ಲಿ ಸದ್ಗುಣಗಳು, ಸಮಭಾವನೆ ಬೆಳೆಯುತ್ತ ಹೋದಂತೆ ಈ ತರದ ಸ್ಥಿತಿ ಸುಧಾರಿಸುತ್ತ ಹೋಗುವುದು. ಇಲ್ಲಿಯೂ ತಾನು ಮಾಡುವುದು ನ್ಯಾಯ, ಧರ್ಮ, ಎಂದು ಹೇಳಿ ಧರ್ಮದ, ನ್ಯಾಯದ ಮುಸುಕು ಹಾಕಿಕೊಂಡಿದ್ದರೆ, ಇದು ದಂಭಾಚಾರಿಯು ಸತ್ಯಕ್ಕೆ ಅರ್ಪಿಸಿದ ಶ್ರದ್ಧಾಂಜಲಿ ಎಂದು ಬಗೆದು ಸಮಾಧಾನಪಡಬೇಕಾಗುವುದು. ಈ ತರದ ದಂಭಾಚಾರವು ಎಲ್ಲ ಕಡೆಗೂ ಕಂಡುಬರಲಾರಂಭಿಸಿದರೆ ಸತ್ಯಾಗ್ರಹವನ್ನು ಹೂಡುವ ಪ್ರಸಂಗವು ಬರುವುದು. ಆಗ ಅದರ ಮಾರ್ಗಗಳೂ ಹೊಳೆಯುವವು. ಉದಾಹರಣೆಗೆ: ಎಲ್ಲ ಕಡೆಯಲ್ಲೂ ದಬ್ಬಾಳಿಕೆ ನಡೆಯುತ್ತಿರುವಾಗ ಸತ್ಯಾಗ್ರಹಿಯು ತನ್ನ ರಕ್ಷಣೆ ಮಾಡಿಕೊಳ್ಳದೆ ಶಿಕ್ಷೆಯನ್ನು ಸಹಿಸಿಕೊಳ್ಳಬೇಕಾಗುವುದು. ಇದು ಸತ್ಯಾಗ್ರಹದ ಸ್ವತಂತ್ರವಾದ ಒಂದು ರೀತಿಯಾಗಬಹುದು.

೪ 'ಬೇಕಾದುದನ್ನು ಮಾಡಿರಿ, ನಾವು ಮಾಡಿಯೆ ಮಾಡುವೆವು' ಎಂಬ ನಿರ್ಲಜ್ಜ ಭಾವನೆಯಿಂದ ನಡೆಯುವ ಅನ್ಯಾಯವನ್ನೂ ನ್ಯಾಯದ ಹೆಸರಿನಿಂದ ನಡೆಯುತ್ತಿರುವ ಅಧರ್ಮ ಅನ್ಯಾಯಗಳನ್ನೂ ಸತ್ಯಾಗ್ರಹ-ಶಸ್ತ್ರದಿಂದ ವಿರೋಧಿಸುವುದು ಕರ್ತವ್ಯಕರ್ಮ. ಏಕೆಂದರೆ ಇಂಥ ಅನ್ಯಾಯವನ್ನು, ಅಧರ್ಮವನ್ನು ಸಹಿಸುವವನ ಸತ್ವಹಾನಿಯಾಗುತ್ತದೆ.

೬ ಸತ್ಯಾಗ್ರಹದ ಪ್ರಕಾರಗಳು

೧ ಸತ್ಯಾಗ್ರಹವು ಎಷ್ಟು ರೀತಿಯಿಂದ ಆಗಬಲ್ಲುದೆಂಬುದನ್ನು ಸಮಗ್ರವಾಗಿ ಹೇಳಲಾಗುವುದಿಲ್ಲ. ಅಧರ್ಮದ ಸ್ವರೂಪ, ಅದರ ತೀವ್ರತೆ, ಅದನ್ನು ಆಚರಿಸತಕ್ಕ ವ್ಯಕ್ತಿಯ ಮತ್ತು ಸಮಾಜದ ವಿಶೇಷತೆಗಳು, ಸಮಾಜದ ಮತ್ತು ತನ್ನ ನಡುವೆ ಇರುವ ಸಂಬಂಧ, ತನ್ನ ಹಾಗೂ ತನ್ನ ಪಕ್ಷದವರ ಜೀವನದೊಳಗಿಂದ ಅಧರ್ಮವನ್ನು ತಳ್ಳಿಹಾಕುವುದರಲ್ಲಿ ದೊರೆತ ಸಿದ್ಧಿ, ಈ ಎಲ್ಲ ವಿಷಯಗಳನ್ನು ಸತ್ಯಾಗ್ರಹದ ಪದ್ಧತಿ, ಪ್ರಕಾರ, ಮತ್ತು ಪ್ರಮಾಣವು ಅವಲಂಬಿಸಿರುವುದು.

೨ ಒಂದು ಕುಟುಂಬದ ಒಂದು ವ್ಯಕ್ತಿಯು, ಅಧರ್ಮದಿಂದ ನಡೆಯುವಂಥ ಆದೇ ಕುಟುಂಬದ ಇನ್ನೊಬ್ಬ ವ್ಯಕ್ತಿಯ ವಿರುದ್ಧ ಯಾವ ಸತ್ಯಾಗ್ರಹದ ಪದ್ಧತಿಯನ್ನು ಅನುಸರಿಸಬಲ್ಲನೋ, ಹೆಚ್ಚು-ಕಡಿಮೆಯಾಗಿ ಅದೇ ಪದ್ಧತಿಯನ್ನು ಸಮಾಜದಲ್ಲಿಯೂ ಅನುಸರಿಸುವುದು ಸಾಧ್ಯವೆಂದು ಸಾಮಾನ್ಯವಾಗಿ ಹೇಳಬಹುದು.

೩ ಈ ರೀತಿ, ತಿಳಿಹೇಳುವಿಕೆಯಿಂದ ಮೊದಲುಮಾಡಿ ಉಪವಾಸ, ಅಸಹಕಾರ, ಸವಿನಯಭಂಗ, ಕುಟುಂಬ-ಸಮಾಜ-ರಾಜ್ಯ ಮುಂತಾದುವುಗಳ ತ್ಯಾಗ, ತನ್ನ ಜನ್ಮಸಿದ್ಧವಾದ ಅಧಿಕಾರಗಳನ್ನು ಶಾಂತ ರೀತಿಯಿಂದ ನಡೆಸುವುದು, ಈ ಎಲ್ಲ ಕಾರ್ಯಗಳನ್ನು ಮಾಡುತ್ತಿರುವಾಗ ಬಂದ ಸಂಕಟಗಳನ್ನು ಸಹಿಸುವುದು, ಹೀಗೆ ಬೇರೆ ಬೇರೆ ಎಷ್ಟೋ ಪ್ರಕಾರಗಳು ಇರುವವು.

೪ ಇವುಗಳೊಳಗಿಂದ ವಿವೇಕದಿಂದಲೂ ತಾರತಮ್ಯಬುದ್ಧಿಯಿಂದಲೂ ಯೋಗ್ಯ ಉಪಾಯಗಳನ್ನು ಆಯ್ದು, ಯೋಗ್ಯವಾದ ಪ್ರಮಾಣದಲ್ಲಿ ಆಚರಿಸಬೇಕು. ಇದೆಲ್ಲವೂ ಅನುಭವದಿಂದ ತಿಳಿಯುವುದು. ಆದರೆ ಕೆಲವು ಉಪಯುಕ್ತ ಸೂಚನೆಗಳನ್ನು ಮುಂದಿನ ಪ್ರಕರಣಗಳಲ್ಲಿ ಕೊಡಲಾಗಿದೆ.

೫ ಸತ್ಯಾಗ್ರಹವು ಆತ್ಮಶಕ್ತಿಯ ಇನ್ನೂ ಅಪೂರ್ಣವಾಗಿ ಪರಿಶೋಧಿಸಲ್ಪಟ್ಟ ಅಸ್ತ್ರವೆಂದು ನಾವು ನೆನಪಿನಲ್ಲಿಡಬೇಕು. ಕಾಯಾ-ವಾಚಾ-ಮನಸಾ ಸತ್ಯವನ್ನೂ ಅಹಿಂಸೆಯನ್ನೂ ಆಚರಿಸುತ್ತ ಅದರ ಶಕ್ತಿಯನ್ನು ಹುಡುಕಲು ಹೆಣಗುವ ತಪಸ್ವಿಗೆ ಅದರ ಅನೇಕ ಪ್ರಕಾರಗಳು ಗೊತ್ತಾಗುವವು; ಅದರ ಅಖಂಡ, ಅನಂತ ಶಕ್ತಿಯ ಅರಿವು ಉಂಟಾಗುವುದು.

೬ ಸತ್ಯಾಗ್ರಹದಲ್ಲಿ ನಿಜವಾಗಿ ಯುದ್ಧವನ್ನು ಕೂಡ ನಿಲ್ಲಿಸುವ ಶಕ್ತಿ ಇರತಕ್ಕದ್ದು. ಈ ಶಕ್ತಿಯ ಬಾಹ್ಯಸ್ವರೂಪವು ಹೇಗಿರಬೇಕೆನ್ನುವುದನ್ನು ಈಗ ಹೇಳಲಾಗುವುದಿಲ್ಲ. ಇದರ ಶಕ್ತಿಯನ್ನು ಶೋಧಿಸಲು ನಾವು ಹೆಚ್ಚು ಶ್ರದ್ಧೆಯಿಂದ ಹೆಣಗಬೇಕೆಂಬುದೇ ಇದರ ಅರ್ಥ.

೭ ತಿಳಿಸಿ ಹೇಳುವಿಕೆ

೧ ವಿರೋಧಿಗೆ ತಿಳಿಹೇಳಿ ಸಮಾಧಾನದಿಂದ ಕೆಲಸ ಮಾಡಲೆತ್ನಿಸುವುದು ಸತ್ಯಾಗ್ರಹಿಯ ಮೊದಲನೆಯ ಲಕ್ಷಣ. ಇದು ಸತ್ಯಾಗ್ರಹದ ಮೊದಲ ಮೆಟ್ಟಿಲೂ ಅಹುದು.

೨ ಸತ್ಯಾಗ್ರಹಿಯು ವಿರೋಧಿಗೆ ಸರ್ವವಿಧದಿಂದಲೂ ತಿಳಿಸಿಹೇಳುವನು. ತಿಳಿಹೇಳುವ ಯಾವ ರೀತಿಯನ್ನೂ ಅವನು ಉಳಿಸನು. ತಿಳಿಹೇಳುವಾಗ ಅವನು ಧೈರ್ಯವನ್ನೂ ತಾಳ್ಮೆಯನ್ನೂ ಅತ್ಯಂತ ಉದಾರತನವನ್ನೂ ತೋರಿಸುವನು. ಇದಕ್ಕಾಗಿ ಮಿತ್ರರು ಮಧ್ಯಸ್ಥಿಕೆಗೆ ಬಂದರೆ ತಿರಸ್ಕರಿಸಲಾರನು. ಸಿದ್ಧಾಂತದ ಭಂಗವಾಗದಂತಹ ಯಾವುದೇ ಪ್ರಕಾರದ ಒಡಂಬಡಿಕೆಗೂ ಅವನು ಸಿದ್ಧನಿರುವನು.

೩ ತಿಳಿಹೇಳುವ ಪ್ರಯತ್ನವು ನಿಷ್ಫಲವಾದರೆ, ವಿಶೇಷ ಪ್ರಕಾರದ ಮಾರ್ಗವನ್ನು ಹಿಡಿಯುವ ಸಂದರ್ಭವು ಬಂದರೆ, ಸತ್ಯಾಗ್ರಹಿಯು ತಿರುಗಿ ವಿರೋಧಿಗೆ ಒಂದು ಕೊನೆಯ ಸಂಧಿಯನ್ನು ಕೊಡದೆ ಮುಂದಡಿಯನ್ನಿಡಬಾರದು.

೪ ಮುಂದಡಿಯನ್ನಿಟ್ಟ ಮೇಲೂ ಅವನು ಯಾವಾಗಲೂ ಒಡಂಬಡಿಕೆಗೆ ಸಿದ್ಧನಿರುವನು. ತನಗೆ ಪೀಡೆಯಾಗುವ ಭೀತಿಯಿದ್ದರೂ ಅವನು ಹೆದರದೆ ತನ್ನ ಸಂಧಿ-ಪ್ರೀತಿಯನ್ನೂ, ಕಾರ್ಯವನ್ನು ಪುನಃ ಮೊದಲಿನಿಂದ ಪ್ರಾರಂಭಿಸುವ ಸಿದ್ಧತೆ ತನ್ನಲ್ಲಿದೆ ಎನ್ನುವುದನ್ನೂ ತೋರಿಸುವನು. ಕಾರಣವಿಷ್ಟೆ: ಸತ್ಯಾಗ್ರಹಿ ಅಸಹಕಾರಿಯಾಗಬಹುದು, ವಿರೋಧಿಯಾಗಬಹುದು, ಕಡುತರವಾದ ಕಾಳಗವನ್ನು ಹೂಡಬಹುದು. ಆದರೆ ತನ್ನ ರೋಮ ರೋಮದಲ್ಲಿದ್ದ ಸಹಕಾರದ, ಗೆಳೆತನದ, ಮತ್ತು ಸಂಧಿಯ ಇಚ್ಛೆಯನ್ನು ಬಿಟ್ಟುಬಿಡಲಿಕ್ಕಿಲ್ಲ.

೫ ವಿರೋಧಿಯ ಅಂತಃಕರಣದಲ್ಲಿ ಹೃದಯ-ಪಲ್ಲಟದ ಧ್ವನಿಯು ಏಳುವ ವರೆಗೆ, ಒಂದು ಅನ್ಯಾಯವು ದೂರವಾದ ಮಾತ್ರಕ್ಕೆ ವಿರೋಧಿಯ ಹೃದಯವು ಸ್ವಚ್ಛವಾಯಿತೆಂದೂ ಸತ್ಯಾಗ್ರಹದ ಕಾರ್ಯ ಕೊನೆಗಂಡಿತೆಂದೂ

ಹೇಳಲಾಗುವುದಿಲ್ಲ.

೬ ಆದ್ದರಿಂದ ಹೃದಯಪಲ್ಲಟವಾಗುವ ಮೊದಲಿನ ಸಂಧಿಗಳಲ್ಲಿ ಎಷ್ಟೋ ವಿಷಯಗಳನ್ನು ಬಿಟ್ಟುಬಿಡಬೇಕಾಗುವುದು, ಎಷ್ಟೋ ಅನ್ಯಾಯಗಳನ್ನು ನುಂಗಿಕೊಳ್ಳಬೇಕಾಗುವುದು. ಹೀಗೆ ಮಾಡುವಾಗ ಸತ್ಯಾಗ್ರಹಿಯು ಮೂಲ ಮತ್ತು ಮುಖ್ಯವಾದ ಅನ್ಯಾಯವನ್ನು ದುರ್ಲಕ್ಷಿಸದೆ ಅದನ್ನು ಹೋಗಲಾಡಿಸುವುದಕ್ಕಾಗಿ ಮಾಡುವ ಪ್ರಯತ್ನದಲ್ಲಿ ಕೆಲವೊಂದು ಸಣ್ಣ ಪುಟ್ಟ ಅನ್ಯಾಯಗಳಾದರೆ ಅತ್ತ ಅಷ್ಟೊಂದು ಗಮನಕೊಡದೆ ತನ್ನ ಉದಾರ ಬುದ್ಧಿಯನ್ನು ತೋರಿಸುವನು.

೮ ಉಪವಾಸ

೧ ಉಪವಾಸವು ಸತ್ಯಾಗ್ರಹದ ಒಂದು ರೀತಿ ಎಂದು ತಿಳಿದು ಜನರು ಅದನ್ನು ಆಚರಿಸುವಾಗ ಅತಿ ಅವಸರವನ್ನೂ ತಪ್ಪನ್ನೂ ಮಾಡುವುದುಂಟು.

೨ ಉಪವಾಸದ ಅಸ್ತ್ರವನ್ನು ವ್ಯಕ್ತಿಯ ವಿರುದ್ಧ ಹೂಡಿದ ಸತ್ಯಾಗ್ರಹದಲ್ಲಿ ಎಷ್ಟು ಉಪಯೋಗಿಸಬಹುದೊ ಅಷ್ಟನ್ನು ಸಮಾಜದ ವಿರುದ್ಧವಾಗಲಿ ಒಂದು ತಂತ್ರದ ವಿರುದ್ಧವಾಗಲಿ ಉಪಯೋಗಿಸಲಾಗದು.

೩ ವ್ಯಕ್ತಿಯ ವಿರುದ್ಧವಾಗಿ ಕೂಡ ಉಪವಾಸ-ಸತ್ಯಾಗ್ರಹವನ್ನು ಅನಿರ್ವಾಹವಿದ್ದಾಗ ಅಪರೂಪವಾಗಿ ಹೂಡಬೇಕು. ಉಪವಾಸದಿಂದ ವಿರೋಧಿಯ ನ್ಯಾಯವೃತ್ತಿಯಾಗಲಿ ಧರ್ಮವೃತ್ತಿಯಾಗಲಿ ಜಾಗ್ರತವಾಗಲಿಕ್ಕಿಲ್ಲ; ಆದರೆ ಅವನ ಕೃಪಾವೃತ್ತಿ ಜಾಗ್ರತವಾಗಬಹುದು. ಈ ಪೀಡೆ ತೊಲಗಿದರೆ ಸಾಕೆಂದು ಸತ್ಯಾಗ್ರಹಿಯ 'ಹಟ'ವನ್ನು ವಿರೋಧಿಯು ಪೂರ್ತಿಗೊಳಿಸಬಹುದು. ಸತ್ಯಾಗ್ರಹವು ಇಷ್ಟರಿಂದಲೇ ಸಫಲವಾಯಿತೆಂದು ತಿಳಿಯಲಾಗದು.

೪ ಯಾವುದಾದರೂ ವ್ಯಕ್ತಿಯ ವಿರುದ್ಧ ಉಪವಾಸ-ಸತ್ಯಾಗ್ರಹವನ್ನು ಹೂಡಬೇಕಾದರೆ ಮೊದಲು ಆ ವ್ಯಕ್ತಿಯ ಕೂಡ ಗೆಳೆತನದ ಇಲ್ಲವೆ ಒಂದಿಲ್ಲೊಂದು ರೀತಿಯ ನಿಕಟಸಂಬಂಧವಿರಬೇಕು. ಯಾವ ತರದ ಸಂಬಂಧವೂ ಇರದಿದ್ದರೆ ಉಪವಾಸಮಾರ್ಗವನ್ನು ಅವಲಂಬಿಸುವುದು ಒಳಿತಲ್ಲ.

೫ ಉಪವಾಸ-ಸತ್ಯಾಗ್ರಹವನ್ನು ಕುಟುಂಬದ ಜನರು, ತನ್ನ ಮಿತ್ರರು, ಗುರುಗಳು, ಶಿಷ್ಯರು ಮುಂತಾದ ಪರಿಚಿತರ ವಿರುದ್ಧವಾಗಿಯೆ ಹೂಡಬಹುದು. ಆದರಂತೆ ಸಮಾಜದ ಸೇವೆ ಮಾಡಿ ಸಮಾಜದ ಆದರಕ್ಕೆ ಪಾತ್ರನಾದವನೇ,

ಆ ಸಮಾಜದೊಳಗಿನ ಅನ್ಯಾಯ ಅತ್ಯಾಚಾರಗಳನ್ನು ದೂರಮಾಡುವುದಕ್ಕಾಗಿಯೂ ಕೈಕೊಳ್ಳಬಹುದು.

೬ ವ್ಯಕ್ತಿಯ ವಿರುದ್ಧ ಹೂಡಿದ ಸತ್ಯಾಗ್ರಹದಲ್ಲಿ ತನಗೆ ಆಗುವ ಅನ್ಯಾಯಗಳ ಬಗ್ಗೆ ಉಪವಾಸವನ್ನು ಎಂದಿಗೂ ಮಾಡಬಾರದು. ತನ್ನ ಗೆಳೆಯನಾದ ಒಬ್ಬ ವ್ಯಕ್ತಿ ಎರಡನೆಯವರೊಡನೆ, ಇಲ್ಲವೆ ತನ್ನೊಡನೆ, ಕೆಟ್ಟ ರೀತಿಯಿಂದ ವರ್ತಿಸಿದರೆ ಅವನನ್ನು ಹಾದಿಗೆ ತರುವ ಎಲ್ಲ ಉಪಾಯಗಳನ್ನು ಕೈಕೊಂಡರೂ ಅವನ ನಡತೆಯಲ್ಲಿ ಸುಧಾರಣೆಯಾಗದಿದ್ದರೆ ಉಪವಾಸವನ್ನು ಮಾಡಬಹುದು.

೭ ತಂತ್ರದ ವಿರುದ್ಧ ಹೂಡುವ ಸತ್ಯಾಗ್ರಹದಲ್ಲಿ ಉಪವಾಸವು ಕೊನೆಯ ಅಸ್ತ್ರ. ಸತ್ಯಾಗ್ರಹಿಯು ಪರಾಧೀನ-ಸ್ಥಿತಿಯಲ್ಲಿದ್ದಾಗ, ಸತ್ಯಾಗ್ರಹದ ಅನ್ಯ ಅಸ್ತ್ರಗಳನ್ನು ಉಪಯೋಗಿಸುವುದು ಅಶಕ್ಯವಾದಾಗ, ತಂತ್ರದಿಂದ ಆಗುವ ಅಧರ್ಮವನ್ನೂ ಅನ್ಯಾಯವನ್ನೂ ಸಹಿಸುತ್ತ ಜೀವಿಸುವುದರಿಂದ ತನ್ನ ಸತ್ವಹಾನಿ ಆಗುವುದೆಂದು ಎನಿಸಿದಾಗ, ಪ್ರಾಣಬಿಡುವ ಸಿದ್ಧತೆಯಿಂದಲೇ ಉಪವಾಸವನ್ನು ಪ್ರಾರಂಭಿಸಬೇಕು.

೮ ಇಂತಹ ಸ್ಥಿತಿಯು ಬಂದಿದೆಯೆಂದು ನಿರ್ಣಯಿಸುವಾಗ ಸತ್ಯಾಗ್ರಹಿ ತನ್ನ ಭಾವನೆಗಳನ್ನು ಎಂದಿಗೂ ಪ್ರಕ್ಷುಬ್ಧಗೊಳಿಸುವುದಿಲ್ಲ. ಆದರೆ ತಂತ್ರವನ್ನು ನಡೆಸುವ ವ್ಯವಸ್ಥಾಪಕರ ತೊಂದರೆಗಳ ಬಗ್ಗೆ, ಮತ್ತು ಅವರಲ್ಲಿದ್ದ ಹಳೇ ರೂಢಿಗಳ ಬಲಾಬಲಗಳ ಬಗ್ಗೆ ಯೋಗ್ಯ ವಿಚಾರವನ್ನು ಮಾಡುವನು; ಅವುಗಳಿಗಾಗಿ ಬಿಡಬೇಕಾದ ಕೆಲವೊಂದು ಹಕ್ಕುಗಳನ್ನು ಬಿಡಲು ಸಿದ್ಧನಿರುವನು. ಇದಲ್ಲದೆ ಅನಿವಾರ್ಯ ಅನ್ಯಾಯ, ಆಕಸ್ಮಿಕ ಅನ್ಯಾಯ, ಮತ್ತು ತಿಳಿದೂ ತಿಳಿದೂ ಮಾಡಿದ ಅನ್ಯಾಯ, ಅಥವಾ ಅನ್ಯಾಯದ ನಿಯಮಗಳು, ಇವೆಲ್ಲ ಭಿನ್ನ ಭಿನ್ನವೆಂದು ತಿಳಿಯುವನು. ಇವುಗಳಲ್ಲಿ ವಿವೇಕದಿಂದ ವರ್ತಿಸುವನು. ಬಳಿಕ ತನಗಾದ ಅನ್ಯಾಯಗಳನ್ನು ಕಲ್ಲು-ಹೃದಯದಿಂದ ಸಹಿಸಿಕೊಳ್ಳುವನು. ಏಕೆಂದರೆ ಮನುಷ್ಯನು ತಿಳಿದೂ ತಿಳಿದೂ ಅನ್ಯಾಯವನ್ನು ಸಹಿಸಿಕೊಂಡರೆ ಅವನ ಸತ್ವಹಾನಿಯಾಗುವುದಿಲ್ಲ. ಆದರೆ ಅನ್ಯಾಯವನ್ನು ದೈನ್ಯದಿಂದ, ಭಯದಿಂದ, ಅಥವಾ ಜೀವದ ಮೋಹದಿಂದ ಸಹಿಸಿಕೊಂಡರೆ ಸತ್ವಹಾನಿಯಾಗುವುದು.

೯ ಇತ್ತ ಉಪವಾಸರೂಪಿ ಸತ್ಯಾಗ್ರಹ ಹೂಡಿ ಅತ್ತ ವಿರೋಧಿ ಪಕ್ಷದ

ಪರಿಷ್ಕೃತ ಮುಖಾಂತರ ಅನ್ಯಾಯವು ದೂರವಾಗುವಂತೆ ಒತ್ತಾಯ ತರಲು ಯತ್ನಿಸುವುದು ಯೋಗ್ಯವಲ್ಲ. ಇಂಥ ಉಪವಾಸಕ್ಕೆ ಸತ್ಯಾಗ್ರಹವೆಂಬ ಹೆಸರು ಶೋಭಿಸದು.

೧೦ ತಾನಾಗಲಿ ಮಿತ್ರರಾಗಲಿ ಸಂಗಡಿಗರಾಗಲಿ ಮಾಡಿದ ದೋಷಗಳಿಗಾಗಿ ತಪ್ಪುಗಳಿಗಾಗಿ ಪ್ರಾಯಶ್ಚಿತ್ತವೆಂದೂ, ಗೆಳೆಯರನ್ನು ಸಂಗಡಿಗರನ್ನು ಸನ್ಮಾರ್ಗಕ್ಕೆ ಹಚ್ಚುವುದಕ್ಕೆಂದೂ, ಅವರು ಶುದ್ಧ-ದೃಢ ಪ್ರತಿಜ್ಞೆಗೆ ಅಂಟಿಕೊಂಡಿರುವಂತೆ ಮಾಡುವುದಕ್ಕೆಂದೂ ಕೈಕೊಂಡ ಉಪವಾಸ, ಈ ಪ್ರಕರಣದಲ್ಲಿ ಸತ್ಯಾಗ್ರಹವೆನಿಸುವ ಬದಲು ತಪಶ್ಚರ್ಯವೆನಿಸುವುದು. ಜೀವನದಲ್ಲಿ ವಿವೇಕಪೂರ್ಣವಾಗಿ ಮಾಡಿದ ಇಂತಹ ತಪಶ್ಚರ್ಯಕ್ಕೂ ಸ್ಥಾನವುಂಟು. ಆದರೆ ಇಲ್ಲಿ ಇದರ ಚರ್ಚೆ ಅಪ್ರಸ್ತುತ.

೯ ಅಸಹಕಾರ

೧ ಎರಡು ಪಕ್ಷಗಳು ಮೊದಲಿನಿಂದಲೂ ಸಹಕಾರದಿಂದ ನಡೆಯುತ್ತ ಬಂದಿರುವಲ್ಲಿ, ಒಂದು ಪಕ್ಷದ ವ್ಯವಹಾರವು ಎರಡನೆ ಪಕ್ಷದ ಸಹಕಾರದ ಹೊರತು ನಡೆಯದೆ ಇರುವ ಪರಿಸ್ಥಿತಿ ಇದ್ದಲ್ಲಿ ಅಸಹಕಾರ-ಸತ್ಯಾಗ್ರಹವನ್ನು ಹೂಡಬಹುದು.

೨ ತನ್ನ ಸಹಾಯವಿಲ್ಲದೆ ಎರಡನೆ ಪಕ್ಷದ ಕಾರ್ಯವು ನಡೆಯುತ್ತಿದ್ದಲ್ಲಿ ಅಸಹಕಾರಿಯು ಎರಡನೆ ಪಕ್ಷವನ್ನು ಬಿಡಬಹುದು. ಮತ್ತು ತನ್ಮೂಲಕ ಆಗುವ ಸ್ವಂತ ಆತ್ಮ-ಶುದ್ಧಿಯು ಕೂಡ ಅಸಹಕಾರವೆನಿಸುವುದು. ಮತ್ತು ಇದಕ್ಕೂ ಸತ್ಯಾಗ್ರಹದಲ್ಲಿ ಸ್ಥಾನವುಂಟು. ಉದಾಹರಣೆಗೆ: ಅಧರ್ಮಿಯಾದ ಒಬ್ಬ ಸೆಟ್ಟಿಗೆ ಅನೇಕ ಆಳುಗಳು ದೊರೆಯಬಹುದು. ಆದರೆ ಅವನ ಅಧರ್ಮದಲ್ಲಿ ಪಾಲುಗೊಳ್ಳಲು ಇಷ್ಟಪಡದ ಆಳು ತನ್ನ ರಾಜೀನಾಮೆಯನ್ನು ಕೊಡುವನು; ಎರಡನೆಯವರು ಹೆಂಡ ಮಾರಲು ಸಿದ್ಧರಾಗಿದ್ದರೂ ಒಬ್ಬ ಹೆಂಡದವನು ಈ ಉದ್ಯೋಗವನ್ನು ಬಿಟ್ಟುಬಿಡುವನು. ಇಂಥ ಪ್ರಸಂಗಗಳು ಈ ಸೂತ್ರದಲ್ಲಿ ಹೇಳಿದಂತೆ ಅಸಹಕಾರವೆನಿಸುವವು. ಹೀಗೆ ಅಧರ್ಮದಿಂದ ನಡೆದಿರುವ ಕುಟುಂಬಿಗಳನ್ನೂ ಮಿತ್ರರನ್ನೂ ಇನ್ನುಳಿದವರನ್ನೂ ಬಿಟ್ಟುಹೋಗುವುದು ಕೂಡ ಸತ್ಯಾಗ್ರಹವೆನಿಸುವುದು.

೩ ತನ್ನ ಸಹಾಯದ ಹೊರತು ಎರಡನೆ ಪಕ್ಷದ ವ್ಯವಹಾರವು ಅಶಕ್ಯ

ವಿರುವ ಕಡೆಯಲ್ಲಿ ಅಸಹಕಾರವು ಹೆಚ್ಚು ಉಗ್ರವಾದ ಸತ್ಯಾಗ್ರಹವಾಗುವುದು. ಆದ್ದರಿಂದ ಇದನ್ನು ಆರಂಭಿಸುವ ಮೊದಲು ಸತ್ಯಾಗ್ರಹಿಗೆ ತನ್ನ ಮಾರ್ಗವು ಧರ್ಮಯುಕ್ತವಾದದ್ದೆಂದು ಸ್ಪಷ್ಟವಾಗಿ ತೋರಬೇಕು. ಇಲ್ಲಿ ಸತ್ಯಾಗ್ರಹಿಯು, ತನ್ನ ಹೊರತು ಎರಡನೆಯ ಪಕ್ಷದ ವ್ಯವಹಾರವು ನಡೆಯುವುದಿಲ್ಲವೆಂಬುದನ್ನು ಎಂದೂ ಮರೆಯುವುದಿಲ್ಲ. ವಸ್ತುಸ್ಥಿತಿಯು ಹೀಗಿರುವುದರಲ್ಲಿಯೆ ಅವನ ಬಲವಿದೆ. ಇದರಿಂದ ವಿರೋಧಿ ಪಕ್ಷವನ್ನು ಪೀಡಿಸಲು ಆಸ್ಪದ ಸಿಗುವ ಸಂದರ್ಭವೂ ಇದೆ.

೪ ಎರಡನೆ ಪಕ್ಷವು ತನ್ನ ಸಹಕಾರದ ದುರುಪಯೋಗವನ್ನು ಮಾಡಿಕೊಳ್ಳುತ್ತಿರುವುದೆಂದೂ, ಅದರಿಂದ ನಿರ್ದೋಷಿಗಳಿಗೆ ದುಃಖವಾಗುತ್ತಿರುವುದೆಂದೂ ಗೊತ್ತಾದಾಗ, ಇಂತಹ ಅಸಹಕಾರವನ್ನು ಹೂಡುವುದು ಯೋಗ್ಯವೂ ಆಹುದು ಅವಶ್ಯಕವೂ ಆಹುದು.

೫ ಈ ಅಸಹಕಾರದಲ್ಲಿ ವಿರೋಧಿಯ ಯಾವ ಕಾರ್ಯಗಳು ತನ್ನ ಪ್ರತ್ಯಕ್ಷ ಸಹಾಯದ ಹೊರತು ನಡೆಯುವುದಿಲ್ಲವೊ ಅಂತಹ ಎಲ್ಲ ಕಾರ್ಯಗಳಿಗೂ ನೆರವಾಗುವುದನ್ನು ನಿಲ್ಲಿಸಿಬಿಡಬೇಕಾಗುವುದು. ಪ್ರತ್ಯಕ್ಷವಲ್ಲದಿದ್ದರೂ ಅಪ್ರತ್ಯಕ್ಷ ಸಹಾಯದಿಂದ ವಿರೋಧಿಯ ಕಾರ್ಯವು ಸರಿಯಾಗಿ ನಡೆಯುತ್ತಿದ್ದರೆ, ಈ ಅಪ್ರತ್ಯಕ್ಷ ಸಹಾಯದಿಂದ ಅವನ ಪ್ರತಿಷ್ಠೆ ಬೆಳೆಯಲು ಅನುಕೂಲವಾಗುತ್ತಿದ್ದರೆ ಅದನ್ನೂ ನಿಲ್ಲಿಸಬೇಕು. ಹೀಗೆ ಮಾಡುವಾಗ ಸತ್ಯಾಗ್ರಹಿ ತನ್ನ ಲಾಭದ ಕಡೆಗೆ ಗಮನವನ್ನು ಕೊಡಲಾರನು.

೬ ಸತ್ಯಾಗ್ರಹೀ-ಪಕ್ಷದ ಸಹಾಯವಿಲ್ಲದೆ ತನ್ನ ತಂತ್ರವನ್ನು ನಡೆಸಲಾಗುವುದಿಲ್ಲವೆಂಬ ಅನುಭವವನ್ನು ವಿರೋಧಿಗೆ ಮಾಡಿಸುವುದೆ ಅಸಹಕಾರದ ಗುರಿ. ಆದ್ದರಿಂದ ತಂತ್ರವನ್ನು ತಡೆದು ನಿಲ್ಲಿಸುವ ವರೆಗೆ ಸತ್ಯ-ಅಹಿಂಸಾದಿ ಮಾರ್ಗಗಳಿಂದ ಅಸಹಕಾರವನ್ನು ಹೂಡಬಹುದು.

೭ ಈ ಅಸಹಕಾರವನ್ನು ಹೇಗೆ, ಎಷ್ಟು ಭರದಿಂದ ಪ್ರಾರಂಭಿಸಬೇಕೆನ್ನುವುದು ಅನುಭವದಿಂದ ಗೊತ್ತಾಗುವುದು. ಆದರೆ ಈ ಮಾರ್ಗವನ್ನು ಹಿಡಿಯುವವನಿಗೆ ವಿರೋಧಿಯ ಕೃತ್ಯಗಳು ಅಥವಾ ತಂತ್ರವು ಅತ್ಯಂತ ದುಷ್ಟವಾಗಿದೆ, ಅದರ ಸ್ಥಾನದಲ್ಲಿ ಇನ್ನೊಂದು ಒಳ್ಳೆಯ ತಂತ್ರವು ಬೇಗನೆ ಸ್ಥಾಪಿಸಲ್ಪಡದಿದ್ದರೂ ಅದು ನಷ್ಟವಾಗಿ ಹೋಗುವುದು ಒಳಿತು ಎನಿಸಬೇಕು.

೮ ಅಸಹಕಾರದ ದುರುಪಯೋಗವಾಗುವ ಸಂದರ್ಭವೂ ಉಂಟು. ಆದ್ದ

ರಿಂದ ಸತ್ಯಾಗ್ರಹಿ-ಅಸಹಕಾರ ಮತ್ತು ಅಸತ್ಯಾಗ್ರಹಿ-ಅಸಹಕಾರ ಎಂದು ಭೇದಮಾಡಬೇಕಾಗುವುದು. ಸತ್ಯಾಗ್ರಹದಲ್ಲಿ ದುಃಖವನ್ನು ಸಹಿಸಲೇ ಬೇಕಾಗುವುದು. ಅಸಹಕಾರಿಗೆ ಯಾವ ತರದ ದುಃಖವನ್ನೂ ಸಹಿಸುವ ಸಂದರ್ಭವು ಬರದಿದ್ದರೆ ಆ ಅಸಹಕಾರವು ಅಸತ್ಯಾಗ್ರಹಿ-ಅಸಹಕಾರವಿರ ಬಹುದು ಎಂದು ತಿಳಿಯಬೇಕು.

೧೦ ಸವಿನಯ ಕ್ಯಾದೆಭಂಗ

೧ ಸವಿನಯ ಕ್ಯಾದೆಭಂಗವು ಎರಡು ತರದ್ದು ಇರಬಹುದು: ಒಂದು, ಅತ್ಯಂತ ಅನ್ಯಾಯದ ಅಪ್ಪಣೆಯನ್ನಾಗಲಿ ಕಟ್ಟಳೆಯನ್ನಾಗಲಿ ಮಾತ್ರ ತಳ್ಳಿ ಹಾಕುವುದಕ್ಕಾಗಿ ಮಾಡಿದ್ದು. ಇನ್ನೊಂದು, ಅಸಹಕಾರವನ್ನೇ ಮುಂದುವರಿಸುವ ಹೆಜ್ಜೆ ಎಂದು, ನಿರ್ದೋಷ ಹಾಗೂ ತಟಸ್ಥರಿದ್ದ ಪ್ರಜರಿಗೆ ಅನಾನುಕೂಲವಾಗದಂತೆ, ಯಾವುದೆ ಅನ್ಯಾಯ, ಅಧರ್ಮ ಮಾಡದೆ ಮುರಿಯಲು ಬರುವಂಥ ಎಲ್ಲ ಕಟ್ಟಳೆಗಳನ್ನು ಮುರಿದು ಮಾಡಿದ್ದು.

೨ ಕದಿಯಬಾರದೆಂಬ ಕಟ್ಟಳೆ ಇರುವುದೆಂದೇ ಮನುಷ್ಯನು ಕಳವು ಮಾಡುವುದಿಲ್ಲ ಎನ್ನಲಾಗುವುದಿಲ್ಲ. ಕದಿಯುವುದು ಅಧರ್ಮವೆಂದು ಅವನು ಕದಿಯುವುದಿಲ್ಲ. ಆದ್ದರಿಂದ ಕಟ್ಟಳೆಭಂಗದಲ್ಲಿ ಇಂತಹ ಕಟ್ಟಳೆಗಳನ್ನು ಸೇರಿಸಲಾಗದು.

೩ ಬಂಡಿಗಳನ್ನು ಮಾರ್ಗದ ಎಡಬದಿಗುಂಟ ಹೊಡೆಯಬೇಕು, ಜನರು ಹೋಗಿಬರುವುದಕ್ಕಾಗಿ ಅನುಕೂಲತೆಗಳನ್ನು ಒದಗಿಸಿಕೊಡುವಂಥ ದಾರಿಯ ಮೇಲೆ ನಿಂತ ಪೋಲೀಸನ ಅಪ್ಪಣೆ ಪಾಲಿಸಬೇಕು, ಮಧ್ಯರಾತ್ರಿಯಲ್ಲಿ ಗದ್ದಲ ಮಾಡಕೂಡದು, ಮಹತ್ವದ ಕಾರಣವಿಲ್ಲದೆ ಉಗೆಬಂಡಿಯ ಸರಪಳಿಯನ್ನು ಎಳೆಯಬಾರದು, ಮುಂತಾದ ಕಟ್ಟಳೆಗಳನ್ನು ಮುರಿಯಬಾರದು. ಏಕೆಂದರೆ, ಇದರಿಂದ ತಟಸ್ಥ, ನಿರ್ದೋಷಿ ಪ್ರಜೆಗೆ ತೊಂದರೆಯಾಗುವುದು. ಆದ್ದರಿಂದ ಈ ತರದ ಕಟ್ಟಳೆಗಳ ಸವಿನಯ ಭಂಗ ಮಾಡಲಾಗದು.

೪ ಜನರು ಯಾವುದೊಂದು ರಾಜ್ಯದ ಬಗ್ಗೆ ತಮ್ಮ ಅಸಂತೋಷವನ್ನು ಎರಡು ಕಾರಣಗಳಿಂದ ವ್ಯಕ್ತಮಾಡುತ್ತಿರಲಿಕ್ಕಿಲ್ಲ. (೧) ಆ ರಾಜ್ಯದ ಬಗೆಗೆ ಅವರಲ್ಲಿ ಸಂತೋಷವಿರಬಹುದು, ಭಕ್ತಿ ಇರಬಹುದು. (೨) ಕಟ್ಟಳೆಗಳಿಗೆ ಹೆದರುತ್ತಿರಬಹುದು. ಆದರೆ ಆ ರಾಜ್ಯದ ಬಗ್ಗೆ ತನ್ನ ಅಸಂತೋಷವನ್ನು

ವ್ಯಕ್ತಮಾಡಲು ಸತ್ಯಾಗ್ರಹಿಗೆ ಹೆದರಿಕೆ ಅಡ್ಡಬರುವುದಿಲ್ಲ. ಸವಿನಯ ಕ್ಯಾದೆ ಭಂಗ ಮಾಡುವ ಸಂದರ್ಭ ಬಂದರೆ ಅನ್ಯಾಯದ ಕಟ್ಟಳೆಗಳನ್ನು ಮುರಿಯು ವುದೂ ಅವನ ಕರ್ತವ್ಯವಾಗುವುದು.

೫ ಹಾಗೆಯೇ, ತನ್ನ ದೇಶದ ಯಾವುದೇ ಭಾಗಕ್ಕೆ ಹೋಗಲು, ಅಲ್ಲಿ ವಾಸಮಾಡಲು, ಅದೇ ರೀತಿ ಶಾಂತವಾದ ಚಟುವಟಿಕೆಗಳನ್ನು ಸಾಗಿಸಲು, ಸಭೆ ಜಾತ್ರೆಗಳನ್ನು ಜರುಗಿಸಲು, ಪ್ರಜಾ-ಸೇವೆಯನ್ನು ಮಾಡಲು, ಅಯೋಗ್ಯ ಚಟಗಳ ವಿರುದ್ಧ ಸರ್ಪಕಾವಲು ಮಾಡಲು ಪ್ರತಿಯೊಬ್ಬನಿಗೂ ಅಧಿಕಾರ ವುಂಟು. ಇದಕ್ಕೆ ವಿರುದ್ಧವಾಗಿ ಸರಕಾರವು ಪ್ರತಿಬಂಧಕಾಜ್ಞೆಯನ್ನು ಹೊರ-ಡಿಸಿದರೆ ಅದನ್ನು ಕೆಳಗಿನ ಈ ಕಾರಣಗಳಿಂದ ಸತ್ಯಾಗ್ರಹಿಯು ಮುರಿಯುವು ದಿಲ್ಲ.

(ಅ) ಸರಕಾರವು ತೋರಿಸುವ ಪ್ರತಿಬಂಧದ ಕಾರಣಗಳು ಯೋಗ್ಯ ವೆನಿಸಿದರೆ; ಅಥವಾ

(ಆ) ಇಂಥ ಕಟ್ಟಳೆಗಳನ್ನು ಮುರಿಯತೊಡಗುವಾಗ ಸರಕಾರದ ಮತ್ತು ಪ್ರಜರ ನಡುವೆ ಇರುವ ಮುಖ್ಯ ತಕರಾರಿನ ಮೂಲ ಸಂಗತಿ ಒಂದು ಮೂಲೆ ಯಲ್ಲಿ ಉಳಿದುಬಿಡುವುದುಂಟು, ಅಪ್ರಸ್ತುತ ಸಂಗತಿಗಳಿಗೆ ಮಹತ್ವ ಬರುವು ದುಂಟು, ಪ್ರಜೆಗಳ ಗಮನವು ಮೂಲ ಮಾತಿನ ಕಡೆಗೆ ಹೋಗುವ ಬದಲು ಮಹತ್ವದ್ದಲ್ಲದ ಚಿಕ್ಕಪುಟ್ಟ ಸಂಗತಿಗಳ ಕಡೆಗೆ ಹೋಗುವ ಸಂಭವವುಂಟು. ಹೀಗಿದ್ದರೆ ಕಟ್ಟಳೆ-ಭಂಗಮಾಡಲಾಗದು. ಇಂಥ ಕಾರಣಗಳಿಲ್ಲದಿದ್ದರೆ ಇಂಥ ಕಟ್ಟಳೆಗಳ ಸವಿನಯ ಭಂಗಮಾಡಬಹುದು.

೬ ಹಾಗೆಯೇ, ರಾಜ್ಯವು ಇರುವುದು ಒಳಿತು ಎಂದು ತಿಳಿದೇ ಸತ್ಯಾಗ್ರಹಿ ರಾಜ್ಯಕ್ಕೆ ಕರವನ್ನು ಕೊಡುವನು. ಈ ರಾಜ್ಯವನ್ನು ನಾಶಮಾಡುವುದೇ ತನ್ನ ಧರ್ಮವೆಂದು ಅವನಿಗೆ ಮನದಟ್ಟಾದಾಗ ಅವನು ಕರನಿರಾಕರಣೆಯನ್ನು ಮಾಡು ವನು. ರಾಜ್ಯದಿಂದ ದೊರೆಯುವ ಎಲ್ಲ ಲಾಭಗಳನ್ನು ಪ್ರಯತ್ನಪೂರ್ವಕ ವಾಗಿ ತ್ಯಜಿಸುವನು.

೭ ಪ್ರಜಾಸತ್ತಾತ್ಮಕ ರಾಜ್ಯವು ನಡೆಯುತ್ತಿರುವಲ್ಲಿ, ಸರಕಾರ ಮತ್ತು ಪ್ರಜರಲ್ಲಿ ಸಹಕಾರವಿರುವಲ್ಲಿ, ಅವರ ನಡುವೆ ಕಡುತರವಾದ ಕಾಳಗ ನಡೆಯದೆ ಇದ್ದಲ್ಲಿ, ಅಧಿಕಾರಿಗಳು ತಪ್ಪು-ತಿಳಿವಳಿಕೆಯಿಂದ ಇಲ್ಲವೆ ಅಧಿಕಾರ ಮದದಿಂದ ಅನ್ಯಾಯದ ಕಟ್ಟಳೆಗಳನ್ನು ಹೊರಡಿಸುವುದುಂಟು. ಇಂಥ ಕಟ್ಟಳೆಗಳನ್ನು

ಮುರಿದೇಬಿಡಬೇಕೆಂಬುದು ಯೋಗ್ಯವಲ್ಲ. ಇಂಥ ಚಿಲ್ಲರೆ ಅನ್ಯಾಯಗಳನ್ನು ಸಹಿಸುವುದರಿಂದ ಹಾನಿಯಾಗುವುದೆಂದು ತಿಳಿಯಲಾಗದು. ಇಂತಹ ಸಂದರ್ಭಗಳಲ್ಲಿ ಪ್ರಜರೂ ಮುಂದಾಳುಗಳೂ ತೋರಿಸುವ ಧೈರ್ಯವೂ ಉದಾರ ತನವೂ ಬೋಧಪ್ರದವಾಗಿರುವವು. ಯಾವನು ಭಯವಿಲ್ಲದಿದ್ದರೂ, ಅನ್ಯಾ-ಯದ ಕಟ್ಟಳೆಗಳನ್ನು ಸಹನೆಮಾಡದೆ ತಿಳಿದೂ ತಿಳಿದೂ ಅವುಗಳಿಂದಾಗುವ ದುಃಖಸಹಿಸಿ ಅವನ್ನು ಪಾಲಿಸುವನೊ, ಅವನೇ ಸಮಯ ಬಂದಾಗ ಸವಿನಯ ಕ್ಯಾದೆಭಂಗವನ್ನು ಚನ್ನಾಗಿ ಮಾಡಬಲ್ಲನು.

೮ ವಿರೋಧಿಯ ಮತ್ತು ತಟಸ್ಥ ಜನರ ಜೀವಕ್ಕೂ ಆಸ್ತಿಗೂ ಸವಿನಯ ಕ್ಯಾದೆಭಂಗದಿಂದ ದುಃಖವೂ ಹಾನಿಯೂ ಆಗುತ್ತಿರುವುದೆಂದು ತೋರಿದ ಕೂಡಲೆ ಸತ್ಯಾಗ್ರಹಿ ಹಾಗಾಗದಂತೆ ಮಾಡಲು ಯತ್ನಿಸುವನು. ಈ ತನ್ನ ಪ್ರಯತ್ನವು ಫಲಿಸುವುದಿಲ್ಲವೆಂದು ತೋರಿದ ಕೂಡಲೆ ಸವಿನಯ ಕಟ್ಟಳೆ-ಭಂಗ ವನ್ನು ನಿಲ್ಲಿಸಿಬಿಡುವನು. ಇಂತಹ ಹಾನಿಯನ್ನೂ ದುಃಖವನ್ನೂ ನಿಲ್ಲಿಸು ವುದಕ್ಕಾಗಿ ಸತ್ಯಾಗ್ರಹಿ ತನ್ನ ಸರ್ವಶಕ್ತಿಯನ್ನೂ ವೆಚ್ಚಮಾಡುವನು.

೧೧ ಕೋರ್ಟಿನಲ್ಲಿ ಸತ್ಯಾಗ್ರಹಿಯ ನಡತೆ

೧ ಸವಿನಯ ಕಟ್ಟಳೆ-ಭಂಗದ ಸಂಕಲ್ಪಮಾಡುವವನು ಅದರಿಂದ ಆಗುವ ಪೂರ್ಣ ಶಿಕ್ಷೆಯನ್ನು ಅನುಭವಿಸಲು ಸಿದ್ಧನೇ ಇರುವನು.

೨ ಇಂಥದೊಂದು ಕಟ್ಟಳೆಯನ್ನು ಸತ್ಯಾಗ್ರಹಿಯು ಮುರಿದಿರುವನೆಂದು ತಪ್ಪುಹೊರಿಸಿ ಅವನನ್ನು ಬಂಧಿಸಲು ಬಂದ ಅಧಿಕಾರಿಯ ವಶಕ್ಕೆ ಅವನು ಹಿಂದು-ಮುಂದು ನೋಡದೆ ಹೋಗಬೇಕು..

೩ ಸತ್ಯಾಗ್ರಹಿ ನಿಜವಾಗಿ ಕಟ್ಟಳೆ ಮುರಿಯದಿದ್ದರೂ ಅವನ ವಿರುದ್ಧ ಸುಳ್ಳು ಪ್ರಮಾಣಗಳನ್ನು ಹುಟ್ಟಿಸಿ ಕಟ್ಟಳೆ-ಭಂಗ ಮಾಡಿರುವನೆಂದು ಪೋಲೀಸರು ತೋರಿಸಬಹುದು. ಹೀಗಿದ್ದಲ್ಲಿ ಕೋರ್ಟಿನ ಕಾರ್ಯದಲ್ಲಿ ಸತ್ಯಾ ಗ್ರಹಿಯು ಯಾವ ತರದಿಂದಲೂ ಪಾಲುಗೊಳ್ಳುವುದಿಲ್ಲ, ತನ್ನ ರಕ್ಷಣೆಯನ್ನೂ ಮಾಡಿಕೊಳ್ಳುವುದಿಲ್ಲ. ಕಟ್ಟಳೆ-ಭಂಗ ಮಾಡುವುದೇ ಅವನ ವಿಚಾರವಿದ್ದುದ ರಿಂದ ಕಟ್ಟಳೆ ಮುರಿಯದಿದ್ದರೂ ಅವನಿಗೆ ಶಿಕ್ಷೆಯಾಗುತ್ತಿದ್ದರೆ ಅದನ್ನು ಹೊಂದುವುದು ಯೋಗ್ಯವೇ ಸರಿ.

೪ ಸ್ವತಃ ಕಟ್ಟಳೆಗಳನ್ನು ಮುರಿದಿದ್ದರೆ ತನ್ನ ಅಪರಾಧವನ್ನು ಒಪ್ಪಿಕೊಂಡು

ಶಿಕ್ಷೆ ವಿಧಿಸಲು ನ್ಯಾಯಾಧೀಶನಿಗೆ ಹೇಳಬೇಕು.

೫ 'ರಕ್ಷಣೆ' ಮಾಡಿಕೊಳ್ಳದೆ ಇರುವ ವಿಷಯುಗಳಲ್ಲಿ ಕೆಳಗಿನವು ಅಪವಾದಗಳು:

(ಅ) ಸತ್ಯಾಗ್ರಹ-ಸಿದ್ಧಾಂತಕ್ಕೆ ವಿರುದ್ಧವಾದ ಅಪರಾಧಗಳನ್ನು ಮಾಡುವ ವಿಚಾರವಿಲ್ಲದಿದ್ದರೂ ಸತ್ಯಾಗ್ರಹಿಯು ಮೇಲೆ ಅವನು ಅಂಥ ಅಪರಾಧಗಳ ಆರೋಪ ಹೊರಿಸಿದರೆ ಆಗ ಅಪರಾಧಿಯೆನಿಸಿಕೊಂಡವನು ಸತ್ಯಕ್ಕೋಸ್ಕರ ತನ್ನ ರಕ್ಷಣೆ ಮಾಡಿಕೊಳ್ಳಬೇಕು. ಉದಾಹರಣೆಗೆ: ಕೊಲೆಯು ಆರೋಪವನ್ನು ಹೊರಿಸಿದಾಗ.

(ಆ) ಸತ್ಯಾಗ್ರಹಿಗಳ ಅಥವಾ ಅಧಿಕಾರಿಗಳ ನಡತೆಯು, ನೀತಿಯು ವಿಷಯುವು ಚರ್ಚಾಸ್ಪದವಾಗಿ ಅದರಲ್ಲಿ ಸತ್ಯಾಂಶವು ಹೊರಬೀಳುವುದು ಅತ್ಯಂತ ಅವಶ್ಯವೆಂದು ಕಂಡುಬಂದರೆ ಸತ್ಯಾಗ್ರಹಿ ತನ್ನ ರಕ್ಷಣೆಮಾಡಿಕೊಳ್ಳಬೇಕು. ಉದಾಹರಣೆಗೆ: ಪೋಲೀಸರು ಅತ್ಯಾಚಾರ ಮಾಡಿರುವರೆಂಬುದನ್ನು ಸರಿಯಾಗಿ ಅರಿತುಕೊಂಡು ಅದನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ ಮೇಲೆ, ಅದು ಸುಳ್ಳೆಂದು ಪ್ರತಿಪಾದಿಸಿ ಸುಳ್ಳು ಸುದ್ದಿ ಪ್ರಕಟಿಸಿದ್ದಕ್ಕಾಗಿ ಸತ್ಯಾಗ್ರಹಿಯು ಮೇಲೆ ಕಟ್ಟಳೆ ಹೂಡಿದಾಗ; ಸತ್ಯಾಗ್ರಹಿಯು ಹೊಡೆದಾಟಕ್ಕೆ, ರಕ್ತಪಾತಕ್ಕೆ ಉತ್ತೇಜನ ಕೊಡುವನೆಂದು ಆರೋಪವಿದ್ದಾಗ.

(ಇ) ಅಧಿಕಾರಿಗಳು ಅತಿ ಉತ್ಸಾಹದಿಂದಲೂ ತಪ್ಪು ಗ್ರಹಿಕೆಯಿಂದಲೂ ಒಮ್ಮೊಮ್ಮೆ ಅನ್ಯಾಯುದ ಕಟ್ಟಳೆಗಳನ್ನು ಹೊರಡಿಸುವರು. ಅಂಥ ಕಟ್ಟಳೆ ಹೊರಡಿಸುವುದು ಸರಕಾರದ ಇಚ್ಛೆ ಇದ್ದಿಲ್ಲವೆಂದು ತಿಳಿದುಕೊಳ್ಳಲಿಕ್ಕೆ ಪ್ರಬಲವಾದ ಕಾರಣಗಳು ದೊರೆತರೆ, ಆ ಹುಕುಮುಗಳಿಗೆ ಕ್ಯಾದೆಗಳ ಆಧಾರ ಸಾಕಷ್ಟು ಇಲ್ಲ ಎಂದು ತಿಳಿದುಕೊಳ್ಳಲು ಬರುವಂತಿದ್ದರೆ, ಮತ್ತು ಆ ಹುಕುಮುಗಳಿಗೆ ಕ್ಯಾದೆಗಳ ಆಧಾರ ಸಾಕಷ್ಟು ಇಲ್ಲ ಎಂದು ತಿಳಿದುಕೊಳ್ಳಲು ಬರುವಂತಿದ್ದರೆ, ಮತ್ತು ಆ ಹುಕುಮುಗಳನ್ನು ಮುರಿಯುವ ವಿಚಾರವಿಲ್ಲದಂಥ ಪ್ರಜೆಗೆ ಅವುಗಳಿಂದ ಅತ್ಯಂತ ಕಷ್ಟವಾಗುವುದೆಂದು ಎನಿಸಿದರೆ ಸತ್ಯಾಗ್ರಹಿ ತನ್ನ ರಕ್ಷಣೆ ಮಾಡಿಕೊಳ್ಳುವ ಅವಶ್ಯಕತೆ ಉಂಟಾಗುವುದು.

೬ ಸತ್ಯಾಗ್ರಹಿಯು ಕೋರ್ಟಿನ ಕಾರ್ಯದಲ್ಲಿ ಪಾಲುಗೊಳ್ಳುವುದಿಲ್ಲ. ಕೋರ್ಟಿನಲ್ಲಿ ಸತ್ಯಾಗ್ರಹಿಯು ಉದ್ಧಟತನದಿಂದಲೂ ಅವಿನಯುದಿಂದಲೂ ವರ್ತಿಸಬೇಕೆಂದು, ಅಥವಾ ಸುಳ್ಳು ಹೇಳಬೇಕೆಂದು ಇದರ ಅರ್ಥವಲ್ಲ. ಆದ್ದ

ರಿಂದ ಸತ್ಯಾಗ್ರಹಿಯು ಯಾವನೇ ಅಧಿಕಾರಿಗೆ ಅಪಮಾನವನ್ನೂ ಕುಚೇಷ್ಟೆಯನ್ನೂ ಮಾಡಬಾರದು; ಸೊಕ್ಕಿನ ಉತ್ತರಗಳನ್ನು ಕೊಡಬಾರದು. ತನ್ನ ಹೆಸರನ್ನು ಮುಚ್ಚಿಡಬಾರದು. ತನ್ನ ವಿಚಾರಣೆಗೆ ಸಂಬಂಧಪಡದ, ಅನ್ಯ ಆರೋಪಿಗಳಿಗಾಗಲಿ ಮನುಷ್ಯರಿಗಾಗಲಿ ಸಂಬಂಧಪಟ್ಟ ವಿಷಯಗಳ ಬಗ್ಗೆ ಅಧಿಕಾರಿಗಳು ವಿಚಾರಿಸಿದರೆ ಅವುಗಳಿಗೆ ಉತ್ತರ ಕೊಡಲು ಸತ್ಯಾಗ್ರಹಿಯು ಬದ್ಧನಲ್ಲ. ಆದ್ದರಿಂದ ಈ ತರದ ಪ್ರಶ್ನೆಗಳಿಗೆ ಉತ್ತರ ಕೊಡಲಾರೆನೆಂದು ಅವನು ವಿನಯದಿಂದ ಹೇಳಬೇಕು.

೭ ತಮ್ಮ ವಶದಲ್ಲಿರುವಾಗ ಸತ್ಯಾಗ್ರಹಿಗೆ ಸ್ನಾನ ಮಾಡಿಸುವುದು, ಬಟ್ಟೆ ಒಗೆಯಲು ಬಿಡುವುದು, ಉಣಿಸುವುದು, ಕಾಣಲು ಬಂದ ಮಿತ್ರರನ್ನೂ ಸಲಹೆಗಾರರನ್ನೂ ಭೆಟ್ಟಿಮಾಡಿಸುವುದು, ಮತ್ತು ಅವನೊಡನೆ ಸಭ್ಯತನದಿಂದ ವರ್ತಿಸುವುದು ಪೋಲೀಸಿನವರ ಕರ್ತವ್ಯ. ಅದರಂತೆ ಪೋಲೀಸರೊಡನೆ ವಿನಯದಿಂದ ವರ್ತಿಸುವುದೂ ಸತ್ಯಾಗ್ರಹಿಯ ಕರ್ತವ್ಯ. ಒಂದು ವೇಳೆ ಪೋಲೀಸರು ತನ್ನೊಡನೆ ಅಸಭ್ಯತನದಿಂದ ವರ್ತಿಸಿದರೆ, ತನಗೆ ಅನಾನುಕೂಲತೆ ಮಾಡಿದರೆ, ಹೊಡೆದರೆ, ಬಯ್ದರೆ ಸತ್ಯಾಗ್ರಹಿ ಅದನ್ನು ಅವರ ಮೇಲಧಿಕಾರಿಗೆ ತಿಳಿಸಬೇಕು. ಮೇಲಧಿಕಾರಿ ಕಾಣಲು ಸಿಗದಿದ್ದರೆ, ಅಥವಾ ತನ್ನ ಮಾತಿಗೆ ಲಕ್ಷಗೊಡದಿದ್ದರೆ ನಡೆದುದನ್ನು ನ್ಯಾಯಾಧೀಶರಿಗೆ ತಿಳಿಸಬೇಕು. ಅವರು ಇತ್ತ ಲಕ್ಷ್ಯಗೊಡದಿದ್ದರೆ ಈ ಕಷ್ಟಗಳು ಸರಕಾರಕ್ಕೆ ಸಮ್ಮತವೆಂದು ತಿಳಿದುಕೊಂಡು ಅದನ್ನು ತನ್ನ ಸಲಹೆಗಾರರಿಗೆ ತಿಳಿಸಿ ಶಾಂತ ರೀತಿಯಿಂದ ಇರಬೇಕು.

೮ ತನಗೆ ದಂಡವಾದರೆ ದಂಡದ ಹಣವನ್ನು ಸತ್ಯಾಗ್ರಹಿ ತಾನಾಗಿಯೇ ಕೈಯೆತ್ತಿ ಕೊಡಬಾರದು, ಕೊಡಲು ಯಾರಿಗೂ ಹೇಳಬಾರದು. ದಂಡ ಕೊಡದಿರುವುದೆ ತನ್ನ ಧರ್ಮವೆಂದು ತಿಳಿದು ಅದಕ್ಕಾಗಿ ಆದ ಶಿಕ್ಷೆಯನ್ನು ಸಹಿಸಿಕೊಳ್ಳಬೇಕು.

೯ ಅಧಿಕಾರಿಗಳು ದಂಡದ ಹಣವನ್ನು ವಸೂಲು ಮಾಡಲು ಮನೆಗೆ ಜಪ್ತಿಗೆ ಬಂದರೆ ಅಡ್ಡಿಮಾಡಬಾರದು. ಅದರಿಂದ ಆಗುವ ಹೆಚ್ಚಿನ ಹಾನಿಯನ್ನೂ ಸಹಿಸಬೇಕು. ದಂಡವನ್ನು ಸ್ವತಃ ಕೈಯೆತ್ತಿ ಎಂದಿಗೂ ಕೊಡಬಾರದು. ತನ್ನ ಸತ್ವ-ರಕ್ಷಣೆಗಾಗಿ ಕಟ್ಟಳೆಗಳನ್ನು ಮುರಿದವನು .ಅದರಿಂದ ಆಗುವ ಕಷ್ಟನಷ್ಟಗಳಿಗೆಲ್ಲ ಸಿದ್ಧನೇ ಇರುವನು. ಆದುದರಿಂದ ಅವನು ತನ್ನ ಕೈಯಿಂದ ದಂಡದ ಹಣವನ್ನು ಕೊಟ್ಟು ತನ್ನ ಸತ್ವಹಾನಿ ಮಾಡಿಕೊಳ್ಳುವುದಿಲ್ಲ.

೧೦ ಸತ್ಯಾಗ್ರಹಿಯು ಸೆರೆಮನೆಯಲ್ಲಿ ಉಚ್ಚವರ್ಗವನ್ನು ಪಡೆಯಲು ಯತ್ನಿಸಬಾರದು. ಏಕೆಂದರೆ ಈ ವರ್ಗೀಕರಣದಲ್ಲಿ ಸತ್ಯಾಗ್ರಹಿ-ಸತ್ಯಾಗ್ರಹಿಗಳಲ್ಲಿ, ಸತ್ಯಾಗ್ರಹಿ-ಸಾಮಾನ್ಯ ಕೈದಿಗಳಲ್ಲಿ ಭೇದವನ್ನುಂಟುಮಾಡುವ ಉದ್ದೇಶವು ಹಲವು ಮಟ್ಟಿಗೆ ಇರುತ್ತದೆ. ಇದರಿಂದ ಅಸೂಯೆ, ಭಯ, ಮತ್ತು ಅತ್ಯಾಶೆಯು ಹೆಚ್ಚುವುದು. ಮೇಲಾಗಿ ಈ ವರ್ಗೀಕರಣದ ಬಳಿಕೆ ಮನಬಂದಂತೆ ನಡೆಯುವುದು. ಇದರಿಂದ ಮೇಲಿನ ವರ್ಗದವರನ್ನು ಕೆಳಗಿನ ವರ್ಗಕ್ಕೆ ಹಾಕಿ ಶಿಕ್ಷಿಸಲು ಅನುವಾಗುವುದು. ಆದ್ದರಿಂದ ವರ್ಗೀಕರಣದ ಧೋರಣೆಯೇ ಯೋಗ್ಯವಲ್ಲ. ಆದರೂ ಸತ್ಯಾಗ್ರಹಿ, ತನಗೆ ಸಿಕ್ಕ ವರ್ಗದ ಅನುಕೂಲತೆಗಳನ್ನು ಭೋಗಿಸಿದರೆ ಸತ್ಯದ ಭಂಗವಾಗುವುದೆಂದು ಎನ್ನಲಾಗದು.

೧೨ ಸೆರೆಮನೆಯಲ್ಲಿ ಸತ್ಯಾಗ್ರಹಿಯ ನಡತೆ

೧ ಸತ್ಯಾಗ್ರಹಿಯು ಸೆರೆಮನೆಯಲ್ಲಿ ಕೂಡ ಸಭ್ಯ ರೀತಿಯಿಂದಲೂ ನಮ್ರತೆಯಿಂದಲೂ ವರ್ತಿಸುವನು.

೨ ಸೆರೆಮನೆಯ ನಿಯಮಗಳನ್ನು ಮುರಿಯಬಾರದು. ಅವನ್ನು ಪಾಲಿಸುವ ಪ್ರವೃತ್ತಿ ಇರಬೇಕು. ಅವಕ್ಕೆ ಅನುಸಾರವಾಗಿ ಸೆರೆಮನೆಯಲ್ಲಿ ತನ್ನ ಜೀವನ-ಕ್ರಮವನ್ನು ಇಟ್ಟುಕೊಳ್ಳಬೇಕು. ಸಿದ್ಧಾಂತಕ್ಕೆ, ಸ್ವಾಭಿಮಾನಕ್ಕೆ, ಕುಂದುತರುವ ನಿಯಮಗಳನ್ನು ಮಾತ್ರ ಮುರಿಯಲು ಯತ್ನಿಸಬೇಕು. ಆದ್ದರಿಂದ ಯಾವ ವಸ್ತುವನ್ನೂ ಕದ್ದು ಸೆರೆಮನೆಯಲ್ಲಿ ತರಬಾರದು. ನಿಯಮದ ಹೊರಗಿನ ಅನುಕೂಲತೆಯನ್ನು ಒದಗಿಸಿಕೊಳ್ಳಲು ಯಾವ ಅಧಿಕಾರಿಗೂ ಲಂಚ ಕೊಡಬಾರದು, ಅವರನ್ನು ದೈನ್ಯದಿಂದ ಬೇಡಲೂ ಬಾರದು.

೩ ದುಡಿಯುವುದು ಸೆರೆಮನೆಯ ನಿಯಮ ಮಾತ್ರವಲ್ಲ – ಸೃಷ್ಟಿಯ ನಿಯಮ, ಧರ್ಮದ ನಿಯಮ. ಆದುದರಿಂದ ಸೆರೆಮನೆಯ ನಿಯಮದ ಮೇರೆಗೆ ಒಪ್ಪಿಸಿಕೊಟ್ಟಷ್ಟು ಕೆಲಸವನ್ನು ಸ್ವೀಕರಿಸಲು, ಅದನ್ನು ಮಾಡಲು ಸತ್ಯಾಗ್ರಹಿಯು ಹಿಂದು-ಮುಂದು ನೋಡಬಾರದು.

೪ ತನಗೆ ನಿಯಮಿಸಿಕೊಟ್ಟ ಕೆಲಸವು ನಿಯಮಿಸಿದ ವೇಳೆಯಲ್ಲಿ ಅನಾರೋಗ್ಯದ ಅಥವಾ ಮತ್ತಾವ ಕಾರಣದಿಂದಾದರೂ ಆಗುವಂತಿಲ್ಲದಿದ್ದರೆ ಆ ವಿಷಯವಾಗಿ ಅಧಿಕಾರಿಗೆ ವಿನಯದಿಂದ ತಿಳಿಸಬೇಕು. ಪುನಃ ಕೆಲಸ

ಮಾಡಲು ಹೇಳಿದರೆ ಸಾಧ್ಯವಿದ್ದಷ್ಟು ಮಾಡಲು ಯತ್ನಿಸಬೇಕು. ಆದರಿಂದ ಆಯಾಸವೂ ದುಃಖವೂ ಆದರೆ ಸಹಿಸಿಕೊಳ್ಳಬೇಕು.

೫ ಡಾಕ್ಟರರು ಆರೋಗ್ಯವನ್ನು ಪರೀಕ್ಷಿಸುವಾಗ ಸತ್ಯಾಗ್ರಹಿಯು ತನ್ನಲ್ಲಿದ್ದ ರೋಗಗಳನ್ನು ಬಚ್ಚಿಡದೆ ಹೇಳಬೇಕು. ಅಂಟು-ರೋಗವಿದ್ದರೆ ನಾಚಿಕೆಯಿಂದ ಅದನ್ನು ಬಚ್ಚಿಟ್ಟುಕೊಳ್ಳಲಾಗದು.

೬ ತನ್ನ ಧರ್ಮಕ್ಕಾಗಲಿ ನಿಯಮಕ್ಕಾಗಲಿ ಕುಂದು ತರುವ ಔಷಧೋಪಚಾರವನ್ನು ಪಡೆಯಲು ಕೈದಿಯು ಬದ್ಧನಲ್ಲ. ಆದರೆ ಅನ್ಯತರದ ಔಷಧೋಪಚಾರವನ್ನು ಅಧಿಕಾರವಾಣಿಯಿಂದ ಬೇಡಲಾರನು. ವೈಲಿ ಚುಚ್ಚಿಸಿಕೊಳ್ಳದಿರುವುದೇ ಮುಂತಾದುವುಗಳಿಗಾಗಿ ಶಿಕ್ಷೆಯನ್ನು ಅನುಭವಿಸಬೇಕಾಗುವುದು. ನಿಜವಾಗಿಯೂ ಇಂತಹ ಔಷಧೋಪಚಾರದ ಬಗ್ಗೆ ಧಾರ್ಮಿಕ ಆಗ್ರಹವಿದ್ದರೆ ಮಾತ್ರ ಶಿಕ್ಷೆಗೆ ಗುರಿಯಾಗಬೇಕು. ಶಿಕ್ಷಿಸಿಕೊಳ್ಳುವುದಕ್ಕೆಂದೇ ಸುಮ್ಮಸುಮ್ಮನೆ ತನ್ನ ನಿಯಮಕ್ಕೆ ಧಾರ್ಮಿಕ ಸ್ವರೂಪವನ್ನು ಕೊಟ್ಟು ಆದಕ್ಕಾಗಿ ಆಗ್ರಹ ಹಿಡಿಯಬಾರದು.

೭ ಸತ್ಯಾಗ್ರಹಿ ತನ್ನ ಆರೋಗ್ಯಸಂಬಂಧವಾಗಿ ಏನಾದರೂ ಹೇಳಬೇಕಾಗಿದ್ದರೆ, ತನಗೆ ಯಾವುದಾದರೂ ಅನುಕೂಲತೆ ಬೇಕಾಗಿದ್ದರೆ, ಅದನ್ನು ಒದಗಿಸಿಕೊಡಬಲ್ಲ ಯೋಗ್ಯ ಅಧಿಕಾರಿಗೆ ತಿಳಿಸಬೇಕು. ಅಧಿಕಾರಿಯು ಅತ್ತ ಸರಿಯಾಗಿ ಗಮನಕೊಡದಿದ್ದರೆ ಆದೂ ಸತ್ಯಾಗ್ರಹದಲ್ಲಿ ಆಗತಕ್ಕ ಕಷ್ಟಗಳಲ್ಲಿ ಒಂದೆಂದು ತಿಳಿದು ಅದನ್ನು ಸಹಿಸಬೇಕು. ತನಗೆ ಬೇಕಾದ ಅನುಕೂಲತೆಗಳನ್ನು ಕಳವಿನಿಂದ ಒದಗಿಸಿಕೊಂಡು ತನ್ನ ಆರೋಗ್ಯ-ಸುಧಾರಣೆಯ ಯತ್ನವನ್ನು ಮಾಡಬಾರದು. ಒಂದು ವೇಳೆ ಹೀಗೆ ಮಾಡಿದರೆ ಅವನ ಬೇಡಿಕೆಗಳು ಅಯೋಗ್ಯವಿದ್ದುವೆಂದು ಅಧಿಕಾರಿ ತಿಳಿದುಕೊಳ್ಳುವನು.

೮ ತಾನು ಸೆರೆಮನೆಯಲ್ಲಿ ಕೂಡ ಪಾಲಿಸಬೇಕಾದ ಯಾವುದಾದರೂ ವ್ರತ-ನಿಯಮವಿದ್ದರೆ ಅದನ್ನು ಸತ್ಯಾಗ್ರಹಿ ಯೋಗ್ಯ ಅಧಿಕಾರಿಗೆ ಅರುಹಬೇಕು. ಅದಕ್ಕಾಗಿ ಯೋಗ್ಯ ಅನುಕೂಲತೆಗಳನ್ನು ಕೇಳಬೇಕು. ವ್ರತೋಪಾಸಕನು ತನ್ನ ವ್ರತಪಾಲನೆಗಾಗಿ ತಗಲುವ ವೆಚ್ಚವನ್ನು ಸರಕಾರವೇ ಹೊರಬೇಕೆಂಬ ಹಟ ಹಿಡಿಯಬಾರದು. ತನ್ನ ವೆಚ್ಚದಿಂದ ವ್ರತವನ್ನು ಪಾಲಿಸಲು ಅಪ್ಪಣೆ ದೊರೆತರೆ ಅಷ್ಟರಿಂದಲೇ ಸಂತುಷ್ಟನಾಗಬೇಕು. ಒಂದು ವೇಳೆ ಅಪ್ಪಣೆ ದೊರೆಯದೆ ವ್ರತಪಾಲನೆ ಕಷ್ಟವಾದರೆ ಅದನ್ನು ಸಹಿಸಿಕೊಳ್ಳಬೇಕು.

೯ ಸೆರೆಮನೆಯ ಮಟ್ಟಿಗೆ ಯಾವುದಾದರೂ ವಿಶೇಷತರದ ವ್ರತನಿಯಮವನ್ನು ಸತ್ಯಾಗ್ರಹಿ ಹಿಡಿಯಬಾರದು.

೧೦ ಕೈದಿಯು ಹೊಡೆತಗಳನ್ನು, ಅಥವಾ ಬೈಗಳನ್ನು ತಿನ್ನಬೇಕೆಂದು ವಿಧಿಯಿಲ್ಲ. ಎಂಜಲು, ತಂಗುಳು, ಹೊಲಸು, ಅರೆಬೆಂದ ಅಥವಾ ಹುಳುಗಳಿದ್ದ ಆಹಾರವನ್ನು ತಿನ್ನಬೇಕೆಂಬ ನಿಯಮವೂ ಇಲ್ಲ. ಆದ್ದರಿಂದ ಇಂಥ ಆಹಾರವನ್ನು ಕೊಟ್ಟರೆ, ಹೊಡೆದರೆ, ಬೈದರೆ, ಸಹಿಸಿಕೊಳ್ಳಬಾರದು. ಆ ಬಗ್ಗೆ ಫಿರ್ಯಾದಿಯನ್ನು ಮಾಡಬೇಕು. ಅದನ್ನು ಕೇಳದೆ ಮತ್ತೆ ಮತ್ತೆ ಹೊಡೆಯಲಾರಂಭಿಸಿದರೆ, ಬೈಯತೊಡಗಿದರೆ, ಶಿಕ್ಷೆ ಕೊಟ್ಟರೆ ಎಲ್ಲವನ್ನೂ ಸಹಿಸಬೇಕು. ಕೆಲಸ ಮಾಡಲು ಮಾತ್ರ ಒಲ್ಲೆನ್ನಬಾರದು. ಅವಶ್ಯವೆನಿಸಿದರೆ ಉಪವಾಸ ಮಾಡಬೇಕು.

೧೧ ತಿನ್ನಲಾಗದಂಥ ಆಹಾರವನ್ನು ಸತ್ಯಾಗ್ರಹಿ ಸ್ವೀಕರಿಸಬಾರದು. ಇದಕ್ಕಾಗಿ ಶಿಕ್ಷೆಯಾದರೆ ಸಹಿಸಿಕೊಳ್ಳಬೇಕು.

೧೨ ಸತ್ಯಾಗ್ರಹಿ, ತನಗಾಗಿ ಮತ್ತು ತನ್ನ ವರ್ಗದ ಕೈದಿಗಳ ಸಲುವಾಗಿ ಮಾತ್ರವೇ ಸೆರೆಮನೆಯ ನಿಯಮಗಳಲ್ಲಿ ತಿದ್ದುಪಡೆಮಾಡಲು, ಅನುಕೂಲತೆಗಳನ್ನು ಒದಗಿಸಿಕೊಳ್ಳಲು, ಸೆರೆಮನೆಯಲ್ಲಿ ಸತ್ಯಾಗ್ರಹ ಹೂಡಬಾರದು. ಬರಿಯ ತನಗೆ ಮತ್ತು ತನ್ನ ವರ್ಗದ ಕೈದಿಗಳಿಗೆ ಮಾತ್ರವೇ ಅನ್ಯಾಯವಾಗುತ್ತಿದ್ದರೆ ಸತ್ಯಾಗ್ರಹವನ್ನು ಹೂಡಬಹುದು. ಸೆರೆಮನೆಯ ಇಡಿಯ ಆಡಳಿತದಲ್ಲಿ ಸುಧಾರಣೆ ಅವಶ್ಯವೆಂದು ತೋರಿದರೆ, ಮತ್ತು ಅದಕ್ಕೆ ತಕ್ಕ ಪರಿಸ್ಥಿತಿಯು ಇದ್ದರೆ ಮಾತ್ರ ಸತ್ಯಾಗ್ರಹವನ್ನು ಮಾಡಬಹುದು.

೧೩ ಸೆರೆಮನೆಯ ಆಡಳಿತ ವ್ಯವಸ್ಥಿತವಾಗಿ ನಡೆಯುವಂತೆ ವರ್ತಿಸುವುದು, ಸಹಕಾರವನ್ನೀಯುವುದು ಸತ್ಯಾಗ್ರಹ-ಸಿದ್ಧಾಂತಕ್ಕೆ ವಿರೋಧವಲ್ಲ. ಆ ಬಗ್ಗೆ ಅಧಿಕಾರಿಗಳಿಗೆ ಎಲ್ಲ ರೀತಿಯ ಸಹಾಯ ಮಾಡುವುದು ಸತ್ಯಾಗ್ರಹಿಯ ಧರ್ಮ. ಆದರೆ ಸತ್ಯಾಗ್ರಹಿಯು ವಾರ್ಡರ್ ಮತ್ತು ವಾಚ್‌ಮನ್ನರ ಅಧಿಕಾರಗಳನ್ನು ಸ್ವೀಕರಿಸಬಾರದು.

೧೪ ಬಿಡುವಿನ ದಿನಗಳನ್ನು ಹೆಚ್ಚಿಸಿಕೊಳ್ಳಲು ಸತ್ಯಾಗ್ರಹಿ ಆಶೆಪಡಬಾರದು.

೧೫ ಇಡೀ ದೇಶದ ಆಳಿಕೆಯಲ್ಲಿ ಸಂಪೂರ್ಣ ಬದಲಾವಣೆ ಮಾಡುವುದೇ, ಸ್ವರಾಜ್ಯ ಸಂಪಾದನೆಯ ಸಲುವಾಗಿ ಹೂಡಿದ ಸತ್ಯಾಗ್ರಹದ ಉದ್ದೇಶ. ಆದ್ದ

ರಿಂದ ಸೆರೆಮನೆಯ ಸುಧಾರಣೆಗಾಗಿ ಸೆರೆಮನೆಯಲ್ಲಿ ಒಂದು ಸ್ವತಂತ್ರವಾದ ಸತ್ಯಾಗ್ರಹ-ಯುದ್ಧವನ್ನು ಹೂಡಬಾರದು. ಆದರೆ ಸೆರೆಮನೆಯಲ್ಲಿ ಅಕ್ಷನ್ಯ್ಯ ವರ್ತನೆ, ಅಮಾನುಷ ವರ್ತನೆ ಇದ್ದರೆ, ನಿಯಮಗಳಿದ್ದರೆ, ಅವುಗಳ ವಿರುದ್ಧ ವಾಗಿ ಸಂದರ್ಭಬಂದರೆ ಸತ್ಯಾಗ್ರಹ-ಯುದ್ಧವನ್ನು ಹೂಡಬೇಕು.

೧೩ ಸತ್ಯಾಗ್ರಹಿಯ ನಿಯಮಾವಲಿ

ಸ್ವಲ್ಪ ಪುನರುಕ್ತಿಯ ದೋಷವಾದರೂ, ೧೯೩೦ರ ಫೆಬ್ರುವರಿ ೨೩ರಂದು ಪ್ರಕಟವಾದ 'ನವಜೀವನ'ದಲ್ಲಿ ಗಾಂಧೀಜಿಯವರು ಕೊಟ್ಟಿರುವ 'ಸತ್ಯಾಗ್ರಹಿಯ ನಿಯಮಾವಲಿ'ಯನ್ನು ಇಲ್ಲಿ ಕೊಡಲಾಗಿದೆ. ಅದರಿಂದ ಈ ಖಂಡದ ಯೋಗ್ಯತೆ ಪೂರ್ಣವಾಗುವುದಲ್ಲದೆ ಅತ್ಯಂತ ಸುಂದರವಾದ ಉಪಸಂಹಾರವೂ ಆಗುವುದು.

೧ ಸತ್ಯದ ಬಗ್ಗೆ ಆಗ್ರಹವೇ ಸತ್ಯಾಗ್ರಹ. ಈ ಆಗ್ರಹದಿಂದ ಮನುಷ್ಯನಿಗೆ ಅತುಲ ಬಲವು ಬರುವುದು. ಈ ಬಲ ಸತ್ಯಾಗ್ರಹದ ಬಲ ಎಂದು ತಿಳಿಯುವೆವು.

೨ ಸತ್ಯದ ಬಗ್ಗೆ ನಿಜವಾಗಿಯೂ ನಮ್ಮ ಆಗ್ರಹವಿದ್ದರೆ ಅದನ್ನು ತಂದೆ-ತಾಯಿ, ಸ್ತ್ರೀ-ಪುರುಷ, ರಾಜ-ಪ್ರಜೆ, ಅಷ್ಟೇಕೆ-ಇಡೀ ಜಗತ್ತೇ ಎದುರಿಸಿದರೂ ನಾವು ನಡೆಸಬೇಕಾಗುವುದು. ಅದೇ ನಿಜವಾದ ಸತ್ಯಾಗ್ರಹ.

೩ ಇಷ್ಟು ವ್ಯಾಪಕವಾದ ಆಗ್ರಹದಲ್ಲಿ ಸ್ವಜನರು ಪರ ಜನರು, ಮಕ್ಕಳು ಮುದುಕರು, ಸ್ತ್ರೀಯರು ಪುರುಷರು, ಎಂಬ ಭೇದವು ಸಾಧ್ಯವಿಲ್ಲ. ಶಾರೀರಿಕ ಬಲವನ್ನು ಯಾರ ವಿರುದ್ಧವಾಗಿಯೂ ಉಪಯೋಗಿಸಬಾರದು. ಶರೀರದ ಬಲ ಒಂದನ್ನು ಬಿಟ್ಟರೆ ಉಳಿದುದು ಅಹಿಂಸೆಯ ಬಲ, ಪ್ರೇಮದ ಬಲ. ಈ ಬಲಕ್ಕೆ ಆತ್ಮಬಲವೆನ್ನುವರು.

೪ ಪ್ರೇಮದ ಬಲದಿಂದ ತನಗೇ ದುಃಖವಾಗುವುದು, ಅನ್ಯರಿಗಲ್ಲ. ಆದ್ದರಿಂದ ಸತ್ಯಾಗ್ರಹಿಯಲ್ಲಿ ಮರಣ ಪರ್ಯಂತರದ ಎಲ್ಲ ಕಷ್ಟಗಳನ್ನು ನಗುಮೊಗದಿಂದ ಸಹಿಸುವ ಶಕ್ತಿ ಇರಬೇಕು.

೫ ಪ್ರತಿಪಕ್ಷಿಯು ಬಹಳವಾಗಿ ವಿರೋಧಿಸುತ್ತಿದ್ದರೂ ಸತ್ಯಾಗ್ರಹಿಯು ಕಾಯಾ ವಾಚಾ ಮನಸಾ ಅವನ, ಅಥವಾ ಅವನ ಪಕ್ಷದ ಯಾವುದೆ ವ್ಯಕ್ತಿಯ ಅಹಿತವನ್ನು ಬಯಸುವುದೂ ಇಲ್ಲ, ಮಾಡುವುದೂ ಇಲ್ಲ. ಇಂತಹ ವಿಚಾರಗಳಿಂದಲೆ ಅಸಹಕಾರ, ಸವಿನಯ ಕ್ಯಾದೆಭಂಗ ಮೊದಲಾದುವು ಹುಟ್ಟುತ್ತವೆ.

೬ ಸತ್ಯಾಗ್ರಹದ ಈ ಉತ್ಪತ್ತಿಯನ್ನು ನೆನಪಿನಲ್ಲಿಟ್ಟವರಿಗೆ ಕೆಳಗಿನ ನಿಯಮಗಳು ಸುಲಭವಾಗಿ ತಿಳಿಯುವವು:

೧) ಸತ್ಯಾಗ್ರಹಿ ಯಾರೊಡನೆಯೂ ಕೋಪಿಸಿಕೊಳ್ಳುವುದಿಲ್ಲ.

೨) ವಿರೋಧಿಗಳ ಸಿಟ್ಟನ್ನು ಸಹಿಸುವನು.

೩) ತನ್ನ ಕೋಪವನ್ನು ಸಹಿಸುತ್ತ ವಿರೋಧಿಯ ಹೊಡೆತಗಳನ್ನೂ ಸಹಿಸುವನು. ಆದರೆ ಅವನಿಗೆ ತಿರುಗಿ ಹೊಡೆಯುವುದಿಲ್ಲ. ವಿರೋಧಿಯು ಸಿಟ್ಟಿನ ಭರದಲ್ಲಿ ಮಾಡಿದ ಯೋಗ್ಯವಾದ ಅಥವಾ ಅಯೋಗ್ಯವಾದ ಅಪ್ಪಣೆಯನ್ನು ಹೆದರಿಕೆಗಾಗಲಿ ಹೊಡೆತಗಳಿಗಾಗಲಿ ಒಪ್ಪಿ ಅವನಿಗೆ ವಶವಾಗುವುದಿಲ್ಲ.

೪) ಪೋಲೀಸರು ಹಿಡಿಯಲು ಬಂದರೆ ಸಂತೋಷದಿಂದ ಅವರ ವಶನಾಗುತ್ತಾನೆ. ತನ್ನ ವಸ್ತುಗಳ ಜಪ್ತಿಗೆ ಬಂದರೆ ಅದಕ್ಕೂ ಆಕ್ಷೇಪಿಸದೆ ಒಪ್ಪುತ್ತಾನೆ.

೫) ಎರಡನೆಯವರ ಆಸ್ತಿಯ ರಕ್ಷಣೆಯ ಹಕ್ಕು ಅವನಿಗಿರುವುದು. ಅದನ್ನು ಅವನು ಜೀವ ಹೋದರೂ ಬಿಟ್ಟುಕೊಡುವುದಿಲ್ಲ. ಅದನ್ನು ವಶಪಡಿಸಿಕೊಳ್ಳಲು ಬಂದವನನ್ನು ಹೊಡೆಯುವುದಿಲ್ಲ.

೬) ಹೊಡೆಯುವುದೂ ಇಲ್ಲ, ಎಂದರೆ ಬೈಯುವುದೂ ಇಲ್ಲ.

೭) ಸತ್ಯಾಗ್ರಹಿಯು ವಿರೋಧಿಯ ಮಾನ ಕಳೆಯುವುದಿಲ್ಲ. ಈಗ ದೇಶದಲ್ಲಿ ಆಗುತ್ತಿರುವ ಎಷ್ಟೋ ಜಯಘೋಷಗಳು ಹಿಂಸಾತ್ಮಕವಿರುವವು. ಸತ್ಯಾಗ್ರಹಿಯು ಅವನ್ನು ಬಿಟ್ಟುಬಿಡುವನು.

೮) ಸತ್ಯಾಗ್ರಹಿಯು ಬ್ರಿಟಿಷರ ಧ್ವಜಕ್ಕೆ ವಂದನೆ ಮಾಡುವುದಿಲ್ಲ. ಆದರೆ ಅವನು ಅದರ ಅಪಮಾನ ಮಾಡುವುದಿಲ್ಲ. ಅಧಿಕಾರಿಗಳ, ಇಂಗ್ಲಿಷ್ ಜನರ ಅಪಮಾನವನ್ನೂ ಮಾಡುವುದಿಲ್ಲ.

೯) ಸರಕಾರದೊಡನೆ ಹೋರಾಟ ನಡೆದಾಗ ಕೂಡ ಇಂಗ್ಲಿಷ್ ಜನರ, ಅಧಿಕಾರಿಗಳ ಅಪಮಾನವನ್ನು ಮಾಡಲು ಯಾರಾದರೂ ಬಂದರೆ, ಯಾರಾದರೂ ಹೊಡೆಯಬಂದರೆ ಸತ್ಯಾಗ್ರಹಿ ತನ್ನ ಜೀವದ ಹಂಗುದೊರೆದು ಅವರನ್ನು ರಕ್ಷಿಸುವನು.

ಸೆರೆಮನೆಯ ವಿಷಯವಾಗಿ:

೧೦) ಸತ್ಯಾಗ್ರಹಿಯು ಸೆರೆಮನೆಯಲ್ಲಿ ತನ್ನ ಮಾನಕ್ಕೆ ಕುಂದುಬಾರದ ಎಲ್ಲ ನಿಯಮಗಳನ್ನೂ ಪಾಲಿಸುವನು. ಅಧಿಕಾರಿಗಳೊಡನೆ ವಿವೇಕದಿಂದ,

ವಿನಯದಿಂದ ವರ್ತಿಸುವನು. ಉದಾಹರಣೆಗೆ: ಸತ್ಯಾಗ್ರಹಿಯು ಅಧಿಕಾರಿಗಳಿಗೆ ನಮಸ್ಕಾರ ಮಾಡುವನು. ಆದರೆ ನೆಲಕ್ಕೆ ಮೂಗು ತಿಕ್ಕುವ ಅಪ್ಪಣೆಯನ್ನು ಪಾಲಿಸಲಾರನು. 'ಸರಕಾರಕ್ಕೆ ಜಯವಾಗಲಿ' ಎನ್ನಲು ಹೇಳಿದರೆ, ಹಾಗೆ ಮಾಡಲಾರ. ಧರ್ಮದ ಕಟ್ಟು-ಕಟ್ಟಳೆಗಳಿಲ್ಲದಿದ್ದರೆ ಸೆರೆಮನೆಯ ಸ್ವಚ್ಛವಾದ ಆಹಾರವನ್ನು ತೆಗೆದುಕೊಳ್ಳುವನು. ಆದರೆ ಅಪಕ್ವ, ಕೊಳೆತ, ಹೊಲಸು ಪಾತ್ರೆಯಲ್ಲಿ ಬಡಿಸಿದ, ಅಪಮಾನ ಮಾಡುವ ಉದ್ದೇಶದಿಂದ ಕೊಟ್ಟ, ಆಹಾರ ತೆಗೆದುಕೊಳ್ಳುವುದಿಲ್ಲ.

೧೧) ಕೊಲೆಮಾಡಿ ಸೆರೆಮನೆಗೆ ಬಂದ ಕೈದಿಗಳ ನಡುವೆ, ಮತ್ತು ತನ್ನ ನಡುವೆ, ಸತ್ಯಾಗ್ರಹಿ ಭೇದ ಎಣಿಸುವುದಿಲ್ಲ. ಅವರಿಗಿಂತಲೂ ತಾನು ಉಚ್ಚನೆಂದು ತಿಳಿದುಕೊಂಡು, ಅಧಿಕಾರಿಗಳಿಗೆ ಹಾಗೆ ಹೇಳಿ, ತನಗೆ ಹೆಚ್ಚಿನ ಅನುಕೂಲತೆಗಳನ್ನು ಕೇಳುವುದಿಲ್ಲ. ಶರೀರಕ್ಕೂ ಆತ್ಮಕ್ಕೂ ಅವಶ್ಯವಾಗಿ ಬೇಕಾಗುವ ವಸ್ತುಗಳನ್ನು ಕೇಳಲು ಎಲ್ಲರಿಗೂ ಅಧಿಕಾರವುಂಟು.

೧೨) ಯಾವ ಅನುಕೂಲತೆಗಳು ಸಿಕ್ಕದಿದ್ದರೆ ಮಾನಹಾನಿಯಾಗುವುದಿಲ್ಲವೊ, ಅಂಥವು ಸಿಕ್ಕದಿದ್ದರೂ ಸತ್ಯಾಗ್ರಹಿ ಉಪವಾಸಾದಿಗಳನ್ನು ಮಾಡುವುದಿಲ್ಲ.

ದಲದ ವಿಷಯವಾಗಿ:

೧೩) ತನ್ನ ಗುಂಪಿನ ಅಧಿಕಾರಿಯು ಹೊರಡಿಸಿದ ಅಪ್ಪಣೆಗಳು ತನ್ನ ಮನಸ್ಸಿಗೆ ಬರಲಿ ಬರದಿರಲಿ, ಅವನ್ನು ಸತ್ಯಾಗ್ರಹಿ ಸಂತೋಷದಿಂದ ಪಾಲಿಸುವನು.

೧೪) ಅಪ್ಪಣೆ ಅಪಮಾನಕಾರಿಯಾದುದು, ದ್ವೇಷಯುಕ್ತವಾದುದು, ಮತ್ತು ಮೂರ್ಖತನದ್ದು ಎಂದೆನಿಸಿದರೂ ಅದನ್ನು ಮೊದಲು ಪಾಲಿಸಿ ಆ ಮೇಲೆ ಅದರ ಬಗ್ಗೆ ಮೇಲಿನ ಅಧಿಕಾರಿಗಳಿಗೆ ತಿಳಿಸುವನು. ದಲದಲ್ಲಿ ಸೇರುವ ಮೊದಲು ಆ ದಲವು ಯೋಗ್ಯವಿರುವುದೊ ಇಲ್ಲವೊ ಎಂದು ಯೋಚಿಸುವ ಹಕ್ಕು ಅವನಿಗಿದೆ. ಒಮ್ಮೆ ಸೇರಿದ ಬಳಿಕ ಅದರ ಕಹಿ ಸಿಹಿ ನಿಯಮಗಳನ್ನೆಲ್ಲ ಪಾಲಿಸುವುದು ಅವನ ಧರ್ಮ. ದಲದಲ್ಲಿದ್ದೂ ನಿಯಮಗಳನ್ನು ಮುರಿಯಲು ಅವನಿಗೆ ಅಧಿಕಾರವಿರುವುದಿಲ್ಲ.

೧೫) ತನ್ನನ್ನು ಅವಲಂಬಿಸಿಕೊಂಡಿರುವವರ ಹೊಟ್ಟೆಯ ಬಗ್ಗೆ ಸತ್ಯಾಗ್ರಹಿ ಯಾರಿಂದಲೂ ಏನೂ ಅಪೇಕ್ಷಿಸುವುದಿಲ್ಲ. ತನ್ನನ್ನು ಅವಲಂಬಿಸಿಕೊಂಡವರ

ಉದರ-ಪೋಷಣೆಯ ವ್ಯವಸ್ಥೆ ಆದರೆ ಅದು ಅನಪೇಕ್ಷಿತವಾಗಿ ಆದದ್ದೆಂದು ತಿಳಿಯುವನು. ತನ್ನ ಆಶ್ರಿತರನ್ನು ಈಶ್ವರನ ಚರಣದಲ್ಲಿ ಅರ್ಪಿಸುವನು. ಎಲ್ಲಿ ಶಾರೀರಿಕ ಬಲದ ಯುದ್ಧಗಳಾಗುವವೊ ಅಲ್ಲಿ ಸಾವಿರಾರು ಜನರು ಭಾಗವಹಿಸುವರು. ಅಂಥ ಕಡೆಗಳಲ್ಲಿ ಕೂಡ, ಯಾರೂ ಯಾರನ್ನೂ ಅವಲಂಬಿಸಿಕೊಂಡಿರುವುದಿಲ್ಲ. ಎಂದ ಮೇಲೆ ಸತ್ಯಾಗ್ರಹೀ-ಯುದ್ಧದ ವಿಷಯ ಕೇಳಬೇಕಾದುದೇನು? ಇಂಥವರನ್ನು ಈಶ್ವರನು ಹಸಿವಿನಿಂದ ಬಳಲಿಸಿ ಕೊಲ್ಲುವುದಿಲ್ಲವೆಂಬುದು ಸರ್ವರಿಗೂ ಬಂದ ಅನುಭವ.

ಜಾತಿ-ಜಾತಿಗಳ ನಡುವಿನ ಜಗಳದಲ್ಲಿ:

೧೬) ಸತ್ಯಾಗ್ರಹಿಯು ಜಾತೀಯ ಜಗಳಕ್ಕೂ ತಿಕ್ಕಾಟಗಳಿಗೂ ತಿಳಿದೂ ತಿಳಿದೂ ಕಾರಣನಾಗುವುದಿಲ್ಲ.

೧೭) ಜಾತೀಯ ಜಗಳದಲ್ಲಿ ಸತ್ಯಾಗ್ರಹಿ ಯಾವ ಪಕ್ಷಕ್ಕೂ ಸೇರುವುದಿಲ್ಲ. ನ್ಯಾಯವಾದ ಪಕ್ಷಕ್ಕೆ ಅವನು ನೆರವಾಗುತ್ತಾನೆ. ತಾನು ಹಿಂದೂ ಧರ್ಮದವನಾಗಿದ್ದರೆ ಮುಸಲ್ಮಾನ್ ಮುಂತಾದ ಇತರ ಧರ್ಮೀಯರ ಬಗ್ಗೆ ಉದಾರವೃತ್ತಿಯನ್ನು ತೋರಿಸುತ್ತಾನೆ. ಹಿಂದೂಗಳು ಅನ್ಯ ಜಾತಿಗಳ ಮೇಲೆ ಆಕ್ರಮಣ ಮಾಡಿದರೆ ಅನ್ಯ ಜಾತಿಯವರನ್ನು ತನ್ನ ಜೀವದ ಹಂಗುದೊರೆದು ಕಾಪಾಡುತ್ತಾನೆ. ಹಿಂದೂಗಳ ಮೇಲೆ ಮುಸಲ್ಮಾನ್ ಮೊದಲಾದವರು ಆಕ್ರಮಣ ಮಾಡಿದರೆ ಹಿಂದೂಗಳನ್ನುಳಿಸಲು ಪ್ರಾಣವನ್ನಾದರೂ ಕೊಡುತ್ತಾನೆ. ಆದರೆ ಪ್ರತಿಯಾಗಿ ಹೊಡಿದ ಹೋರಾಟದಲ್ಲಿ ಎಂದೂ ಸೇರುವುದಿಲ್ಲ.

೧೮) ಜಾತೀಯ ಜಗಳಗಳಿಂದ ಆದಷ್ಟು ದೂರ ಇರಲು ಯತ್ನಿಸುತ್ತಾನೆ.

೧೯) ಸತ್ಯಾಗ್ರಹಿಯು ಯಾವ ಜಾತಿಯವರ ಮನಸ್ಸನ್ನೂ ನೋಯಿಸದಂತೆ ಮೆರವಣಿಗೆ ಹೊರಡಿಸಬೇಕು. ಮನಸ್ಸನ್ನು ನೋಯಿಸಬೇಕೆಂದು ಹೊರಡಿಸಿದ ಮೆರವಣಿಗೆಯಲ್ಲಿ ಸೇರಕೂಡದು.

೧೪ ಸತ್ಯಾಗ್ರಹಿಗೆ ಅವಶ್ಯವಿರುವ ಗುಣಗಳು

('ಹರಿಜನ ಬಂಧು'ವಿನಲ್ಲಿ ೧೯೪೯ರ ಮಾರ್ಚ್ ೨೬ರಂದು ಗಾಂಧೀಜಿ ಬರೆದುದು.)

೧ ಸತ್ಯಾಗ್ರಹಿಯು ಪರಮಾತ್ಮನಲ್ಲಿ ಸಂಪೂರ್ಣ, ಜೀವಂತ ಶ್ರದ್ಧೆಯುಳ್ಳವನಿರುವನು. ಪರಮಾತ್ಮನೇ ಸನಾತನವಾದ ಆಧಾರನು.

೨ ಧರ್ಮದಲ್ಲಿಟ್ಟಿರುವಷ್ಟು ಆಸ್ಥೆಯನ್ನು ಸತ್ಯಾಗ್ರಹಿ ಸತ್ಯ ಅಹಿಂಸೆಗಳಲ್ಲಿಯೂ ಇಟ್ಟಿರುವನು. ಆದುದರಿಂದ ಮನುಷ್ಯನಲ್ಲಿರುವ ಸ್ವಾಭಾವಿಕ ಒಳ್ಳೆ-ತನದಲ್ಲಿ ಅವನ ವಿಶ್ವಾಸವಿರುವುದು. ಈ ಒಳ್ಳೆತನವನ್ನು ಜಾಗ್ರತಗೊಳಿಸಲು ಅವನು ಯಾವಾಗಲೂ ಹೆಣಗುವನು. ಈ ಪ್ರಯತ್ನವನ್ನು ಸತ್ಯದ, ಪ್ರೇಮದ ಮಾರ್ಗದಿಂದಲೆ ನಡೆಸುವನು. ಹಾಗೆ ಮಾಡುವಾಗ ಬಂದ ಕಷ್ಟ ನಷ್ಟಗಳನ್ನೆಲ್ಲ ತಾಳ್ಮೆಯಿಂದ ಸಹಿಸುವನು.

೩ ಅವನ ಜೀವನ-ಕ್ರಮವು ಯಾವಾಗಲೂ ಶುದ್ಧವಿರಬೇಕು. ತನ್ನ ಕಾರ್ಯಕ್ಕಾಗಿ ಸರ್ವಸ್ವವನ್ನೂ ಆನಂದದಿಂದ ಬಲಿಕೊಡಲು ಅವನು ಸಿದ್ಧನಿರಬೇಕು.

೪ ಅವನು ಸತತವಾಗಿ ಖಾದೀಧಾರಿಯಾಗಿದ್ದು ನೂಲುತ್ತಿರಬೇಕು. ಹಿಂದೀ ಜನರಿಗೆ ಇದು ಅವಶ್ಯ.

೫ ಅವನು ನಿರ್ವ್ಯಸನಿಯೂ ಮಾದಕ ಪದಾರ್ಥಗಳನ್ನು ಬಿಟ್ಟವನೂ ಇರಬೇಕು. ಇದರಿಂದ ಅವನ ಮನಸ್ಸು ನಿರ್ಮಲವೂ ನಿಶ್ಚಲವೂ ಇರಬಲ್ಲುದು.

೬ ಕಾಲ ಕಾಲಕ್ಕೆ ಮಾಡಲಾದ ಶಿಸ್ತಿನ ನಿಯಮಗಳನ್ನು ಅವನು ಸ್ವ-ಸಂತೋಷದಿಂದಲೂ ಬಿಡದೆಯೂ ಪಾಲಿಸುವನು.

೭ ಸಾಮಾನ್ಯವಾಗಿ, ಸೆರೆಮನೆಯ ನಿಯಮಗಳನ್ನು ಅವನು ಪಾಲಿಸುವನು. ಆದರೆ ಮಾನಭಂಗವಾಗುವಂಥವುಗಳನ್ನು ಮುರಿಯುವನು.

೧೫ ಸಾಮುದಾಯಿಕ ಕ್ಯಾದೆಭಂಗ

೧ ಯಾವುದೇ ಸ್ಥಾನದಲ್ಲಿ ಸಾಮುದಾಯಿಕ ಸತ್ಯಾಗ್ರಹವನ್ನು ಹೂಡಬೇಕಾದರೆ ಕೆಳಗೆ ತೋರಿಸಿದ ಅನುಕೂಲ ಪರಿಸ್ಥಿತಿ ಬೇಕು. ಇಲ್ಲದಿದ್ದರೆ ಹಿಂಸೆ, ಪರಸ್ಪರ ವೈರಭಾವ, ಒತ್ತಾಯ, ಮತ್ತು ದಮನ-ನೀತಿಯ ಮೂಲಕ ಉಂಟಾಗುವ ಭಯ-ಭೀತಿ ಮುಂತಾದುವುಗಳ ಪ್ರಾದುರ್ಭಾವವಾಗುವ ಸಂಭವವಿದೆ.

೨ ಸತ್ಯಾಗ್ರಹವನ್ನು ಯೋಜಿಸುವ ಮುಂದಾಳುಗಳಲ್ಲಿ ಒಮ್ಮನಸ್ಸು, ಪರಸ್ಪರರಲ್ಲಿ ವಿಶ್ವಾಸ ಅವಶ್ಯ. ಪರಸ್ಪರರ ನಡತೆಯಲ್ಲಿ ಸಂಶಯ, ಮುಂದಾಳುಗಳ ಧೋರಣೆಯ ಬಗ್ಗೆ ಅನುಯಾಯಿಗಳಲ್ಲಿ ಅವಿಶ್ವಾಸ, ಅರೆವಿಶ್ವಾಸ ಕಂಡು ಬಂದರೆ ಅದು ಪ್ರತಿಕೂಲ ಪರಿಸ್ಥಿತಿ ಎಂದು ತಿಳಿಯಬೇಕು.

೩ ಸತ್ಯಾಗ್ರಹವನ್ನು ಯೋಜಿಸುವ ಮುಂದಾಳುಗಳು ಬೇರೆ ಬೇರೆ ರಾಜಕೀಯ ವಿಚಾರದವರಾದರೆ ಆ ಆ ಸತ್ಯಾಗ್ರಹದ ತಾತ್ಕಾಲಿಕ ಉದ್ದೇಶವನ್ನು ಕುರಿತು ಎಲ್ಲರಲ್ಲೂ ಸ್ಪಷ್ಟ ತಿಳಿವಳಿಕೆ ಇರಬೇಕು. ಸತ್ಯಾಗ್ರಹ ನಡೆಯುತ್ತಿರುವ ವರೆಗೆ, ಮತಭೇದಗಳುಳ್ಳ ರಾಜಕೀಯ ವಾದ-ವಿವಾದಗಳನ್ನು ನಿಲ್ಲಿಸಬೇಕೆಂಬ ಬಗ್ಗೆ ಎಲ್ಲರಲ್ಲಿ ಒಮ್ಮತವಿರಬೇಕು.

೪ ಮುಂದಾಳುಗಳು ಸೂಚಿಸಿದ ಕ್ರಮಗಳನ್ನು ಸ್ವಸಂತೋಷದಿಂದಲೂ ಜಿಗುಟುತನದಿಂದಲೂ ಪಾಲಿಸುವಷ್ಟು ವಿಶ್ವಾಸವನ್ನು ಆ ಆ ಅನುಯಾಯಿಗಳು ಮುಂದಾಳುಗಳಲ್ಲಿ ಇಟ್ಟಿರಬೇಕು. ಇಂತಹ ಕೆಲಸವನ್ನು ಮಾಡಬೇಡಿರಿ ಎಂದು ಹೇಳಿದ್ದನ್ನು ಕೇಳುವಷ್ಟು ಆ ಆ ಅನುಯಾಯಿಗಳ ಮೇಲೆ ಮುಂದಾಳುಗಳ ವರ್ಚಸ್ಸು ಇರಲೇ ಬೇಕು.

೫ ವಿರೋಧಿಪಕ್ಷಗಳು ಹೊರಿಸಬಹುದಾದ ಯಾವುದೇ ದೋಷಾರೋಪಗಳನ್ನು ನಂಬದಷ್ಟು ವಿಶ್ವಾಸವನ್ನು ಅನುಯಾಯಿಗಳು ಮುಂದಾಳುಗಳಲ್ಲಿ ಇಟ್ಟಿರಬೇಕು. ಅಂಥ ಯಾವ ದೋಷಾರೋಪಗಳಿಂದಲೂ ಅನುಯಾಯಿಗಳಲ್ಲಿ ಬುದ್ಧಿಭೇದವಾಗಕೂಡದು.

೬ ಸ್ವರಾಜ್ಯದ ಬಗ್ಗೆ ಇಲ್ಲವೆ ಹೊಣೆಗಾರ ರಾಜ್ಯಪದ್ಧತಿಯ ಬಗ್ಗೆ ಸತ್ಯಾಗ್ರಹ ಹೂಡುವುದಾದರೆ, ತತ್ಪೂರ್ವದಲ್ಲಿ ಜಾತಿ ಜಾತಿಗಳ ಪ್ರಶ್ನೆಗಳನ್ನು ಆದಷ್ಟು ಮಟ್ಟಿಗೆ ಬಿಡಿಸಿರುವುದು ಅವಶ್ಯ. ಆ ಪ್ರಶ್ನೆಗಳನ್ನೆತ್ತಿ ಒಡಕು ಹುಟ್ಟಿಸಲು ವಿರೋಧಿಪಕ್ಷಕ್ಕೆ ಅವಕಾಶವಿರಕೂಡದು. (ಈ ಬಗ್ಗೆ ಈಗ ಗಾಂಧೀಜಿಯವರ ಮತವು ಹೀಗಿದೆ: ಪರಕೀಯ ಸತ್ತೆ ಇಲ್ಲಿರುವ ವರೆಗೆ ಜಾತಿ ಜಾತಿಗಳ ಪ್ರಶ್ನೆ ಬಿಡುವುದು ದುಸ್ಸಾಧ್ಯ. ಆದ್ದರಿಂದ ಸತ್ಯಾಗ್ರಹ ಹೂಡದಿರಲು ಅದು ಕಾರಣವಾಗಲಾರದು. -ಸಂಪಾದಕ)

೭ 'ಸತ್ಯಾಗ್ರಹಿಗೆ ಅವಶ್ಯವಿರುವ ಗುಣಗಳು' ಎಂಬ ಪ್ರಕರಣದಲ್ಲಿ ಹೇಳಿದ ಮಾತುಗಳಲ್ಲಿ ವಿಶ್ವಾಸವಿದ್ದರೂ ಅವುಗಳನ್ನು ಕೂಡಲೆ ಪೂರೈಸುವ ಸಾಮರ್ಥ್ಯವಿಲ್ಲದಿದ್ದವರು ಸತ್ಯಾಗ್ರಹದ ತೀವ್ರ ಹೊಣೆಗಾರ ಕಾರ್ಯಕ್ರಮಗಳಲ್ಲಿ ಸೇರಬಾರದು. ಆದರೆ ಅವರು ರಚನಾತ್ಮಕ ಕಾರ್ಯವನ್ನು ಚನ್ನಾಗಿ ನಡೆಸಬೇಕು, ಅದರ ಹೊಣೆ ಹೊರಬೇಕು. ಜನರು ಅದಕ್ಕೆ ಪೂರ್ಣ ಬೆಂಬಲ ಕೊಡಬೇಕು.

೮ ಸತ್ಯ ಅಹಿಂಸೆಗಳ ಮುಖಾಂತರ ಸ್ವರಾಜ್ಯ ದೊರಕಿಸಲು ಜಾತಿ ಜಾತಿಗಳ ಐಕ್ಯ, ಅಸ್ಪೃಶ್ಯತಾನಿವಾರಣೆ, ವ್ಯಾಪಕ ಖಾದೀ ಪ್ರಚಾರ, ಮದ್ಯ

ಮಾದಕ ಪದಾರ್ಥಗಳ ಪ್ರತಿಬಂಧ, ಮುಂತಾದುವುಗಳ ಬಗ್ಗೆ ಜನಸಾಮಾನ್ಯರ ದೊಡ್ಡ ಬಹುಮತವು ಅವಶ್ಯ. ಹಾಗೆಯೇ, ಸತ್ಯಾಗ್ರಹ-ಮಾರ್ಗದ ಬಗ್ಗೆ ಸಹಾನುಭೂತಿ ಇದ್ದವರಲ್ಲಿ ಪೂರ್ಣ ಒಮ್ಮತವೂ ಅವಶ್ಯ. ಹೀಗಿರದಿದ್ದರೆ ಸಾಮುದಾಯಿಕ ಸತ್ಯಾಗ್ರಹಕ್ಕೆ ಅನುಕೂಲ ಪರಿಸ್ಥಿತಿ ಇದೆ ಎಂದು ಹೇಳಲಿಕ್ಕಾಗದು. ಆ ವರೆಗೆ ನಿಜವಾದ ಸ್ವರಾಜ್ಯವು ಅಶಕ್ಯಪ್ರಾಯವೇ ಸರಿ.

೯ ಸತ್ಯಾಗ್ರಹದ ಯಾವುದೇ ಹೋರಾಟವನ್ನು ಹೂಡುವ ಮೊದಲೂ, ಹಾಗೆಯೇ, ಅದು ನಡೆದಿರುವಾಗಲೂ ವಿರೋಧಿ ಪಕ್ಷ, ವಿರೋಧಿ ಸಂಸ್ಥೆ, ಇಲ್ಲವೆ ಅಧಿಕಾರಿಗಳನ್ನು ಕುರಿತು ಜನಸಾಮಾನ್ಯರಲ್ಲಿ ತಿರಸ್ಕಾರ-ಭಾವನೆ ಇರಕೂಡದು. ಅಂಥ ಭಾವನೆ ಉಂಟಾಗುವಂಥ ಭಾಷೆಯನ್ನು ಉಪಯೋಗಿಸಕೂಡದು. ಅಂಥ ಭಾಷೆ ಉಪಯೋಗಿಸುವಂಥ ಪ್ರಚಾರಕರನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಸಾಧ್ಯವಾಗದಿದ್ದರೆ ಸತ್ಯಾಗ್ರಹಕ್ಕೆ ಪರಿಸ್ಥಿತಿ ಅನುಕೂಲವಿಲ್ಲ ಎಂದು ತಿಳಿಯಬೇಕು.

೧೦ ಸತ್ಯಾಗ್ರಹಕ್ಕೆ ಗುಪ್ತ ವ್ಯವಸ್ಥೆ ಅವಶ್ಯವಿಲ್ಲ ಎಂಬ ವಿಶ್ವಾಸವಿಲ್ಲದಿದ್ದರೆ ಅದು ಅನುಕೂಲ ಸ್ಥಿತಿಯಲ್ಲ ಎಂದು ತಿಳಿಯಬೇಕು.

೧೧ ಪರಿಸ್ಥಿತಿ ಅನುಕೂಲವಾಗುವ ವರೆಗೆ ಚತುರ್ವಿಧ (ಈಗ ಚತುರ್ದಶ ವಿಧ. –ಸಂಪಾದಕ) ರಚನಾತ್ಮಕ ಕಾರ್ಯಕ್ರಮಗಳನ್ನೂ ಲೋಕಸೇವೆಯ ಇತರ ಕಾರ್ಯಕ್ರಮಗಳನ್ನೂ ಮಾಡುತ್ತಿರುವುದೇ ಸ್ವರಾಜ್ಯದ ಸಾಧನೆ ಎನ್ನಿಸುವುದು. ಇಂಥ ಸಾಧನೆಯನ್ನು ವರ್ಷಾನುವರುಷ ಮಾಡುವ ಸಂದರ್ಭ ಬಂದರೂ ಅದರಲ್ಲಿ ಹಾನಿ ಏನೂ ಇಲ್ಲ. ಅದು ಪ್ರಗತಿಯೇ ಸರಿ. ಅದು ತುಚ್ಛ ಪ್ರಗತಿಯಲ್ಲ.

ಪಂಚಮ ಖಂಡ

ಸ್ವರಾಜ್ಯ

೧ ರಾಮರಾಜ್ಯ

೧ ರಾಮರಾಜ್ಯವೇ ಸ್ವರಾಜ್ಯದ ಆದರ್ಶ. ರಾಮರಾಜ್ಯವೆಂದರೆ ಧರ್ಮದ ರಾಜ್ಯ, ಅಥವಾ ನ್ಯಾಯದ, ಪ್ರೇಮದ ರಾಜ್ಯ. ಅದಕ್ಕೆ ಅಹಿಂಸಕ ಸ್ವರಾಜ್ಯ,

ಜನತೆಯ ಸ್ವರಾಜ್ಯ, ಎನ್ನಲೂ ಬಹುದು.

೨ ಜನರ ಸ್ವರಾಜ್ಯವೆಂದರೆ, ಪ್ರತಿಯೊಂದು ವ್ಯಕ್ತಿಯ ಸ್ವರಾಜ್ಯದ ಮೂಲಕ ಉಂಟಾದ ಪ್ರಜಾಸತ್ತಾತ್ಮಕ ರಾಜ್ಯ. ಪ್ರತಿಯೊಬ್ಬ ವ್ಯಕ್ತಿ ತನ್ನ ನಾಗರಿಕ-ಧರ್ಮದ ಪರಿಪಾಲನೆ ಮಾಡುವುದರಿಂದ ಈ ಬಗೆಯ ರಾಜ್ಯ-ನಿರ್ಮಾಣ ವಾಗುವುದು.

೩ (ಅ) ಈ ಬಗೆಯ ಸ್ವರಾಜ್ಯದಲ್ಲಿ ಯಾವನಿಗೂ ತನ್ನ ಅಧಿಕಾರದ ಅಹಂಕಾರಪೂರ್ವಕ ಅರಿವು ಎಂಬುದಿಲ್ಲ. ಅವಶ್ಯವಿದ್ದಾಗ ಆ ಆ ಅಧಿಕಾರವು ಅವನ ಕಡೆಗೆ ಬಂದೇ ಬರುವುದು. ಜನರು ಈ ರಾಜ್ಯದಲ್ಲಿ ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ. ಆದರೆ ಎಲ್ಲರೂ ತಮ್ಮ ತಮ್ಮ ಧರ್ಮ ವನ್ನೂ ಕರ್ತವ್ಯವನ್ನೂ ತಿಳಿದುಕೊಳ್ಳಲೇಬೇಕು. ಪ್ರತಿಯೊಂದು ಕರ್ತವ್ಯ ಪಾಲನೆಯ ಫಲವಾಗಿಯೂ ಯಾವುದೊಂದು ಹಕ್ಕು ತನ್ನಿಂದ ತಾನೆ ಸಿಗು ವುದು. ಕರ್ತವ್ಯ-ಪಾಲನೆಯ ಮೂಲಕ ಸಿಕ್ಕ ಹಕ್ಕು ಅಧಿಕಾರಗಳೇ ನಿಜವಾದ ಹಕ್ಕು ಅಧಿಕಾರಗಳು.

(ಆ) ಸೇವಾಧರ್ಮವನ್ನು (ಲೋಕ ಸೇವೆ) ಪಾಲಿಸುವವನಿಗೆ ಮಾತ್ರ ನಾಗರಿಕತನದ ನಿಜವಾದ ಹಕ್ಕುಗಳು ಪ್ರಾಪ್ತವಾಗುವವು, ದಕ್ಕುವವು.

(ಇ) ಹಾಗೆಯೇ, ಸತ್ಯವನ್ನೂ ಅಹಿಂಸಾಧರ್ಮವನ್ನೂ ಪಾಲಿಸುವವರಿಗೆ ಮಾತ್ರ ಪ್ರತಿಷ್ಠೆಯೂ, ಆ ಮೂಲಕ ಅಧಿಕಾರಗಳೂ ದೊರಕುವವು. ಅಂಥ ವರು ತಮ್ಮ ಅಧಿಕಾರಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸದೆ ಸೇವೆಗಾಗಿಯೇ ಉಪಯೋಗಿಸುವರು.

೪ ರಾಮರಾಜ್ಯದಲ್ಲಿ ಒಂದು ಕಡೆ ಅಪಾರವಾದ ಸಂಪತ್ತು ರಾಶಿ ರಾಶಿ ಯಾಗಿ ಬಿದ್ದಿರುವುದೂ ಇಲ್ಲ; ಇನ್ನೊಂದು ಕಡೆ ದೈನ್ಯದಿಂದ, ಹಸಿವಿನಿಂದ ಸಾಯುವುದೂ ಇಲ್ಲ. ಅಲ್ಲಿ ಯಾವನೂ ಹೊಟ್ಟೆಗೆ ಕೂಳಿಲ್ಲದೆ ಸಾಯುವುದಿಲ್ಲ. ಆ ರಾಜ್ಯವು ನಿಂತಿರುವುದು ಪಶು-ಬಲದ ಆಧಾರದಿಂದಲ್ಲ – ಜನರ ಪ್ರೀತಿಯ ಮೇಲೆ, ಜನರು ಜ್ಞಾನಪೂರ್ವಕವಾಗಿಯೂ ಸ್ವೇಚ್ಛೆಯಿಂದಲೂ ನಿರ್ಭಯ ವಾಗಿಯೂ ಮಾಡುವ ಸಹಕಾರದ ಅಡಿಗಲ್ಲಿನ ಮೇಲೆ.

೫ ರಾಮರಾಜ್ಯದಲ್ಲಿ ಬಹುಸಂಖ್ಯಾಕರಾಗಲಿ, ಬಹುಸಂಖ್ಯ ಜಾತಿಯುವ ರಾಗಲಿ, ಅಲ್ಪಸಂಖ್ಯಾಕರನ್ನೂ ಅಲ್ಪಸಂಖ್ಯ ಜಾತಿಯುವರನ್ನೂ ಕುಗ್ಗುಬಡೆ ಯುವುದಿಲ್ಲ. ಅಲ್ಪಸಂಖ್ಯಾಕರೂ ಬಹುಸಂಖ್ಯಾಕರಂತೆಯೇ ಸ್ವಾತಂತ್ರ್ಯ

ಸುಖವನ್ನು ಅನುಭವಿಸುವರು. ಬಹುಸಂಖ್ಯ ಜಾತಿಯವರು ಅಲ್ಪ ಸಂಖ್ಯ ಜಾತಿಯವರ ಹಿತಸಾಧನೆಯೇ ತಮ್ಮ ಕರ್ತವ್ಯವೆಂದು ತಿಳಿದುಕೊಳ್ಳುವರು.

೬ ರಾಮರಾಜ್ಯವು ಕೋಟಿಗಟ್ಟಲೆ ಜನರ ಸಲುವಾಗಿಯೂ ಸುಖದ ಸಲುವಾಗಿಯೂ ನಡೆಯತಕ್ಕ ರಾಜ್ಯ. ಪ್ರಜರ ನಿಜವಾದ ಸೇವಕನಿಗೇ ಆ ರಾಜ್ಯ-ಕಾರಭಾರದಲ್ಲಿ ಮುಖ್ಯ ಅಧಿಕಾರಪದವು ಸಿಕ್ಕುವುದು. ಅವನಿಗೆ ರಾಜನೆನ್ನಬಹುದು, ಅಧ್ಯಕ್ಷನೆನ್ನಬಹುದು, ಅಥವಾ ಮತ್ತಾವ ಹೆಸರಿನಿಂದಲೂ ಕರೆಯಬಹುದು. ಅವನು ಪ್ರಜರ ಸೇವಕನಾದ್ದರಿಂದಲೆ ಆ ಸ್ಥಾನವನ್ನು ಪಡೆಯುವನು. ಪ್ರಜರ ಪ್ರೀತಿಪಾತ್ರನಾಗಿದ್ದರೆ ಮಾತ್ರ ಆ ಅಧಿಕಾರ-ಸ್ಥಳದಲ್ಲಿ ಉಳಿಯುವನು; ಅವರ ಕಲ್ಯಾಣಕ್ಕಾಗಿಯೆ ಪ್ರಯತ್ನಿಸುವನು. ಅವನು ಪ್ರಜರ ಧನವನ್ನು ದುಂದುಗಾರಿಕೆಯಿಂದ ಹಾಳುಮಾಡುವವನಾಗಲಾರ. ಅಧಿಕಾರ ಬಲದಿಂದ ಪ್ರಜರನ್ನು ಪೀಡಿಸುವವನೂ ಆಗಲಾರ. ಅವನು ರಾಜನೆಂದು ಕರೆಯಲ್ಪಡುತ್ತಿದ್ದರೂ ಇರುವುದು ಯತಿಯಂತೆ

೭ ರಾಮರಾಜ್ಯದಲ್ಲಿ ಆಳಿಕೆ ಎಂಬುದು ತೀರ ಕಡಮೆ. ಜನರು ತಾವೇ ಸೇರಿಕೊಂಡು ರಾಜ್ಯಕಾರಭಾರವನ್ನು ತಾವೇ ಹೆಚ್ಚಾಗಿ ನಡೆಸಿಕೊಳ್ಳುತ್ತಿರುವರು. ಜನರಿಗೆ ಶಿಕ್ಷೆಯ ಭಯವನ್ನು ತೋರಿಸಿ ಕಟ್ಟಳೆಗಳನ್ನು ಪಾಲಿಸಲು ಒತ್ತಾಯಪಡಿಸುವ ಕ್ರಮವು ಅಲ್ಲಿರಬಾರದು. ಪ್ರಜರು ತಮ್ಮಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳುವುದಕ್ಕಾಗಿ ಕೌನ್ಸಿಲ್ಲು-ಅಸೆಂಬ್ಲಿಗಳ, ಅಧಿಕಾರಿಗಳ ಸಹಾಯವನ್ನು ಕೋರುತ್ತ ಕುಳಿತುಕೊಳ್ಳುವುದಿಲ್ಲ. ಜನರು ತಾವಾಗಿ ಮಾಡಿಕೊಂಡ ಸುಧಾರಣೆಗಳಿಗೆ ಅನುಕೂಲವಾಗುವಂತಹ ಕ್ಕಾಯಿದೆಗಳನ್ನು ತಿದ್ದುವುದಕ್ಕಾಗಿ ಕೌನ್ಸಿಲ್ಲು-ಅಸೆಂಬ್ಲಿಗಳು ಯತ್ನಿಸುವವು; ವ್ಯವಸ್ಥೆಯನ್ನು ಸರಿಯಾಗಿ ಇಡುವುದಕ್ಕಾಗಿ ಅಧಿಕಾರಿಗಳು ಹೆಣಗುವರು.

೮ ರಾಮರಾಜ್ಯದಲ್ಲಿ ಒಕ್ಕಲುತನವು ಸುಸ್ಥಿತಿಯಲ್ಲಿರುವುದು. ಇತರ ಉದ್ಯೋಗಗಳು ಇದನ್ನವಲಂಬಿಸಿಕೊಂಡೇ ನಡೆಯುತ್ತಿರುವವು. ಅನ್ನ ವಸ್ತ್ರಗಳ ವಿಷಯದಲ್ಲಿ ಪ್ರಜರು ಸ್ವತಂತ್ರರಿರುವರು. ಹೋರಿ-ಹಸುಗಳ ಸ್ಥಿತಿ ಸಾಕಷ್ಟು ಚನ್ನಾಗಿರುವುದರಿಂದ ಆದರ್ಶ ಗೋರಕ್ಷಣೆ ಅಲ್ಲಿ ಆಗುತ್ತಿರುವುದು.

೯ ರಾಮರಾಜ್ಯದಲ್ಲಿ ಸರ್ವಧರ್ಮಗಳೂ ವರ್ಣಗಳೂ ವರ್ಗಗಳೂ ಸಮಭಾವನೆಯಿಂದಲೂ ಸಖ್ಯಭಾವದಿಂದಲೂ ಇರುವವು. ಧಾರ್ಮಿಕ ಜಗಳ, ಕೀಳುತರದ ಸ್ಪರ್ಧೆ, ವಿರೋಧವನ್ನು ಬೆಳೆಸುವಂತಹ ಸ್ವಾರ್ಥ, ಅಲ್ಲಿ ಕಾಣಬರುವುದಿಲ್ಲ.

೧೦ ರಾಮರಾಜ್ಯದಲ್ಲಿ ಸ್ತ್ರೀಯರ ಮಟ್ಟವು ಪುರುಷರ ಮಟ್ಟದಷ್ಟೇ ಉಚ್ಚವಾಗಿರುವುದು.

೧೧ ರಾಮರಾಜ್ಯದಲ್ಲಿ ಯಾವನೂ ತನ್ನ ಸಿರಿವಂತಿಕೆಯ ಮೂಲಕವಾಗಲಿ ಸೋಮಾರಿತನದ ಮೂಲಕವಾಗಲಿ ನಿರುದ್ಯೋಗಿಯಾಗಿರುವುದಿಲ್ಲ. ಪರಿಶ್ರಮ ಜೀವಿಯಾದ ಯಾವನೂ ಹಸಿವಿನಿಂದ ಸಾಯಲಾರನು. ಅನುದ್ಯೋಗದ ಮೂಲಕ ಸೋಮಾರಿಯಾಗುವಂತಹ ಸಂದರ್ಭವು ಅಲ್ಲಿ ಬರುವುದೇ ಇಲ್ಲ.

೧೨ ರಾಮರಾಜ್ಯದಲ್ಲಿ ಗೃಹ-ಕಲಹವುಂಟಾಗುವುದಿಲ್ಲ. ಅದರಂತೆ, ಪರರಾಜ್ಯದೊಡನೆ ಯುದ್ಧವೂ ಆಗುವುದಿಲ್ಲ. ಅದರಲ್ಲಿ ಪರರ ರಾಜ್ಯಗಳನ್ನು ಅಪಹರಿಸುವಂಥ, ಗೆಲ್ಲುವಂಥ, ಆ ರಾಜ್ಯಗಳ ವ್ಯಾಪಾರ ಉದ್ಯೋಗಗಳನ್ನು ನೀತಿಯನ್ನು ನಾಶಪಡಿಸುವಂಥ ರಾಜಕೀಯಕ್ಕೆ ಎಡೆಯಿರುವುದಿಲ್ಲ. ಆ ರಾಜ್ಯವು ಇತರರೊಡನೆ ಮಿತ್ರಭಾವದಿಂದಲೆ ವರ್ತಿಸುವುದು.

೧೩ ಆದ್ದರಿಂದ ರಾಮರಾಜ್ಯದಲ್ಲಿ ಸೈನ್ಯದ ವೆಚ್ಚವು ತೀರ ಕಡಮೆ.

೧೪ ರಾಮರಾಜ್ಯದ ಪ್ರಜರು ಬರಿಯ ಓದು-ಬರಹ ಬಲ್ಲವರಿರದೆ ನಿಜವಾದ ಶಿಕ್ಷಣವನ್ನು ಪಡೆದವರಾಗಿರುವರು; ಎಂದರೆ ಅವರಿಗೆ ಮುಕ್ತಿಯನ್ನು ಕೊಡುವಂತಹ, ಮತ್ತು ಮುಕ್ತಾವಸ್ಥೆಯಲ್ಲಿ ಸ್ಥಿರವಾಗಿರಲು ಬರುವಂತಹ ಶಿಕ್ಷಣವು ಸಿಕ್ಕುತ್ತಿರುವುದು.

೧೫ ರಾಮರಾಜ್ಯವೆಂಬುದು ಬರೀ ಒಂದು ದೇಶದ ಸಲುವಾಗಿ, ಪ್ರಜೆಗಳ ಸಲುವಾಗಿ, ಆದರ್ಶಭೂತವಾದ ರಾಜ್ಯವಲ್ಲ. ಅದು ಇಡೀ ಜಗತ್ತಿನ ಆದರ್ಶ. ರಾಮರಾಜ್ಯವು ಒಂದೇ ಒಂದೆಡೆಯಲ್ಲಿ ಸ್ಥಾಪಿತವಾದರೂ ಅದರ ವರ್ಚಸ್ಸು ಎಲ್ಲೆಲ್ಲಿಯೂ ಕಾಣುವುದು.

೧೬ ಈ ಸ್ಥಿತಿಯು ಒದಗಿತೆಂದರೆ ರಾಜ್ಯ ರಾಜ್ಯಗಳ ನಡುವೆ ಜಗಳದ ಕಾರಣವೇ ಉಳಿಯದು. ಅರ್ಥಾತ್ ಯುದ್ಧವೆಂಬ ವಸ್ತುವೇ ನಾಮಶೇಷವಾಗುವುದು. ಎಲ್ಲ ಬಗೆಯ ಮತಭೇದಗಳು, ಜಗಳಗಳು, ವಿರೋಧಗಳು, ಅಹಿಂಸೆಯ ಮೂಲಕವೇ ಕೊನೆಗೊಳ್ಳುವವು.

೨ ತಂತ್ರ-ಸುಧಾರಣೆ ಮತ್ತು ರಾಜ್ಯ-ಶಾಸನ ಸುಧಾರಣೆ

೧ ತಂತ್ರಸುಧಾರಣೆಯ ಮತ್ತು ರಾಜ್ಯಶಾಸನ ಸುಧಾರಣೆಯ ಪ್ರಶ್ನೆಯು ಒಂದೇ ಅಲ್ಲ.

೨ ಅಧಿಕಾರದ ಉಪಯೋಗವನ್ನು ಮಾಡುವಂಥವರು ಪ್ರಜೆಗಳೊಡನೆ ನಡೆದುಕೊಳ್ಳುವ ಮನೋವೃತ್ತಿಯಲ್ಲಿ ಸಂಪೂರ್ಣ ಸುಧಾರಣೆ ಮಾಡುವುದೇ ತಂತ್ರ-ಸುಧಾರಣೆ ಎನಿಸುವುದು.

೩ ರಾಜ್ಯ-ಶಾಸನ ಸುಧಾರಣೆಯೆಂದರೆ ಕಟ್ಟಳೆಗಳನ್ನು ಮಾಡುವುದಕ್ಕಾಗಿಯೂ ರಾಜ್ಯದ ಬೇರೆ ಬೇರೆ ಖಾತೆಗಳ ಮೇಲ್ವಿಚಾರಣೆಯನ್ನು ನಡೆಸುವುದಕ್ಕಾಗಿಯೂ ಆ ಆ ಖಾತೆಗಳ ನೀತಿಯನ್ನು ನಿಶ್ಚಯಿಸುವುದಕ್ಕಾಗಿಯೂ ಎಷ್ಟು ಜನರು ಎಲ್ಲಿ ಸೇರಬೇಕು, ಅವರು ಯಾವ ರೀತಿ ವಿಷಯಗಳನ್ನು ಚರ್ಚಿಸಬೇಕು, ಅವರನ್ನು ಯಾವ ರೀತಿಯಿಂದ ಈ ಕಾರ್ಯಕ್ಕಾಗಿ ನಿಯಮಿಸಬೇಕು, ಮುಂತಾದ ವಿಷಯಗಳ ವಿಚಾರ.

೪ ಸದ್ಯಕ್ಕೆ ಅವಶ್ಯಕ್ಕಿಂತ ಹೆಚ್ಚು ಮಹತ್ವವು ರಾಜ್ಯಶಾಸನದ ಪ್ರಶ್ನೆಗೆ ಕೊಡಲ್ಪಟ್ಟಿರುವುದು. ಇದರಿಂದ ನಾವು ಮೂಲ ವಿಷಯವನ್ನು ಮರೆತುಬಿಟ್ಟಿದ್ದೇವೆ. ರಾಜ್ಯದ ಬಾಹ್ಯರೂಪಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಅದರ ಯೋಚನೆಯಲ್ಲೇ ತೊಡಗಿದ್ದೇವೆ.

೫ ರಾಜ್ಯಶಾಸನದ ಗಹನವಿಚಾರಗಳೂ ಅದರ ಭಿನ್ನ-ಭಿನ್ನವಾದ ಯೋಜನೆಗಳಲ್ಲಿರುವ ಸೂಕ್ಷ್ಮಭೇದಗಳೂ ಮತ್ತು ಅವುಗಳ ಮಹತ್ವವೂ ನಾಡಿನ ಕೋಟಿಗಟ್ಟಲೆ ಜನರಿಗೆ ತಿಳಿಯುವವೆಂದು ಯಾರೂ ತಿಳಿಯಬಾರದು. ಏಕೆಂದರೆ ಅವರು ಈ ವಿಷಯಗಳನ್ನು ಆಸ್ಥೆಯಿಂದ ಯೋಚಿಸಲು ಮುಂದೆಬರುವುದಿಲ್ಲ.

೬ ತನ್ನ ದೇಶದ ರಾಜ್ಯಶಾಸನವು ರಾಜಸತ್ತಾತ್ಮಕವೊ ಪ್ರಜಾಸತ್ತಾತ್ಮಕವೊ, ಸಾಮ್ರಾಜ್ಯದ ಒಂದು ಅಂಗವೊ ಸ್ವತಂತ್ರವಾದುದೊ ಎನ್ನುವುದು; ರಾಜ್ಯಶಾಸನವು ೬ ಸಾವಿರ ಪ್ರತಿನಿಧಿಗಳಿಂದ ನಡೆಯುತ್ತಿದೆಯೊ ೬ ನೂರು ಪ್ರತಿನಿಧಿಗಳಿಂದ ನಡೆಯುತ್ತಿದೆಯೊ, ಅವರಲ್ಲಿ ಹಿಂದೂಗಳು ಹೆಚ್ಚಿರುವರೊ ಮುಸಲ್ಮಾನರು ಹೆಚ್ಚಿರುವರೊ ಎನ್ನುವುದು; ಈ ಎಲ್ಲ ವಿಷಯಗಳ ಮಹತ್ವವು ಅಶಿಕ್ಷಿತ ಹಳ್ಳಿಗರಿಗೆ ತಿಳಿಯುವುದು ಕಠಿಣ. ಈ ವಿಷಯಗಳ ಚರ್ಚೆಯಲ್ಲಿ ತೊಡಗುವುದರಿಂದ ಅವರಿಗೆ ಬಹಳ ಲಾಭವೂ ಆಗಲಿಕ್ಕಿಲ್ಲ.

೭ ತಮ್ಮ ಹಳ್ಳಿಯ ಮುಖ್ಯರೂ ಪೋಲೀಸ್‌ಗೌಡ ಶಾನುಭೋಗರೂ ತಮ್ಮ ಅಧಿಕಾರದ ದರ್ಪವನ್ನು ತೋರಿಸುವರೊ; ಅಧಿಕಾರದ ಬೆದರಿಕೆ ತೋರಿಸಿ ತಮ್ಮಿಂದ ಲಂಚವನ್ನು ಸುಲಿಯಲು ಬರುವರೊ, ಅಥವಾ ತಮ್ಮ ಮಿತ್ರರಾಗಿ ಸಲಹೆಗಾರರಾಗಿ ಸಂಕಟಕಾಲದಲ್ಲಿ ಸಂಗಡಿಗರಂತೆ ವರ್ತಿಸುವರೊ; ಎಂಬುವೇ

ಹಳ್ಳಿಗರಿಗೆ ಮಹತ್ವದ ಪ್ರಶ್ನೆಗಳು. ಇದಲ್ಲದೆ ತಾವು ಪ್ರಜರನ್ನು ತಮ್ಮ ಮನಸ್ಸಿಗೆ ಬಂದಂತೆ ನಡೆಸಿಕೊಳ್ಳಲಿಕ್ಕೆ ನಿಯಮಿಸಲ್ಪಟ್ಟ ಚಿಕ್ಕ ದೊಡ್ಡ ಅಧಿಕಾರಿಗಳು ಎಂದು ತಿಳಿದುಕೊಳ್ಳುವರೊ, ತಾವು ಪ್ರಜರ ಸೇವಕರೆಂದು ತಿಳಿದುಕೊಳ್ಳುವರೊ, ಎಂಬ ಪ್ರಶ್ನೆಯೂ ಹಳ್ಳಿಗರಿಗೆ ಮಹತ್ವದ್ದು.

೮ ಹಾಗೆಯೇ, ತಮ್ಮ ಮೇಲೆ ಹೊರಿಸಲ್ಪಟ್ಟ ಕರದ ಹೊರೆ ಹೆಚ್ಚು ಭಾರವಾಗಿರುವುದೊ ಹಗುರಾಗಿರುವುದೊ, ಈ ಕರವು ತಮ್ಮಿಂದ ಯಾವ ರೀತಿಯಾಗಿ ಯಾವ ರೂಪದಲ್ಲಿ ಯಾವ ಸಮಯದಲ್ಲಿ ವಸೂಲು ಮಾಡಲ್ಪಡುವುದು, ಈ ಕರದ ಉಪಯೋಗವು ಯಾವ ಕೆಲಸಗಳಲ್ಲಿ ಆಗುವುದು, ಎಂಬ ಪ್ರಶ್ನೆಯಂತೂ ಪ್ರಜೆಗಳಿಗೆ ಅತ್ಯಂತ ಮಹತ್ವದ್ದು.

೯ ಈ ತರದ ಸುಧಾರಣೆಯು ರಾಜ್ಯಶಾಸನಕ್ಕೆ ಒಂದು ಪದ್ಧತಿಯು ಪ್ರಾಪ್ತವಾಗುತ್ತಲೆ ಆಗುವುದಿಲ್ಲ. ಆದರೆ ಆ ಪದ್ಧತಿಯನ್ನು ಅಮಲಿನಲ್ಲಿ ತರುವ ಅಧಿಕಾರಿಗಳ ಧರ್ಮಬುದ್ಧಿಯಿಂದಲೂ ತಮ್ಮ ಮತವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಮಾಡಲಿಕ್ಕೆ ಪ್ರಜೆಗಳಲ್ಲಿ ಬೇಕಾದ ಪುರುಷಾರ್ಥದ ಶಕ್ತಿಯಿಂದಲೂ ಆಗುವುದು. ರಾಜ್ಯಶಾಸನದ ಬಾಹ್ಯಸ್ವರೂಪವು ಯಾವುದೆ ತರದ್ದಿರಲಿ, ಅಧಿಕಾರಿಗಳು ಧರ್ಮಬುದ್ಧಿಯವರಾಗಿ ಪ್ರಜರ ಸೇವಕರಿದ್ದರೆ, ಪ್ರಜರು ಪುರುಷಾರ್ಥಿಗಳಾಗಿದ್ದರೆ, ಸರಕಾರದ ಅನ್ಯಾಯವೂ ಬಲಾತ್ಕಾರವೂ ಬಹಳ ವೇಳೆಯ ವರೆಗೆ ನಿಲ್ಲಲರಿಯದು.

೩ ಜಾತಿ ಜಾತಿಗಳಲ್ಲಿ ಐಕ್ಯ

೧ ದೇಶದ ಬೇರೆ ಬೇರೆ ಜಾತಿಗಳಲ್ಲಿ ಐಕ್ಯವೂ ಸಮಾಧಾನ ಶಾಂತಿಗಳೂ ಉಂಟಾಗುವ ವರೆಗೆ ಸ್ವರಾಜ್ಯವನ್ನು ದೊರಕಿಸುವುದೂ ಅದನ್ನು ಕಾಯ್ದಿಟ್ಟುಕೊಳ್ಳುವುದೂ ಅಶಕ್ಯ.

೨ ಈ ಐಕ್ಯವಾಗಬೇಕಾದರೆ ಸರ್ವ ಜಾತಿಗಳಲ್ಲಿ ಮುಕ್ತವಾದ ಭೋಜನದ, ವಿವಾಹದ ವ್ಯವಹಾರವಾಗಲೇಬೇಕು. ಇಲ್ಲವೆ ಜಾತಿ-ಜಾತಿಗಳ ನಡುವಿನ ಭಿನ್ನ ಭಿನ್ನ ಧರ್ಮ ಸಂಸ್ಕೃತಿಗಳ ಭೇದವು ಇಲ್ಲದಂತಾಗಬೇಕು. ಯಾವುದಾದರೊಂದೇ ಧರ್ಮವನ್ನವಲಂಬಿಸಿ, ಅಥವಾ ಧರ್ಮಗಳನ್ನೆಲ್ಲ ತೊರೆದು, ಒಂದೇ ಸಂಸ್ಕೃತಿಯನ್ನು ನಿರ್ಮಿಸಬೇಕೆನ್ನುವುದು ಸರಿಯಲ್ಲ. ಅದು ಇಷ್ಟವಾದುದೂ ಅಲ್ಲ. ಪ್ರತಿಯೊಂದು ಜಾತಿಯೂ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡು

ಸಹಿಷ್ಣುತೆಯ ಮೂಲಕ ಐಕ್ಯವನ್ನುಂಟುಮಾಡಿಕೊಳ್ಳಬೇಕು.

೩ ಆದರೆ ಈ ಐಕ್ಯಕ್ಕಾಗಿ ಬಹು-ಸಂಖ್ಯೆಯ ಜಾತಿಗಳು ಅಲ್ಪ ಸಂಖ್ಯೆಯವುಗಳಿಗೆ ಅಭಯವನ್ನೀಯಬೇಕು. ನ್ಯಾಯಕ್ಕೂ ಸಾರ್ವಜನಿಕ ಹಿತಕ್ಕೂ ವಿರೋಧವಾಗದ ಹಾಗೆ ಅಲ್ಪಸಂಖ್ಯೆಯ ಜಾತಿಗಳಿಗೆ ಧರ್ಮ, ಭಾಷೆ, ಸಾಹಿತ್ಯ, ಜಾತಿಗಳ ಕಟ್ಟು-ಕಟ್ಟಳೆ, ನಡತೆ-ನಡಾವಳಿ, ಶಿಕ್ಷಣ, ಅರ್ಥಪ್ರಾಪ್ತಿ ಮುಂತಾದುವುಗಳ ಬಗ್ಗೆ ತೊಂದರೆಯಾಗಗೊಡದಿರುವುದೇ ಬಹು ಸಂಖ್ಯೆಯ ಜಾತಿಗಳ ಗುರಿಯಾಗಿರಬೇಕು. ಬಹು-ಸಂಖ್ಯೆಯ ಜಾತಿಗಳು ತಮ್ಮ ಹಿತಚಿಂತಕರಿರುವವೆಂದು ಅಲ್ಪ-ಸಂಖ್ಯೆಯ ಜಾತಿಗಳಲ್ಲಿ ನಂಬಿಗೆ ಹುಟ್ಟಿಸಬೇಕು.

೪ ಬಹು-ಸಂಖ್ಯೆಯ ಜಾತಿಗೆ ಅಲ್ಪ-ಸಂಖ್ಯೆಯ ಜಾತಿಯ ಭಯ ಉಂಟಾದರೆ ಅದು ಈ ಕೆಳಗಿನ ಯಾವುದೊಂದು ಸ್ಥಿತಿಯನ್ನು ಸೂಚಿಸುವುದು: (೧) ಬಹು-ಸಂಖ್ಯೆಯ ಜಾತಿಯ ಜೀವನದಲ್ಲಿ ಹುಳುಕು ಇದೆ, ಇಲ್ಲವೆ ಅದು ಹೇಡಿಯಾಗಿದೆ, ಹಾಗು ಅಲ್ಪ-ಸಂಖ್ಯೆಯ ಜಾತಿಗೆ ಪಶುಬಲದ ಹೆಮ್ಮೆ ಇರುವುದು. (ಹೆಮ್ಮೆಯು ರಾಜಸತ್ತೆಯಿಂದಾಗಲಿ ಸ್ವತಂತ್ರವಾಗಿಯಾಗಲಿ ಇರಬಹುದು). (೨) ಬಹು-ಸಂಖ್ಯೆಯ ಜಾತಿಯಿಂದ ಯಾವುದಾದರೊಂದು ಅನ್ಯಾಯವಾಗುತ್ತಿರಬೇಕು; ನಿರಾಶೆಯಿಂದ ಹಂಗುದೊರೆದು ಸಾಯುವ ವೃತ್ತಿಯು ಅಲ್ಪಸಂಖ್ಯೆಯ ಜಾತಿಯಲ್ಲಿ ಬಂದಿರಬೇಕು. ಇವೆರಡಕ್ಕೂ ಇರುವ ಉಪಾಯ ಒಂದೇ ಒಂದು: ಬಹುಸಂಖ್ಯೆಯ ಜಾತಿಯು ಸತ್ಯಾಗ್ರಹದ ಸಿದ್ಧಾಂತಗಳ ಮೇರೆಗೆ ತನ್ನ ಜೀವನವನ್ನಿಡುವುದು, ಸತ್ಯಾಗ್ರಹಿಯಾಗಿ ಎಷ್ಟು ಬೆಲೆಯಾದರೂ ಕೊಟ್ಟು ಅನ್ಯಾಯವನ್ನು ದೂರಮಾಡುವುದು, ತನ್ನ ಹೇಡಿತನವನ್ನು ಬಿಸುಟು ಅಲ್ಪ-ಸಂಖ್ಯೆಯ ಜಾತಿಯ ಪಶುಬಲವನ್ನು ಸತ್ಯಾಗ್ರಹದಿಂದ ಗೆಲ್ಲುವುದು.

೫ ಜಾತಿ-ಜಾತಿಗಳಲ್ಲಿ ಜಗಳವುಂಟಾದಾಗ ಸರಕಾರದ, ಕಟ್ಟಳೆಗಳ ನೆರವನ್ನು ಬಯಸುವುದೆಂದರೆ ಪ್ರಜರನ್ನು ನಿರ್ವೀರ್ಯರನ್ನಾಗಿ ಮಾಡಿದಂತೆಯೆ ಸರಿ. ಎರಡು ಜಾತಿಗಳು ಜಗಳವಾಡಿ ಪರಸ್ಪರರ ನೆತ್ತರು ಸುರಿಸಿದ ಮೇಲೆ ಶಾಂತವಾಗಬೇಕು; ಆದರೆ ಒಂದು ಜಾತಿಯು ಇನ್ನೊಂದು ಜಾತಿಯ ವಿರುದ್ಧ ದೂರುವುದಕ್ಕಾಗಿ ಸರಕಾರದ ಕಡೆಗೆ ಓಡಿಹೋಗುವುದು ಸರಿಯಲ್ಲ. ಮೇಲಿನ ರೀತಿಯು ಆದರ್ಶಭೂತವಾದುದಲ್ಲ. ಆದರೂ ಇದು ಪರದೇಶಿ ಸರಕಾರಕ್ಕಿಂತ, ಇಲ್ಲವೆ ಬಾಡಿಗೆ ಮನುಷ್ಯರ ಸಹಾಯದಿಂದ 'ಶಾಂತಿ'ಯನ್ನು ನೆಲೆಗೊಳಿಸು

ವುದಕ್ಕಿಂತ ಕಡಮೆ ದುಃಖದಾಯಕವಾದುದು.

೬ ಬಹುಸಂಖ್ಯೆಯ ಜಾತಿಯ ನಂಬಿಗೆಯ ವಿಷಯದಲ್ಲಿ ಅಲ್ಪಸಂಖ್ಯೆಯ ಜಾತಿಯ ಮನಸ್ಸಿನಲ್ಲಿ ಸಂಶಯವಿರುವ ವರೆಗೆ ಅಲ್ಪಸಂಖ್ಯ ಜಾತಿಯು ಕೇಳಿದ ಎಲ್ಲ ಜಾಮೀನು ಕೊಡುವುದು ಅವರನ್ನು ತನ್ನ ವಶಪಡಿಸಿಕೊಳ್ಳಲಿಕ್ಕೆ ಬಹುಸಂಖ್ಯೆಯ ಜಾತಿಗೆ ಇರುವ ಅತ್ಯಂತ ಉತ್ತಮವಾದ ಉಪಾಯ. ಯಾವ ಕರಾರುಗಳನ್ನು ಸ್ವೀಕರಿಸುವುದರಿಂದ ಅಲ್ಪಸಂಖ್ಯೆಯ ಜಾತಿಗೆ ನಿರ್ಭಯವೆನಿಸುವುದೋ ಅವೆಲ್ಲವುಗಳಿಗೆ ಸಾಧ್ಯವಿದ್ದಷ್ಟು ಹೆಚ್ಚಿಗೆ ಒಪ್ಪಿಗೆಯನ್ನೀಯುವುದೇ ಜಾಮೀನು ಎನಿಸುವುದು.

೭ ಅಲ್ಪಸಂಖ್ಯೆಯ ಜಾತಿಯ ಪ್ರಗತಿಯು ಬಹುಸಂಖ್ಯೆಯ ಜಾತಿಯ ಪ್ರಗತಿಗಿಂತ ಕಡಮೆಯಾಗಿದ್ದ ಕಡೆಯಲ್ಲಿ ಮಾತ್ರ ಈ ನಿಯಮವು ತೊಡಗುವುದು. ಬಹುಸಂಖ್ಯ ಜಾತಿಗಿಂತ ಅಲ್ಪಸಂಖ್ಯ ಜಾತಿಯೇ ಹೆಚ್ಚು ಸಮೃದ್ಧವೂ ಬಲಿಷ್ಠವೂ ಇದ್ದಲ್ಲಿ ಬಹುಸಂಖ್ಯೆಯ ಜಾತಿಯಿಂದ ಹೆಚ್ಚಿನ, ವಿಶೇಷತರವಾದ ಅಧಿಕಾರವನ್ನು ಕೇಳುವುದು ಸರಿಯಲ್ಲ.

೮ ಅಲ್ಪಸಂಖ್ಯೆಯ ಜಾತಿಯ ಕೈಯಲ್ಲಿ ಹೆಚ್ಚು ಅಧಿಕಾರ, ಧನ, ವಿದ್ಯೆ, ಅನುಭವ ಮುಂತಾದುವುಗಳಿದ್ದು ಇವರಿಂದ ಬಹುಸಂಖ್ಯೆಯ ಜಾತಿಗೆ ಭಯವೆನಿಸುತ್ತಿದ್ದರೆ ಅಲ್ಪಸಂಖ್ಯೆಯ ಜಾತಿಯು ಬಹುಸಂಖ್ಯೆಯ ಜಾತಿಯ ಹಿತಕ್ಕಾಗಿ ಪ್ರಾಮಾಣಿಕವಾಗಿ ತನ್ನ ಶಕ್ತಿಯನ್ನು ಉಪಯೋಗಿಸಬೇಕು. ಹೀಗೆ ಮಾಡುವುದೇ ಅದರ ಧರ್ಮವು. ಪರರ ಕಲ್ಯಾಣಕ್ಕಾಗಿ ಉಪಯೋಗಿಸಲ್ಪಟ್ಟ ಶಕ್ತಿಗಳು ಮಾತ್ರ ಪ್ರೋತ್ಸಾಹನೆಗೆ ಯೋಗ್ಯವಾದುವು. ಅವುಗಳ ದುರುಪಯೋಗ ಆಗತೊಡಗಿದರೆ ಅವನ್ನು ನಷ್ಟಪಡಿಸುವುದು ಶ್ರೇಯಸ್ಕರ. ಅವು ಒಂದಿಲ್ಲೊಂದು ದಿನ ನಾಶವಾಗಿಯೇ ಆಗುವವು.

೯ ಸಾರ್ವಜನಿಕ ಸಂಸ್ಥೆಗಳಲ್ಲಿ ಆಳುಗಳನ್ನೂ ಅಧಿಕಾರಿಗಳನ್ನೂ ನಿಯಮಿಸುವಾಗ ಜಾತೀಯ ತತ್ವಗಳ ಕಡೆಗೆ ಲಕ್ಷ್ಯಗೊಡಬಾರದು. ಹೀಗೆ ಜಾತಿಗಳ ತತ್ವವನ್ನನುಸರಿಸಿದರೆ ಆ ಆ ಖಾತೆಗಳಲ್ಲಿ ಕೌಶಲ್ಯವು ನಷ್ಟವಾಗುವುದು. ಆದ್ದರಿಂದ ನಂಟು, ಜಾತಿ, ಧರ್ಮ ಮೊದಲಾದುವುಗಳ ಯೋಚನೆ ಮಾಡದೆ ನಿಯಮಿಸಿಕೊಳ್ಳಲ್ಪಡುವವನಲ್ಲಿ ಆ ಕೆಲಸ ಮಾಡುವ ಯೋಗ್ಯತೆ ಇರುವುದೊ ಇಲ್ಲವೊ ಎಂಬುದನ್ನಷ್ಟೆ ನೋಡಬೇಕು. ಆಳು ಮುಂತಾದವರನ್ನು ನಿಯಮಿಸಿಕೊಳ್ಳುವಾಗ ಇದೇ ಧೋರಣೆಯನಿಡಬೇಕು.

೧೦ ಈ ಸಿದ್ಧಾಂತಗಳು ಹಿಂದೂ-ಮುಸಲ್ಮಾನ್-ಸಿಖ್ ಮುಂತಾದ ಜಾತಿಗಳಿಗೆ ಅನ್ವಯಿಸುವವು. ಶ್ರೀಮಂತರು-ಬಡವರು, ಜಮೀನುದಾರರು-ಒಕ್ಕಲಿಗರು, ಒಡೆಯರು-ಆಳುಗಳು, ಬ್ರಾಹ್ಮಣರು-ಬ್ರಾಹ್ಮಣೇತರರು, ಮುಂತಾದ ವರ್ಗಗಳಿಗೂ ಇದೇ ಸರಿಯಾದುದು.

೪ ಬ್ರಿಟಿಷರೊಡನೆ ಸಂಬಂಧ

೧ ಬ್ರಿಟಿಷ್ ಸರಕಾರದೊಡನೆ ಹಿಂದುಸ್ತಾನದ ಸಂಬಂಧವು ಯಾವ ತರದ್ದಿರಬೇಕೆನ್ನುವುದನ್ನು ನಿಶ್ಚಯಿಸುವ ಹಕ್ಕು ಭಾರತೀಯರದು. ಇದು ದೊರಕುವ ವರೆಗೆ ಹಿಂದುಸ್ತಾನಕ್ಕೆ ಸ್ವರಾಜ್ಯ ಸಿಕ್ಕಿದ ಹಾಗಾಗುವುದಿಲ್ಲ.

೨ ಈ ತರದ ಅಧಿಕಾರವುಳ್ಳ ಹಿಂದುಸ್ತಾನದ ಸ್ನೇಹಸಂಬಂಧವು ಬ್ರಿಟಿಷ್ ಸಾಮ್ರಾಜ್ಯದ ಸಂಗಡ ಇದ್ದರೆ ಅದರಿಂದ ಭಾರತದ ಪೂರ್ಣ ಸ್ವರಾಜ್ಯಕ್ಕೆ ಕೊರತೆ ಕುಂದುಂಟಾಗುವುದಿಲ್ಲವೆನ್ನಬಹುದು. ಬ್ರಿಟಿಷ್ ಸಾಮ್ರಾಜ್ಯದ ಸಂಬಂಧವನ್ನು ನಿರ್ಣಯಿಸುವ ಹಕ್ಕು ಇದ್ದಾಗ ಹಿಂದುಸ್ತಾನಕ್ಕೆ ಸಮಾನವಾದ ಅಧಿಕಾರವಿರುವುದು. ಸಾಮ್ರಾಜ್ಯದ ಭಿನ್ನ ಭಿನ್ನವಾದ ಅಂಗಗಳ ಮೇಲೆ ತನ್ನ ವಿಶಾಲ ದೃಷ್ಟಿಯು ಮತ್ತು ದೊಡ್ಡತನದ ಪ್ರಭಾವವನ್ನು ಬೀರಲು ಅನುವು ಇರುವುದು.

೩ ಹೀಗೆ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಎಲ್ಲ ಅಂಗಗಳೊಡನೆ ಹಿಂದುಸ್ತಾನದ ಸಂಬಂಧವು ಬೆಳೆದರೆ, ಹಿಂದುಸ್ತಾನವು ಸತ್ಯ ಅಹಿಂಸೆಯನ್ನೆ ಸರ್ವತ್ರ ಹಬ್ಬಿಸುವ ನೀತಿಯುಳ್ಳದ್ದಾದರೆ, ಬ್ರಿಟಿಷ್ ಸಾಮ್ರಾಜ್ಯವು ಜಗತ್ತಿಗೆ ಇಂದಿನಂತೆ ಭಯಾನಕವಾಗಿ ಉಳಿಯಲಾರದು. ಅದು ಎಲ್ಲ ಪ್ರಜೆಗಳಿಗೂ ಅಭಯವೀಯುವ ಸಾಮ್ರಾಜ್ಯವಾಗುವುದು.

೪ ಆದರೆ ಇದಕ್ಕೂ ಮೊದಲು ಹಿಂದುಸ್ತಾನವು ಇನ್ನೂ ಬಹಳ ಮಾರ್ಗಕ್ರಮಣ ಮಾಡಬೇಕಾಗುವುದು. ತನ್ನ ಶಕ್ತಿಯನ್ನೂ ಸಂಸ್ಕೃತಿಯನ್ನೂ ಅರಿತುಕೊಂಡು ಅದರಲ್ಲಿ ಸಂಪೂರ್ಣ ಶ್ರದ್ಧೆಯಿಟ್ಟುಕೊಂಡು ಅದನ್ನು ಸಾಧಿಸಿಕೊಳ್ಳಬೇಕು. ಎಲ್ಲಿಯ ವರೆಗೆ ಹಿಂದುಸ್ತಾನವು ನಿರ್ಬಲವೂ ಹೇಡಿಯೂ ಆಗಿರುವುದೋ ಅಲ್ಲಿಯ ವರೆಗೆ ಆದಕ್ಕೆ ಈ ತರದ ಸ್ಥಿತಿಯು ಬರುವುದು ಅಸಂಭವ.

೫ ಬ್ರಿಟಿಷ್ ಸಾಮ್ರಾಜ್ಯವೆಂದರೆ ಆಸುರೀ ತಂತ್ರ. ಇದರ ನಾಶವಾಗಬೇಕಾದುದೂ ಸರಿಯೇ. ಆದರೆ ಬ್ರಿಟಿಷ್ ಸಾಮ್ರಾಜ್ಯವು ಬೇರೆ, ಬ್ರಿಟಿಷ್

ಪ್ರಜೆಗಳು ಬೇರೆ. ಬ್ರಿಟಿಷ್ ಜನಾಂಗವು ಜಗತ್ತಿನ, ಯುರೋಪ್‌ಖಂಡದ ಬೇರೆ ಜನಾಂಗಗಳಿಗಿಂತ ಹೆಚ್ಚು ದುಷ್ಟವಾದದ್ದೂ ಅಲ್ಲ, ಸದ್ಗುಣರಹಿತ ವಾದದ್ದೂ ಅಲ್ಲ. ಆ ಜನಾಂಗದಲ್ಲಿಯೂ ಸನ್ಮಾನನೀಯ, ಅನುಕರಣೀಯ ವಾದ ಸದ್ಗುಣಗಳಿವೆ. ಆದರೆ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಆ ದೇಶದೊಡನೆ ಇರುವ ನಮ್ಮ ವಿಷಮ ಸಂಬಂಧದಿಂದ ಆ ಜನಾಂಗದ ಗುಣಗಳನ್ನು ಸನ್ಮಾನಿ ಸಲು ನಾವು ಅಸಮರ್ಥರಾಗಿದ್ದುದು ದುರ್ಭಾಗ್ಯವೇ ಸರಿ.

೬ ಹಿಂದುಸ್ತಾನವು ಸ್ವರಾಜ್ಯವನ್ನು ಪಡೆದ ಬಳಿಕ ಅದರಲ್ಲಿ ಇಂಗ್ಲಿಷರೂ ಭಾರತದ ಬೇರೆ ಜಾತಿಗಳಂತೆ ವಾಸಿಸಬಲ್ಲರು. ಹಿಂದುಸ್ತಾನದ ಬೇರೆ ಬೇರೆ ಜಾತಿಗಳಂತೆ ಅವರೂ ಭಾರತೀಯರಾಗಿ ದೇಶಸೇವೆಯಲ್ಲಿ ಪಾಲುಗೊಳ್ಳ ಬಲ್ಲರು. ಕೊನೆಯ ಪ್ರಕರಣದಲ್ಲಿ ಹೇಳಿದ ಸಿದ್ಧಾಂತಗಳ ಮೇರೆಗೆ ಅವರ ಮತ್ತು ಹಿಂದುಸ್ತಾನದ ಬೇರೆ ಜಾತಿಗಳ ಸಂಬಂಧವಿರಬಲ್ಲುದು. ಆದರೆ ಇಂಗ್ಲಿಷರು ಪರದೇಶೀಯರಾಗಿಯೇ ಇರಲು ಬಯಸಿದರೆ, ಅವರು ಹಿಂದು ಸ್ತಾನಕ್ಕೆ ಅನುಕೂಲವಿರುವ ನಿಯಮಗಳಿಗೆ ಬದ್ಧರಾಗಿ ಮಾತ್ರ ನೌಕರಿ ಮಾಡ ಬಲ್ಲರು.

೫ ದೇಶೀ ರಾಜ್ಯಗಳು

೧ ಇಂದು ದೇಶೀ ರಾಜ್ಯಗಳು ಜೀವಿಸಿಕೊಂಡದ್ದು ತಮ್ಮ ಪರಾಕ್ರಮ ದಿಂದ ಅಲ್ಲ- ಬ್ರಿಟಿಷ್ ರಾಜ್ಯದ ಆಶ್ರಯದಿಂದ. ಬ್ರಿಟಿಷ್ ರಾಜ್ಯವು ಅಳಿದರೆ ತಾವು ಬದುಕಲಾರೆವೆಂಬ ಹೆದರಿಕೆ ಇವುಗಳಿಗೆ ಇದ್ದೇ ಇದೆ. ಆದ್ದರಿಂದ ಅವು ಬ್ರಿಟಿಷ್ ರಾಜ್ಯದ ಸಂರಕ್ಷಣೆಗಾಗಿ ಬ್ರಿಟಿಷ್-ಪ್ರಜೆಗಿಂತಲೂ ಹೆಚ್ಚು ಆಸ್ಥೆ ಯನ್ನು ತೋರಿಸುತ್ತಿವೆ.

೨ ಈ ಬಗೆಯ ಅತಿ ಆಸ್ಥೆಯನ್ನು ತೋರಿಸುವುದು ಹೆಚ್ಚು ಗುಲಾಮ್- ತನದ ಗುರುತು. ಈ ಆಸ್ಥೆಯಲ್ಲಿರುವುದು ಶುದ್ಧವಾದ ಭಕ್ತಿಯಲ್ಲ; ತಪ್ಪು ತಿಳಿವಳಿಕೆಯಿಂದ ಕೂಡಿದ ಅಶುದ್ಧವಾದ ಸ್ವಾರ್ಥ.

೩ ಆದ್ದರಿಂದ ದೇಶೀ ರಾಜ್ಯಗಳ ಪ್ರಜೆಗಳ ಸ್ಥಿತಿಯು ಬ್ರಿಟಿಷ್ ಪ್ರಜೆಗಳಿ ಗಿಂತ ಇಮ್ಮಡಿ ದಾಸ್ಯಪೂರ್ಣವಿರುವುದು. ಗುಲಾಮ್‌ತನದಲ್ಲಿ ಗುಲಾಮರ ಹಿರಿಯನು ತನ್ನ ಒಡೆಯನಿಗಿಂತ ಹೆಚ್ಚು ಕಠೋರತೆಯನ್ನು ತೋರಿಸುವಂತೆ ದೇಶೀ ರಾಜರು ತಮ್ಮ ಪ್ರಜೆಗಳೊಡನೆ ಹೆಚ್ಚು ಕಠೋರತೆಯಿಂದ ವರ್ತಿಸು

ತ್ತಿದ್ದಾರೆ. ಇದೇನೂ ಆಶ್ಚರ್ಯದ ಸಂಗತಿಯಲ್ಲ.

೪ ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ಬ್ರಿಟಿಷ್-ಭಾರತೀಯರು ಮೊದಲು ಸ್ವರಾಜ್ಯವನ್ನು ಗಳಿಸಬೇಕು. ಇದೇ ಅದಕ್ಕೆ ಉತ್ತಮ ಮಾರ್ಗ. ಹಿಂದುಸ್ತಾನದ ಬ್ರಿಟಿಷ್-ಪ್ರಜೆಗಳು ಸ್ವತಂತ್ರರಾಗುವ ವರೆಗೆ ಅವರಿಗೆ ದೇಶೀ ರಾಜ್ಯಗಳ ಪ್ರಜೆಗಳ ಸಂಕಟಗಳನ್ನು ನಿವಾರಿಸುವ ಶಕ್ತಿ ಬರುವುದಿಲ್ಲ. ಬ್ರಿಟಿಷ್-ಹಿಂದುಸ್ತಾನದ ಪ್ರಜೆಗಳು ತಮ್ಮ ಶಕ್ತಿ ಸಾಮರ್ಥ್ಯಗಳಿಂದ, ಪುರುಷಾರ್ಥದಿಂದ ಸ್ವತಂತ್ರರಾದರೆ ಮಾತ್ರ ದೇಶೀ ರಾಜರ ಕಣ್ಣು ತೆರೆಯುವವು; ಬ್ರಿಟಿಷರ ಕತ್ತಿಯ ಮೊನೆಯಿಂದ ತಮ್ಮ ಪ್ರಜೆಗಳನ್ನು ತಿವಿದಿಟ್ಟು, ಈಗಿನಂತೆ ಅಲ್ಪ ಸ್ವಲ್ಪ ಅಧಿಕಾರವನ್ನೂ ವಿಷಯ-ಸುಖವನ್ನೂ ಪಡೆಯುವುದಕ್ಕಿಂತ ತನು-ಮನ-ಧನದಿಂದ ಪ್ರಜೆಗಳ ಸೇವೆ ಮಾಡಿ, ಅವರ ಸುಖ ದುಃಖಗಳಲ್ಲಿ, ಬಡತನದಲ್ಲಿ ಸಮಭಾಗಿಗಳಾಗಿ ಪ್ರೀತಿಯಿಂದ ಅವರ ಹೃದಯದ ಮೇಲೆ ಅಧಿಕಾರ ನಡೆಸುವುದರಲ್ಲಿ ಮಾತ್ರ ತಮ್ಮ ಹಿರಿದಾದ ಶ್ರೇಯಸ್ಸಿರುವುದೆಂದು ಅವರಿಗೆ ಆಗ ಮನವರಿಕೆಯಾಗುವುದು.

೬ ಹೀಗೆ ಎಚ್ಚತ್ತ ದೇಶೀ ರಾಜರು ತಮ್ಮ ರಾಜ್ಯಗಳಲ್ಲಿ ತಾವೇ ಸುಧಾರಣೆಗಳನ್ನು ಮಾಡಲುಪಕ್ರಮಿಸುವರು. ಆಗ ಕೂಡ ದೇಶೀ ರಾಜರು ಎಚ್ಚರಾಗದಿದ್ದರೆ ಅವರ ರಾಜ್ಯಗಳು ಬದುಕಲಾರವೆಂದು ಹೇಳಬೇಕಾದುದಿಲ್ಲ. ಆಗ ಈ ತರದ ಜಡಭರತ ರಾಜರು ಸ್ವಚ್ಛಂದವಾಗಿ ಇರಲಾರರು. ಏಕೆಂದರೆ ಸ್ವಾತಂತ್ರ್ಯವನ್ನು ಪಡೆದ ಬ್ರಿಟಿಷ್-ಹಿಂದುಸ್ತಾನದ ಮತ್ತು ಸುಧಾರಿಸಿದ ದೇಶೀ ರಾಜ್ಯಗಳ ಒಟ್ಟಿನ ಪ್ರಜಾಮತವು ಅತ್ಯಂತ ಬಲಶಾಲಿಯಾಗುವುದು. ಆಗ ಅತಿ ದುಷ್ಟರು ಕೂಡ ತಮ್ಮ ದುಷ್ಟತನಕ್ಕೆ ತಿಲಾಂಜಲಿಯನ್ನಿತ್ತು ಹೆದರಿಕೊಂಡಿರಬೇಕಾಗುವುದು. ಇಲ್ಲದಿದ್ದರೆ ಅವರು ಬದುಕಲಾರರು.

೬ ಬಲಶಾಲಿಯಾದ, ಸ್ವತಂತ್ರವಿದ್ದ, ಶಿಕ್ಷಿತ ಪ್ರಜರ ಸಂಘಟಿತ ಲೋಕಮತದಲ್ಲಿ ಎಷ್ಟು ಸಾಮರ್ಥ್ಯವಿರುವುದೆಂಬುದರ ಅನುಭವವು ನಮಗೆ ಸಾಮಾಜಿಕ ವ್ಯವಹಾರಗಳಲ್ಲಿ ಬಂದಿದ್ದರೂ ನಾವು ಅದನ್ನು ಮರೆತುಬಿಟ್ಟದ್ದೇವೆ. ಪಶುಬಲದ ಆಧಾರದಿಂದಲೇ ಅಧಿಕಾರವನ್ನು ನಡೆಯಿಸುವ ಪ್ರಭುತ್ವಗಳು ಕೂಡ ಪ್ರಜಾಮತವು ಅತ್ಯಂತ ಸಾಮರ್ಥ್ಯವುಳ್ಳದ್ದಾಗುವ ವರೆಗೆ ಮಾತ್ರ ಬದುಕಿಕೊಂಡಿರುವವು. ಅತ್ಯಂತ ಬಲಿಷ್ಠ ಪ್ರಜಾಮತಕ್ಕೆ ಅತ್ಯಂತ ವಿಶಾಲವಾದ, ಬಲಿಷ್ಠ ಸಾಮ್ರಾಜ್ಯವೂ ಕತ್ತು ಬಗ್ಗಿಸಬೇಕಾಗುವುದು.

೭ ಪ್ರಜಾಮತವು ಅತ್ಯಂತ ಬಲಿಷ್ಠವಾದದ್ದು. ಈ ಮಾತನ್ನು ಅದರ ಕೈಯೊಳಗಿನ ಒಂದೇ ಒಂದಾದ ಅಜೇಯ ಸತ್ಯಾಗ್ರಹ-ಶಸ್ತ್ರವು ತೋರಿಸಿ ಕೊಡುವುದು. ತನ್ನ ಮತಕ್ಕಾಗಿ ಪ್ರಾಣಾರ್ಪಣ ಮಾಡಲು ಸಿದ್ಧರಿದ್ದ ಪ್ರಜೆಗಳ ಎದುರಿನಲ್ಲಿ ಹೆಚ್ಚಿನ ಜಂಬಕೊಚ್ಚುವ ಮುಕುಟಧಾರಿಗಳೂ ತಲೆಬಗ್ಗಿಸದೆ ಗತ್ಯಂತರವಿಲ್ಲ.

೬ ದೇಶದ ಸಂರಕ್ಷಣೆ

೧ ಸ್ವರಾಜ್ಯವನ್ನು ಪಡೆದ ಮೇಲೆ ತನ್ನ ದೇಶವನ್ನು ಸಂರಕ್ಷಿಸಿಕೊಳ್ಳು ವಷ್ಟು ಬಲವು ಹಿಂದುಸ್ತಾನದಲ್ಲಿ ಇರುವುದಿಲ್ಲವೆನ್ನುವುದು ತೀರ ತಪ್ಪು.

೨ ಅಹಿಂಸಾಧರ್ಮವನ್ನು ಚನ್ನಾಗಿ ಅರಿತುಕೊಂಡು ಅದರಂತೆ ವರ್ತಿಸುವ ಜನಾಂಗಕ್ಕೆ ದೇಶದ ಸಂರಕ್ಷಣೆಗೆ ತೋಫು, ಕೋವಿ, ಮುಂತಾದ ಸೈನಿಕ ಸರಕುಗಳ ಅವಶ್ಯಕತೆಯೇ ಇಲ್ಲ. ಆದರೆ ಈ ಸ್ಥಿತಿಯು ಸದ್ಯಕ್ಕಂತೂ ಬರಿಯ ಕಲ್ಪನೆಯದು.

೩ ಹೀಗಿದ್ದರೂ ಸ್ವತಂತ್ರವಾದ, ಅನ್ಯ ರಾಜ್ಯಗಳ ಕೂಡ ಸಹಕಾರದಿಂದ ವರ್ತಿಸುವ, ಪರ ರಾಷ್ಟ್ರಗಳ ಉಪಜೀವನದ ವಸ್ತುಗಳ ಮೇಲೆ ಆಕ್ರಮಣ ಮಾಡಬಾರದೆಂಬ ಧೋರಣೆಯನ್ನಿಟ್ಟುಕೊಂಡ ಹಿಂದುಸ್ತಾನಕ್ಕೆ ಈಗಿನಂತಹ, ಮತ್ತು ಈಗಿರುವಷ್ಟು ಸೈನ್ಯವೂ ಸೈನ್ಯದ ಸರಕುಗಳೂ ಬೇಕಾಗುವುದಿಲ್ಲ.

೪ ಸ್ವರಾಜ್ಯದಲ್ಲಿ, ವಿಶಿಷ್ಟ ನಿಯಮಗಳಿಗೆ ಒಳಪಟ್ಟು ಮಿತವಾಗಿ ಶಸ್ತ್ರಾಸ್ತ್ರಗಳನ್ನಿಟ್ಟುಕೊಳ್ಳುವ ಹಕ್ಕು ಪ್ರತಿಯೊಬ್ಬ ಯೋಗ್ಯ ಮನುಷ್ಯನಿಗೂ ಇದೆ. ಸ್ವರಾಜ್ಯದ ಕಾರಭಾರವು ತನ್ನ ಮೇಲೆ ಪರರು ಆಕ್ರಮಣ ಮಾಡುವ ರೆಂಬ ಹೆದರಿಕೆಯಿಂದಲೇ ನಡೆಯುವುದೆಂದು ತಿಳಿಯಕೂಡದು. ಆದರೆ ಮುಂದೆ ಆಕಸ್ಮಾತ್ತಾಗಿ ಆಗುವ ಆಕ್ರಮಣವನ್ನೂ ಸಂಕಟಗಳನ್ನೂ ಮೊದಲಿಗೇ ದೂರೀ ಕರಿಸುವುದಕ್ಕಾಗಿ ಬೇಕಾಗುವಷ್ಟು ಸೈನ್ಯವನ್ನೂ ಯುದ್ಧ-ಸಾಮಗ್ರಿಗಳನ್ನೂ ಹಿಂದುಸ್ತಾನವು ಸಂಗ್ರಹಿಸಿ ಇಟ್ಟುಕೊಂಡಿರುವುದು. ಮುಂದೆ ಅಗತ್ಯವಿದ್ದರೆ ಕ್ಷಣಮಾತ್ರದಲ್ಲಿ ಇಡೀ ದೇಶವನ್ನೇ ಸಜ್ಜುಗೊಳಿಸುವ ಆಶೆಯನ್ನಿಟ್ಟು ಕೊಂಡಿರುವುದು.

೫ ಕಟ್ಟಳೆಯು, ಅಧಿಕಾರಿಗಳ ದಾರಿ ಕಾಯದೆ ಜನರು ತಾವೇ ಜಾಗ್ರತ ರಾಗಿ ತಮ್ಮ ದೇಶದ ಆಡಳಿತವನ್ನು ಸಾಗಿಸಿಕೊಂಡು ಹೋಗುವಂತಹ ಶಿಕ್ಷಣ

ವನ್ನು ಕೊಡಿಸುವ ಏರ್ಪಾಡು ಮಾಡಿದರೆ, ಮತ್ತು ಅದರಲ್ಲಿ ಯಶಸ್ಸು ದೊರೆತರೆ, ಜನತೆಯ ಸೇವೆಯನ್ನೆ ತಮ್ಮ ಜೀವನದ ಗುರಿಯಾಗಿಟ್ಟುಕೊಂಡ, ಜನತೆಯ ಸುಖಕ್ಕಾಗಿ ತಮ್ಮ ಸರ್ವಸ್ವವನ್ನೂ ಸೂರೆ ಮಾಡಲು ಸಿದ್ಧರಾದ ಸ್ವಯಂಸೇವಕರ ಅನೇಕ ಮಂಡಲಗಳು ಹುಟ್ಟುವವು. ಇವು ಬರಿಯ ಯುದ್ಧ-ಪ್ರಿಯ ಕ್ಷತ್ರಿಯ ವರ್ಗಗಳಲ್ಲ. ಅವು ಪ್ರಜೆಗಳಿಗೆ ಶಿಕ್ಷಣವನ್ನು ಕೊಟ್ಟು ಅವರಲ್ಲಿ ಒಂದು ಸುವ್ಯವಸ್ಥೆಯನ್ನು ತರುವಂಥ, ಅವರ ವ್ಯವಹಾರವು ಸರಾಗವಾಗಿ ಸಾಗುವಂತೆ ಮಾಡಿ ಅವರನ್ನು ಸುಖಿಗಳನ್ನಾಗಿಯೂ ಸಂತೋಷಪಡುವಂತೆಯೂ ಮಾಡುವಂಥ ವರ್ಗಗಳು ದೇಶಕ್ಕೆ ಏನಾದರೂ ಸಂಕಟ ಒದಗಿದರೆ ಮೊದಲನೇ ಪೆಟ್ಟು ಈ ಮಂಡಲಗಳಿಗೇ ಬೀಳುವುದು.

೬ ತನ್ನ ದೇಶದ ಸೈನ್ಯಕ್ಕೆ ತಾನೇ ಹೆದರುವ ಸ್ಥಿತಿ ಇದ್ದರೆ, ತಮ್ಮ ಮೇಲೆಯೇ ಸೈನ್ಯದ ಕೋವಿಗಳು ಹಾರುವವೆಂದು ಪ್ರಜರಿಗೆ ಎನಿಸಿದರೆ, ಅದು ಸ್ವರಾಜ್ಯವೂ ಅಲ್ಲ ರಾಮರಾಜ್ಯವೂ ಅಲ್ಲ. ಅದು ರಾಕ್ಷಸೀ ರಾಜ್ಯ. ಆ ರಾಜ್ಯವನ್ನು ವಿರೋಧಿಸುವುದೂ ಸತ್ಯಾಗ್ರಹಿಯ ಧರ್ಮ.

೭ ಜನತೆಯ ಸ್ನೇಹಿತನಾದ, ತನ್ನ ಪ್ರಾಣವನ್ನಿತ್ತು ಜನತೆಯನ್ನು ಸಂಕಟಗಳಿಂದ ಕಾಪಾಡುವವನಾದ ಸೈನಿಕನೇ ಕ್ಷತ್ರಿಯನು. ಪ್ರಜೆಗಳನ್ನು ಹೆದರಿಸುವವನು, ಶಾರೀರಿಕ ಬಲದಿಂದ ಇಲ್ಲವೆ ಶಸ್ತ್ರಬಲದಿಂದ ಪೀಡಿಸುವವನು ಸುಲಿಗೆಗಾರ. ಇಂಥ ಸೈನಿಕನಿಗೆ ಆಶ್ರಯಕೊಟ್ಟ ರಾಜ್ಯ ಸುಲಿಗೆಯ ರಾಜ್ಯವೆ ಸರಿ.*

ಷಷ್ಠ ಖಂಡ

ವಾಣಿಜ್ಯ

— o —

೧ ಪಾಶ್ಚಾತ್ಯ ಅರ್ಥಶಾಸ್ತ್ರ

೧ ಪಾಶ್ಚಾತ್ಯ ಅರ್ಥಶಾಸ್ತ್ರವು ಸರ್ವೋಚ್ಚ ವಿಚಾರದೃಷ್ಟಿ-ಬಿಂದುಗಳಿಂದ ರಚಿಸಲ್ಪಟ್ಟಿರುವುದಿಲ್ಲ. ಆದ್ದರಿಂದ ಅದು ಅರ್ಥಶಾಸ್ತ್ರವಲ್ಲ– ಅನರ್ಥಶಾಸ್ತ್ರ. ಅದರ

*ಇದು ಇಂದಿನ ಕಾಂಗ್ರೆಸ್ಸಿನ ಭೂಮಿಕೆ. ಗಾಂಧೀಜಿಯವರು ಸತ್ಯಾಗ್ರಹದ ಮೂಲಕವೇ ಸಂರಕ್ಷಣೆ ಮಾಡಿಕೊಳ್ಳಬೇಕೆನ್ನುವರು.

ದೃಷ್ಟಿಕೋನವೇ ತಪ್ಪಿದೆ.

೨ ಈ ತಪ್ಪು-ದೃಷ್ಟಿಬಿಂದುಗಳು ಕೆಳಗೆ ಕಾಣಿಸಿದಂತೆ ಇರುವವು:

ಅ) ನಾನಾತರದ ಭೋಗಗಳನ್ನು ಹೆಚ್ಚಾಗಿ ಭೋಗಿಸುವುದೇ ಸಂಸ್ಕೃತಿಯ ಪ್ರಾಣವೆಂದು ಇದರ ತಿಳಿವಳಿಕೆ.

ಆ) ಇದು ಸರ್ವ ದೇಶಗಳಿಗೂ ಸರ್ವ ಕಾಲದಲ್ಲೂ ಪ್ರಯೋಜನಕಾರಿಯಾದ, ಆಚರಣೆಗೆ ತರಬಲ್ಲ ಸಿದ್ಧಾಂತಗಳ ಸಾರವನ್ನೊಳಗೊಂಡಿರುವುದಾಗಿ ಹೆಮ್ಮೆಪಡುತ್ತದೆ; ಆದರೆ ನಿಜವಾಗಿಯೂ ಯುರೋಪ್ ಖಂಡದ ತಂಪಾದ, ಒಕ್ಕಲುತನದ ಅನುಕೂಲತೆಗಳು ಕಡಮೆ ಉಳ್ಳ ಅನೇಕ ಚಿಕ್ಕ-ಚಿಕ್ಕ ದೇಶಗಳಲ್ಲಿ, ಮತ್ತು ಜನಸಂಖ್ಯೆಯು ಹೆಚ್ಚಾಗಿದ್ದರೂ ಹಿಡಿತುಂಬ ಜನರ ಇಲ್ಲವೆ ಅತ್ಯಂತ ಕಡಮೆ ಜನವಸತಿಯಿದ್ದ ಬೆಳೆಯುಳ್ಳ ಭೂಮಿಯಿದ್ದ ದೊಡ್ಡ ಖಂಡಗಳಲ್ಲಿ ಬಂದ ಅನುಭವದಿಂದ ಇದರ ಉದ್ಭವವಾಗಿದೆ.

ಇ) (೧) ಇದು ವ್ಯಕ್ತಿಗೆ, ಒಂದು ವರ್ಗಕ್ಕೆ, ಬಹಳವಾದರೆ ತನ್ನ ಚಿಕ್ಕ ದೇಶಕ್ಕೆ ಮಾತ್ರ ಆರ್ಥಿಕ ಲಾಭವನ್ನು ಮಾಡಿಕೊಡುವುದೇ, ತನ್ನ ದೇಶದ ಹಿತವನ್ನು ಬಯಸುವುದೇ ತನ್ನ ನೀತಿಯೆಂದೂ ಇದೇ ಅರ್ಥಶಾಸ್ತ್ರದ ಅಚಲವಾದ ಸಿದ್ಧಾಂತವೆಂದೂ ಹೇಳುತ್ತದೆ. ಅದರಂತೆ ಎಲ್ಲರೂ ವರ್ತಿಸಬೇಕೆಂದೂ ಒತ್ತಾಯಪಡಿಸುತ್ತದೆ. ಹಾಗೂ (೨) ಇದು, ಪ್ರಾಚೀನ ಕಾಲದಂತೆ ಬೆಲೆಯುಳ್ಳ ಧಾತುಗಳಿಗೆ ಈಗಲೂ ಮಿತಿಮೀರಿದ ಮಹತ್ವ ಕೊಡುತ್ತದೆ. ಈ ಮಾತುಗಳನ್ನೆಲ್ಲ ಈ ಶಾಸ್ತ್ರವು ತನ್ನ ಪುಸ್ತಕಗಳಲ್ಲಿ ಖಂಡಿಸಿದ್ದರೂ ಯೋಜನೆಯಲ್ಲೂ ವ್ಯವಹಾರದಲ್ಲೂ ಆ ನೀತಿಯನ್ನೆ ಅವಲಂಬಿಸುತ್ತದೆ.

ಈ) ಅರ್ಥಕ್ಕೂ ನೀತಿ-ಧರ್ಮಕ್ಕೂ ಇದ್ದ ಸಂಬಂಧವನ್ನು ಕಡಿದುಹಾಕಿದ್ದರಿಂದ, ಈ ಶಾಸ್ತ್ರವು ದುಡ್ಡಿಗಿಂತಲೂ ಹೆಚ್ಚು ಶ್ರೇಷ್ಠವಾದ ಜೀವನದ ವಿಷಯಗಳನ್ನು ತುಚ್ಛೀಕರಿಸುವ ರೂಢಿಯನ್ನು ಕಲಿಸಿದೆ.

೩ ಇದರ ಪರಿಣಾಮವು ಇಂತಾಗಿದೆ:

ಅ) ಈ ಅರ್ಥಶಾಸ್ತ್ರವು ಯಂತ್ರದ, ಪಟ್ಟಣಗಳ, ಹಾಗೂ (ಒಕ್ಕಲುತನಕ್ಕಿಂತಲೂ) ಉದ್ಯೋಗಗಳ ಕುರುಡು-ಪೂಜಾರಿಯಾಗಿದೆ.

ಆ) ವರ್ಗ-ವರ್ಗಗಳಲ್ಲಿ, ದೇಶ-ದೇಶಗಳಲ್ಲಿ ಏಕಭಾವವನ್ನುಂಟುಮಾಡದೆ ವಿರೋಧವನ್ನು ಹೆಚ್ಚಿಸಿದೆ. ಜನತೆಯ ಸರ್ವೋದಯವನ್ನು ಸಾಧಿಸದೆ ಸ್ವಲ್ಪ ಜನರಿಗೆ ಅಲ್ಪ ಸಮಯದ ವರೆಗೆ ಮಾತ್ರ ಲಾಭವನ್ನು ದೊರಕಿಸಿಕೊಡುವ

ವ್ಯವಸ್ಥೆ ಮಾಡಿದೆ.

ಇ) ಹಿಂದುಳಿದವೆಂದು ಎನಿಸುವ ರಾಷ್ಟ್ರಗಳಲ್ಲಿ ಪ್ರವೇಶಮಾಡಿ ಅಲ್ಲಿಯ ಧನವನ್ನು ಅಪಹರಿಸಿ, ಅಲ್ಲಿಯ ಜನರನ್ನು ವ್ಯಸನ-ಕೂಪಗಳಲ್ಲಿ ದೂಡಿ, ಅವರ ನೀತಿಯನ್ನು ಕೆಡಿಸಿ ತನ್ನ ಸಮೃದ್ಧಿಯ ಮಾರ್ಗವನ್ನು ಶೋಧಿಸುತ್ತಿದೆ.

ಈ) ಈ ಅರ್ಥಶಾಸ್ತ್ರದಂತೆ ನಡೆಯುವ ಪ್ರಜೆಗಳು ಪಶುಬಲದ ಸಹಾಯದಿಂದ ಜೀವಿಸುತ್ತಿರುವರು.

ಉ) ಶಾಸ್ತ್ರೀಯ ಸಿದ್ಧಾಂತಗಳ ಹೆಸರಿನಲ್ಲಿ ಈ ಶಾಸ್ತ್ರವು ಹುಟ್ಟಿಸಿದ ಭ್ರಾಮಕ ಕಲ್ಪನೆಗಳು ಧಾರ್ಮಿಕ ಭ್ರಮೆಗಿಂತ, ಇಲ್ಲವೆ ಭೂತಾದಿ ಭ್ರಮೆಗಿಂತ ಕಡಮೆ ಬಲಿಷ್ಠವಲ್ಲ.

೨ ಭಾರತೀಯ ಅರ್ಥಶಾಸ್ತ್ರ

೧ ಕೆಲವು ಸಂಗತಿಗಳನ್ನು ಒಂದು ಬದಿಗಿಟ್ಟರೂ ಹಿಂದುಸ್ತಾನವು ಅತ್ಯಂತ ವಿಶಾಲವಾದ ದೇಶ. ಇದರ ಹವೆಯೂ ನೀರೂ ನಾನಾ ಬಗೆಯದು, ಭೂಮಿ ನಾನಾ ಪ್ರಕಾರದ್ದು. ಸಾವಿರಾರು ವರ್ಷಗಳ ಬಳಿಕೆಯಿಂದ, ಹಾಗೂ ಜನತೆಯ ಬಡತನದಿಂದ, ಅದರ ಬೆಳವಣಿಗೆ ಕಡಿಮೆಯಾಗಿಬಿಟ್ಟಿದೆ. ಮಾನವ ಕುಲದ ೧/೫ ಜನತೆಯು ಭಾರತದಲ್ಲಿದ್ದು, ಅದು ಚಿಕ್ಕ ಚಿಕ್ಕ ಹಳ್ಳಿಗಳಲ್ಲಿ ಹರಡಿಕೊಂಡಿದೆ. ಇಲ್ಲಿ ಧರ್ಮ, ಸಂಸ್ಕೃತಿ, ಸ್ವಭಾವ ಹಾಗೂ ನಡತೆ ನಡಾವಳಿಯ ವೈವಿಧ್ಯವುಂಟು. ಪಾಶ್ಚಾತ್ಯ ಅರ್ಥಶಾಸ್ತ್ರದ ಗುಟ್ಟು-ಗುರಿಗಳನ್ನು ಮುಂದಿಟ್ಟುಕೊಂಡು ಭಾರತೀಯ ಅರ್ಥಶಾಸ್ತ್ರದ ಯೋಚನೆ ಮಾಡಬಾರದೆಂದು ಹೇಳಲು ಈ ಮೇಲ್ಕಂಡ ಕಾರಣಗಳು ಸಾಕಷ್ಟಾಗಿವೆ.

೨ ಭಾರತೀಯ ಅರ್ಥಶಾಸ್ತ್ರದಲ್ಲಿ ಈ ಮುಖ್ಯ ಗುಣಗಳಿರಬೇಕು:

ಅ) ಇದರ ಸಿದ್ಧಾಂತಗಳು ಹಳ್ಳಿಗಳ ದೃಷ್ಟಿಯಿಂದ ಯೋಜಿಸಲ್ಪಟ್ಟಿರಬೇಕು.

ಆ) ಇದು ಒಕ್ಕಲುತನಕ್ಕೂ ಉದ್ಯೋಗಗಳಿಗೂ ಬಾಂಧವ್ಯವನ್ನು ಸ್ಥಾಪಿಸಬೇಕು. ಒಕ್ಕಲುತನ ಮತ್ತು ಉದ್ಯೋಗ, ಇವೆರಡೂ ಒಂದೇ ನೆರಳಿನಲ್ಲಿ ಬೆಳೆಯಬೇಕು.

ಇ) ನಾನಾ ಧರ್ಮ ಸಂಸ್ಕಾರ ಸ್ವಭಾವಗಳ ಜನರಲ್ಲಿ, ವರ್ಗಗಳಲ್ಲಿ, ಅನುಚಿತವಾದ ಹೋರಾಟ-ಮೇಲಾಟ, ಕೇಡು-ಕ್ಲೇಶಗಳು ಹುಟ್ಟಕೂಡದೆಂಬ

ಧೋರಣೆಯಿಂದ ಇದು ಯೋಜಿಸಲ್ಪಟ್ಟದ್ದಿರಬೇಕು.

ಈ) ಆದ್ದರಿಂದ ಇದು ನೀತಿ-ಧರ್ಮವನ್ನು ಅಡಿಗಡಿಗೆ ತನ್ನೆದುರಿನಲ್ಲಿ ಇಟ್ಟು ಕೊಂಡು ಜನತೆಯ ಸರ್ವೋದಯಕ್ಕೆ ಯತ್ನಿಸಬೇಕು.

೩ ಗ್ರಾಮ-ದೃಷ್ಟಿ

೧ ಹಿಂದೂಸ್ತಾನದ ಪ್ರಾಣವು ಹಳ್ಳಿಗಳಲ್ಲಿದೆಯೆನ್ನುವುದು ಸರ್ವಮಾನ್ಯ. ಆದರೆ ಹಿಂದುಸ್ತಾನದ ಈಗಿನ ಆರ್ಥಿಕ ಯೋಜನೆಗಳಿರುವುದು ಹಳ್ಳಿಗಳ ಹಿತಕ್ಕಾಗಿ ಅಲ್ಲ- ಪಟ್ಟಣಗಳ ಮತ್ತು ಪರದೇಶಗಳ ಕಲ್ಯಾಣಕ್ಕಾಗಿ.

೨ ಇದರಿಂದ ಹಳ್ಳಿಯ ಮೂಲವಸ್ತುಗಳು ಪಟ್ಟಣಕ್ಕೂ, ಪಟ್ಟಣದಿಂದ ಪರದೇಶಕ್ಕೂ ಹೋಗುವುದು; ಪಟ್ಟಣಗಳಲ್ಲಿಯೂ ಪರದೇಶಗಳಲ್ಲಿಯೂ ತಯಾರಿಸಿದ ಸಿದ್ಧ-ವಸ್ತುಗಳು ಹಳ್ಳಿಗಳಲ್ಲಿ ಮಾರಲಾಗುವುದು. ಇದರಿಂದ, ಮೂಲವಸ್ತುಗಳಿಂದ ಬಂದ ಅಲ್ಪ-ಸ್ವಲ್ಪ ಹಣವು ಕೂಡ ಸಿದ್ಧವಸ್ತುಗಳನ್ನು ಕೊಳ್ಳುವುದರಲ್ಲಿ ವೆಚ್ಚವಾಗಿ ಹಳ್ಳಿಗನ ಕೈ ಬರಿದಾಗಿಯೇ ಉಳಿಯುವುದು.

೩ ಜೀವನಕ್ಕೆ ಬೇಕಾಗುವ ಎಷ್ಟೋ ವಸ್ತುಗಳು ಹಳ್ಳಿಗಳಿಗೆ ಹೊಲಗಳಿಂದಲೂ ಅರಣ್ಯಗಳಿಂದಲೂ ಎಷ್ಟೋ ಮಟ್ಟಿಗೆ ಪುಕ್ಕಟೆ ದೊರೆಯುವವು. ಅವುಗಳನ್ನು ಒಟ್ಟುಗೂಡಿಸಿ ಪಟ್ಟಣಿಗರಿಗೆ ಮಾರುವುದರಿಂದ ಬಡವರ ಉಪಜೀವನ ಸಹಜವಾಗಿ ಸಾಗಬಹುದು. ಆದರೆ ಇದಕ್ಕೆ ವಿಪರೀತವಾಗಿ, ಪಟ್ಟಣಗಳಲ್ಲಿಯೂ ಪರದೇಶಗಳಲ್ಲಿಯೂ ಹುಟ್ಟಿದ ಕಣ್ಣಿಗೆ ನುಣ್ಣಗೆ ಅನುಕೂಲವಾಗಿ ತೋರುವ, ನಿಜವಾಗಿಯೂ ತೋರಿಕೆಗಾಗಿ ಮಾತ್ರ ಚನ್ನಾಗಿ ಕಾಣುವ ವಸ್ತುಗಳನ್ನು ಉಪಯೋಗಿಸುವ 'ಫೇಶನ್ನು' (ರೀತಿ) ಹೆಚ್ಚಾದದ್ದರಿಂದ ಹಳ್ಳಿಗಳ ಅನೇಕ ಉದ್ಯೋಗಗಳು, ಕೂಲಿಯ ಕೈಕಸುಬುಗಳು ಮುಳುಗಿಹೋಗಿವೆ, ಈಗಲೂ ಮುಳುಗುತ್ತ ಇವೆ.

೪ ಇಂಥ ಅತ್ಯಂತ ಆಕರ್ಷಕವಾದ ಎಷ್ಟೋ ವಸ್ತುಗಳು ಆರೋಗ್ಯಕ್ಕೂ ಸ್ವಚ್ಛತೆಗೂ ಹಾನಿಕರವಾಗಿರುವವಲ್ಲದೆ ಅತಿ ತುಟ್ಟಿಯೂ ಇರುವವು. ಇವುಗಳನ್ನು ಉಪಯೋಗಿಸುವುದರಿಂದ ವ್ಯರ್ಥವಾದ ವೆಚ್ಚದ ಚಟ ಮಾತ್ರ ಅಂಟಿಕೊಳ್ಳುತ್ತದೆ. ಹಲ್ಲು ಉಜ್ಜುವ ಕರಿಬೆಟ್ಟಿನ ಬದಲು ನಾನಾತರದ ದಂತಮಂಜನಗಳು, ಟೂಥ್‌ಪೇಸ್ಟುಗಳು, ಬ್ರಶ್‌ಗಳು; ಕಟ್ಟಿಗೆಯ ಮಂಚಗಳ

ಬದಲು ಸ್ಪ್ರಿಂಗಿನ ಮಂಚಗಳು; ಬೆಲ್ಲ, ಗಡಿಗೆ-ಕಲ್ಲುಸಕ್ಕರೆಯ ಬದಲು ಗಿರಣಿಗಳಲ್ಲಿ ತಯಾರಾದ ಬಿಳಿ ಕಲ್ಲುಸಕ್ಕರೆ; ಹೆಂಚಿನ ಬದಲು ತಗಡು; ಕತ್ತದ, ನಾರಿನ ಹಗ್ಗಗಳ ಬದಲು ತಂತಿ, ತಂತಿಯ ಹಗ್ಗಗಳು; ಮಣ್ಣಿನ ಪಾತ್ರೆಗಳ ಬದಲು ಜಪಾನಿನ, ಚೀನದ ಪಾತ್ರೆಗಳು; ಹಳ್ಳಿಯ ಬಿದಿರಿನ ಬುಟ್ಟಿ ಮರ ಮುಂತಾದುವುಗಳ ಬದಲು ತಗಡಿನ ಬುಟ್ಟಿಗಳು ಮೊರಗಳು ಡಬ್ಬಿಗಳು ಮುಂತಾದುವು; ಹಳ್ಳಿಯ ಕಮ್ಮಾರರು ಮಾಡಿದ ಸಳಿ, ಸರಪಳಿ, ಕುಡುಗೋಲು, ಸೌಟು, ಸುತ್ತಿಗೆ ಕೊಡಲಿಗಳ ಬದಲು ಯಂತ್ರದಿಂದಾದ ಸಳಿ, ಸರಪಳಿ, ಸೌಟು, ಸುತ್ತಿಗೆ ಮುಂತಾದ ಆಕರ್ಷಕ ವಸ್ತುಗಳು; ಹಳ್ಳಿಯ ಅಕ್ಕಸಾಲಿಗರ ಆಭರಣಗಳ ಬದಲು ಪಟ್ಟಣಗಳಲ್ಲಿ ಯಂತ್ರಗಳಿಂದ ತಯಾರಿಸಲ್ಪಟ್ಟ ಅಚ್ಚಿನ ಆಭರಣಗಳು; ಹಳ್ಳಿಯ ಹೆಂಗುಸರು ಮಾಡಿದ ಬೀಸಣಿಕೆ, ಆಸನ, ಜಾಜಮ್ ಶಾಲುಗಳ ಬದಲು ಜಪಾನಿನ ಕಾಗದದ ಬೀಸಣಿಕೆ, ಗಿರಣಿಯ ಆಸನ, ಶಾಲು, ಮೊದಲಾದುವು; ಸೀಗೆಕಾಯಿ, ಅಂಟ್ವಾಳಕಾಯಿಗಳ ಬದಲು ಸುಗಂಧಮಿಶ್ರಿತವಾದ ಸಾಬೂನು; ಗಲಗಿನ ಲೆಕ್ಕಣಿಕೆಗಳ ಬದಲು ಫೌಂಟನ್‌ಪೆನ್ನು ಟಾಕುಗಳು; ಹಳ್ಳಿಯಲ್ಲಿ ತಯಾರಾದ ಮಸಿಯ ಬದಲು ರಸಾಯನದಿಂದ ತಯಾರಿಸಲ್ಪಟ್ಟ ಮಸಿ; ಹಳ್ಳಿಯ ಕೈ-ಕಾಗದದ ಬದಲು ಯಂತ್ರದಲ್ಲಿ ತಯಾರಾದ ಕಾಗದ; ಮನೆಯ ಶುದ್ಧ ಕಷಾಯ ಮುಂತಾದ ವನಸ್ಪತಿ-ಔಷಧಗಳ ಬದಲು ಸಿದ್ಧೌಷಧಿಗಳು; ಹಳ್ಳಿಯ ಪಾತ್ರೆಗಳ ಬದಲು ಬಾಟ್ಲಿ ಮುಂತಾದುವು.

೫ ಇವೆಲ್ಲ ವಸ್ತುಗಳು ಹಳ್ಳಿಗಳಲ್ಲಿ ಮಾಡಿದ ಒಡವೆಗಳಿಗಿಂತ ಅಗ್ಗವಾಗಿ ದೊರೆಯುವವೆಂದಲ್ಲ. ಆದರೂ ಇವು ಮೋಹಕವಿರುವುದರಿಂದ, ಶ್ರೀಮಂತರೂ ಅವಿಚಾರಿಗಳೂ ಮಾಡಿದ ಫೇಶನ್ನಿನ ಅಂಧಾನುಕರಣವು ಸಭ್ಯತೆ ಎನಿಸಿದ್ದರಿಂದ, ಪ್ರಜೆಗಳ ಆರ್ಥಿಕ ಸ್ಥಿತಿ ಚನ್ನಾಗಿಲ್ಲದಿದ್ದರೂ ಅವು ಮಾರಾಟವಾಗುತ್ತವೆ.

೬ ಅವಿಚಾರಿಗಳಾದ ಯಂತ್ರವಾದಿಗಳೂ ಹಳ್ಳಿಗರನ್ನು ನಿರ್ಧನಿಕರನ್ನಾಗಿ ಮಾಡಲು ಬಹಳ ಪರಿಶ್ರಮಪಟ್ಟಿದ್ದಾರೆ. ಇವರು ಹತ್ತಿ ಹಿಂಜುವ, ಬತ್ತ ಕುಟ್ಟುವ, ಹಿಟ್ಟು ಬೀಸುವ, ಎಣ್ಣೆಗಳನ್ನು ತೆಗೆಯುವ ಕಾರ್‌ಖಾನೆಗಳನ್ನು ಸ್ಥಾಪಿಸಿದ್ದಾರೆ; ಊರಿಂದೂರಿಗೆ ಹೋಗಿ ಬರುವುದಕ್ಕಾಗಿ ಮೋಟಾರು ಬಸ್ಸುಗಳನ್ನು ಇಟ್ಟಿದ್ದಾರೆ.

೭ ಅಲ್ಪವಾದರೂ ಚಿಂತೆಯಿಲ್ಲ, ತತ್ಕಾಲಕ್ಕೆ ಹೆಚ್ಚು ಲಾಭವು ದೊರೆತರೆ

ಸಾಕೆಂಬ ವ್ಯಾಪಾರಿಗಳ ಸ್ವಾರ್ಥ-ದೃಷ್ಟಿಯ ಮೂಲಕ, ಹಳ್ಳಿಯ ವಸ್ತುಗಳ ಮೂಲ ಬೆಲೆ ಪರದೇಶೀ ಮತ್ತು ಯಂತ್ರದ ವಸ್ತುಗಳ ಬೆಲೆಗಿಂತ ತೀರ ಕಡಮೆಯಿದ್ದರೂ ಕೊಳ್ಳುವವನಿಗೆ ಹಳ್ಳಿಯ ವಸ್ತುಗಳು ತುಟ್ಟಿಬೀಳುತ್ತವೆ. ಇದರಿಂದ ಹಳ್ಳಿಗರ ಕೈಯಲ್ಲಿರಬೇಕಾಗಿದ್ದ ಪೇಟೆಗಳು ಪರದೇಶೀಯರ ಮತ್ತು ಗಿರಣಿಗಳ ಒಡೆಯರ ಕೈಸೇರಿವೆ.

೮ ಅರ್ಥಶಾಸ್ತ್ರವು ಹಳ್ಳಿಯ ದೃಷ್ಟಿಯನ್ನಿಟ್ಟುಕೊಂಡು ಬರೆಯಲ್ಪಟ್ಟ ಮೇಲೆ, ಜೀವನದಲ್ಲಿ ಹಳ್ಳಿಯ ಕಡೆಗೆ ದೃಷ್ಟಿಯು ಹೊರಳಿದ ಮೇಲೆ ಮಾತ್ರ, ಹಳ್ಳಿಗಳು ಹುಟ್ಟಿಸಿದ ವಸ್ತುಗಳ ಉಪಯೋಗದ ಕಡೆಗೆ ಜನತೆಯ ಮನಸ್ಸು ಹರಿಯುವುದು. ತಮಗೆ ಅವಶ್ಯವಿದ್ದ ವಸ್ತುಗಳನ್ನು ಹಳ್ಳಿಗಳಲ್ಲೇ ಹುಟ್ಟಿಸ ಬೇಕೆಂದು ಮನಸ್ಸಾಗುವುದು. ಇದರಿಂದ ಹಳ್ಳಿಗಳಲ್ಲಿದ್ದ ಕಲೆಯ ಮತ್ತು ಉದ್ಯೋಗಗಳ ಪುನರುಜ್ಜೀವನದ ಕಡೆಗೆ, ಹಳ್ಳಿಗರ ಶಿಕ್ಷಣದ ಕಡೆಗೆ, ಹಳ್ಳಿಯ ಕಾಡುಗಳನ್ನೂ ಹೊಲಗಳನ್ನೂ ಹರಗಿ ಹೆಚ್ಚು ಉಪಯೋಗವನ್ನು ಮಾಡಿಕೊಳ್ಳುವುದರ ಕಡೆಗೆ, ಅವುಗಳಲ್ಲಿ ಹೆಚ್ಚು ಬೆಳೆಯನ್ನು ತೆಗೆಯುವುದರ ಕಡೆಗೆ, ಜ್ಞಾನದ ಅಭಾವದಿಂದ ವ್ಯರ್ಥವಾಗಿ ಹಾಳಾಗಿ ಹೋಗುವ ಸಂಪತ್ತನ್ನೂ ನೈಸರ್ಗಿಕ ವಸ್ತುಗಳನ್ನೂ ಹುಡುಕಿ ಉಪಯೋಗಿಸಿಕೊಳ್ಳುವುದರ ಕಡೆಗೆ ಜನತೆಯ ಮನಸ್ಸು ಹರಿಯುವುದು.

೯ ಇಂದು ಸಂಪತ್ತು ಭಾರತದ ಹಳ್ಳಿಗಳಿಂದ ಪಟ್ಟಣಗಳಿಗೂ, ಪಟ್ಟಣ ಗಳಿಂದ ಪರದೇಶಗಳಿಗೂ ಹರಿದುಹೋಗುತ್ತಿದೆ. ಇದನ್ನು ಆಮೂಲವಾಗಿ ತಡೆದುಹಿಡಿದು, ಪ್ರವಾಹವು ತಿರುಗಿ ಹಳ್ಳಿಗಳತ್ತ ಹರಿಯುವಂತೆ ಮಾಡುವುದು ಅತ್ಯಂತ ಅವಶ್ಯ. ಹಳ್ಳಿಗಳ ಸಂಪತ್ತು ಹಳ್ಳಿಗಳಲ್ಲೇ ಉಳಿಯುವಂತೆ, ಹಳ್ಳಿ ಗಳು ಸ್ವಾವಲಂಬಿಗಳಾಗುವಂತೆ, ಇಷ್ಟೇ ಅಲ್ಲ, ಪಟ್ಟಣಿಗರು ತಮ್ಮ ಅವಶ್ಯ-ಕತೆಯ ವಸ್ತುಗಳನ್ನು ಹಳ್ಳಿಗಳಲ್ಲೇ ಹುಟ್ಟಿಸಿಕೊಳ್ಳುವಂತೆ, ಪಟ್ಟಣಿಗರಿಗೆ ಹಳ್ಳಿಗಳೆ ಸರ್ವವಸ್ತುಗಳ ಪೂರೈಕೆಯ ಕೇಂದ್ರಗಳಾಗುವಂತೆ ಮಾಡುವುದು ಅತ್ಯಂತ ಅವಶ್ಯ.

೪ ಧನೇಚ್ಛೆ

೧ ಸಾಮಾನ್ಯವಾಗಿ ಬಹಳ ಜನರು ತಮ್ಮ ಆರ್ಥಿಕ ಸ್ಥಿತಿಯಲ್ಲಿ, ಸುಖಾನುಕೂಲತೆಗಳಲ್ಲಿ ಸ್ವಲ್ಪ ಸುಧಾರಣೆಯನ್ನೂ ಉನ್ನತಿಯನ್ನೂ ಮಾಡಿ

ಕೊಳ್ಳಬಯಸುವರು ಎನ್ನಬಹುದಾದರೂ ಮನುಷ್ಯನ ಸುಖ-ಸಂಪತ್ತಿನ ಇಚ್ಛೆಗೆ ಮೇರೆಯೆ ಇಲ್ಲ. ಎಲ್ಲರೂ ಲಕ್ಷಾಧಿಪತಿಗಳು, ಜಮೀನುದಾರರು, ಇಲ್ಲವೆ ರಾಜರಾಗಲು, ಬಂಗಲೆ ಅರಮನೆಗಳಲ್ಲಿ ವಾಸಿಸಲು ಬಯಸುವರು ಎಂದು ಹೇಳುವುದು ಸಾಮಾನ್ಯ ಮನುಷ್ಯನಿಗೆ ಅನ್ವಯಿಸದಂತಹ ವಿಧಾನ. ಅಲ್ಲದೆ ಹೀಗೆ ಹೇಳುವುದೆಂದರೆ ಜನಸಾಮಾನ್ಯರ ವಿಷಯದಲ್ಲಿ ಕೀಳು-ಅಭಿಪ್ರಾಯ ವನ್ನು ವ್ಯಕ್ತಪಡಿಸಿದಂತೆ, ಅವರ ಎದುರಿನಲ್ಲಿ ಕೀಳು ತರಗತಿಯ ಆದರ್ಶವನ್ನು ಇಟ್ಟಂತೆ.

೨ ಧನವನ್ನು ತಿರಸ್ಕರಿಸದ, ಆದರೆ ಅದರ ಅತ್ಯಾಶೆ ಇಲ್ಲದ ಜನರು ಬಹಳ ವಾಗಿದ್ದಾರೆ. ಆದರೆ ಅವರು ವರ್ಷದ ಕೊನೆಗೆ ತಮ್ಮಲ್ಲಿ ಸ್ವಲ್ಪ ಹಣ ಉಳಿದು ದನ್ನು ನೋಡಲಿಚ್ಛಿಸುವರೆಂಬುದೂ ನಿಜ. ಅದೂ ಕೂಡ ಬೇನೆ ಬೇಸರಿಕೆ, ಮದುವೆ ಮುಂಜಿ, ಹಬ್ಬ ಹುಣ್ಣಿಮೆ, ತೀರ್ಥಯಾತ್ರೆ ದಾನ-ಧರ್ಮಕ್ಕಾಗಿ, ಇಲ್ಲವೆ ಮುಪ್ಪಿನಲ್ಲಿ ವೆಚ್ಚಮಾಡುವುದಕ್ಕೆ ಸಾಕಾಗುವಷ್ಟು ಮಾತ್ರ. ಧಾರ್ಮಿಕ ಸಂಸ್ಕಾರವಿದ್ದ ಜನರಲ್ಲಿ ಧನದ ಮತ್ತು ಸುಖದ ಅಪಾರವಾದ ತೃಷ್ಣೆಗೆ ಎಲ್ಲೆ ಇದ್ದೇ ಇದೆ.

೩ ರಾಜರೆಲ್ಲರಿಗೆ ಸಿಕಂದರ್ ಅಥವಾ ನೆಪೋಲಿಯನ್, ಭರ್ತೃಹರಿ ಅಥವಾ ಗೋಪಿಚಂದರಾಗಲು ಹೇಗೆ ಮಹತ್ವಾಕಾಂಕ್ಷೆಯೂ ಶಕ್ತಿಯೂ ಇರುವುದಿಲ್ಲವೊ, ಹಾಗೆಯೆ ಬಹು ಜನರಿಗೆ ತೀರ ಶ್ರೀಮಂತರಾಗುವ, ಇಲ್ಲವೆ ತೀರ ಬಡವರಾಗುವ ಮಹತ್ವಾಕಾಂಕ್ಷೆಯೂ ಧೈರ್ಯ ಸಾಹಸಗಳೂ ಇರುವು ದಿಲ್ಲ.

೪ ಆದರೆ ಪ್ರತಿಯೊಂದು ಜನಾಂಗದಲ್ಲೂ ಕೆಲವರಿಗೆ ಮಾತ್ರ ಅಸಾಧಾರಣ ಮಹತ್ವಾಕಾಂಕ್ಷೆಯೂ ಸಾಹಸದ ಕಾರ್ಯಗಳನ್ನು ಮಾಡುವ ಅಸಾಧಾರಣ ಶಕ್ತಿಯೂ ಇರುವುದು. ಕೆಲವರ ಗುರಿ ಬಡತನವಾಗಿದ್ದರೆ ಇನ್ನು ಕೆಲವರಿಗೆ ಶ್ರೀಮಂತಿಕೆಯ ಹೆಬ್ಬಯಕೆ.

೫ ಜನತೆಯ ಸುಖಾನುಕೂಲತೆಗಳಿಗೂ ಧನೇಚ್ಛೆಗೂ ಹಾನಿಯಾಗದಂತೆ, ಸಾಹಸ ಶೌರ್‍ಯದ ಕಾರ್‍ಯಗಳನ್ನು ಮಾಡಿತೋರಿಸಬೇಕೆನ್ನುವವರಿಗೆ ಸುಸಂಧಿ ದೊರೆಯುವಂತೆ, ಸಮಾಜ-ರಚನೆಯಾಗಬೇಕು. ಸಮಾಜದ ವ್ಯವಸ್ಥೆಯೂ ಹಾಗಿರಬೇಕು. ಇಷ್ಟೇ ಅಲ್ಲ, ಇದರಿಂದ ಹಲವರ ಮಹತ್ವಾಕಾಂಕ್ಷೆಗೆ ಉತ್ತೇ ಜನ ದೊರೆತರೂ ಕೊನೆಯಲ್ಲಿ ಸಮಾಜಕ್ಕೆ ಲಾಭವಾಗುವಂತೆ ಇರಬೇಕು.

೬ ಸಮಾಜದ ರಚನೆಯಲ್ಲಿ ಪೌರುಷ-ಪ್ರದರ್ಶನಕ್ಕೆ ಒಳ್ಳೆಯ ಸಂಧಿ ಸಂದರ್ಭಗಳು ದೊರೆಯದಿದ್ದರೆ ಜನರ ಮಹತ್ವಾಕಾಂಕ್ಷೆಯು ಅವರನ್ನು ಅಡ್ಡ ದಾರಿಗೆ ಸೆಳೆದೊಯ್ಯುವುದು. ಅದರಿಂದ ಸಮಾಜಕ್ಕೆ ಹಾನಿಯಾಗುವುದು.

೭ ಉದ್ಯೋಗ ವ್ಯವಸಾಯಗಳಲ್ಲಿಯೂ, ಸಮಾಜ ಸೇವೆಯ ಎಷ್ಟೋ ಕಾರ್ಯಗಳಲ್ಲಿಯೂ, ನಾನಾ ತರದ ಸಾಹಸವನ್ನು ತೋರಿಸಬೇಕಾಗುವುದು; ನಾನಾ ಬಗೆಯ ಕಷ್ಟ ನಷ್ಟಗಳನ್ನು ಸಹಿಸಬೇಕಾಗುವುದು. ಇವುಗಳಲ್ಲಿ ಯಶಸ್ಸು ದೊರೆತೇ ದೊರೆಯುವುದೆಂದು ಹೇಳಲಾಗುವುದಿಲ್ಲ. ಸಾರ್ವಜನಿಕ ಸಂಸ್ಥೆಗಳಿಗಿಂತಲೂ ವ್ಯಕ್ತಿಗಳು, ಸಾರ್ವಜನಿಕವಲ್ಲದ ಸಂಸ್ಥೆಗಳು, ಇವುಗಳ ಪ್ರಯೋಗ ಮಾಡಿದರೆ ಹೆಚ್ಚು ಅನುಕೂಲವಾಗುವುದಲ್ಲದೆ ಯಶಸ್ಸೂ ದೊರಕ ಬಹುದು. ಸಮಾಜದ ರಚನೆ ಇದಕ್ಕೆ ಅನುಕೂಲವಾಗಿರಬೇಕು.

೫ ವ್ಯಾಪಾರ

೧ ವ್ಯಾಪಾರದ ಯೋಗ್ಯ ಕಾರ್ಯಕ್ಷೇತ್ರವೆಂದರೆ ಅವಶ್ಯವಾದ ದೊಡ್ಡ ಉದ್ಯೋಗಗಳನ್ನು ಬೆಳೆಯಿಸುವುದು, ಅವಶ್ಯವಿದ್ದ ವಸ್ತುಗಳನ್ನು ಜನತೆಗೆ ತಲ್ಪಿಸುವುದು. ಇದರಲ್ಲಿ ಅನಾಯಾಸವಾಗಿ ಉಳಿತಾಯವಾದುದೇ ಲಾಭ.

೨ ಉದ್ಯೋಗ ವ್ಯವಸಾಯಕ್ಕೆ ತಗಲುವ ವೆಚ್ಚವನ್ನು ಪದಾರ್ಥದ ಮೇಲೆ ಹಂಚಿಹಾಕಿದ ಮೇಲೆ, ಹಾನಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹಾಕಿದ ಹೆಚ್ಚಿನ ಬೆಲೆಯೆ ಅನಾಯಾಸವಾದ ಉಳಿತಾಯವೆನಿಸುವುದು. ಈ ಉಳಿ-ತಾಯವು ಪ್ರತ್ಯೇಕದಲ್ಲಿ ಅತ್ಯಲ್ಪವಾಗಿ ತೋರಿದರೂ ಉದ್ಯೋಗದ ಪ್ರಮಾಣ ದಿಂದ ಒಟ್ಟುಗೂಡಿಸಿ ನೋಡಿದರೆ ಮೊತ್ತದಲ್ಲಿ ದೊಡ್ಡದಾಗಿ ಕಾಣುವುದು.

೩ ಹೀಗೆ ಹೆಚ್ಚಾಗಿ ಉಳಿದ ಧನವನ್ನು ಆ ಆ ಉದ್ಯೋಗಗಳಲ್ಲಿ ಕೆಲಸ ಮಾಡುವ ಕೂಲಿಕಾರರ ಕಲ್ಯಾಣಕ್ಕಾಗಿಯೂ ಇತರ ಅನೇಕ ಉಪಯೋಗೀ ಉದ್ಯೋಗಗಳನ್ನು ಹೆಚ್ಚಿಸುವುದಕ್ಕಾಗಿಯೂ ಸಾರ್ವಜನಿಕ ಹಿತದ ಕಾರ್ಯಗಳಿ ಗಾಗಿಯೂ ವಿನಿಯೋಗಿಸುವುದು ಕಲ್ಯಾಣಕರವಾದುದು.

೪ ಇಂಥ ಧನದ ಒಡೆಯನು, ತಾನು ಈ ಧನದ ಸಂರಕ್ಷಕನೆಂದೂ ಇದನ್ನು ಸಾರ್ವಜನಿಕ ಕಾರ್ಯಗಳಿಗಾಗಿ ವಿನಿಯೋಗಿಸುವುದು ತನ್ನ ಧರ್ಮವೆಂದೂ ತಿಳಿದು ಕೊಂಡರೆ, ಅವನು ಭಂಡವಲುಗಾರನಿದ್ದರೂ ಪ್ರಜೆಗಳ ಕಲ್ಯಾಣವನ್ನು ಮಾಡು ವನು, ಮತ್ತು ಪ್ರಜೆಗಳ ಹೊಟ್ಟೆಕಿಚ್ಚಿಗೆ ಬಲಿಯಾಗುವುದಿಲ್ಲ.

೫ ಆದರೆ ಅವನು ಈ ಧನದಿಂದ ಸ್ವಾರ್ಥಸಾಧನೆಯ ದಾರಿಯನ್ನೇ ಹಿಡಿದರೆ, ಮತ್ತು ಈ ಧನವನ್ನು ಇಮ್ಮಡಿಸುವ ದೃಷ್ಟಿಯನ್ನೇ ಇಟ್ಟುಕೊಂಡರೆ ಜನತೆಯ ತಿರಸ್ಕಾರದ ಕೂರಂಬುಗಳಿಗೆ ಗುರಿಯಾಗುತ್ತಾನೆ. ಅಲ್ಲದೆ ಶ್ರೀಮಂತ ಬಡವರಲ್ಲಿ ಭೇದಭಾವನೆಯೂ ಕಲಹಗಳೂ ಹುಟ್ಟಲು ಕಾರಣನಾಗುತ್ತಾನೆ.

೬ ಶ್ರೀಮಂತರು ತಮ್ಮ ಆಶ್ರಯದಲ್ಲಿರುವವರಿಗೆ ಅವರ ಕೌಟುಂಬಿಕ ಶುಭಕಾರ್ಯಗಳಲ್ಲಿ ತಮ್ಮ ಬಂಗ್ಲೆ, ಕುದುರೆ, ಬಂಡಿ, ಪಾತ್ರೆ, ಜಮಖಾನೆ, ಗುಡಾರ, ಆಭರಣ ಮುಂತಾದುವುಗಳನ್ನು ಕೊಟ್ಟು ಅವರ ಶುಭಕಾರ್ಯಗಳು ಸುಸೂತ್ರವಾಗಿ ಸಾಗುವಂತೆ ಮಾಡಿ, ಅವರ ಮನಸ್ಸನ್ನು ಪ್ರಫುಲ್ಲಿತಗೊಳಿಸುವುದು ತಮ್ಮ ಕುಲಧರ್ಮವೆಂದು ತಿಳಿಯಬೇಕು. ತಮ್ಮ ಆಚರಣೆಯನ್ನೂ ಅದರಂತೆ ಇಡಬೇಕು. ಬಡವರ ಜೀವನವು ಉಪವಾಸ-ವನವಾಸ, ಬೇನೆ-ಬೇಸರಿಕೆಗಳಿಲ್ಲದೆ ಸುಖದಿಂದ ಸಾಗಿದರೆ ಮಾತ್ರ ಶ್ರೀಮಂತರು ಬಂಗಾರದ ತಟ್ಟೆಯಲ್ಲಿ ಉಂಡರೂ ಅತ್ತ ಕಡೆ ಬಡವರು ಕಣ್ಣು ಹೊರಳಿಸಿ ನೋಡುವುದಿಲ್ಲ. ಇಷ್ಟೇ ಅಲ್ಲ, ಜನತೆಯ ಬಹು ಭಾಗವು ಶ್ರೀಮಂತರನ್ನು ಸರಿಪಡಿಸಬೇಕೆಂಬ ಗೋಜಿಗೂ ಹೋಗಬಯಸುವುದಿಲ್ಲ.

೭ ಶ್ರೀಮಂತರ ನಡತೆ ಹೀಗಿದ್ದರೆ ಮಾತ್ರ, ತಾವು ಈ ಧನದ ಸಂರಕ್ಷಕರೆಂದು ತಿಳಿದು ಅವರು ಈ ಧನದ ಸದ್ವಿನಿಯೋಗ ಮಾಡುತ್ತಿರುವರೆನ್ನಬಹುದು. ಹೀಗಿದ್ದರೂ ಅವರಿಗೆ ಧನದಾಸೆ ಇರುವುದೇ ಇಲ್ಲ ಎನ್ನಲಾಗದು. ಆದರೂ ಈ ಧನವು ಪ್ರಜೆಗಳಿಗೆ ಕೇಡು ಬಗೆಯದೆ, ಅವಶ್ಯಕತೆಯಲ್ಲಿ ಉಪಯೋಗಕ್ಕೆಂದು ಕೂಡಿಟ್ಟ ಧನ-ಸಂಗ್ರಹವಾಗುವುದು.

೮ ಇಂಥ ಪರಿಸ್ಥಿತಿ ಇದ್ದ ಕಡೆಯಲ್ಲಿ ಸಾಮ್ಯವಾದಿಗಳ ಪ್ರಚಾರಕ್ಕೆ ಮನಸೋತು ಜನರು ಶ್ರೀಮಂತರನ್ನು ನಾಶ ಮಾಡತೊಡಗುವುದಿಲ್ಲ.

೯ ಹೀಗೆ ಸರಳವಾದ, ಆಡಂಬರರಹಿತವಾದ, ಸಂಯಮೀ ಜೀವನವನ್ನು ನಡೆಸಲಾರಂಭಿಸಿದವರು ಶ್ರೀಮಂತರಿದ್ದರೂ ಪ್ರಜೆಗಳಿಗೆ ಪೂಜ್ಯರು.

೬ ಸಾವುಕಾರಿಕೆ

೧ ಹಣವನ್ನು ಕಡಮೆ ಬಡ್ಡಿಗೆ ಪಡೆದುಕೊಂಡು ಹೆಚ್ಚು ಬಡ್ಡಿ ಬರುವಂತೆ ಉದ್ಯೋಗದಲ್ಲಿ ತೊಡಗಿಸುವುದಕ್ಕೆ ಸಾವುಕಾರಿಕೆ ಎನ್ನುವರು. ಸಮಾಜದ ಹಿತಕ್ಕೆ ಅತ್ಯಂತ ಅವಶ್ಯವಾದ ಸಾವುಕಾರಿಕೆ ಇದಲ್ಲ.

೨ ಪರದೇಶೀ ವ್ಯಾಪಾರಿಗಳ ದಲಾಲ್‌ತನ, ಒಕ್ಕಲಿಗರ ಮತ್ತು ಇತರ ಉದ್ಯೋಗಿಗಳ ಭೂಮಿ, ಸ್ಥಿರ ಚರ ಸೊತ್ತು, ತೀರ ಹೆಚ್ಚೆಂದರೆ ಪರ ರಾಜ್ಯಗಳನ್ನು ಮೆಲ್ಲಮೆಲ್ಲನೆ ಅಪಹರಿಸುವ ಹಂಚಿಕೆ, ಇವೆಲ್ಲಾ ಇಂದು ಪ್ರಪಂಚದಲ್ಲಿ ನಡೆದಿರುವ ಸಾಹುಕಾರಿಕೆಯ ಚಿಕ್ಕ ದೊಡ್ಡ ಪ್ರಯತ್ನಗಳು. ಹೆಚ್ಚಿನ ಬಡ್ಡಿಯ ಆಸೆಯಿಂದ ತನ್ನ ದೇಶದ ಬಡವರನ್ನು ದುರ್ಲಕ್ಷಿಸಿ ಪರದೇಶಗಳಲ್ಲಿ ಹಣವನ್ನು ತೊಡಗಿಸುವ ಇಂತಹ ಸಾವುಕಾರಿಕೆಯ ರೀತಿ ಹುಟ್ಟಿದ್ದು ಯುರೋಪು, ಅಮೇರಿಕೆಯಂತಹ ದೇಶಗಳಲ್ಲಿ. ಈ ಪದ್ಧತಿಯಿಂದ ಆ ಶ್ರೀಮಂತ ದೇಶಗಳಲ್ಲಿಯೂ ಕ್ಲೇಶಗಳು ಕೊನೆ ತನಕ ಉಳಿಯುವಂತಾಗಿದೆ.

೩ ವ್ಯವಹಾರದಲ್ಲಿ ಸುಳ್ಳಾಡಿದರೆ ದೋಷವಿಲ್ಲವೆಂದು ಭಾವಿಸುವುದು ಭಯಂಕರವಾದ ಅಧರ್ಮ.

೪ ಅಶಿಕ್ಷಿತ ಸರಳ ನಂಬಿಗಸ್ತ ಜನರನ್ನೂ ವಿಲಾಸಿಗಳಾದ ಶ್ರೀಮಂತರನ್ನೂ ರಾಜರನ್ನೂ ದುಂದುಗಾರರನ್ನಾಗಿ ಮಾಡಿ ಅವರಿಗೆ ಚಟಗಳನ್ನಂಟಿಸಿ ಸಾಲಗಾರರನ್ನಾಗಿ ಮಾಡುವುದು, ವ್ಯಾಪಾರದಲ್ಲಿ ಮೋಸ ಮಾಡುವುದು, ಸುಳ್ಳು ಲೆಕ್ಕ ಇಡುವುದು, ಸುಳ್ಳು ಕಾಗದ-ಪತ್ರಗಳನ್ನು ಹುಟ್ಟಿಸುವುದು ಸಾವುಕಾರಿಕೆಯಲ್ಲ. ಅದು ಧಗಧಗಿಸುವ ಪಾಪ, ಹಿಂಸೆ.

೫ ಇಂಥ ಅಧರ್ಮದ ಸಾವುಕಾರಿಕೆಯಿಂದ ಹೆಚ್ಚುವುದು ಧನವಲ್ಲ, ಅನರ್ಥ.

೬ ಜನರು ತಮ್ಮ ಧನವನ್ನು ಉದ್ಯೋಗಗಳಿಗೆ ನೆರವಾಗುವ ರೀತಿಯಲ್ಲೇ ಇಡಬೇಕು. ಅದನ್ನು ಸ್ವದೇಶದ ಉದ್ಯೋಗಗಳಲ್ಲೇ ತೊಡಗಿಸಬೇಕು. ಇದರಿಂದ ಲಾಭವು ಹೆಚ್ಚಾಗಿ ಹಣವು ದ್ವಿಗುಣಿತವಾದರೆ ಅದರ ಉಪಯೋಗವು ಸ್ವದೇಶದ ಸಾರ್ವಜನಿಕ ಕಾರ್ಯಗಳಿಗಾಗಿ ಮೀಸಲಿರಬೇಕು. ಹಣದ ಬಡ್ಡಿಯಿಂದಲೆ ಸಾರ್ವಜನಿಕ ಕಾರ್ಯಗಳು ಜರುಗಬೇಕೆಂಬ ವಿಚಾರ ಯಾವಾಗಲೂ ಸರಿಯಾದುದಲ್ಲ. ಏಕೆಂದರೆ ಈ ಹಣದ ಉಪಯೋಗವು ಹೆಚ್ಚಾಗಿ ಸಾರ್ವಜನಿಕ ಕಾರ್ಯಗಳಿಗಾಗುವ ಬದಲು ಹೆಚ್ಚು ಬಡ್ಡಿಯನ್ನು ದೊರಕಿಸುವ ವ್ಯಕ್ತಿಯ ಬೆಳವಣಿಗೆಗೆ ಆಗುತ್ತದೆ.

೭ ಸಾಲದಿಂದ ಕೌಟುಂಬಿಕ ಕಾರ್ಯಗಳನ್ನು ಸಾಗಿಸಕೂಡದೆಂಬ ಕಟ್ಟೆಪ್ಪಣೆ ಇರಬೇಕು. ಆ ಕಾರ್ಯಗಳು ತೀರ ಕಡಮೆ ವೆಚ್ಚದಲ್ಲಿ ಸಾಂಗವಾಗುವಂತೆ ಸಮಾಜದ ಪದ್ಧತಿಗಳು ರೂಪುಗೊಳ್ಳಬೇಕು. ಹೀಗಿದ್ದರೂ ಬೇನೆ ಬೇಸರಿಕೆ, ಅನುವು ಆಪತ್ತು, ಅಥವಾ ಮದುವೆ ಮುಂಜಿಗಳಿಗಾಗಿ ಅಕಸ್ಮಾತ್ ಕೊಂಚ

ಹಣವು ಬೇಕಾದರೆ ಬಡ್ಡಿಯಿಲ್ಲದೆ ಗೆಳೆತನದ ನಂಬಿಗೆಯ ಆಧಾರದಿಂದ ಸಮಾಜದಿಂದಲೇ ಸಿಕ್ಕಬೇಕು. ಅಂಗಡಿಕಾರನು ಮನೆತನಕ್ಕೆ ಬೇಕಾದ ಪದಾರ್ಥಗಳನ್ನು ಕೊಟ್ಟರೆ, ಮೇಲ್ಕಾಣಿಸಿದ ಕೌಟುಂಬಿಕ ಶುಭಕಾರ್ಯಗಳಲ್ಲಿ ಪದಾರ್ಥಗಳನ್ನು ಕೊಟ್ಟು ನೆರವಾದರೆ, ಅವುಗಳ ಮೇಲೆ ಬಡ್ಡಿಯನ್ನು ಪಡೆಯುವುದು ಯೋಗ್ಯವಲ್ಲ.

೮ ಸದ್ಯದ ಪರಿಸ್ಥಿತಿಯಲ್ಲಂತೂ ಇಂಥ ಸಂದರ್ಭಗಳಲ್ಲಿ ಕೊಟ್ಟ ಸಾಲಕ್ಕೆ ಬಹು ಹೆಚ್ಚು ಬಡ್ಡಿ ಸಿಕ್ಕಬಲ್ಲುದು. ಆದ್ದರಿಂದ ಜನರಿಗೆ ಚಟಗಳನ್ನು ಕಲಿಸಿ, ಸಲ್ಲದ ವೆಚ್ಚಗಳಲ್ಲಿ ಮುಳುಗಿಸಿ, ಅವರಿಂದ ಹೆಚ್ಚು ಬಡ್ಡಿಯನ್ನು ಸೆಳೆಯಲು ಸಾವುಕಾರರಿಗೆ ಎಡೆಯಾಗಿದೆ.

೯ ಇನ್ನೊಂದು ಕಡೆಯಿಂದ, ವ್ಯಾದೆಯ ಮತ್ತು ದಿವಾಳಿಯ ಕ್ಯಾದೆಗಳು ಪ್ರಜರ ನೈತಿಕ ಭಾವನೆಯನ್ನು ಕೆಡಿಸಲು ಹೆಚ್ಚು ನೆರವಾಗಿವೆ. ಈ ಕ್ಯಾದೆಗಳು ದಿವಾಳಿಯಾಗುವ ಬುದ್ಧಿಯನ್ನೂ, ಗುತ್ತಿಗೆಯ ವ್ಯಾಪಾರದ ಪದ್ಧತಿಯನ್ನೂ, ಹಿಂತಿರುಗಿ ಕೊಡುವ ಬುದ್ಧಿ ಇಲ್ಲದೆ ಸಾಲಮಾಡುವ ಪ್ರವೃತ್ತಿಯನ್ನೂ ಬೆಳೆಸುತ್ತವೆ.

೧೦ ಹೀಗೆ ಒಕ್ಕಲಿಗರ ಮತ್ತು ಸಾವುಕಾರರ ಸಂಬಂಧವು ಇಲಿ ಬೆಕ್ಕುಗಳಂತೆ ಆಗಿದೆ– ಅಥವಾ ಒಬ್ಬರು ಮತ್ತೊಬ್ಬರನ್ನು ಮೋಸಗೊಳಿಸಲು ಹೆಣಗುತ್ತಿರುವ ಶತ್ರುಗಳಂತೆ ಆಗಿದೆ. ಒಬ್ಬರು ಇನ್ನೊಬ್ಬರ ಹಿತವನ್ನು ಸಾಧಿಸಬೇಕು; ಸಾವುಕಾರನು ಒಕ್ಕಲಿಗರ ಉದ್ಯೋಗಗಳು ಊರ್ಜಿತವಾಗುವ ದೃಷ್ಟಿಯಿಂದ ನೆರವಾಗಲು ಬಯಸಬೇಕು; ತೆಗೆದುಕೊಂಡ ಸಾಲವನ್ನು ಸರಿಯಾದ ಕಾಲದಲ್ಲಿ ಮುಟ್ಟಿಸುವುದು ತಮ್ಮ ಕುಲಧರ್ಮವೆಂದು ಜನರು ತಿಳಿಯಬೇಕು. ಈ ತರದ ಸಂಬಂಧವು ಪೀಳಿಗೆಯಿಂದ ಪೀಳಿಗೆಗೆ ನಡೆದುಬರಬೇಕು. ಆದರೆ ಈಗ ಇಂಥ ಸಂಬಂಧ ಉಳಿದಿಲ್ಲ.

೧೧ ಸಾವುಕಾರ ಮತ್ತು ಸಾಲಗಾರನ ಸ್ಥಿತಿಯು ಹೇಗೆ ಇರುವುದೊ, ಹಾಗೆಯೆ ಯಜಮಾನ ಮತ್ತು ಆಳುಮಗನ ಸ್ಥಿತಿಯೂ ಇದೆ.

೭ ಜೀವನ-ವೇತನ

೧ ಮನುಷ್ಯನು ಯಾವುದೆ ಪ್ರಕಾರದ ಪರಿಶ್ರಮ ಮಾಡುತ್ತಿರಲಿ, ಅವನು ಇಡೀ ದಿನ ತನ್ನ ಸಾಧನಗಳ, ಶಿಕ್ಷಣದ, ಯೋಗ್ಯವಾದ ಮತ್ತು ಪ್ರಾಮಾಣಿಕ

ಉಪಯೋಗ ಮಾಡುತ್ತಿದ್ದರೆ ಅವನಿಗೆ ಸಾಕಷ್ಟು ಕೂಲಿಯಾಗಲಿ ಜೀವನ-ವೇತನವಾಗಲಿ ದೊರೆಯಲೇಬೇಕು. ಅವನ, ಅವನನ್ನು ಅವಲಂಬಿಸಿದ ದುರ್ಬಲ ಆಶ್ರಿತರ, ಸಮಾಧಾನಕಾರಕ ಪಾಲನೆ ಪೋಷಣೆಯಾಗುವಷ್ಟು ದೊರೆತರೆ ಅದೇ ಜೀವನ-ವೇತನ.

೨ ಪರಿಶ್ರಮದ ಲೆಕ್ಕದಂತೆ ಇಡೀ ದಿನವೆಂದರೆ ಎಂಟು ಗಂಟೆ. ಹಳ್ಳಿಗಳೊಳಗಿನ ಈಗಿನ (೧೯೪೦) ಸಾಧನಗಳು, ಇರುವ ಪದ್ಧತಿ, ಜೀವನ-ಮರ್ಯಾದೆ, ಜೀವನದ ಮಟ್ಟವನ್ನು ಮೇಲಕ್ಕೇರಿಸುವ ಅವಶ್ಯಕತೆ, ಅದರಂತೆ ಪದಾರ್ಥಗಳ ಬೆಲೆ, ಮುಂತಾದುವನ್ನು ಯೋಚಿಸಲಾಗಿ, ಎಂಟು ಗಂಟೆಯ ಒಂದು ದಿನವನ್ನೂ ಗಂಟೆಗೆ ಒಂದಾಣೆ ಕೂಲಿಯನ್ನೂ ಗೊತ್ತುಮಾಡುವುದು ಯೋಗ್ಯ.

೩ ಆ ಮಟ್ಟವನ್ನು ಒಮ್ಮೆಲೆ ಮುಟ್ಟುವ ಸಾಮರ್ಥ್ಯವಿಲ್ಲದಿದ್ದರೂ ಆ ದಿಕ್ಕಿನಿಂದ ಸಾಗತಕ್ಕದ್ದೆಂಬುದನ್ನು ಲಕ್ಷಿಸಿ ನಾವು ಮುಂದೆ ಸಾಗುತ್ತ ಹೋಗಬೇಕು.

೪ ಯಾವುದೇ ಬಗೆಯಾಗಿ ಪರಿಶ್ರಮಿಸುವ ಪ್ರತಿಯೊಬ್ಬನ ಕೂಲಿ ಸಮಾನವಾದಾಗಲೆ ನಾವು ಆದರ್ಶ ಸ್ಥಿತಿಯನ್ನೂ, ವರ್ಣಧರ್ಮದ ಪರಿಪೂರ್ಣಾವಸ್ಥೆಯನ್ನೂ ಮುಟ್ಟಿದಂತಾಗುವುದು. ಆದರೆ ನಿಕಟ-ಭವಿಷ್ಯದಲ್ಲಿ ಆ ಸ್ಥಿತಿಯನ್ನು ಮುಟ್ಟುವ ಲಕ್ಷಣಗಳಿಲ್ಲ. ಆದುದರಿಂದ ಆ ಆದರ್ಶವನ್ನು ಕಣ್ಣುಮುಂದಿಟ್ಟುಕೊಂಡು, ಸಾಧ್ಯವಿದ್ದಷ್ಟು ಮುಂದೆ ಸಾಗುವ ಧೋರಣೆಯನ್ನು ನಾವು ಸ್ವೀಕರಿಸಲೇಬೇಕು.

೮ ಕೂಲಿಕಾರರ ಪ್ರಶ್ನೆಗಳು

೧ ಜೀವನವನ್ನು ಕುರಿತ ನಮ್ಮ ತಪ್ಪು-ವಿಚಾರಗಳು ಕೂಲಿಕಾರರ ಪ್ರಶ್ನೆಯನ್ನು ಹೆಚ್ಚು ಜಟಿಲಗೊಳಿಸಿವೆ.

೨ ಕೆಳಗಿನವು ತಪ್ಪು ವಿಚಾರಗಳು, ತಪ್ಪು ದೃಷ್ಟಿ-ಬಿಂದುಗಳು:

(ಅ) ಮನುಷ್ಯನು ಬಿಡುವನ್ನೇ ಬಯಸುವುದು, ಕೆಲಸವು ಒಂದು ಹೊರೆಯೆಂದು ತಿಳಿಯುವುದು.

(ಆ) ಮನುಷ್ಯನ ಅಧ್ಯಾತ್ಮಿಕ ಉನ್ನತಿಗೆ ಬಿಡುವು ಅತ್ಯಗತ್ಯವೂ, ಶಾರೀರಿಕ ಶ್ರಮವು ಅಧ್ಯಾತ್ಮಿಕ ಉನ್ನತಿಗೆ ವಿರೋಧಿಯೂ ಆಗಿದೆ.

(ಇ) ತೀರ ಕಡಮೆ ಕೆಲಸಮಾಡಿ ಅತ್ಯಂತ ಹೆಚ್ಚು ಸುಖವನ್ನು ಪಡೆಯುವುದೇ ಶ್ರಮ-ವಿಭಾಗದ ಧ್ಯೇಯ.

(ಈ) ಕೂಲಿಕಾರನ ಸ್ವಾರ್ಥಕ್ಕಿಂತ ಒಡೆಯನ ಸ್ವಾರ್ಥವು ತೀರ ಭಿನ್ನವಾಗಿದೆ.

೩ ಮೇಲಿನ ಕಾರಣಗಳಿಂದ ಕೂಲಿಕಾರರ ಎದುರು ಕೀಳು ತರದ ಗುರಿಯನ್ನಿಡುವ ಪ್ರಯತ್ನವು ನಡೆಯುತ್ತಿದೆ:

(ಅ) ಯಂತ್ರಗಳಲ್ಲಿ ಚನ್ನಾಗಿ ಸುಧಾರಣೆಮಾಡಿ, ಮೂರು ನಾಲ್ಕು ಗಂಟೆ ಮಾತ್ರ ದುಡಿದು, ಜೀವನಕ್ಕೆ ಅವಶ್ಯವಿದ್ದ ಎಲ್ಲ ವಸ್ತುಗಳನ್ನು ಹುಟ್ಟಿಸಿಬಿಡುವುದು.

(ಆ) ಶ್ರೀಮಂತನನ್ನೂ ಬಂಡವಲುಗಾರರನ್ನೂ ನಾಶಪಡಿಸುವುದು.

೪ ಮೇಲಿನ ಆದರ್ಶಗಳು ಅಪರೂಪವಾಗಿ ಕೈಗೂಡಬಹುದು. ಆದರೆ ಅವುಗಳಿಂದ ಮಾನವ-ಜಾತಿಯು ನಿಜವಾಗಿಯೂ ಸುಖಿಯಾಗುವುದೆಂಬ ಭರವಸೆ ಇಲ್ಲ.

೫ ನಿಜವಾಗಿಯೂ ನೋಡಿದರೆ ಕೂಲಿಕಾರರ, ಇಲ್ಲವೆ ಕೋಟ್ಯಾನು-ಕೋಟಿ ಜನರ ಸುಖದ ಬಗ್ಗೆ ಕೆಳಗಿನ ದೃಷ್ಟಿಯಿಂದ ಯೋಚಿಸಬೇಕು:

(ಅ) ಮನುಷ್ಯನಲ್ಲಿ ಶ್ರಮಪಡುವ ಶಕ್ತಿ ಸ್ವಾಭಾವಿಕವಾಗಿಯೆ ಇದೆ. ಆದರೆ ಅವನು, ಆ ಶಕ್ತಿಯು ಕುಗ್ಗಿಹೋಗುವಷ್ಟು, ಸ್ವತಃ ದುಡಿದು ಹೊಟ್ಟೆ ತುಂಬಿಸಿಕೊಂಡು ಹೋಗಲು ಅಯೋಗ್ಯನಾಗುವಷ್ಟು, ಯಂತ್ರಾದಿ ಬಾಹ್ಯ ಸಾಧನಗಳಿಗೆ ಅಧೀನನಾಗಿರುವಂತೆ ಮಾಡಕೂಡದು.

(ಆ) ಶಾರೀರಿಕ ಪರಿಶ್ರಮದ ಶಕ್ತಿ ಬೆಳೆಯಬೇಕು. ಕೂಲಿಕಾರನ ಶಕ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದಲೇ ಅವನ ಕೆಲಸದ ಸಮಯ, ಅವನ ಮನೆ-ಮಾರು, ಮುಂತಾದ ಅನುಕೂಲತೆಗಳ ಬಗ್ಗೆ ಯೋಚನೆ ಮಾಡಬೇಕು.

(ಇ) ಅತ್ಯಂತ ಸೂಕ್ಷ್ಮ ಶ್ರಮ-ವಿಭಾಗದ ಮೂಲಕ ಕೂಲಿಕಾರರನ್ನು ಜಡ ಯಂತ್ರದಂತೆ ಮಾಡಿ ಅವನಿಂದ ೩-೪ ಗಂಟೆ ನೀರಸವಾದ ಯಾಂತ್ರಿಕ ಕಾರ್ಯವನ್ನು ಮಾಡಿಸಿಕೊಂಡು, ಬಳಿಕ ಆನಂದ ಉತ್ಸಾಹಗಳ ಕಡೆಗೆ ಮನಸ್ಸನ್ನು ಹಾಕಲು ಬಿಡುವನ್ನು ಕೊಟ್ಟುಬಿಟ್ಟರೆ ಮಾನವ-ಜಾತಿಯ ಕಲ್ಯಾಣವಾಗುವುದಿಲ್ಲ. ಕರ್ಮದಲ್ಲಿಯೆ ಆನಂದವು ದೊರೆಯುವಂತೆ, ವಿನೋದ-ಪ್ರವೃತ್ತಿಗೆ ಅಲ್ಲಿಯೆ ಇಂಬು ದೊರೆಯುವಂತೆ, ಅಧ್ಯಾತ್ಮಿಕ ಉನ್ನತಿ ಅಲ್ಲಿಯೆ ಆಗುವಂತೆ,

ಉದ್ಯೋಗ ವ್ಯವಸಾಯಗಳನ್ನು ರಚಿಸುವ ಮಾರ್ಗಗಳನ್ನು ಹುಡುಕಬೇಕು.

(ಈ) ಮನುಷ್ಯನಿಗೆ ಕಸುಬಿನ ಕಡೆ ಪ್ರವೃತ್ತಿ ಇದ್ದ ಮೇಲೆ ಅವನಿಗೆ ಬೇರೆ ಪ್ರವೃತ್ತಿಗಳೇ ಅವಶ್ಯವಿಲ್ಲವೆಂದು, ಅಥವಾ ಬಿಡುವೇ ಬೇಡವೆಂದು ಇದರ ಅರ್ಥವಲ್ಲ. ಪ್ರತಿಯೊಬ್ಬನಿಗೂ ಯಾವುದೊಂದು ನಿರ್ದೋಷಿಯಾದ ಮನ ರಂಜನೆಯ ಪ್ರವೃತ್ತಿ ಇರುವುದು ಒಳಿತು. ಆ ಪ್ರವೃತ್ತಿಗಾಗಿ ಅವನಿಗೆ ಬಿಡುವೂ ದೊರೆಯಬೇಕು. ಆದರೆ ಈ ವಿಷಯ ಪ್ರಧಾನವಲ್ಲ, ಗೌಣ. ಬಿಡುವಿನ ವೇಳೆಯನ್ನು ಯೋಗ್ಯವಾಗಿ ಉಪಯೋಗಿಸುವಂತೆ ತಕ್ಕ ಸಂಸ್ಕಾರವು ಇನ್ನೂ ಬಹಳ ಜನರಿಗೆ ಸಿಕ್ಕಿಲ್ಲ. ಹೆಚ್ಚು ಜನರು ತಮ್ಮ ಬಿಡುವಿನ ಸಮಯವನ್ನು ನಿದ್ರೆಯಲ್ಲಿ, ಚಟಗಳಲ್ಲಿ, ಮತ್ತು ದೋಷಪೂರಿತವಾದ ಭೋಗಗಳಲ್ಲಿ ಕಳೆಯುವ ಭಯವಿರುವುದೆನ್ನಬಹುದು.

(ಉ) ಮನುಷ್ಯನು ಉಪಜೀವನಕ್ಕಾಗಿ ಕಠಿಣ ಪರಿಶ್ರಮ ಪಡಬೇಕಾಗುವುದು. ಇದು, ಸೃಷ್ಟಿಯು ಮನುಷ್ಯನ ಮೇಲೆ ಮಾಡುವ ಕೋಪವಲ್ಲ, ಅನುಗ್ರಹ. ನಮ್ಮ ಗುರಿ, ಶ್ರಮಪಡುವ ಶಕ್ತಿ ಹೆಚ್ಚುವುದರ ಕಡೆಗಿರಬೇಕೇ ಹೊರತು ಶ್ರಮಪಡದಿರುವುದರ ಕಡೆಗಿರಕೂಡದು.

(ಊ) ಯಜಮಾನನು ಕೂಲಿಕಾರರ ವ್ಯವಸ್ಥಾಪಕನಾಗಿ ಅವರವರ ಯೋಗ್ಯತೆಗೆ ತಕ್ಕಂತೆ ಕೆಲಸವನ್ನು ಕೊಡಬೇಕು. ಅದಕ್ಕೆ ಸಾಕಷ್ಟು ಕೂಲಿಯ ಜೊತೆಗೆ ಅನುಕೂಲತೆಗಳನ್ನೂ ಮಾಡಿಕೊಡಬೇಕು. ಕೂಲಿಕಾರನು ಯಜಮಾನನ ಕೆಲಸವು ತನ್ನದೆಂದೇ ತಿಳಿದು ಮನಗೊಟ್ಟು ಮಾಡಬೇಕು. ಎಂದರೆ ಇಬ್ಬರ ಹಿತವೂ ಆಗುವುದು.

(ಎ) ಇದಕ್ಕಾಗಿ ಸ್ವಂತ ಭಂಡವಲು ಇರಬೇಕೊ ಇರಬಾರದೊ ಎಂಬ ಪ್ರಶ್ನೆ ಬಹಳ ಮಹತ್ವದ್ದಲ್ಲ. ಆದರೆ ಉದ್ಯೋಗದ ಮತ್ತು ವಾಣಿಜ್ಯದ ಧ್ಯೇಯದಲ್ಲಿ ಮಾತ್ರ ಪರಿವರ್ತನೆ ಅಗತ್ಯವಿದೆ.

(ಏ) ಉದ್ಯೋಗದ ಧ್ಯೇಯವು, ರೂಢವಾದ ಮತ್ತು ಹೊಸದಾಗಿ ಉತ್ಪನ್ನವಾಗುವ ಆವಶ್ಯಕತೆಗಳ ಪೂರೈಕೆಯನ್ನು ಆದಷ್ಟು ಚನ್ನಾಗಿ ಮಾಡುವುದೇ ಹೊರತು, ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಹೊಸ ಹೊಸ ಅವಶ್ಯಕತೆಗಳನ್ನು ಹೆಚ್ಚಿಸುವುದಲ್ಲ. ವ್ಯಾಪಾರದ ಪ್ರಯೋಜನವೂ ಇಷ್ಟೇ. ಇದರಂತೆ ನಡೆಯುವಾಗ ಎಷ್ಟೋ ಹೊಸ ವಸ್ತುಗಳು ಬೇಕಾಗುವುದೇನೋ ನಿಜ. ಆದರೆ ಈ ಧ್ಯೇಯವನ್ನು ನೆನಪಿನಲ್ಲಿಟ್ಟುಕೊಂಡರೆ, ವಾಣಿಜ್ಯವು ಹಿಂದುಳಿದವರೆನ್ನಿಸಿ

ಕೊಳ್ಳುವ ಜನರ ಅವಶ್ಯಕತೆಗಳನ್ನು ಹೆಚ್ಚಿಸುವ ಗೋಜಿಗೆ ಹೋಗಲಾರದು, ಅವರನ್ನು ಹೀರಬೇಕೆನ್ನುವ ನೀತಿಗೆ ಆಸ್ಪದ ಕೊಡಲಾರದು. ಹೀಗಾದರೆ ಮಾತ್ರ, ಕೂಲಿಕಾರರೂ ಯಜಮಾನರೂ ಅನ್ಯೋನ್ಯಾಶ್ರಯದಿಂದ ಇರ ಬಲ್ಲರು.

(ಐ) ಇಂಥ ಧ್ಯೇಯವಿರದಿದ್ದರೆ ಶ್ರೀಮಂತ ವ್ಯಕ್ತಿಯ ಬದಲು ತಂತ್ರವು, ಅಥವಾ ಜಡ-ಯಂತ್ರವು, ಎಲ್ಲರ ಯಜಮಾನನಾಗುವುದು. ಒಬ್ಬನು ಯಜ ಮಾನನು, ಇನ್ನೊಬ್ಬನು ಕೂಲಿಕಾರನಾಗುವನು. ಇದರಿಂದ ಮನುಷ್ಯನ ಸುಖವು ಹೆಚ್ಚದು.

೯ ಸ್ವಾವಲಂಬನವೂ ಶ್ರಮ-ವಿಭಾಗವೂ

೧ ಸ್ವಾವಲಂಬನವು ಶ್ರಮ-ವಿಭಾಗಕ್ಕೆ ವಿರೋಧಿಯಲ್ಲ. ಪರದೇಶಗಳೊಂದಿಗೆ ಔದ್ಯೋಗಿಕ ಸಂಬಂಧವನ್ನು ಇಟ್ಟುಕೊಳ್ಳಲು ಸ್ವಾವಲಂಬನವು ಅಡ್ಡಿ ಯಾಗುವುದಿಲ್ಲ. ಸಮಾಜದಲ್ಲಿರುವ ಮನುಷ್ಯನು ಸಂಪೂರ್ಣ ಸ್ವಾವಲಂಬಿ ಯಾಗುವುದು, ತನ್ನ ಎಲ್ಲ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುವುದು ಸಾಧ್ಯವಿಲ್ಲ. ಒಂದು ವೇಳೆ ಸಂಪೂರ್ಣ ಸ್ವಾವಲಂಬಿಯಾಗಿರಲು ಪ್ರಯತ್ನಿಸಿದರೆ, ಅದು ವ್ಯರ್ಥ ಹೋರಾಟವೂ ಅಹಂಕಾರವೂ ಆಗುವುದು. ಇಡೀ ಜಗತ್ತಿನೊಡನೆ ಪ್ರೇಮದಿಂದ ಇರಬೇಕೆನ್ನುವವನು ಅಹಿಂಸೆಯಿಂದ ಒಂದುಗೂಡಬೇಕೆನ್ನು ವವನು ಸ್ವಯಂಪರ್ಯಾಪ್ತ(Self-sufficient)ನಾಗುವ ಮೋಹಕ್ಕೆ ಒಳಗಾಗ ಬಾರದು.

೨ ಮನುಷ್ಯನು ತಾನೇ ಪೂರೈಸಿಕೊಳ್ಳಬಹುದಾದ ಎಷ್ಟೋ ಅವಶ್ಯ-ಕತೆಗಳಿವೆ. ಸೃಷ್ಟಿಯ ಅನುಕೂಲತೆಗಳಿದ್ದಲ್ಲಿ ಇಂಥ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅವನು ಸ್ವಾವಲಂಬಿಯಾಗುವುದು ದೋಷವಲ್ಲ. ಇಂಥ ಅವಶ್ಯಕತೆಗಳ ಪೂರೈಕೆಗಾಗಿ ಅನ್ಯರ ಪರಿಶ್ರಮವನ್ನು ಬಯಸಿ ಅದನ್ನು ಉಪಯೋಗಿಸಿಕೊಳ್ಳಬೇಕೆಂದೂ ಅದಕ್ಕಾಗಿ ಅವರೊಡನೆ ಆರ್ಥಿಕ ಸಂಬಂಧ ವನ್ನು ಇಡಬೇಕೆಂದೂ ನಿಯಮವಿಲ್ಲ. ಉದಾಹರಣೆಗೆ: ತನ್ನ ಬಟ್ಟೆಗಳನ್ನು ಅಗಸರಿಂದಲೇ ಒಗೆಯಿಸಿಕೊಳ್ಳುವುದು, ಕಕ್ಕಸುಗಳನ್ನು ಭಂಗಿಯವನಿಂದಲೇ ಸ್ವಚ್ಛ ಮಾಡಿಸಿಕೊಳ್ಳುವುದು, ನಾಪಿಕನಿಂದಲೆ ಕ್ಷೌರ ಮಾಡಿಸಿಕೊಳ್ಳುವುದು, ಮತ್ತು ಊಟಕ್ಕಾಗಿಯೂ ಆಹಾರಕ್ಕಾಗಿಯೂ ಖಾನಾವಳಿಯನ್ನೇ ಅವಲಂಬಿ

ಸುವುದು. ಇವುಗಳಲ್ಲಿ ನಾವು ಸ್ವಾವಲಂಬಿಯಾಗಬಲ್ಲೆವು.

೩ ದೇಶದ, ಮತ್ತು ಜನರ ವ್ಯವಹಾರಕ್ಕೂ ಇದೇ ನಿಯಮ ಅನ್ವಯಿಸುವುದು. ಹಿಂದುಸ್ತಾನದಲ್ಲಿ ಸಾಕಷ್ಟು ಧಾನ್ಯವೂ ಹತ್ತಿಯೂ ಬೆಳೆಯುತ್ತದೆ. ಆದ್ದರಿಂದ ಅನ್ನ ವಸ್ತ್ರಗಳ ವಿಷಯದಲ್ಲಿ ಸ್ವಾವಲಂಬಿಯಾಗಿ ಸ್ವಯಂಪರ್ಯಾಪ್ತವಾಗುವುದರಲ್ಲಿ ಅದಕ್ಕೆ ಅಭಿಮಾನವಿರಬೇಕು. ಇದರ ಅರ್ಥ, ಅನ್ಯ ದೇಶಗಳೊಡನೆ ಔದ್ಯೋಗಿಕ ಸಂಬಂಧವನ್ನು ಇಡಲು ಇಚ್ಛಿಸಕೂಡದೆಂದು ಅಲ್ಲ.

೪ ಇದೇ ತೆರನಾಗಿ, ಹಿಂದುಸ್ತಾನದಲ್ಲಿ ವಿಕಾಸಹೊಂದಲು ನೈಸರ್ಗಿಕ ಅನುಕೂಲತೆಗಳುಳ್ಳ ಎಲ್ಲ ಉದ್ಯೋಗಗಳ ಬೆಳವಣಿಗೆಗೂ ಉಪಾಯಗಳನ್ನು ಕೈಕೊಂಡರೆ ದೋಷವಾವುದೂ ಇಲ್ಲ. ಇಂತಹ ಆರ್ಥಿಕ ಯೋಜನೆಗಳನ್ನು ಮಾಡದೆ ಪ್ರಜೆಗಳ ಸುಖವನ್ನು ಬಯಸುವುದು ನಿರರ್ಥಕ.

೫ ಹಿಂದುಸ್ತಾನದ ಧಾನ್ಯವನ್ನು ಪರದೇಶಕ್ಕೆ ಕಳಿಸಿ ಅಲ್ಲಿಂದ ರೊಟ್ಟಿಗಳನ್ನು ತರಿಸಿಕೊಳ್ಳುವುದು – ಎಳ್ಳು ನೆಲಗಡಲೆಯನ್ನು ಕಳಿಸಿ ಎಣ್ಣೆ ತರಿಸಿಕೊಳ್ಳುವುದು, ಹತ್ತಿಯನ್ನು ಕಳಿಸಿ ಬಟ್ಟೆ ತರಿಸಿಕೊಳ್ಳುವುದು ಶುದ್ಧ ಅಯೋಗ್ಯವು. ಇದು ದೇಶದೇಶಾಂತರದ ಶ್ರಮ ವಿಭಾಗ, ದೇಶದೇಶಾಂತರದ ಸಹಕಾರಪದ್ಧತಿ, ಲ್ಯಾಂಕಶಯರಿನಂಥ ಕಲ್ಲಿದ್ದಲಿಯ ಗಣಿಯೂ ಆರ್ದ್ರ ಹವೆಯೂ ಉಳ್ಳ ಪ್ರದೇಶಗಳಲ್ಲಿ ಮಾತ್ರ ಬಟ್ಟೆ ತಯಾರಿಸಲು ನೈಸರ್ಗಿಕ ಅನುಕೂಲತೆಗಳಿವೆ, ಎಂದು ಹೇಳಿ ಅಲ್ಲಿಯೇ ಬಟ್ಟೆಗಳನ್ನು ತಯಾರಿಸಿ ತರಿಸಿಕೊಳ್ಳುವುದು ಶ್ರಮ-ವಿಭಾಗತತ್ವದ, ಮತ್ತು ಸಹಕಾರ-ತತ್ವದ ದುರುಪಯೋಗ.

೧೦ ಸ್ವದೇಶಿ

೧ ಮೂಲವಸ್ತು ಎಲ್ಲಿ ಹುಟ್ಟುವುದೋ, ಅದಕ್ಕೆ ಸಂಬಂಧಪಟ್ಟ ಉದ್ಯೋಗಗಳನ್ನು ಅಲ್ಲಿಯೇ ನಡೆಯಿಸಬೇಕೆನ್ನುವುದೇ ಪ್ರತಿಯೊಂದು ದೇಶದ ಆರ್ಥಿಕ ನೀತಿಯಾಗಿರಬೇಕು. ಇದಕ್ಕೆ ಆರ್ಥಿಕ ದೃಷ್ಟಿಯಿಂದಲೂ ರಾಜಕೀಯ ದೃಷ್ಟಿಯಿಂದಲೂ 'ಸ್ವದೇಶಿ ಚಳವಳಿ' ಎನ್ನುವರು.

೨ ಮೂಲವಸ್ತು ಪರದೇಶಕ್ಕೆ ಹೋಗಿ, ಅಲ್ಲಿಂದ ಸಿದ್ಧ ಪದಾರ್ಥಗಳ ರೂಪದಲ್ಲಿ ಸ್ವದೇಶಕ್ಕೆ ಮರಳಿ ಬರುವ ಪದ್ಧತಿ ಆರ್ಥಿಕ ದೃಷ್ಟಿಯಿಂದ ಎಷ್ಟೇ ಲಾಭಕರವೆನಿಸಿದರೂ ಈ ದೃಷ್ಟಿಕೋನದಲ್ಲಿ ತಪ್ಪಾಗಿರುವ ಸಂಭವವಿದೆ. ಅನ್ಯಾಯ, ಅಧರ್ಮ, ಅತ್ಯಾಚಾರಗಳು ನಡೆಯುವ ಸಂದರ್ಭವೂ ಇದೆ. ಇಲ್ಲ

ದಿದ್ದರೆ ಆರ್ಥಿಕ ಲಾಭ ಅಸಂಭವವು.

೩ 'ಫ್ರೀ ಟ್ರೇಡ್', ಅರ್ಥಾತ್ ಸುಂಕ-ರಹಿತ ಮುಕ್ತ ವ್ಯಾಪಾರವೆಂದು ಯಾವುದಕ್ಕೆ ಇಂಗ್ಲಂಡು ಹೆಸರಿಟ್ಟಿರುವುದೋ ಅದು ನಿಜವಾಗಿಯೂ ಹಾಗಿಲ್ಲ. ಏಕೆಂದರೆ ಅದು ತನ್ನ ದೇಶದ ಉದ್ಯೋಗಗಳು ಚಿರಂಜೀವಿಯಾಗುವುದಕ್ಕಾಗಿ, ಪರದೇಶಗಳ ಉದ್ಯೋಗಗಳು ನಷ್ಟವಾಗುವುದಕ್ಕಾಗಿ ಇಂಗ್ಲಂಡು ಸುಂಕ ಹೇರುವುದನ್ನು ತೊರೆದು ಸೈನ್ಯ-ಬಲವನ್ನೂ ರಾಜಕೀಯ ಅಧಿಕಾರವನ್ನೂ ಕುಟಿಲ ನೀತಿಯನ್ನೂ ಉಪಯೋಗಿಸುವುದು. ಇದು ಸ್ವದೇಶೀ ನೀತಿಯ ಅನ್ಯಾಯದ, ಅಧಮ ಸ್ವರೂಪವು.

೪ ಆರ್ಥಿಕ ದೃಷ್ಟಿಯಿಂದ ಸ್ವದೇಶಿ, ಬಹಿಷ್ಕಾರ ಇವೆರಡರಲ್ಲಿ ಭೇದವೇನೂ ಇಲ್ಲ. ಕೋಟ್ಯಾನುಕೋಟಿ ಜನರ ನಿರ್ವಾಹ ಯಾವ ವಸ್ತುಗಳಿಂದ ಆಗುತ್ತಿರುವುದೋ ಅಂಥವುಗಳನ್ನು ಪರದೇಶಗಳಿಂದ ತರಿಸದಿರುವುದು ಬಹಿಷ್ಕಾರವೆನಿಸುವುದು. ಈ ಬಹಿಷ್ಕಾರವು ಒಂದು ವಿಶಿಷ್ಟ ದೇಶದೊಡನೆ ಮಾತ್ರ ಇರದೆ ಸರ್ವದೇಶಗಳೊಡನೆ ನಡೆಯುವುದೇ ಸ್ವದೇಶಿ.

೫ ಒಂದು ವಿಶಿಷ್ಟ ದೇಶದ ವಿರುದ್ಧವಾಗಿ ಸಾರಲಾದ ಬಹಿಷ್ಕಾರ ರಾಜಕೀಯ ಬಹಿಷ್ಕಾರವೆನಿಸುವುದು. ಆದ್ದರಿಂದ ಈ ಪ್ರಕರಣದಲ್ಲಿ ಅದನ್ನು ಕುರಿತು ಯೋಚಿಸುವುದು ಅವಶ್ಯವಲ್ಲ.

೧೧ ಯಾಂತ್ರಿಕ ಸಾಧನಗಳು

೧ ಭಾರತೀಯ ಅರ್ಥಶಾಸ್ತ್ರದ ದೃಷ್ಟಿಯಿಂದ ಯಾಂತ್ರಿಕ ಸಾಧನಗಳು, ಮತ್ತು ಅವುಗಳಲ್ಲಿ ಮಾಡತಕ್ಕ ಸುಧಾರಣೆಗಳು, ಎಂದು ಎರಡು ಭಾಗ ಮಾಡಬಹುದು: (೧) ಪರಿಶ್ರಮಿಸುವ ಮನುಷ್ಯನ ಮತ್ತು ಪಶುವಿನ ಸ್ನಾಯುಗಳಿಗೆ ಕಡಮೆ ಶ್ರಮವಾಗಬೇಕು, ಸಮಯದ ಉಳಿತಾಯವಾಗಬೇಕು, ಎಂಬ ದೃಷ್ಟಿಯನ್ನೇ ಮುಖ್ಯವಾಗಿಟ್ಟುಕೊಂಡು ಯೋಜಿಸಲ್ಪಟ್ಟ ಯಂತ್ರಗಳು ಮತ್ತು ಅವುಗಳ ಸುಧಾರಣೆಗಳು. ಉದಾಹರಣೆಗಾಗಿ: ಗಡಗಡೆ, ರಾಟೆ, ಬೈಸಿಕಲ್ಲು, ಹೊಲಿಗೆ-ಯಂತ್ರ, ಬೀಸುವ ಕಲ್ಲು, ಚಕ್ಕಡಿ–ಗಾಡಿ ಮುಂತಾದುವು ಸವೆದು ಹೋಗುವುದನ್ನು ಕಡಮೆ ಮಾಡಲು ಆದ ಸುಧಾರಣೆಗಳು. ಉದಾಹರಣೆಗಾಗಿ: ಸವೆಗುಂಡು (Ball bearing), ರಾಜ-ಮಾರ್ಗ, ರೈಲು-ಮಾರ್ಗ, ಇತ್ಯಾದಿ. ಮತ್ತು (೨) ಶ್ರಮಜೀವಿಗಳ ಮತ್ತು ಶ್ರಮ ಮಾಡುವ ಪಶುಗಳ ಸ್ಥಾನಗಳನ್ನು

ಆಕ್ರಮಿಸುವುದಕ್ಕಾಗಿ, ಇಲ್ಲವೆ ಕೂಲಿಕಾರರ ಮತ್ತು ಪಶುಗಳ ಸಂಖ್ಯೆಯನ್ನು ಕಡಮೆಮಾಡುವುದಕ್ಕಾಗಿ, ಕೂಲಿಕಾರನ ಬುದ್ಧಿಚಾತುರ್ಯವನ್ನೂ ಅವನ ಶಕ್ತಿಯ ಉಪಯೋಗವನ್ನೂ ಮಾಡಿಕೊಳ್ಳುವುದನ್ನು ಬಿಟ್ಟು ಅವನನ್ನು ಯಂತ್ರದಂತೆ ದುಡಿಸಿಕೊಳ್ಳುವುದಕ್ಕಾಗಿ ಮಾಡಿದ ಯಂತ್ರಗಳು; ಉದಾಹರಣೆಗಾಗಿ: ಬತ್ತದ ಹಿಟ್ಟಿನ ಗಿರಣಿ, ಎಣ್ಣೆಯ ಸಕ್ಕರೆಯ ಕಾರ್ಖಾನೆಗಳು; ನೂಲಿನ, ಬಟ್ಟೆಯ ಗಿರಣಿಗಳು; ಮೋಟಾರು, ಉಗೆ-ಬಂಡಿ ಮೊದಲಾದ ವಸ್ತುವಾಹನಗಳು; ಟ್ರಾಕ್ಟರು, ವಿದ್ಯುತ್ತಿನಿಂದ ನಡೆಯುವ ನೀರಿನ ನಲ್ಲಿಗಳು, ಸೂಕ್ಷ್ಮ ಶ್ರಮ ವಿಭಾಗದಿಂದ ಹುಟ್ಟಿದ ಯಂತ್ರ ಮುಂತಾದುವು.

೨ ಮೊದಲಿನ ತರದ ಯಾಂತ್ರಿಕ ಸಾಧನಗಳೂ ಸುಧಾರಣೆಗಳೂ ಅಗತ್ಯವಾಗಿ ಬೇಕಾದುವೇ. ಇವುಗಳಿಂದ ಕೂಲಿಕಾರರ ಹಾಗೂ ಪಶುಗಳ ಸಂಖ್ಯೆ ಕಡಮೆಯಾಗಬಹುದು. ಆದರೆ ಅದು ತೀರ ಅಲ್ಪ.

೩ ಎರಡನೆ ತರದ ಯಂತ್ರಗಳನ್ನೂ ಅವುಗಳ ಸುಧಾರಣೆಗಳ ಉಪಯೋಗವನ್ನೂ ಹೆಚ್ಚು ವಿವೇಕದಿಂದ, ಎಚ್ಚರದಿಂದ, ಮಾಡಬೇಕಾಗುವುದು. ಶಸ್ತ್ರಾಸ್ತ್ರ ಮದ್ದು-ಗುಂಡುಗಳನ್ನು ಮಾಡಲಿಕ್ಕೂ ಉಪಯೋಗಿಸಲಿಕ್ಕೂ ಹೇಗೆ ಸರಕಾರದ ಅಪ್ಪಣೆ ಬೇಕಾಗುವುದೊ, ಹೇಗೆ ಸರಕಾರದ ಅಂಕುಶವು ಇವುಗಳ ಮೇಲಿರುವುದೊ, ಹಾಗೆಯೆ ಇವುಗಳನ್ನು ಯಾರು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದೆನ್ನುವ ಬಗೆಗೂ ಪ್ರಜಾಸತ್ತಾತ್ಮಕ ಸರಕಾರದ ಕಟ್ಟಳೆ ಇರಬೇಕು.

೪ ಈ ಕೆಳಗಿನ ಪರಿಸ್ಥಿತಿಯಲ್ಲಿ ಎರಡನೆ ತರದ ಯಂತ್ರಗಳ ಉಪಯೋಗ ದೋಷವಲ್ಲ:

(ಅ) ಕೆಲಸವು ಹೆಚ್ಚು ಇದ್ದು ಮಾಡುವವರು ಕಡಮೆ ಇರುವಲ್ಲಿ, ಅಥವಾ ದುಡಿಯುವವರು ಸಿಕ್ಕದಿರುವಲ್ಲಿ, ಸಿಕ್ಕರೂ ಅವರನ್ನು ಕೆಲಸಕ್ಕೆ ತೊಡಗಿಸಲು ಬರದಿರುವಲ್ಲಿ. ಉದಾಹರಣೆಗೆ: ಉಗೆ-ಹಡಗುಗಳ ಮೇಲೆ.

(ಆ) ಅಕಸ್ಮಾತ್ ಸಂಕಟಗಳು ಉದ್ಭವಿಸಿದಲ್ಲಿ, ಕೆಲಸವನ್ನು ಅತ್ಯಂತ ತ್ವರೆಯಿಂದ ಮಾಡುವುದು ಅವಶ್ಯವಿದ್ದು ಯಾಂತ್ರಿಕ ಸಾಧನೆಗಳ ಬದಲು ಅಸಂಖ್ಯ ಮನುಷ್ಯರನ್ನು ನಿಯಮಿಸುವುದರಿಂದ ಅವ್ಯವಸ್ಥೆಯೂ ಸಡಿಲೂ ತೊಂದರೆಗಳೂ ಹೆಚ್ಚುವಂತಹ ಪರಿಸ್ಥಿತಿಯಲ್ಲಿ. ಉದಾಹರಣೆಗೆ: ಬೆಂಕಿ ನೊಂದಿಸುವಾಗ, ಬರಗಾಲ ಮುಂತಾದ ದೈವೀ-ಪ್ರಕೋಪಗಳಿಂದ ಜನರನ್ನು ರಕ್ಷಿಸುವಾಗ, ಪೀಡಿತರಿಗೆ ಧಾನ್ಯಾದಿಗಳನ್ನು ತಲ್ಪಿಸುವಾಗ.

(ಇ) ಸಹಯೋಗಿ (ಜೋಡು) ಉದ್ಯೋಗಗಳಿಗೆ ಎಡೆಕೊಡುವಂಥ, ಅಥವಾ ಅವುಗಳನ್ನು ಊರ್ಜಿತ ಸ್ಥಿತಿಗೆ ಒಯ್ಯುವಂಥ ಮತ್ತು ನಾಶವಾಗದಂಥ ಯಂತ್ರಗಳು ಇರಬೇಕು. ಉದಾಹರಣೆಗೆ: ಹೆಚ್ಚು ಕೆಲಸ ಕೊಡುವಂಥ ರಾಟೆ, ಹಗ್ಗ ಹೊಸೆಯುವ ಚಕ್ರ ಮುಂತಾದುವು.

(ಈ) ಮೊದಲಿನ ತರದ ಯಂತ್ರಗಳನ್ನು ಸಿದ್ಧಗೊಳಿಸುವ ಯಂತ್ರಗಳನ್ನೂ ಅವುಗಳ ಉಪಕರಣಗಳನ್ನೂ, ವಿಶೇಷವಾಗಿ ಒಂದೇ ಆಳತೆಯ ಮಾಪುಗಳನ್ನೂ ಒಂದೇ ಪದ್ಧತಿಯ ಯಂತ್ರಗಳನ್ನೂ ಭಾಗಗಳನ್ನೂ ಮಾಡುವುದು ಅವಶ್ಯವಿರಬೇಕು.

(ಉ) ಸರಿಯಾಗಿ ಕೆಲಸ ಕೊಡುವ ಸೂಕ್ಷ್ಮ ಪದಾರ್ಥಗಳನ್ನು ಮಾಡುವುದು ಅವಶ್ಯವಿರುವಾಗ. ಉದಾಹರಣೆಗೆ: ಗಡಿಯಾರ, ಟೈಪು-ರೈಟರು, ಪ್ರಯೋಗಶಾಲೆಯ ಸಾಧನಗಳು ಇತ್ಯಾದಿ.

(ಊ) ಯಾವಾಗಲೂ ಬಹಳ ಜನರನ್ನು ಕೆಲಸಕ್ಕೆ ತೊಡಗಿಸಲು ಬರದಂಥ ಉದ್ಯೋಗಗಳಿದ್ದಲ್ಲಿ, ಇಂಥ ಉದ್ಯೋಗಗಳಿಂದ ತಯಾರಾದ ವಸ್ತುಗಳು ಸಾರ್ವಜನಿಕರಿಗೆ ವಿಶೇಷವಾಗಿ ಅವಶ್ಯವಿದ್ದಲ್ಲಿ. ಉದಾಹರಣೆಗೆ: ನಲ್ಲಿಗಳು, ನಲ್ಲಿಗಳ ಬಾಯಿಗಳು.

(ಎ) ಸ್ವಂತ ಸಾಹಸದಿಂದ ಮಾಡಲಾಗದಂಥ, ಆದರೆ ಸರಕಾರದಿಂದ ಅಥವಾ ಸರಕಾರದ ಹಿಡಿತದಿಂದ ನಡೆಯುವಂಥ ಉದ್ಯೋಗಗಳಿದ್ದಲ್ಲಿ. ಉದಾಹರಣೆಗೆ: ಉಗೆ-ಬಂಡಿ, ಉಗೆ-ಹಡಗು, ಮಹತ್ವದ ಕಣಿಗಳು, ಸೀಮೆ ಎಣ್ಣೆಯ ಬಾವಿಗಳು ಮುಂತಾದುವು. ಇಂಥ ಕಡೆಗಳಲ್ಲಿ ಎರಡನೇ ತರದ ಯಂತ್ರಗಳನ್ನು ಬಳಸಬಹುದು.

೫ ಎರಡನೇ ತರದ ಯಂತ್ರಗಳ ಸಹಾಯದಿಂದ ನಡೆಯುವ ಉದ್ಯೋಗಗಳು ಎಷ್ಟು ಅವಶ್ಯಕವೋ, ಅವುಗಳಿಗೆ ಬೇಕಾಗುವ ಕಾರ್ಖಾನೆಗಳೂ ಅಷ್ಟೇ ಅವಶ್ಯಕ. ಉದಾಹರಣೆಗೆ: ಕಬ್ಬಿಣ, ಉಪಕರಣಗಳು, ಯಂತ್ರಗಳು, ಗಾಜು, ವಿದ್ಯುತ್ ಮೊದಲಾದುವುಗಳ ಮತ್ತು ಅವುಗಳಿಗೆ ಬೇಕಾಗುವ ಸಾಧನಗಳನ್ನು ತಯಾರಿಸುವ ಕಾರ್ಖಾನೆಗಳು.

೧೨ ಅಂತರ್-ರಾಷ್ಟ್ರೀಯ ವ್ಯಾಪಾರ

೧ ಯಾವ ವಸ್ತುಗಳು ತಮ್ಮ ದೇಶದಲ್ಲಿ ಹುಟ್ಟುವುದಿಲ್ಲವೋ, ಅವುಗಳನ್ನು

ತಯಾರಿಸಲು ಸ್ವೈಸರ್ಗಿಕ ಅನುಕೂಲತೆಗಳು ಇರುವುದಿಲ್ಲವೋ, ಅಥವಾ ಅತ್ಯಂತ ಕಷ್ಟದಿಂದ ಇಲ್ಲವೆ ಪರರನ್ನು ಪೀಡಿಸಿಯೆ ಹುಟ್ಟಿಸುವುದು ಸಾಧ್ಯವೋ, ತಮ್ಮ ಜೀವವನ್ನೊಡ್ಡಿ ಯಾವುದರ ತಯಾರಿಕೆಯ ಕಲೆಯನ್ನು ಪರದೇಶಗಳು ಹಸ್ತಗತ ಮಾಡಿಕೊಂಡಿರುವವೋ, ಯಾವುದರಿಂದ ಅವರ ಉಪಜೀವನವು ನಡೆಯುತ್ತಿರುವುದೊ, ಯಾವುದು ಜೀವನದಲ್ಲಿ ಅಷ್ಟು ಮಹತ್ವದ ಕಾರ್ಯಗಳಿಗೆ ಅವಶ್ಯವಿಲ್ಲವೋ, ಅಥವಾ ಯಾವುದರ ಹೊರತು ಕೋಟ್ಯಂತರ ಜನರ ಜೀವನವು ಸಾಗಬಹುದೊ, ಯಾವುದರ ಉಪಯೋಗ ನಿತ್ಯ-ಜೀವನದಲ್ಲಿ ಆಗುವುದಿಲ್ಲವೋ, ಯಾವುದರ ಹೊರತು ಸಾಮಾನ್ಯ ಜನರ ಜೀವನವು ಸುಸೂತ್ರವಾಗಿ ಸಾಗುವುದೊ, ಅಂಥ ವಸ್ತುವಿನ ಅಂತರ್-ರಾಷ್ಟ್ರೀಯ ವ್ಯಾಪಾರವನ್ನು ಮಾಡಬಹುದು.

೨ ಈ ವ್ಯಾಪಾರದಲ್ಲಿ ಯಾವ ತರದ ಬಲಾತ್ಕಾರವೂ ಹಿಂಸೆಯೂ ಕೂಡದು. ಅಲ್ಲದೆ, ರಾಜಾಧಿಕಾರವನ್ನು ಎಂದೂ ಉಪಯೋಗಿಸಕೂಡದು.

೩ ಮೇಲೆ ಹೇಳಿದ ವಸ್ತುಗಳನ್ನು ಯಾವುದೇ ರೀತಿಯಿಂದ ತಮ್ಮ ದೇಶದಲ್ಲಿ ಮಾಡಿಕೊಳ್ಳಲು ಆಗ್ರಹತೊಟ್ಟರೆ ಅದು ಅಧರ್ಮವೇ ಸರಿ.

೪ ಪ್ರಯೋಗ-ಶಾಲೆಗಳಲ್ಲಿ ಉಪಯೋಗಿಸಲ್ಪಡುವಂಥ ಎಕ್ಸ್‌ರೇ ಯಂತ್ರ, ವಿಶಿಷ್ಟ ತರದ ಗಡಿಯಾರ, ಕಾಶ್ಮೀರಿನ ಉಣ್ಣೆಯ ಬಟ್ಟೆ, ಕೇಸರಿ, ಏಲಕ್ಕಿ, ದಾಲಚಿನ್ನಿ ಮುಂತಾದ ವಿಶಿಷ್ಟ ಪ್ರಕಾರದ ವಸ್ತು-ವನಸ್ಪತಿಗಳು ಅಂತರ್ ರಾಷ್ಟ್ರೀಯ ವ್ಯಾಪಾರಕ್ಕೆ ಯೋಗ್ಯವಾದುವು ಎನ್ನಬಹುದು.

ಸಪ್ತಮ ಖಂಡ

ಉದ್ಯೋಗ

೧ ಒಕ್ಕಲುತನ

೧ ಹಿಂದೂಸ್ತಾನಕ್ಕೆ ಒಕ್ಕಲುತನವು ತನ್ನ ಪ್ರಾಣದಷ್ಟೇ ಪ್ರಿಯವಾದ ಉದ್ಯೋಗ. ಹಿಂದೂಸ್ತಾನದ ಶೋಷಣೆ ಮಿತಿಮೀರಿ ನಡೆದಿದ್ದರೂ ಈ ದೇಶ ಈ ವರೆಗೂ ಜೀವಿಸಿದೆ. ಆಹಾರದ ವಿಷಯದಲ್ಲಿ ಪರಾವಲಂಬಿಯಾಗದಿದ್ದುದೇ

ಇದಕ್ಕೆ ಕಾರಣ. ಹಿಂದೂಸ್ತಾನದ ಈ ಸ್ವಾವಲಂಬನ-ವೃತ್ತಿಗೂ ಈಗ ಕುತ್ತು ಬರುವ ಸಂದರ್ಭವಿದೆ.

೨ ಹಿಂದುಸ್ತಾನದ ಈಗಿನ ಆರ್ಥಿಕ ಹಾಗೂ ರಾಜಕೀಯ ನೀತಿ ಒಕ್ಕಲುತನವನ್ನು ನಾಶಮಾಡುತ್ತಲಿದೆ. ಆದ್ದರಿಂದ ಇಂದು ಒಕ್ಕಲುತನವು ಒಂದು ಗಳಿಕೆಯ ಉದ್ಯೋಗವಾಗಿ ಉಳಿದಿರುವುದಿಲ್ಲ.

೩ ಬ್ರಿಟಿಷ್ ರಾಜ್ಯ-ತಂತ್ರದಲ್ಲಿ ಭೂಮಿಯ ಮೇಲಿನ ಕರದ ಭಾರವು ಮೊಟ್ಟ ಮೊದಲನೆಯ ಭಾರವೆಂದು ಕ್ಯಾದೆಯಿಂದ ಪ್ರಸ್ಥಾಪಿಸಿದ್ದಾರೆ. ಆದರೆ ಸ್ವರಾಜ್ಯದಲ್ಲಿ ಈ ಸಂಗತಿ ತದ್ವಿರುದ್ಧವಿರತಕ್ಕದ್ದು. ಒಕ್ಕಲಿಗರ ಭಾರವೆಲ್ಲ ರಾಜ್ಯದ ಮೇಲಿರಬೇಕು, ತೆರಿಗೆ ಮುಂತಾದ ಕರಗಳು ಒಕ್ಕಲುತನಕ್ಕೆ ಹಾನಿ ತಟ್ಟದಂತೆ ಹೇರಲ್ಪಡಬೇಕು, ವಸೂಲು ಮಾಡಲ್ಪಡಬೇಕು.

೪ ದೇಶಕ್ಕೆ ಸಾಕಷ್ಟು ಧಾನ್ಯವನ್ನು ಸಂಗ್ರಹಿಸಿ ಇಡಲು ಬರುವಂತೆ ಸ್ವರಾಜ್ಯದ ಆರ್ಥಿಕ ನೀತಿಯನ್ನು ರಚಿಸಬೇಕು.

೫ ಹಿಂದೂಸ್ತಾನದಲ್ಲಿ ಈ ವರೆಗೂ ಹಣ್ಣು ಹಂಪಲಿನ ಗಿಡಗಳ ಬೆಳೆವಣಿಗೆಗೆ ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲ. ಇತ್ತ ಕಡೆ ವಿಶೇಷ ಗಮನಕೊಡತಕ್ಕದ್ದು.

೬ ಒಕ್ಕಲಿಗರು ಹೆಚ್ಚಾಗಿದ್ದಲ್ಲಿ ದನಗಳನ್ನು ಮೇಯಿಸುವುದಕ್ಕೆ ಭೂಮಿಯ ಅವಶ್ಯಕತೆಯುಂಟು. ಒಕ್ಕಲು ಹಾಗೂ ಕಾಡಿನ ಖಾತೆಯ ನೀತಿ ದನಗಳ ಸಾಕುವಿಕೆಗೆ ಅನುಕೂಲವಾಗುವಂತಿರಬೇಕು. ಕೆಲವು ಹೊಲಗಳನ್ನು ದನಗಳ ಆಹಾರಕ್ಕೆಂದೇ ಬೆಳೆಯತಕ್ಕದ್ದು.

೭ ಒಕ್ಕಲುತನ ಹಾಗೂ ಇತರ ಉದ್ಯೋಗಗಳ ವಿಷಯದಲ್ಲಿ ಸದ್ಯದಲ್ಲಿ ಪ್ರಚಲಿತವಿರುವ ಧನೋತ್ಪಾದಕ ದೃಷ್ಟಿ ಇರಕೂಡದು. ಸುಂಕ, ಕಂದಾಯ, ಸಾಲ, ಮುಂತಾದುವನ್ನು ಕೊಡತಕ್ಕ ಚಿಂತೆ ಇಲ್ಲದಿದ್ದರೆ ಉದ್ಯೋಗಗಳಿಂದ ತಯಾರಿಸಿದ ಪದಾರ್ಥಗಳನ್ನು ಆದಷ್ಟು ಹೆಚ್ಚಿಗೆ ಮಾರಿ, ಹೆಚ್ಚು ಬೆಲೆಯನ್ನು ಪಡೆಯುವ ಗೋಜಿಗೆ ಜನರು ಹೋಗುವುದಿಲ್ಲ. ತಮ್ಮ ತಮ್ಮ ಕುಟುಂಬಕ್ಕೆ, ಸಮಾಜಕ್ಕೆ, ಇಲ್ಲವೆ ಹಳ್ಳಿಗೆ ಯಾವ ಪದಾರ್ಥಗಳು ಎಷ್ಟೆಷ್ಟು ಬೇಕಾಗುವವೆಂಬ ದೃಷ್ಟಿಯಿಂದಲೇ ಉದ್ಯೋಗ ಮಾಡುವರು.

೮ ಹೀಗೆ ಒಕ್ಕಲಿಗನು ಮೊದಲು ಹುಲ್ಲು, ಹೊಟ್ಟು, ಧಾನ್ಯ ಮುಂತಾದ್ದನ್ನು ತನ್ನಲ್ಲಿ ಸಂಗ್ರಹಿಸಿಕೊಳ್ಳುವ ವಿಚಾರವನ್ನೇ ಮಾಡುವನು. ಹೆಚ್ಚು ಲಾಭ, ಧಾರಣೆ ಮುಂತಾದುವುಗಳ ಕಡೆಗೆ ಗಮನವಿತ್ತು ಹತ್ತಿ, ಎಣ್ಣೆ-ಕಾಳು,

ಹೊಗೆ-ಸೊಪ್ಪು ಮುಂತಾದ ವಸ್ತುಗಳನ್ನು ಬೆಳೆಸಲು ಬಯಸುವುದಿಲ್ಲ; ಅದರ ಗೋಜಿಗೂ ಹೋಗುವುದಿಲ್ಲ.

೯ ಒಕ್ಕಲುತನವನ್ನು ಹೆಚ್ಚು ಹಣ ಗಳಿಸಬೇಕೆಂಬ ವ್ಯಾಪಾರದ ದೃಷ್ಟಿಯಿಂದ ಮಾಡಿದರೆ ಕೊನೆಯಲ್ಲಿ ಅವನಿಗೆ ಲಾಭವಾಗುವುದೇ ಇಲ್ಲ. ಒಂದು ಕಡೆಯಿಂದ ಬಂದ ಹಣ ಇನ್ನೊಂದು ಕಡೆಗೆ ಹೊರಟುಹೋಗುವುದು. ಇದರಿಂದ ನೈತಿಕ-ಬಲಕ್ಕೆ ಹಾನಿಯೂ ತಟ್ಟುವುದು. ಸ್ವತಃ ತಾವು ಮಾಡುತ್ತಿರುವ ಒಕ್ಕಲುತನದಿಂದ ತಮ್ಮ ಮತ್ತು ಅನ್ಯರ ಶಾರೀರಿಕ, ಮಾನಸಿಕ, ನೈತಿಕ ಹಾನಿ ಎಷ್ಟಾಗುತ್ತಿರುವುದೆಂಬ ಯೋಚನೆ ಮಾಡುವ ಕರ್ತವ್ಯಬುದ್ಧಿಯೆ ಅವರಲ್ಲಿ ಉಂಟಾಗುವುದಿಲ್ಲ. ಅದು ನಾಶವಾಗಿ ಹೋಗುತ್ತದೆ. ಅವರು ಹೊಗೆಸೊಪ್ಪು, ಅಫೀಮು ಮುಂತಾದುವನ್ನು ಬೆಳೆಯಿಸುವುದೇ ಇದಕ್ಕೆ ಸಾಕ್ಷಿ.

೨ ಪೋಷಕ ಇಲ್ಲವೆ ಪೂರಕ ಉದ್ಯೋಗಗಳು

೧ ಹಿಂದುಸ್ತಾನದಲ್ಲಿ ಒಕ್ಕಲುತನಕ್ಕೆ ಎಷ್ಟೋ ನೈಸರ್ಗಿಕ ಸಂಕಟಗಳಿವೆ. ಅವುಗಳನ್ನು ದೂರಮಾಡಲು ಎಷ್ಟು ಹಂಚಿಕೆ ಹಾಕಿದರೂ ಅವು ಸ್ವಲ್ಪ ಹೆಚ್ಚು-ಕಡಮೆ ಪ್ರಮಾಣದಲ್ಲಿ ಇರತಕ್ಕವೇ. ಒಕ್ಕಲುತನ ಹನ್ನೆರಡೂ ತಿಂಗಳು ಮಾಡುವಂಥ ಉದ್ಯೋಗವಾಗಲಾರದು. ಒಕ್ಕುವ ದಿನಗಳಲ್ಲಿ ಕೂಡ ಒಕ್ಕಲಿಗರು ಸತತವಾಗಿ ದುಡಿಯಬೇಕಾಗುವುದಿಲ್ಲ. ಆದರೆ ಒಮ್ಮೊಮ್ಮೆ ಬಿಡಿ-ದಿನಗಳಲ್ಲಿಯೂ ಹೆಚ್ಚು ಕೆಲಸಗಾರರು ಬೇಕಾಗುವರು. ನಡುವಿನ ಈ ಬಿಡುವಿನ ಕಾಲದಲ್ಲಿ ಭೂಮಿಯ ಒಡೆಯರೂ ಅವರ ಮನೆಯವರೂ ನಿರುದ್ಯೋಗಿಗಳಾಗುವರು. ಆದಕ್ಕೋಸ್ಕರ ಒಕ್ಕಲುತನದ ಜೊತೆಗೆ ಯಾವುದಾದರೊಂದು ಪೂರಕ ಉದ್ಯೋಗವು ಬೇಕೇಬೇಕು. ಆದ್ದರಿಂದ ಒಕ್ಕಲುತನವನ್ನೂ ಉದ್ಯೋಗವನ್ನೂ ಒಂದನ್ನು ಇನ್ನೊಂದರಿಂದ ಬೇರ್ಪಡಿಸಲಿಕ್ಕಾಗುವುದಿಲ್ಲ.

೨ ಪೂರಕ – ಪೋಷಕ – ಉದ್ಯೋಗಗಳಿಗೆ ಕೆಳಗಿನ ಅನುಕೂಲತೆಗಳಿರಬೇಕು:

(ಅ) ಅವು ಮುಖ್ಯವಾದ ಉದ್ಯೋಗಕ್ಕೆ–ಒಕ್ಕಲುತನಕ್ಕೆ–ಅನುಕೂಲವಾಗಿರಬೇಕು. ಅವಕ್ಕಾಗಿ ಒಕ್ಕಲುತನವನ್ನು ಮೂಲೆಗೆ ತಳ್ಳುವ ಸಂದರ್ಭ ಬರಕೂಡದು.

(ಆ) ಮುಖ್ಯ ಉದ್ಯೋಗಕ್ಕಾಗಿ ದುಡಿಯುವ ಸಂದರ್ಭದಲ್ಲಿ ಕೂಡ

ಅವುಗಳನ್ನು ಹಾನಿಯಾಗದಂತೆ ಊರ್ಜಿತ ಸ್ಥಿತಿಯಲ್ಲಿಟ್ಟುಕೊಳ್ಳಲು ಬರುವಂಥ ವಿರಬೇಕು; ಹೆಚ್ಚು ಗಮನವನ್ನು ಅಪೇಕ್ಷಿಸದೆ ಸರಿಯಾಗಿ ನಡೆದುಕೊಂಡು ಹೋಗುವಂಥವಿರಬೇಕು.

(ಇ) ಮೇಲಾಗಿ ಇವು ನಿತ್ಯ ನೌಕರಿಯ ಉದ್ಯೋಗಗಳಾಗಿರದೆ ಸ್ವತಂತ್ರ ಕೂಲಿಯ ಕೆಲಸಗಳಾಗಿರಬೇಕು.

(ಈ) ಮೇಲೆ ವಿವರಿಸಿದ ಕಾರಣಗಳಿಗೆ ಹೊಂದಿಕೊಂಡಿರುವ ಉದ್ಯೋಗ ಗಳಿಗೆ ಆಗತ್ಯವಿದ್ದ ಯಂತ್ರಗಳಿಗೋಸ್ಕರ, ಉಳಿದ ಸಾಮಗ್ರಿಗಳಿಗೋಸ್ಕರ, ನಿರ್ಧನರಾದ ಪ್ರಜೆಗಳು ಶಕ್ತಿ ಮೀರಿ ಭಂಡವಲು ಹಾಕುವ ಸಂದರ್ಭ ಬರ ಕೂಡದು.

(ಉ) ಆ ಉದ್ಯೋಗಗಳು ಹೊಲಗಳ ಬಳಿಯಲ್ಲಿ, ಅಥವಾ ಮನೆಯಲ್ಲಿ, ಇಲ್ಲವೆ ಹಳ್ಳಿಯಲ್ಲೇ ಕುಳಿತು ಮಾಡಲು ಸಾಧ್ಯವಿರಬೇಕು.

(ಊ) ಈ ಉದ್ಯೋಗಗಳನ್ನು ಬಹಳ ಜನರು ಮಾಡಿದರೂ ಅವುಗಳಿಂದ ಉತ್ಪನ್ನವಾದ ವಸ್ತುಗಳು ಹೆಚ್ಚು ವೆಚ್ಚವಾಗುತ್ತಿರಬೇಕು. ಎಂದರೆ ಅವು ಸರ್ವ-ಪ್ರಿಯ, ಸರ್ವರಿಗೂ ಬೇಕಾಗುವಂಥವು ಇರಬೇಕು.

(ಎ) ಆ ಉದ್ಯೋಗಗಳಲ್ಲಿ ಬಹಳ ಜನರನ್ನು ತೊಡಗಿಸುವ ಸಂದರ್ಭ ಬಂದರೆ, ಅಷ್ಟು ಭರದಿಂದಲೂ ಸರಳವಾಗಿಯೂ ಕಡಮೆ ವೆಚ್ಚದಿಂದ ಯಂತ್ರಾದಿ ಗಳನ್ನು ಉಪಯೋಗಿಸಲು ಬರುವಂತೆಯೂ ಅವು ಇರಬೇಕು.

(ಏ) ಸಾವಿರಾರು ಜನರ ದೃಷ್ಟಿಯಿಂದಲೂ ಆ ಉದ್ಯೋಗಗಳು ಅಶಿಕ್ಷಿತ, ಮಂದ ಬುದ್ಧಿಯ, ನಿರ್ಬಲ, ಚಿಕ್ಕ-ದೊಡ್ಡ ಸರ್ವಪ್ರಕಾರದ ಜನರಿಗೂ ಮಾಡಲು ಬರುವಂತೆ ಇರಬೇಕು.

(ಐ) ಇದಲ್ಲದೆ, ಅವು ಕೆಲಸದಲ್ಲಿದ್ದ ಮನುಷ್ಯನನ್ನು ಜಡ ಯಂತ್ರಗಳಂತೆ ಆನಂದರಹಿತ, ರಸಹೀನ ಮಾಡುವಂಥವಿರಕೂಡದು. ಕೆಲಸ ಮುಗಿದ ಬಳಿಕ ಬೇಸರ ಹುಟ್ಟಿಸುವಂಥವೂ ದಣಿಸುವಂಥವೂ ಇರಕೂಡದು.

೩. ಈ ಪೋಷಕ ಉದ್ಯೋಗಗಳಲ್ಲಿ, ನೂಲುವ ರಾಟಿಗೂ ಗೋಪಾಲನೆಗೂ ಪ್ರಮುಖ ಸ್ಥಾನವಿರತಕ್ಕದ್ದು. ಪ್ರಾಚೀನ ಕಾಲದಿಂದಲೂ ಇವೆರಡೂ ಉದ್ಯೋಗಗಳು ಒಕ್ಕಲುತನದೊಡನೆ ದೀರ್ಘಕಾಲದ ಒರೆಗಲ್ಲಿಗೆ ಹತ್ತಿ ಬದುಕಿ ಬಂದಿರುವವು.

೪. ತಂತಿ, ಅಂಚೆ, ಉಗೆ-ಬಂಡಿ ಮೊದಲಾದುವು ಅಖಿಲ ಭಾರತೀಯ

ಖಾತೆಗಳು. ಇವುಗಳ ಹಾಗೆ ರಾಟೆಯೂ ಗೋಪಾಲನೆಯೂ ಅಖಿಲ ಭಾರತದ ದೃಷ್ಟಿಯಿಂದ ಅತ್ಯಂತ ಮಹತ್ವದವು. ದೊಡ್ಡ ಪ್ರಮಾಣದಲ್ಲಿ, ಶಕ್ಯವಿದ್ದಷ್ಟು ಬಹಳ ಜನರು, ಸರಳವಾಗಿಯೂ ಅನುಕೂಲತೆಗಳಿಗೆ ಅನುಸಾರವಾಗಿಯೂ ಮಾಡಲು ಬರುವಂಥ ಉದ್ಯೋಗಗಳಿವು.

೫ ಮುಂದಿನ ಪ್ರಕರಣಗಳಲ್ಲಿ ಈ ಎರಡೂ ಉದ್ಯೋಗಗಳನ್ನು ಕುರಿತು ಹೆಚ್ಚು ವಿಸ್ತಾರವಾದ ವಿಚಾರವು ಬರುವುದು ಗೋಪಾಲನೆಯ ಉದ್ಯೋಗಕ್ಕೆ ಭೂಮಿಯೂ ಭಂಡವಲೂ ಸ್ವಲ್ಪ ಹೆಚ್ಚು ಬೇಕು. ಆದ್ದರಿಂದ ಇದು ಸ್ವಂತ ಭೂಮಿಯಿದ್ದ ಒಕ್ಕಲಿಗರ ಪೋಷಕ ಉದ್ಯೋಗವಾಗಬಹುದು. ಆದರೆ ಕೂಲಿಯಿಂದ ಉಪಜೀವಿಸುವ ಸಾವಿರಾರು ಜನಗಳ ಉದ್ಯೋಗವಾಗಲಾರದು. ಅಲ್ಲದೆ ಇದು ಸ್ವತಂತ್ರ ಉದ್ಯೋಗವೂ ಆಗಬಹುದು. ನೂಲುವ ಉದ್ಯೋಗ ಮಾತ್ರ ಗೋಪಾಲನೆ, ಒಕ್ಕಲುತನ ಇವೆರಡರ ಜೊತೆಗೂ ನಡೆಯಬಲ್ಲುದು. ಈ ದೃಷ್ಟಿಯಿಂದ ಗೋಪಾಲನೆಗಿಂತ ರಾಟೆಗೆ ಹೆಚ್ಚು ಮಹತ್ವವಿದೆ. ಆದರೂ ಗೋಪಾಲನೆಯೂ ನೂಲುವುದೂ ಒಕ್ಕಲಿಗರಿಗೆ ಪೂರಕ ಉದ್ಯೋಗಗಳಾಗಬಲ್ಲುವು.

೬ ರಾಟೆಗೆ ಹೆಚ್ಚು ಮಹತ್ವವಿದೆ, ಅಥವಾ ಹೆಚ್ಚು ಮಹತ್ವವಿರತಕ್ಕದ್ದು ಎಂಬ ಮಾತಿನಲ್ಲಿ, ರಾಟೆಯ ಹೊರತು ಇನ್ನಾವ ಉದ್ಯೋಗಗಳೂ ಕೂಡದೆಂಬ ಭಾವವಿಲ್ಲ. ಸ್ಥಾನಿಕ ಪರಿಸ್ಥಿತಿ ಅನುಕೂಲವಿದ್ದು, ನೂಲುವ ಉದ್ಯೋಗಕ್ಕಿಂತಲೂ ಹೆಚ್ಚು ಲಾಭಕಾರಿಯಾದ ಇನ್ನೊಂದು ಪೂರಕ ಉದ್ಯೋಗವು ಸಾಧ್ಯವಿದ್ದರೆ, ನೂಲುವ ಬದಲು ಅಥವಾ ನೂಲುವುದರ ಸಂಗಡ ಅದನ್ನೂ ಮಾಡಬಹುದು. ಸ್ಥಾನಿಕ ರಾಜ್ಯತಂತ್ರವೂ, ಪ್ರಜಾತಂತ್ರವೂ ಈ ಉದ್ಯೋಗಗಳ ಕಡೆಗೆ ಹೆಚ್ಚು ಗಮನ ಕೊಟ್ಟು ಅವನ್ನು ಬೆಳೆಸಲು ಯತ್ನಿಸಬೇಕು. ಇದು ಅವುಗಳ ಕರ್ತವ್ಯಕರ್ಮ.

೭ ಯಾವ ಹಳ್ಳಿಯಲ್ಲಿ ಯಾವ ಮೂಲವಸ್ತು ಹುಟ್ಟುವುದೋ, ಅದನು ಸಂಗ್ರಹಿಸಲಿಕ್ಕೂ, ಮಾರಲಿಕ್ಕೂ, ಮನುಷ್ಯನ ಉಪಯೋಗಕ್ಕೆ ಯೋಗ್ಯವನ್ನಾಗಿ ಮಾಡುವುದಕ್ಕೂ ಆಗಬೇಕಾದ ಕ್ರಿಯೆಗಳೆಲ್ಲವೂ ಅದೇ ಹಳ್ಳಿಯಲ್ಲಿ ಆಗಬೇಕು. ಎಂದರೆ ಮೂಲವಸ್ತುವನ್ನು ತಯಾರಿಸುವವನು ಅಲ್ಲೇ ಇರತಕ್ಕದ್ದು. ಉದಾಹರಣೆಗೆ: ಪರದೇಶಗಳಿಗೂ ಪಟ್ಟಣಗಳಿಗೂ ಬತ್ತವು ಹೋಗುವುದಿಲ್ಲ, ಆದರೆ ತಿನ್ನಲು ಯೋಗ್ಯವಾದ ಅಕ್ಕಿಯು ಹೋಗುತ್ತದೆ. ಗೋದಿಯ ಬದಲು

ಹಿಟ್ಟು ದೊಡ್ಡ ಪ್ರಮಾಣದಲ್ಲಿ ಹೋಗುತ್ತದೆ. ಆ ಹಿಟ್ಟಿನಿಂದ ತಯಾರಿಸಿದ ರೊಟ್ಟಿ, ಬಿಸ್ಕೀಟು ಮುಂತಾದುವುಗಳ ಮಾರಾಟವೂ ಚನ್ನಾಗಿ ಆಗುವುದಲ್ಲದೆ, ಜನರೂ ಅವುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಕಬ್ಬಿನಿಂದ ಬೆಲ್ಲ ವನ್ನೂ ಸಕ್ಕರೆಯನ್ನೂ ಮಾಡಿದ ಮೇಲೆಯೇ ತಿನ್ನಲು ಬರುವುದು. ಎಣ್ಣೆ-ಕಾಳುಗಳ ಉಪಯೋಗವು ಹೆಚ್ಚಾಗಿ ಆಗುವುದು ಎಣ್ಣೆ ತೆಗೆದ ಮೇಲೆಯೇ. ಹತ್ತಿಯ ಉಪಯೋಗವಾಗುವುದು ಬಟ್ಟೆಯಾದ ಮೇಲೆ. ಚರ್ಮದ ಉಪ ಯೋಗವು ಚರ್ಮದಿಂದ ತಯಾರಿಸಿದ ವಸ್ತುಗಳ ಮುಖಾಂತರವೇ ಆಗುವುದು. ಆದುದರಿಂದ ಬತ್ತ ಕುಟ್ಟುವ, ಹಿಟ್ಟು ಬೀಸುವ, ಬಿಸ್ಕೀಟು ರೊಟ್ಟಿ ಮಾಡುವ, ಎಣ್ಣೆ ತೆಗೆಯುವ, ನೇಯುವ. ಚರ್ಮ ಹೊಲೆಯುವ ಕೆಲಸಗಳು ಕೂಡ ಗ್ರಾಮದಲ್ಲೇ ಆಗತಕ್ಕದ್ದು. ಇವು ಒಕ್ಕಲಿಗರ, ಹಳ್ಳಿಗರ ಪೂರಕ ಉದ್ಯೋಗಗಳಾಗಬಹುದು.

೮ ಇವೆಲ್ಲ ಪೂರಕ ಉದ್ಯೋಗಗಳಾಗಿ ನಡೆದರೆ ಹಳ್ಳಿಗರಿಗೆ ಎಷ್ಟೋ ಲಾಭವಾಗುವುದು. ಉದಾಹರಣೆಗೆ: ಬತ್ತದ ಗೊಳಲಿ, ತೌಡು, ಗೋದಿಯ ಹೊಟ್ಟು, ಕಬ್ಬಿನ ಸಿಪ್ಪೆ, ಎಣ್ಣೆ-ಕಾಳಿನ ಹಿಂಡಿ, ಹತ್ತಿ-ಕಾಳು, ನೂಲಿನ ಗುಂಜು ಮುಂತಾದ ವಸ್ತುಗಳು ದನಗಳಿಗಾಗಿ ಉಪಯೋಗವಾಗುವವು, ಅಥವಾ ಗೊಬ್ಬರವಾಗುವವು. ಇವುಗಳಿಂದ ಬೇರೆ ಉದ್ಯೋಗಗಳೂ ಹುಟ್ಟಬಹುದು.

೩ ಸಂಪೂರ್ಣ ಸ್ವದೇಶಿ

೧ ಸ್ವದೇಶೀ ವಸ್ತುಗಳಿಗೆ ಉತ್ತೇಜನ ಕೊಡತಕ್ಕದ್ದು. ಈ ವಿಷಯದ ಸಮಾವೇಶ ಸ್ವದೇಶೀ ಧರ್ಮದ ಪಾಲನೆಯಲ್ಲೇ ಆಗಿಬಿಡುತ್ತದೆ. ಸ್ವದೇಶೀ ವಸ್ತುಗಳಿಗೆ ಪ್ರೋತ್ಸಾಹ ಕೊಡತಕ್ಕದ್ದೆಂಬ ಚಳುವಳಿಯಲ್ಲಿ ವಿವೇಕದ ಆವಶ್ಯ-ಕತೆ ಇದೆ.

೨ ವಿವೇಕದಿಂದ ಯೋಚಿಸದಿದ್ದರೆ ಸ್ವದೇಶಿಯ ಹೆಸರಿನಿಂದ ತಿಳಿದಾಗಲಿ ತಿಳಿಯದೆ ಆಗಲಿ ಆಡಂಬರ ಹೆಚ್ಚಾಗುವುದು, ಅನೇಕ ಕಾರ್ಯಕರ್ತರ ಶಕ್ತಿ ವ್ಯರ್ಥವಾಗುವುದು, ಆತ್ಮಹಾನಿಯೂ ಆಗುವುದು.

೩ ಯಾವ ವಸ್ತುಗಳ ಪ್ರಚಾರಕ್ಕೋಸ್ಕರ ಹೆಚ್ಚು ಸಹಾಯ ಆವಶ್ಯ ವಿರುವುದಿಲ್ಲವೊ, ಜಾಹೀರಾತಿನ ಆವಶ್ಯಕತೆ ಇಲ್ಲವೊ, ಅಂಥ ವಸ್ತುಗಳ ಪ್ರದರ್ಶನ ವನ್ನು ಕಾರ್ಯಕರ್ತರು ಜರುಗಿಸುವ ಅಗತ್ಯವಿಲ್ಲ. ಏಕೆಂದರೆ, ಹಾಗೆ ಮಾಡಿದರೆ

ಅವುಗಳ ಬೆಲೆ ಹೆಚ್ಚಾಗಿ, ಒಬ್ಬರು ಇನ್ನೊಬ್ಬರೊಡನೆ ಮೇಲಾಟ ಹೂಡಿ ವೈರವನ್ನು ಕಟ್ಟಿಕೊಳ್ಳುವ, ಅನಿಷ್ಟವಾದ ಜಗಳವು ಬೆಳೆಯುವ ಸಂಭವವುಂಟು.

೪ ಉದಾಹರಣೆಗಾಗಿ: ಬಟ್ಟೆಯ ಗಿರಣಿ ಸಕ್ಕರೆಯ ಗಿರಣಿ ಅಕ್ಕಿಯ ಗಿರಣಿಗಳಿಗೆ ಸಹಾಯ ಮಾಡುವುದು ಅವಶ್ಯವಲ್ಲ. ಇದೇ ರೀತಿ ಕಾಗದದ ದೇಶೀ ಗಿರಣಿ, ಎಣ್ಣೆಯ ಗಿರಣಿ, ಪರದೇಶೀ ಔಷಧಗಳನ್ನು ತಯಾರಿಸುವ ದೇಶೀ ಕಾರ್‌ಖಾನೆ, ಸಾಬೋನು ದಂತ-ಮಂಜನ ಬ್ರಶ್ ಮುಂತಾದ ಪದಾರ್ಥಗಳ ಕಾರ್‌ಖಾನೆ, ಚರ್ಮದ ದೊಡ್ಡ ಕಾರ್‌ಖಾನೆ ಮುಂತಾದುವೂ ಸಹಾಯಕ್ಕೆ ಪಾತ್ರವೆಂದು ಹೇಳಲಾಗದು.

೫ ಪರದೇಶದ ಕಾಗದ, ಸಕ್ಕರೆ, ಅಕ್ಕಿ, ಬಟ್ಟೆ, ಎಣ್ಣೆ, ಔಷಧ, ಸಾಬೋನು, ದಂತ-ಮಂಜನ, ಬ್ರಶ್ ಮುಂತಾದ ಪದಾರ್ಥಗಳನ್ನು ಬಳಸಕೂಡದೆಂಬ ಕಟ್ಟೆಪ್ಪಣೆ ಇಲ್ಲವೆಂದು ಇದರ ಅರ್ಥವಲ್ಲ. ಯಾವುದಕ್ಕೆ ಪರದೇಶದ ದಾಳಿಯನ್ನು ತಡೆಯುವಷ್ಟು ಶಕ್ತಿಯು ಇಲ್ಲವೊ ಆದಕ್ಕೆ ಪೂರ್ಣ ಸಹಾಯವನ್ನೀಯಬೇಕು; ಮತ್ತು ಯಾರು ಈ ವಸ್ತುಗಳನ್ನು ಉಪಯೋಗಿಸಲೇ ಬೇಕಾಗಿದೆಯೊ ಅವರೇ ಅವುಗಳಿಗೆ ಮನ್ನಣೆಯನ್ನೀಯಬೇಕು.

೬ ಇಂದು ನಡೆಯಬೇಕಾದ ಸ್ವದೇಶೀ ಚಳುವಳಿಯು ಈ ವಸ್ತುಗಳಿಗೋಸ್ಕರವಲ್ಲ. ಇಂದು ಗ್ರಾಮೋದ್ಯೋಗಗಳನ್ನು ಸಂರಕ್ಷಿಸಬೇಕಾಗಿದೆ. ಎಂದರೆ ಖಾದಿ, ಬೆಲ್ಲ, ಹಳ್ಳಿಯಲ್ಲಿ ಹುಟ್ಟಿದ ಸಕ್ಕರೆ, ಕೈಯಿಂದ ಕುಟ್ಟಿದ ಅಕ್ಕಿ, ಹಳ್ಳಿಯ ಕಾಗದ, ಗಾಣದ ಎಣ್ಣೆ, ಹಳ್ಳಿಯಲ್ಲಿ ಮಾಡಿದ ಪಾತ್ರೆಗಳು, ಅಂಟ್ವಾಳ ಕಾಯಿ, ಹಲ್ಲು ಉಜ್ಜುವ ಕಡ್ಡಿ, ಪೊರಕೆ, ಹುಲ್ಲಿನ ಚಾಪೆ, ಬುಟ್ಟಿ, ಹಗ್ಗ, ಗುಡಾರ, ಚರ್ಮದ ವಸ್ತುಗಳು ಮುಂತಾದ ಹಳ್ಳಿಯ ನೂರಾರು ಉದ್ಯೋಗಗಳು ಪ್ರೋತ್ಸಾಹವಿಲ್ಲದೆ ಸತ್ತುಹೋಗಿವೆ. ಇಂಥ ಉದ್ಯೋಗಗಳಿಗೆ ಜೀವದಾನ ಕೊಡುವುದು ಹೆಚ್ಚು ಅಗತ್ಯವಿದೆ.

೭ ಈ ವಿಷಯದಲ್ಲಿ ಈಗಿನ ಪಟ್ಟಣಿಗರೂ ಶಿಕ್ಷಿತರೂ ಹಳ್ಳಿಗಳ ಬಗೆಗೆ ತೋರಿಸುವ ಅಲಕ್ಷ್ಯವು ಅಕ್ಷಮ್ಯವಾದುದು.

೮ ಸ್ವಲ್ಪ ವರ್ಷಗಳ ಮೊದಲು ಹಳ್ಳಿಗರು ತಮಗೆ ಬೇಕಾಗುವ ಎಷ್ಟೋ ಪದಾರ್ಥಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಇಷ್ಟೇ ಅಲ್ಲ, ಎಷ್ಟೋ ಜನರು ದೈನಿಕ ಉಪಯೋಗಕ್ಕೆ ಬೇಕಾಗುವ ವಸ್ತುಗಳಿಗಾಗಿ ಹಳ್ಳಿಗರನ್ನು ಅವಲಂಬಿಸಬೇಕಾಗುತ್ತಿತ್ತು. ಆದರೆ ಈಗ ಅದರ ಬದಲಾಗಿ ಅವರು ಪಟ್ಟಣ

ಗಳಿಂದ, ಇಲ್ಲವೆ ಪರದೇಶಗಳಿಂದ ಆ ವಸ್ತುಗಳನ್ನು ತರಿಸಿಕೊಳ್ಳುತ್ತಾರೆ. ಪರಂಪರೆಯಿಂದ ನಡೆದು-ಬಂದ ಹಳ್ಳಿಗರ ಈ ಉದ್ಯೋಗಗಳು ಈಗ ಹಾಳಾಗಿ ಹೋಗಿವೆ. ಈ ಬಗೆಗೆ ಪಟ್ಟಣಿಗರೂ ಶಿಕ್ಷಿತರೂ ಎಳ್ಳಷ್ಟೂ ಯೋಚಿಸುತ್ತಿಲ್ಲ.

೯ ಈ ಮೂಲಕ ಇಂದು ಹಳ್ಳಿಗರು ಕಂಗಾಲಾಗಿದ್ದಾರೆ, ಪರಾವಲಂಬಿಗಳಾಗಿದ್ದಾರೆ. ಐವತ್ತು ವರ್ಷಗಳ ಹಿಂದಿನ ಹಳ್ಳಿಗರಲ್ಲಿದ್ದಷ್ಟು ವಿದ್ಯೆ ಬುದ್ಧಿ ಇಂದಿನ ಹಳ್ಳಿಗರಲ್ಲಿ ಇರುವುದಿಲ್ಲ. ಹಳ್ಳಿಯು ಕಲಾವಿದರಲ್ಲಿಯೂ ಉಳಿದ ಹಳ್ಳಿಗರಂತೆಯೇ ಅವಿದ್ಯೆಯೂ ಅಬುದ್ಧಿಯೂ ಮನೆಮಾಡಿದೆ.

೧೦ ಸೃಷ್ಟಿಯು ಒದಗಿಸಿಕೊಟ್ಟ ಬಿಡುವಿನ ಸಮಯವನ್ನೆಲ್ಲ ಹಳ್ಳಿಗರೆಲ್ಲರೂ ಯಾವುದಾದರೊಂದು ಉಪಯುಕ್ತ ಕಾರ್ಯದಲ್ಲಿ ಕಳೆಯಬೇಕೆಂಬ ಸಂಕಲ್ಪವನ್ನೂ, ಪಟ್ಟಣಿಗರು ಹಳ್ಳಿಗಳಲ್ಲಿ ಉತ್ಪನ್ನವಾದ ವಸ್ತುಗಳನ್ನೆ ಕೊಳ್ಳುವೆವೆಂಬ ಪ್ರತಿಜ್ಞೆಯನ್ನೂ ಮಾಡಿದಾಗಲೆ ಹಳ್ಳಿಗರ ಮತ್ತು ಪಟ್ಟಣಿಗರ ಮುರಿದುಹೋದ ಸಂಬಂಧವು ಪುನಃ ಬೆಸುಗೆಯಾಗುವುದು.

೧೧ ಈ ಕಾರ್ಯಕ್ಕಾಗಿ ದೇಶಭಕ್ತರ ಒಂದು ದೊಡ್ಡ ದಂಡೇ ಸಿದ್ಧವಾದರೂ ಸಾಕಾಗಲಿಕ್ಕಿಲ್ಲ. ಇಂದು ಸ್ವದೇಶೀ ಸಂಘಗಳು ಎಲ್ಲಿ ಕೆಲಸ ಮಾಡುತ್ತಿರುವವೂ ಆ ಕಾರ್ಯ-ಕ್ಷೇತ್ರಗಳಂತೂ ಇದ್ದೇ ಇವೆ. ಆದರೆ ಇದಕ್ಕೂ ಹೆಚ್ಚಿಗೆ ಕಾರ್ಯಕರ್ತರಿಗೆ ಬೇಕಾದಷ್ಟು ವಿಶಾಲವಾದ ಕ್ಷೇತ್ರವು ಹಾಗೆಯೆ ಉಳಿದುಕೊಂಡಿದೆ. ಎಷ್ಟೋ ಉದ್ಯೋಗಗಳನ್ನು ಹುಡುಕಿ ತೆಗೆಯಬೇಕಾಗಿದೆ. ನಾನಾ ತರದ ಕಲಾವಿದರ ಹಿತವನ್ನು ಸಾಧಿಸಬೇಕಾಗಿದೆ. ಇಂದು ನಿರುದ್ಯೋಗದಿಂದ ಹೊಟ್ಟೆಗಿಲ್ಲದೆ ಸಾಯುವವರು ಇಂಥ ಕೆಲಸಗಳನ್ನು ಪ್ರಾಮಾಣಿಕತನದಿಂದಲೂ ಮರ್ಯಾದೆಯಿಂದಲೂ ಮಾಡಿ ಹೊಟ್ಟೆತುಂಬಿಕೊಳ್ಳಬಹುದು

೧೨ ಇದೇ ನಿಜವಾದ ಮತ್ತು ಸಫಲವಾಗುವ ಸಂಪೂರ್ಣ ಸ್ವದೇಶಿ.

೪ ವಿಶೇಷ ಉದ್ಯೋಗಗಳು

೧ ಸಮಾಜದ ನಿರ್ವಾಹವು ಸಾಗಬೇಕಾದರೆ, ಅದರ ಸಮೃದ್ಧಿಯೂ ಉನ್ನತಿಯೂ ಆಗಬೇಕಾದರೆ, ಒಕ್ಕಲುತನ ಮತ್ತು ನೂಲುವುದು, ಈ ಎರಡೇ ಉದ್ಯೋಗಗಳು ಸಾಲವು. ಇವುಗಳ ಹೊರತಾಗಿ ಇನ್ನೂ ಎಷ್ಟೋ ಉದ್ಯೋಗಗಳ ಆವಶ್ಯಕತೆ ಇದೆ. ಉದಾಹರಣೆಗೆ: ಧಾತುಗಳು ಕಲ್ಲಿದ್ದಲು ಸೀಮೆ-ಎಣ್ಣೆ ಮುಂತಾದುವುಗಳ ಕಣಿಗಳು, ಮತ್ತು ಖನಿಜ-ಪದಾರ್ಥಗಳಿಗೆ ಸಂಬಂಧಪಟ್ಟ

ಉದ್ಯೋಗಗಳು; ಉಪ್ಪು, ಮೀನು ಮುಂತಾದ ಸಮುದ್ರ-ಪದಾರ್ಥಗಳಿಗೆ ಸಂಬಂಧಪಟ್ಟ ಉದ್ಯೋಗಗಳು; ಕಟ್ಟಿಗೆ, ಅರಗು, ರಬ್ಬರು, ವನಸ್ಪತಿ-ಔಷಧ ಮುಂತಾದ ಅರಣ್ಯಕ್ಕೆ ಸಂಬಂಧಪಟ್ಟ ಉದ್ಯೋಗಗಳು.

೨ ಜೀವನ-ನಿರ್ವಾಹಕ್ಕೆ ಒಕ್ಕಲುತನ ಮತ್ತು ನೇಕಾರಿಕೆಯ ಅವಶ್ಯಕತೆ ಎಷ್ಟು ಇದೆಯೋ ಅಷ್ಟು ಈ ಉದ್ಯೋಗಗಳ ಅವಶ್ಯಕತೆ ಇರಲಿಕ್ಕಿಲ್ಲ. ಆದರೂ ಇಂದಿನ ಸಾಮಾಜಿಕ ಜೀವನಕ್ಕೆ ಇವು ಬೇಕಾಗುವವು ಇವನ್ನು ಅಸಡ್ಡೆ ಮಾಡಲು ಬರುವಂತಿಲ್ಲ.

೩ ಈ ಉದ್ಯೋಗಗಳಿಗೆ ಬಹಳ ಜನರು ಬೇಕಾಗುವುದಿಲ್ಲ. ಆದರೂ ಇವುಗಳಿಂದ ಉತ್ಪನ್ನವಾದ ಪದಾರ್ಥಗಳು ಸರ್ವರಿಗೂ ಬೇಕಾದುವು. ಈ ಪದಾರ್ಥಗಳು ಉಪಭೋಗಕ್ಕೆ ಯೋಗ್ಯವಾದುದರಿಂದ ಈ ಉದ್ಯೋಗಗಳಲ್ಲಿ ಜನತೆಯ ಹಿತಸಂಬಂಧವು ಅಡಕವಾಗಿದೆ.

೪ ಈ ಉದ್ಯೋಗಗಳು ದೇಶದ ಎಲ್ಲ ಭಾಗಗಳಲ್ಲಿ ನಡೆಯುವುದಿಲ್ಲ, ಅಲ್ಲಲ್ಲಿ ಮಾತ್ರ ನಡೆಯುವವು.

೫ ಈ ಉದ್ಯೋಗಗಳೊಳಗಿನ ಮೀನು ಹಿಡಿಯುವ, ಮತ್ತು ಉಪ್ಪು ಮಾಡುವ ಕಸುಬುಗಳು ಒಕ್ಕಲುತನದ ಮತ್ತು ನೂಲುವ ಉದ್ಯೋಗಗಳ ತರಗತಿಗೆ ಸೇರುವವು. ಒಕ್ಕಲುತನ, ಮತ್ತು ನೂಲುವ ಉದ್ಯೋಗದ ವಿಷಯದಲ್ಲಿ ಆರ್ಥಿಕ ನೀತಿ ಯಾವ ರೀತಿಯಾಗಿರುವುದೊ, ಅದೇ ರೀತಿ ಯಾಗಿ ಇವುಗಳ ವಿಷಯವಾಗಿಯೂ ಇರತಕ್ಕದ್ದು. ನೂಲುವುದು ಹೇಗೆ ಪ್ರತಿಯೊಬ್ಬ ಒಕ್ಕಲಿಗನ ಹಕ್ಕೋ, ಹಾಗೆಯೇ ಮೀನು ಹಿಡಿಯುವುದೂ ಸಮುದ್ರದ ದಂಡೆಯ ಮೇಲೆ ಇರುವ ಪ್ರತಿಯೊಬ್ಬನ ಹಕ್ಕು ಹೌದು.

೬ ಮೇಲೆ ಹೇಳಿದ ವಿಶೇಷ ಉದ್ಯೋಗಗಳಿಗಾಗಿ ಬಹಳ ಭಂಡವಲು, ಒಲವು, ಕೌಶಲ್ಯ ಮುಂತಾದುವು ಬೇಕು. ಈ ಉದ್ಯೋಗಗಳು ಸ್ವಂತ ಸಾಹಸದಿಂದಲೂ ನಡೆಯಬಹುದು, ಸರಕಾರದಿಂದಲೂ ನಡೆಯಬಹುದು. ಈ ಉದ್ಯೋಗಗಳ ಮೇಲೆ, ಕೆಳಗೆ ಕಾಣಿಸಿದಂತೆ ಸರಕಾರದ ನಿರ್ಬಂಧಗಳು ಇರತಕ್ಕದ್ದು.

(ಅ) ಇವುಗಳಿಂದ ಹುಟ್ಟುವ ಪದಾರ್ಥಗಳ ಉಪಭೋಗವು ಪ್ರಜೆಗಳಿಗೆ ಅತ್ಯಂತ ಕಡಮೆ ಬೆಲೆಯಲ್ಲಿ ದೊರೆಯತಕ್ಕದ್ದು.

(ಆ) ಈ ಪದಾರ್ಥಗಳು ಚನ್ನಾಗಿ ಮಾಡಲ್ಪಟ್ಟವೂ ಬಹು ದಿನ ಬಾಳು

ವಂತಹವೂ ಇರತಕ್ಕದ್ದು.

(ಇ) ಈ ಉದ್ಯೋಗಗಳು ಸ್ವಂತ ಸಾಹಸದಿಂದ ನಡೆಯುತ್ತಿದ್ದರೆ ಅವುಗಳಿಂದ ಬರುವ ಲಾಭದ ಮೇಲೂ ಅವುಗಳ ಬೆಲೆಯ ಮೇಲೂ ಸರಕಾರದ ಅಂಕುಶವಿರತಕ್ಕದ್ದು.

(ಈ) ಇವುಗಳಲ್ಲಿ ದುಡಿಯುವ ಕೆಲಸಗಾರರ ಸುಖ-ಸಂತೋಷದ ಕಡೆಗೆ ಸರಕಾರವು ಹೆಚ್ಚು ಗಮನಕೊಡತಕ್ಕದ್ದು.

(ಉ) ಇವುಗಳಲ್ಲಿ ಹಲವು ಉದ್ಯೋಗಗಳು ನಾನಾ ರೀತಿಯಾಗಿ ಚಿಕ್ಕ ಭಂಡವಲಿನಿಂದ ಗೃಹೋದ್ಯೋಗಗಳಂತೆ ನಡೆಯಬಲ್ಲುವು. ಅವುಗಳಿಗೆ ವಿಶಾಲ ಸ್ವರೂಪವನ್ನು ಕೊಡಬೇಕಾದ ಸಂದರ್ಭದಲ್ಲಿ ಸರಕಾರವು ಕೆಳಗಿನ ವಿಷಯಗಳ ಕಡೆ ಹೆಚ್ಚು ಗಮನಕೊಡಬೇಕಾಗುವುದು. ಇವುಗಳಿಗಾಗಿ ಬೇಕಾಗುವ ಕಾರ್‌ಖಾನೆಗಳು ಇವುಗಳ ಗೃಹೋದ್ಯೋಗಗಳನ್ನು ನಾಶಮಾಡುವಂಥವು ಇರಕೂಡದು. ಗೃಹೋದ್ಯೋಗಗಳಿಂದ ಹುಟ್ಟುವ ಪದಾರ್ಥಗಳನ್ನೇ ಹುಟ್ಟಿಸುವ ದೊಡ್ಡ ಕಾರ್‌ಖಾನೆಗಳಿಗೆ ಪ್ರತಿಬಂಧವಿರತಕ್ಕದ್ದು.

೭ ಬಿಟ್ಟಿಯ ಕಾರ್‌ಖಾನೆಗಳು ನಡೆಯುತ್ತಿದ್ದರೂ ಮೇಲಿನ ಕಟ್ಟುಪಾಡುಗಳಿಗೆ ಒಳಪಟ್ಟೇ ನಡೆಯಬೇಕು.

೫ ಹಾನಿಕರ ಉದ್ಯೋಗಗಳು

೧ ಜನತೆಯ ನೀತಿಯನ್ನೂ ಆರೋಗ್ಯವನ್ನೂ ಕೆಡಿಸುವಂಥ ಹೆಂಡ, ಅಫು, ಭಂಗಿ, ಗಾಂಜಿ, ಹೊಗೆ-ಸೊಪ್ಪು, ಶಸ್ತ್ರ, ಮದ್ದು-ಗುಂಡು, ಮುಂತಾದ ಉದ್ಯೋಗಗಳನ್ನು ಸ್ವತಂತ್ರನಾಗಿ ಮಾಡಲು ಸರಕಾರವು ಅಪ್ಪಣೆ ಕೊಡಕೂಡದು; ಕೊಟ್ಟರೂ ತನ್ನ ಕಟ್ಟಪ್ಪಣೆಗೆ ಒಳಪಟ್ಟೇ ಮಾಡಲು ಆಸ್ಪದ ಕೊಡತಕ್ಕದ್ದು.

೨ ಈ ಉದ್ಯೋಗಗಳನ್ನು ನಡೆಸುವಾಗ ಸರಕಾರದ ಧೋರಣೆ ಉತ್ಪನ್ನದ ಕಡೆಗೆ ಇರತಕ್ಕದ್ದಲ್ಲ; ಆರೋಗ್ಯ ಮುಂತಾದುವುಗಳ ದೃಷ್ಟಿಯಿಂದ ಎಷ್ಟು ಅವಶ್ಯವೊ ಅಷ್ಟೇ ಪ್ರಮಾಣದಲ್ಲಿ ಅವನ್ನು ಉತ್ಪಾದಿಸುವ ಮತ್ತು ಜನತೆಗೆ ಮುಟ್ಟಿಸುವ ಕಡೆಗೆ ಇರತಕ್ಕದ್ದು.

೩ ಇಂಥ ಪದಾರ್ಥಗಳ ಅಂತರ್-ರಾಷ್ಟ್ರೀಯ ವ್ಯಾಪಾರವನ್ನು ಪರದೇಶೀ ರಾಜ್ಯಗಳ ಇಚ್ಛೆಯಂತೆಯೆ ಮಾಡಗೊಡತಕ್ಕದ್ದು.

೬ ಉಪಯುಕ್ತ ಉದ್ಯೋಗಗಳು

೧ ಸಾಮಾಜಿಕ ಜೀವನಕ್ಕೆ ಅಗತ್ಯವಾದ ಈ ಉದ್ಯೋಗಗಳನ್ನಲ್ಲದೆ ಇನ್ನೂ ಎಷ್ಟೋ ಕೆಲಸಗಳನ್ನು ಮಾಡುವವರೂ ಬೇಕಾಗುವರು. ಉದಾಹರಣೆಗೆ: ಶಿಕ್ಷಕರು, ಸೈನಿಕರು, ವಕೀಲರು, ನ್ಯಾಯಾಧೀಶರು, ಅಧಿಕಾರಿಗಳು, ಡಾಕ್ಟರರು, ಅಂಗಡಿಕಾರರು, ಸ್ವಚ್ಛತೆ ಇಡುವವರು – ಭಂಗೀ ಮೊದಲಾದವರು – ಕಾರ್‌ಕೂನರು ಇತ್ಯಾದಿ.

೨ ಈ ಉದ್ಯೋಗಿಗಳು ಯಾವುದೇ ಉಪಭೋಗ್ಯ ವಸ್ತುವನ್ನು ಪ್ರತ್ಯಕ್ಷವಾಗಿ ಉತ್ಪಾದಿಸದಿದ್ದರೂ, ಅಪ್ರತ್ಯಕ್ಷವಾಗಿ ಪದಾರ್ಥಗಳನ್ನು ತಯಾರಿಸುವುದಕ್ಕೂ, ಭೋಗ್ಯ ಹಾಗೂ ಅನರ್ಥಕಾರಕ ಪದಾರ್ಥಗಳ ಯೋಗ್ಯ ವ್ಯವಸ್ಥೆಗೂ ಬೇಕಾಗುವರು.

೩ ಈ ಉದ್ಯೋಗಸ್ಥರನ್ನು ಸಲಹುವುದಕ್ಕಾಗಿ ಸಮಾಜವು ಮಾಡುವ ವೆಚ್ಚಕ್ಕೆ ವ್ಯವಸ್ಥಾ-ವೆಚ್ಚವೆನ್ನಬಹುದು. ಆದ್ದರಿಂದ ಈ ಉದ್ಯೋಗಿಗಳ ಸಂಖ್ಯೆಯೂ ಅವರಿಗೋಸ್ಕರ ಮಾಡುವ ವ್ಯವಸ್ಥಾ-ವೆಚ್ಚವೂ ಜನ-ಸಂಖ್ಯೆಗೆ ಮತ್ತು ಜನರ ಸಮೃದ್ಧಿಗೆ ಅನುಗುಣವಾಗಿರಬೇಕೇ ಹೊರತು ಇದನ್ನು ಮೀರಕೂಡದು.

೪ ಈ ಉದ್ಯೋಗಗಳು ನಡೆಯಬೇಕಾದುದು ಜನಸೇವಾ ದೃಷ್ಟಿಯಿಂದಲೇ ಹೊರತು, ಗಳಿಸಬೇಕು ಶ್ರೀಮಂತನಾಗಬೇಕು ಎಂಬ ದೃಷ್ಟಿಯಿಂದಲ್ಲ. ಈ ವೃತ್ತಿಯವರಿಗೆ ಸಮಾಜದ ಸ್ಥಿತಿಯು ಮತ್ತು ಸಮೃದ್ಧಿಯ ಮರ್ಯಾದೆಯಲ್ಲಿಯೆ ಇದ್ದುಕೊಂಡು ಜೀವನ-ನಿರ್ವಾಹವನ್ನು ಸಾಗಿಸಲು ಬೇಕಾದಷ್ಟು ಸ್ಥಿರವಾದ ಸಂಬಳಕೊಟ್ಟು, ಅವರನ್ನು ನಿಶ್ಚಿಂತರನ್ನಾಗಿ ಮಾಡಬೇಕು. ಈ ಉದ್ಯೋಗಿಗಳು ಇಷ್ಟರಿಂದಲೆ ಸಂತುಷ್ಟರಾಗಿರತಕ್ಕದ್ದು. ಹೀಗೆ ದೊರೆತ ಪರಿಶ್ರಮದ ಫಲವನ್ನು ಪಡೆದ ಮೇಲೆ ಗಳಿಕೆಯ ಇನ್ನಾವ ಉದ್ಯೋಗವನ್ನೂ ಮಾಡದೆ ತಮ್ಮಲ್ಲಿದ್ದ ಜ್ಞಾನದ ಲಾಭವನ್ನು ಜನರಿಗೆ ಆದಷ್ಟು ಹೆಚ್ಚಾಗಿ ಮಾಡಿಕೊಡತಕ್ಕದ್ದು.

೫ ಹೀಗೆ ಒಂದು ಮಿತಿಯಲ್ಲಿದ್ದುಕೊಂಡು ಈ ಉದ್ಯೋಗಗಳನ್ನು ನಡೆಸಿದರೆ ಅದರಿಂದ ಸಮಾಜದ ಸರ್ವೋದಯಕ್ಕೆ ನೆರವು ಸಿಕ್ಕುವುದು. ಭೋಗ್ಯವಲ್ಲದ ಧನ-ಲಾಲಸೆಯೂ ಧನಾರ್ಜನೆಗಾಗಿ ಮಾಡಲ್ಪಡುವ ಕುಟಿಲ ಯುಕ್ತಿಗಳೂ ಇಲ್ಲದಂತಾಗುವವು.

೬ ಧನ ಸಂಗ್ರಹದ ಇಚ್ಛೆ ಇರುವವರಿಗೆ, ಭೂಮಿ ಮನೆ ಆಭರಣಗಳು ಬೇಕೆನ್ನುವವರಿಗೆ, ಸಂತತಿ ಹೆಚ್ಚಿಸಬೇಕೆನ್ನುವವರಿಗೆ ಉದ್ಯೋಗಗಳೇ ಅವರ ಮನಸ್ಸನ್ನೆಳೆಯುವ ಆಕರ್ಷಣ-ದ್ವಾರಗಳಾಗಿರಬೇಕು ಅವರಿಗೆ ಉದ್ಯೋಗಗಳಲ್ಲಿ ಆದಷ್ಟು ಹೆಚ್ಚು ಅನುಕೂಲತೆಗಳು ಇರತಕ್ಕದ್ದು. ಆದರೆ ಉದ್ಯೋಗಿಗಳಿಗೆ, ಈ ಪ್ರಕರಣದಲ್ಲಿ ವರ್ಣಿಸಲ್ಪಟ್ಟ ಉದ್ಯೋಗಗಳ ಮೂಲಕ ಇಂತಿಷ್ಟೇ ಸಂಪಾದನೆಯಾಗಬೇಕೆಂದು ನಿರ್ಬಂಧವಿರಬೇಕು.

೭ ಯಾರು ಮಿತಿಯನ್ನು ಮೀರದೆ ಸ್ಥಿರವಾದ ನಿಶ್ಚಿಂತ ನಿರ್ವಾಹವನ್ನು ದೊರಕಿಸಬೇಕೆನ್ನುವರೊ, ಜನ-ಸೇವೆಯನ್ನು ಮಾಡಬೇಕೆನ್ನುವರೊ, ಅವರಿಗೇ ಈ ಉದ್ಯೋಗಗಳು ಮೀಸಲಾಗಿರಬೇಕು. ಹೀಗೆ ಮಾಡುವುದರಿಂದ ಈ ಉದ್ಯೋಗಗಳ ಪ್ರವೇಶಕ್ಕೆ ಬೇಕಾಗುವ ಜ್ಞಾನವೂ ಚರಿತ್ರ-ಬಲದ ಉಚ್ಚ ಧೋರಣೆಯೂ ಉಂಟಾಗಬಲ್ಲುದು.

೭ ಲಲಿತ ಕಲೆಗಳು

೧ ಸಂಗೀತ, ಕಥೆ, ವಾರ್ತೆ, ಚಿತ್ರಕಲೆ, ನೃತ್ಯ, ನಾಟಕ, ಸಿನೇಮಾ ಮುಂತಾದ ಲಲಿತ ಕಲೆಗಳು ಮಿತವಾಗಿದ್ದರೆ ಅವು ಜನರ ನಿರ್ದೋಷಿಯಾದ ಮನರಂಜನೆಗೂ ಜ್ಞಾನಪ್ರಾಪ್ತಿಗೂ ಭಾವನೆಯ ಬೆಳವಣಿಗೆಗೂ ಸಾಧನಗಳಾಗುವವು. ಮೇರೆ ಮೀರಿದರೆ ಸರಾಯಿ, ಹೆಂಡ, ಅಫೀಮು ಮುಂತಾದುವುಗಳಂತೆ ಇವೂ ಹಾನಿಕರ ಚಟಗಳಾಗುವವು.

೨ ಸಾಮಾನ್ಯವಾಗಿ ಇಂಥ ಕಲೆಗಳನ್ನು ಉಪಜೀವನದ ಉದ್ಯೋಗಗಳನ್ನಾಗಿ ಯಾರೂ ಮಾಡಿಕೊಳ್ಳತಕ್ಕದ್ದಲ್ಲ. ಪ್ರತಿಯೊಬ್ಬ ಮನುಷ್ಯನು ತನ್ನ ಉಪಜೀವನದ ಉದ್ಯೋಗವನ್ನು ಮಾಡಿದ ಬಳಿಕ ಅವನಿಗೆ ಯಾವುದೊಂದು ಕಲೆಯಲ್ಲಿ ರುಚಿಯು ಹುಟ್ಟುವಂತೆ ಶಿಕ್ಷಣದ ಧೋರಣವಿರಬೇಕು.

೩ ಮನರಂಜನೆಗೋಸ್ಕರ ಇಂಥ ಕಲೆಗಳ ಪ್ರದರ್ಶನವನ್ನು ಜನರು ತಾವೇ ಉತ್ಸಾಹದಿಂದಲೆ ಏರ್ಪಡಿಸಿ ಮಂಡಳಗಳ ಮೂಲಕ ಜರುಗಿಸಿಕೊಳ್ಳತಕ್ಕದ್ದು.

೪ ಇಂಥ ಕಲೆಗಳ ರುಚಿ ಮೇರೆ ಮೀರದಂತೆ, ಅನೀತಿಯ ಕಡೆಗೆ ಒಲಿಯದಂತೆ, ಆದರೆ ಹಾನಿಗೊಳಗಾಗದಂತೆ ಪ್ರದರ್ಶನ, ಕಚೇರಿ ಮುಂತಾದುವುಗಳ ಮೇಲೆ ಕಡುತರವಾದ ದೃಷ್ಟಿಯೂ ಮೇಲ್ವಿಚಾರಣೆಯೂ ಇರತಕ್ಕದ್ದು.

೫ ಈ ಕಲೆಗಳ ಬಗ್ಗೆ ಸಾಮಾನ್ಯ ರೀತಿ-ನೀತಿಯನ್ನು ವಿವರಿಸಿದ್ದಾಯಿತು. ಇಂತಹ ಕಲೆಗಳಿಂದ ನಿರ್ವಾಹ ಸಾಗಿಸಕೂಡದೆಂದು ನಿರ್ಬಂಧ ಹಾಕಿದರೆ ಅದರಿಂದ ಹಿತವಾಗದಿರುವ ಸಂಭವವುಂಟು. ಅಲ್ಲದೆ ಆ ನಿರ್ಬಂಧವು ವ್ಯವಹಾರದಲ್ಲಿ ಉಳಿಯುವುದು ಕಠಿಣ. ಆದ್ದರಿಂದ ಇಂಥ ಕಲೆಗಳ ನಿರ್ದೋಷ, ಜ್ಞಾನಪ್ರದ, ಮತ್ತು ಸದ್ಭಾವಪೋಷಕ ಉಪಯೋಗವು ಜನರಿಗೆ ದೊರೆಯುವಂತೆ ವ್ಯವಸ್ಥೆ ಮಾಡುವುದೂ ಹಿಂದಿನ ಪ್ರಕರಣದಲ್ಲಿ ಉಪಯುಕ್ತ ಉದ್ಯೋಗಗಳ ವಿಷಯದಲ್ಲಿ ಸೂಚಿಸಿದ ಪ್ರಕಾರ ಸಮೃದ್ಧಿಯ ಮೇರೆಯನ್ನಿಟ್ಟುಕೊಂಡು ಈ ಕಲೆಗಳ ಉಪಾಸನೆ ಮಾಡುವವರಿಗೆ ನಿಶ್ಚಿತ ಸಂಬಳ ಕೊಡುವುದೂ ಈ ಕಲೆಗಳ ಅಭ್ಯಾಸಕ್ಕಾಗಿ ಸಚ್ಚರಿತ್ರ ಮನುಷ್ಯರನ್ನು ದೊರಕಿಸುವುದೂ ಗ್ರಾಮಪಂಚಾಯತಿಗಳ ಒಂದು ಕರ್ತವ್ಯವಾಗಬೇಕು.

೬ ಸ್ವತಂತ್ರವಾಗಿ ಈ ಉದ್ಯೋಗಗಳನ್ನು ಮಾಡಬೇಕೆನ್ನುವವರ ಮೇಲೆ ನೀತಿಯ ನಿರ್ಬಂಧನೆ ಇರಬೇಕು; ಅನುಮತಿ, ವಿಶಿಷ್ಟ ಕರ ಮುಂತಾದ ಬಂಧನಗಳೂ ಇರತಕ್ಕದ್ದು.

೭ ಇಂಥ ಕಲೆಗಳ ಯೋಗ್ಯ ಪೋಷಣೆಗಾಗಿಯೂ ಅಭಿವೃದ್ಧಿಗಾಗಿಯೂ ಸರಕಾರವು ಅನುಕೂಲತೆಗಳನ್ನೂ ಯೋಗ್ಯ ಕಲಾವಿದರಿಗೆ ಉತ್ತೇಜನವನ್ನೂ ಒದಗಿಸಿಕೊಡಬಹುದು. ಇದರಲ್ಲಿ ತಾರತಮ್ಯದ ಭಂಗವಾಗದಿದ್ದರೆ ಹೀಗೆ ಮಾಡುವುದು ಯೋಗ್ಯವೆನಿಸುವುದು.

೮ ತನ್ನ ಉದ್ಯೋಗದಲ್ಲಿ ಕಲಾ-ಪ್ರವೃತ್ತಿಯನ್ನು ತೋರಿಸುವ ಪ್ರತಿಯೊಬ್ಬ ಶಿಲ್ಪಿಯೂ ಉತ್ತೇಜನಕ್ಕೆ ಪಾತ್ರನು. ಈ ದೃಷ್ಟಿಯನ್ನಿಟ್ಟುಕೊಂಡು ಕಲೆಯ ಪೋಷಣೆಯ ಕಡೆಗೆ ಸರಕಾರವು ಮೊದಲು ಗಮನಕೊಡುವುದು ಉಚಿತವಾದದ್ದು.

ಅಷ್ಟಮ ಖಂಡ

ಗೋಪಾಲನೆ

—•—

೧ ಧಾರ್ಮಿಕ ದೃಷ್ಟಿ

೧ ಹಿಂದೂ ಧರ್ಮದಲ್ಲಿ ಗೋಪಾಲನೆಗೆ ಧಾರ್ಮಿಕ ಮಹತ್ವವು ಬಂದಿದೆ, ಗೋವಧೆ ಮಹಾ ಪಾತಕವೆನಿಸಿದೆ, ಗೋಪಾಲನೆಯ ಭಾರ ಅರಸರ ಮೇಲೆ ಮತ್ತು ವೈಶ್ಯರ ಮೇಲೆಯೆ ಹೊರಿಸಲ್ಪಟ್ಟಿದೆ. ಆದ್ದರಿಂದ ಈ ಕಾರ್ಯಕ್ಕಾಗಿ ಜನರಿಂದ ಲಕ್ಷಾಂತರ ರೂಪಾಯಿಗಳು ದಾನವೆಂದು ದೊರೆಯುತ್ತವೆ. ಆದರೂ ಕಾರ್ಯವಾಹಕರಲ್ಲಿ ಯೋಗ್ಯ ದೃಷ್ಟಿ ಇಲ್ಲದ್ದರಿಂದ ಗೋ-ಭಕ್ಷಕ ದೇಶಗಳಿಗಿಂತಲೂ ಹಿಂದೂ ದೇಶದಲ್ಲಿ ದನಗಳ ಸ್ಥಿತಿ ಕರುಣಾಜನಕವಾಗಿದೆ.

೨ ಗೋಪಾಲನೆಯ ವಿಷಯದಲ್ಲಿರುವ ನಮ್ಮ ಧಾರ್ಮಿಕ ದೃಷ್ಟಿಯಲ್ಲಿ ಕೆಳಗಿನಂತೆ ಮಾರ್ಪಾಡೂ ವಿಕಾಸವೂ ಅಗತ್ಯವಿದೆ:

(ಅ) ಅಂಗಹೀನ, ನಿರ್ಬಲ ದನಗಳನ್ನು ಪಾಲಿಸುವುದಷ್ಟೇ ಗೋಪಾಲನೆಯ ಕಾರ್ಯಕ್ಷೇತ್ರವಲ್ಲ. ಹಸುವಿನ, ಎತ್ತಿನ ಜಾತಿಯಲ್ಲಿ ಸುಧಾರಣೆಯನ್ನು ಮಾಡಬೇಕು. ಹಸುಗಳು ಹೆಚ್ಚು ಹಾಲು ಕರೆಯುವಂಥವೂ ಸತ್ವವುಳ್ಳವೂ ಆಗುವಂತೆ ಮಾಡಬೇಕು. ಎತ್ತಿನ ಜಾತಿಯಲ್ಲಂತೂ ಒಳ್ಳೇ ಸುಧಾರಣೆ ಆಗಬೇಕು. ಇವು ಕೂಡ ಗೋಪಾಲನ-ಧರ್ಮದ ಮುಖ್ಯ ಅಂಗಗಳು.

(ಆ) ಆದ್ದರಿಂದ ದನಗಳ ದೊಡ್ಡಿಗಳು ಜನರಿಗೆ ವಸ್ತುಪಾಠವನ್ನು ಕಲಿಸುವ ಆದರ್ಶ ಗೋಶಾಲೆಗಳಾಗಿರಬೇಕು. ದನಗಳ ಗೋದಲೆ, ಹುಲ್ಲು ಹಾಕುವ ದಾಣಿ ಕಟ್ಟುವ ಪದ್ಧತಿ, ಇವುಗಳಿಂದಾಗುವ ಪರಿಣಾಮವನ್ನು ತೋರಿಸುವ ಪತ್ರಿಕೆ, ಇವೆಲ್ಲವುಗಳಲ್ಲಿ ಅಚ್ಚುಕಟ್ಟೂ ಅಭ್ಯಾಸ-ದೃಷ್ಟಿಯೂ ಇರಬೇಕು.

(ಇ) ಈ ದೊಡ್ಡಿಗಳು ಎತ್ತಿನ ಸಂತತಿಯನ್ನು ಸುಧಾರಿಸುವುದರಲ್ಲಿ ಗ್ರಾಮದ ಜನರಿಗೆ ಲಾಭಕಾರಿಯಾಗುವ ರೀತಿಯನ್ನೇ ಉಪಯೋಗಿಸಿ ಹೋರಿಗಳನ್ನು ಪಾಲಿಸತಕ್ಕದ್ದು.

(ಈ) ದನಗಳ ದೊಡ್ಡಿಗಳಲ್ಲಿ ಚರ್ಮಾಲಯ ವಿಭಾಗವು ಕೂಡ ಇರ

ತಕ್ಕದ್ದು. ಸತ್ತ ದನಗಳ ಚರ್ಮದ ಉದ್ಯೋಗವನ್ನು ತಿರಸ್ಕಾರದ ದೃಷ್ಟಿಯಿಂದ ನೋಡಬಾರದು ಮಾತ್ರವಲ್ಲ, ಆ ಉದ್ಯೋಗವನ್ನು ಕರ್ತವ್ಯ-ದೃಷ್ಟಿಯಿಂದ ಮಾಡತಕ್ಕದ್ದು. ತನ್ನ ಸತ್ತ ದನಗಳ ಚರ್ಮವನ್ನೂ ಎಲುಬು ಮಾಂಸಗಳನ್ನೂ ಉಪಯೋಗಿಸಲು ಕೊಡದ ಒಡೆಯನು ದನಗಳ ಕೊಲೆಯ ಉತ್ತೇಜನಕ್ಕೆ ಕಾರಣನಾಗುತ್ತಾನೆಂದು ತಿಳಿಯತಕ್ಕದ್ದು. ಜೀವ-ದಯಾ ಸಂಘಗಳು ಸತ್ತ ದನಗಳ ಎಲುಬು ಮಾಂಸ ಚರ್ಮವನ್ನೇ ಬಳಸುತ್ತೇವೆಂದು ಹಟಹಿಡಿಯತಕ್ಕದ್ದು.*

(ಉ) ಬದುಕಿದ ದನಗಳಿಗಿಂತಲೂ ಸತ್ತ ದನಗಳ ಬೆಲೆ ಹೆಚ್ಚೆಂದು ತಿಳಿಯುವುದು ಧಾರ್ಮಿಕ ದೃಷ್ಟಿಯಿಂದ ಭಯಾನಕ. ಆದ್ದರಿಂದ ಬದುಕಿದ ದನಗಳ ಬೆಲೆಯ ಮಹತ್ವವನ್ನು ಹೆಚ್ಚಿಸಲು ಯತ್ನಿಸುವುದು ಧಾರ್ಮಿಕ ಕರ್ತವ್ಯವೆಂದು ತಿಳಿಯತಕ್ಕದ್ದು.

(ಊ) ಹೋರಿಗಳ ಕಸಿ ಮಾಡುವುದು ಅಗತ್ಯ. ದನಗಳ ದೊಡ್ಡಿಗಳು, ನೋವಾಗದಂತೆ ಕಸಿ ಮಾಡುವ ಶಾಸ್ತ್ರೀಯ ಪದ್ಧತಿಯನ್ನು ಚನ್ನಾಗಿ ಅರಿತುಕೊಂಡು ಆ ಮೇಲೆ ಅದರ ಯೋಜನೆಯನ್ನು ಕೈಕೊಳ್ಳತಕ್ಕದ್ದು.

(ಎ) ಪ್ರಾಣಿಯು ಅತ್ಯಂತ ಕಷ್ಟದಲ್ಲಿ ತೊಳಲಾಡುತ್ತಿದ್ದು ಅದು ಅಂಗಹೀನವಾಗಿ ಕೂಡ ಬದುಕುವ ಆಶೆ ಇಲ್ಲದಿದ್ದಾಗ, ಮತ್ತು ಅದಕ್ಕೆ ವೇದನೆ ಹೆಚ್ಚಾಗುತ್ತ ಹೋಗುವಾಗ, ಅದರ ಇಹಲೋಕ-ಯಾತ್ರೆಯನ್ನು ಮುಗಿಸಲು ನೋವಾಗದ ಉಪಾಯವನ್ನು ಕೈಕೊಳ್ಳುವುದು ದಯಾಧರ್ಮವೆಂದು ಒಪ್ಪತಕ್ಕದ್ದು.

೨ ಅನ್ಯ ಪ್ರಾಣಿಗಳ ಪಾಲನೆ

೧ ಗೋ ಎಂಬ ಶಬ್ದದಲ್ಲಿ ಪ್ರಾಣಿಮಾತ್ರವೆಲ್ಲವೂ ಅಡಕವಾಗಿರುವುದೆಂಬುದನ್ನು ಮರೆಯತಕ್ಕದ್ದಲ್ಲ. ಅಹಿಂಸೆಯ ದೃಷ್ಟಿಯಿಂದ ವ್ಯವಹಾರದಲ್ಲಿ ಅದನ್ನು ಸ್ವಲ್ಪ ವಿವೇಕದಿಂದ ಉಪಯೋಗಿಸುವುದು ಅವಶ್ಯ. ಪ್ರಾಣಿಗಳನ್ನು ವಿವೇಕ

---

* ಎಲುಬು ಮಾಂಸಗಳ ಬಳಕೆ ಎಂದರೆ ತಿನ್ನುವುದೆಂದು ಅರ್ಥವಲ್ಲ. ಅವುಗಳಿಂದ ಗೊಬ್ಬರವನ್ನೂ ಇತರ ಉಪಯುಕ್ತ ವಸ್ತುಗಳನ್ನೂ ಮಾಡಿಕೊಳ್ಳತಕ್ಕದ್ದು ಎಂದು ಸೂಚಿಸಬಯಸುತ್ತೇನೆ.

ವಿಲ್ಲದೆ ಸಾಕುವುದರ ಪರಿಣಾಮ ಹಿಂಸೆಗೆ ಉತ್ತೇಜನವನ್ನೀಯುತ್ತದೆ.

೨ ಹೀಗೆ ವಿವೇಕವಿಲ್ಲದ್ದರಿಂದ ಎಮ್ಮೆಯ ಹಾಲಿನ, ಮತ್ತು ತುಪ್ಪದ ಉಪಯೋಗವು ಆಕಳು ಮತ್ತು ಎಮ್ಮೆಯ ಹಿಂಸೆಯನ್ನು ಹೆಚ್ಚಿಸಿದೆ. ಇದಕ್ಕೆ ಕಾರಣಗಳು ಇಂತಿವೆ:

(ಅ) ಎಮ್ಮೆಯು ಜವುಳು, ತಂಪು ಪ್ರದೇಶದಲ್ಲಿರತಕ್ಕ ಪ್ರಾಣಿ. ಆದ್ದರಿಂದ ಅದನ್ನು ಉಷ್ಣವಾದ ಒಣ ಪ್ರದೇಶದಲ್ಲಿ ಒಯ್ದಿಟ್ಟುಕೊಂಡರೆ ಕ್ರೂರತನವಾಗುತ್ತದೆ.

(ಆ) ಕೋಣದ ಉಪಯೋಗವೇ ಇಲ್ಲವಾದ್ದರಿಂದ ಅದರ ಕೊಲೆಯಾಗುತ್ತಿದೆ.

(ಇ) ಈಗ ಹೋರಿಗಳ ಸಲುವಾಗಿ ಹಸುವಿನ ಪಾಲನೆಯೂ ಹಾಲಿನ ಸಲುವಾಗಿ ಎಮ್ಮೆಯ ಪಾಲನೆಯೂ ಆಗುತ್ತಿದೆ. ಇದರಿಂದ ಎಮ್ಮೆಯಿಂದ ಆಗುವಷ್ಟು ಲಾಭ ಹಸುವಿನಿಂದ ಆಗುವುದಿಲ್ಲ. ಆದ್ದರಿಂದ ಜನರು, ಆಕಳು ಹೆಚ್ಚಿಗೆ ಹಾಲು ಕೊಡುವಂತೆ ಮಾಡಲು ಪ್ರಯತ್ನಿಸುವುದಿಲ್ಲ. ಇದರಿಂದ ಅದರ ಕೊಲೆಗೆ ಉತ್ತೇಜನ ದೊರೆಯುತ್ತದೆ.

೩ ಆದ್ದರಿಂದ ಎಮ್ಮೆಯ ಹಾಲು ಬೆಣ್ಣೆಯನ್ನು ಬಿಡುವುದರ ಮೂಲಕ ಅದರ ಪಾಲನೆಯನ್ನು ನಿಲ್ಲಿಸುವುದು ಯೋಗ್ಯ. ಇದರ ಅರ್ಥ, ಎಮ್ಮೆಯನ್ನು ಕೊಲ್ಲಿಸಬೇಕೆಂದಲ್ಲ. ಆದರೆ ಅದರ ಬೆಳವಣಿಗೆಗೆ ಉತ್ತೇಜನ ಕೊಡಲಾಗದು.

೪ ಹೀಗೆಯೇ ಯೋಚಿಸಿದರೆ ಬೀದಿಯಲ್ಲಿ ಅಲೆದಾಡುವ ನಾಯಿಗಳಿಗೆ ಆಹಾರ ಹಾಕುವುದೂ ಧರ್ಮವೆನಿಸುವುದಿಲ್ಲ. ನಾಯಿಯನ್ನು ಪ್ರೀತಿಸುವವರು ಅದನ್ನು ಸರಿಯಾಗಿ ಸಾಕಬೇಕು, ಅದರ ಸರ್ವ ವಿಧದ ಆರೈಕೆಯನ್ನೂ ಮಾಡಬೇಕು. ಆದರೆ ಅವುಗಳಿಗೆ ಆಹಾರವನ್ನು ಹಾಕಿ ಬೀದಿಯಲ್ಲಿ ಅಲೆದಾಡಗೊಡುವುದರಿಂದ ಅವುಗಳನ್ನು ಪೀಡಿಸಿದಂತಾಗುವುದು. ಇದರಿಂದ ಅವುಗಳ ಅಧೋಗತಿಯೂ ಜನರಿಗೆ ಅನಾನುಕೂಲತೆಯೂ ತಪ್ಪಿದ್ದಲ್ಲ. ಅಲ್ಲದೆ ಅಂಥ ನಾಯಿಗಳಿಗೆ ಹುಚ್ಚು ಹಿಡಿಯುವ ಸಾಧ್ಯತೆಯೂ ಉಂಟು.

೫ ಕೋತಿ, ಪಾರಿವಾಳ, ಹುಳು ಮುಂತಾದ ಪ್ರಾಣಿ-ಜಂತುಗಳಿಗೆ ಆಹಾರ ಹಾಕುವುದೂ ಧರ್ಮವೆನಿಸುವುದಿಲ್ಲ. ಯಾವ ಪ್ರಾಣಿಗಳ ಜೀವನವು ಮನುಷ್ಯನನ್ನು ಅವಲಂಬಿಸಿಕೊಂಡಿರುವುದಿಲ್ಲವೊ, ಯಾವ ಪ್ರಾಣಿಗಳ ಉಪಯೋಗವೂ ಮನುಷ್ಯನಿಗೆ ಇರುವುದಿಲ್ಲವೊ, ಅಂಥ ಪ್ರಾಣಿಗಳನ್ನು ಸಾಕುವುದು

ತರವಲ್ಲ. ಇಂಥ ಪ್ರಾಣಿಗಳನ್ನು ಸಾಕುವುದರಿಂದ ಮನುಷ್ಯನಿಗೆ ಹೆಚ್ಚು ತೊಂದರೆಯಾಗುವುದಲ್ಲದೆ ಆ ಪ್ರಾಣಿಗಳ ಹಿಂಸೆಯೂ ಹೆಚ್ಚಾಗುವುದು.

೬ ಪ್ರಾಣಿಗಳ ಅಹಿಂಸೆಯನ್ನು ಕುರಿತು ಜೈನರು ಮತ್ತು ವೈಷ್ಣವರು ಯಾವ ದೃಷ್ಟಿಯನ್ನಿಟ್ಟುಕೊಂಡಿದ್ದಾರೊ ಆ ದೃಷ್ಟಿಯನ್ನು ಇಟ್ಟುಕೊಳ್ಳದವರಿಂದ ಇಂಥ ಪ್ರಾಣಿಗಳ ಉಪದ್ರವವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಆಗಾಗ ಇವುಗಳ ಕೊಲೆಯಾದರೆ ಅದರಲ್ಲಿ ಆಶ್ಚರ್ಯದ ಸಂಗತಿಯೇನೂ ಇರುವುದಿಲ್ಲ. ಇಂಥ ಪ್ರಾಣಿಗಳಿಗೆ ಆಹಾರ ಹಾಕುವುದು ಧರ್ಮವೆಂದು ತಿಳಿಯುವ ವರ್ಗವೇ ಈ ಪ್ರಾಣಿಗಳ ವಧೆಗೆ ಹೊಣೆಯಾಗಿರುವುದು. ಇದರಿಂದ ಆ ವರ್ಗವು ಕುಪಿತವಾಗುವುದು ಯೋಗ್ಯವಲ್ಲ.

೩ ಪ್ರಾಣಿಗಳ ಬಗೆಗೆ ಕ್ರೂರತನ

೧ ಪ್ರಾಣಿಯನ್ನು ಒಂದೇ ಏಟಿನಿಂದ ಕೊಲ್ಲುವುದಕ್ಕಿಂತ ಅದರೊಡನೆ ಕ್ರೂರತನದಿಂದ ವರ್ತಿಸುವುದು ಕಡಮೆ ತರದ ಹಿಂಸೆಯಲ್ಲ. ಇಂತಹ ಹಿಂಸೆಯು ಹಿಂದೂ ಜನರಲ್ಲಿ ಚನ್ನಾಗಿ ಮನೆಮಾಡಿಕೊಂಡಿದೆ.

೨ ಫೂಂಕಾ ಎಂಬ ಕ್ರಿಯೆ, ಕಸಿಮಾಡಿಸುವುದು, ಅರೆಹೊಟ್ಟೆ ಹಾಕುವುದು, ಬಾರುಕೋಲಿನಿಂದ ಹೊಡೆಯುವುದು, ಮಿತಿಮೀರಿ ಭಾರಹೇರುವುದು, ಬಾಲ ಮುರಿಯುವುದು, ಆಹಾರಕ್ಕಾಗಿ ಕೊರಗಿಸುವುದು, ಗಾಯವಾದ ಅಂಗಗಳ ಶುಶ್ರೂಷೆ ಮಾಡದಿರುವುದು, ಮೂಗುದಾಣ ಹಾಕುವುದು ಮುಂತಾದ ರೀತಿಗಳು ಅಮಾನುಷವೂ ಕ್ರೂರವೂ ಇರುವವು.

೩ ಇವುಗಳ ಪರಿಣಾಮವು ಭಯಾನಕವಾಗಿದೆ. ಹಿಂದುಸ್ತಾನದಲ್ಲಿ ಆಕಳು, ಎತ್ತು, ಎಮ್ಮೆ, ಕುದುರೆ, ಕತ್ತೆ, ಬೆಕ್ಕು, ನಾಯಿ ಮುಂತಾದ ಪ್ರಾಣಿಗಳು ತೀರ ಕಂಗೆಡುವ ಸ್ಥಿತಿಯಲ್ಲಿ ಬಾಳುತ್ತಿವೆ.

೪ ಗೋವಧೆ

೧ ಹಿಂದೂ ಜನರ ಧಾರ್ಮಿಕ ದೃಷ್ಟಿಯನ್ನು ಸಂತೋಷಪಡಿಸುವುದಕ್ಕಾಗಿ ಮಾತ್ರವಲ್ಲ, ಹಿಂದುಸ್ತಾನದ ಆರ್ಥಿಕ ದೃಷ್ಟಿಯಿಂದಲೂ ಗೋವಧೆಗೆ ನಿರ್ಬಂಧವಿರತಕ್ಕದ್ದು.

೨ ಆದರೆ ಹೀಗಾಗದಿರುವ ವರೆಗೆ ಹಿಂದೂಗಳು ಧೈರ್ಯದಿಂದ ಇದ್ದು

ಕೊಂಡು ತಿಳಿಹೇಳುವಿಕೆಯಿಂದಲೂ ಸೇವೆಯಿಂದಲೂ ಗೋವಧೆಯನ್ನು ನಿಲ್ಲಿಸಲು ಯತ್ನಿಸತಕ್ಕದ್ದು.

೩ ಗೋವಧೆಯನ್ನು ನಿಲ್ಲಿಸಲು ಮನುಷ್ಯ (ಮುಸಲ್ಮಾನ್) ವಧೆಯನ್ನು ಮಾಡುವುದು ಅಧರ್ಮ.

೪ ಹಸುವಿನ ಬಲಿಕೊಡುವುದು ಕರ್ತವ್ಯಕರ್ಮವಲ್ಲವೆಂದು ತಿಳಿದುಕೊಂಡು ಮುಸಲ್ಮಾನರು ಅದನ್ನು ನಿಲ್ಲಿಸುವುದು ಪರಮ ಸತ್ಕೃತ್ಯವೆನ್ನಿಸುವುದು. ಕನಿಷ್ಠ ಪಕ್ಷ ಹಿಂದೂಗಳ ಅಂತಃಕರಣಕ್ಕೆ ನೋವಾಗಬಾರದೆಂದು ಮರೆಯಲ್ಲಿ ಇಂಥ ವಧೆಯನ್ನು ಮಾಡುವುದು ಇದಕ್ಕಿಂತಲೂ ಕಡಮೆ ತರಗತಿಯ ಸತ್‌ಕೃತ್ಯವೆನಿಸುವುದು.

೫ ಹಿಂದೂ ಜನರ ಅಂತಃಕರಣವು ನೋಯುವ ಹಾಗೆ ಬಹಿರಂಗದಲ್ಲಿ ಗೋವಧೆಯನ್ನು ಮಾಡುವವರೂ ವಧ್ಯಗೋವನ್ನು ಮೆರೆಸುವವರೂ ಧರ್ಮಕಾರ್ಯವನ್ನು ಮಾಡಿದಂತಾಗುವುದಿಲ್ಲ. ಇಂಥ ಕೃತ್ಯದ ಆಚರಣೆಗೆ ನಿರ್ಬಂಧವಿರತಕ್ಕದ್ದು.

೬ ಯಾವುದೊಂದು ಹಬ್ಬದಲ್ಲಿ ಗೋ-ಬಲಿಯನ್ನು ಕೊಡುವ ಮುಸಲ್ಮಾನರಿಗಿಂತ, ತಿನ್ನುವುದಕ್ಕಾಗಿ ದಿನವೂ ಗೋವಧೆಯನ್ನು ಮಾಡಿಸುವಂಥ ಇಂಗ್ಲಿಷ್ ರಾಜ್ಯವು ಹಿಂದೂಗಳಿಗೂ ಹಿಂದುಸ್ತಾನಕ್ಕೂ ಹೆಚ್ಚಿನ ಅಪಕಾರವನ್ನು ಮಾಡುತ್ತದೆ.

೫ ಸತ್ತ ದನಗಳು

೧ ತಾವು ಸಾಕಿದ ದನಗಳು ಸತ್ತ ಬಳಿಕ ಅವುಗಳ ಎಲುಬು, ಮಾಂಸ, ಮತ್ತು ಚರ್ಮವನ್ನು ಉಪಯೋಗಿಸುವುದರಲ್ಲಿ ಉದಾರತೆಯಿಲ್ಲವೆಂದು ಎಷ್ಟೋ ಜನಗಳ ಭಾವನೆಯಾಗಿದೆ. ಆದ್ದರಿಂದಲೆ ದನದ ಯಾವ ಅಂಗವೂ ಉಪಯೋಗಿಸಲ್ಪಡುತ್ತಿರುವುದಿಲ್ಲ. ಮಾದಿಗರು ಇವುಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುತ್ತಿರುವುದಿಲ್ಲ. ಮಾದಿಗರು ಸತ್ತ ದನಗಳ ಮಾಂಸವನ್ನು ತಿನ್ನುತ್ತಾರೆ. ಆದರೆ ಅವನ್ನು ದರದರ ಎಳೆಯುತ್ತ ಒಯ್ದು ಚರ್ಮವನ್ನು ಅನುಪಯುಕ್ತ ಮಾಡಿಬಿಡುತ್ತಾರೆ. ಅಲ್ಲದೆ ಎಲುಬುಗಳನ್ನು ಮುರಿದು ಪುಡಿ ಪುಡಿ ಮಾಡಿಬಿಡುತ್ತಾರೆ.

೨ ಈ ಭಾವನೆಯನ್ನು ಬಿಟ್ಟುಬಿಡುವುದು ಅವಶ್ಯ. ತಮ್ಮ ದನಗಳು

ಜೀವಿಸಿರುವ ವರೆಗೆ ಅವನ್ನು ಸರಿಯಾಗಿ ಸಾಕಿ, ಸತ್ತ ಬಳಿಕ ಮರ್ಯಾದೆಯಿಂದ ಹೊತ್ತುಕೊಂಡು ಹೋಗಿ ಯೋಗ್ಯ ಸ್ಥಳದಲ್ಲಿ ಕೊಯ್ಯಿಸತಕ್ಕದ್ದು. ದನಗಳು ಸತ್ತ ಮೇಲೂ ನಿರುಪಯೋಗಿಯಾಗುವುದಿಲ್ಲವೆಂಬುದನ್ನು ತಿಳಿದುಕೊಂಡು, ಅವು ಜೀವಿಸಿರುವಾಗ ಅವುಗಳೊಡನೆ ದಯೆಯಿಂದ ವರ್ತಿಸುವುದಲ್ಲದೆ, ಅವು ಜೀವಿಸಿದ್ದಾಗ ನಾವು ಅವುಗಳ ಉಪಕಾರವನ್ನು ಹೇಗೆ ಪಡೆಯುತ್ತೇವೊ, ಹಾಗೆಯೆ ಸತ್ತ ಮೇಲೂ ಅವುಗಳನ್ನು ಕೃತಜ್ಞತಾ-ಬುದ್ಧಿಯಿಂದ ಉಪಯೋಗಿಸಿಕೊಂಡರೆ ಅದರಲ್ಲಿ ಯಾವ ದೋಷವೂ ಇಲ್ಲ.

೩ ಸತ್ತ ದನಗಳನ್ನು ಉಪಯೋಗಿಸಿಕೊಳ್ಳದಿದ್ದರೆ ಅವು ಆರ್ಥಿಕ-ದೃಷ್ಟಿಯಿಂದ ತುಟ್ಟಿಯಾಗುವವು. ಹಾಗೆ ತುಟ್ಟಿಯಾದರೆ ಯಾರೂ ಅವುಗಳನ್ನು ಸಾಕುವುದಿಲ್ಲ ಮಾತ್ರವಲ್ಲ, ಗೋಪಾಲನೆಯ ಧರ್ಮವನ್ನೂ ಬಿಟ್ಟುಬಿಡುತ್ತಾರೆ.

೪ ಸತ್ತ ದನಗಳನ್ನು ಎಳೆಯುತ್ತ ಒಯ್ಯುವುದು ಸರಿಯಲ್ಲ. ಎಳೆಯುವಾಗ ಅವುಗಳ ಚರ್ಮವು ಕೆಡುವುದಲ್ಲದೆ ಅದಕ್ಕೆ ಯೋಗ್ಯ ಬೆಲೆಯೂ ಸಿಕ್ಕುವುದಿಲ್ಲ. ಇವುಗಳನ್ನು ಬಂಡಿಯಲ್ಲಾಗಲಿ, ಹೊತ್ತುಕೊಂಡಾಗಲಿ ಒಯ್ಯತಕ್ಕದ್ದು.

೫ ಚರ್ಮವನ್ನು ಸರಿಯಾಗಿ ಸುಲಿದುಕೊಳ್ಳತಕ್ಕದ್ದು. ಮಾಂಸ ಎಲುಬುಗಳ ಗೊಬ್ಬರ ಮಾಡಿಕೊಂಡು ಉಪಯೋಗಿಸತಕ್ಕದ್ದು. ಇವುಗಳ ಕರುಳುಗಳಿಂದ ಕೂಡ ಎಷ್ಟೋ ಉಪಯುಕ್ತ ವಸ್ತುಗಳು ಆಗಬಲ್ಲುವು.

೬ ಈ ಉದ್ಯೋಗಕ್ಕೆ ತಕ್ಕಷ್ಟು ಕ್ಷೇತ್ರವಿದೆ. ಇದನ್ನು ಬೇಕಾದಷ್ಟು ಬೆಳೆಸಬಹುದು. ಆದ್ದರಿಂದ ಕಲಿತವರು ಈ ಉದ್ಯೋಗಕ್ಕೆ ಸಂಬಂಧಪಟ್ಟ ವಿದ್ಯಾರ್ಜನೆಯನ್ನು ಮಾಡುವುದು ಅವಶ್ಯ.

ನವಮ ಖಂಡ

ಖಾದಿ

—♦—

೧ ರಾಟೆಯ ಗುಣಗಳು*

೧ ಪೋಷಕ ಉದ್ಯೋಗವೆನಿಸಿದ ರಾಟೆಯಲ್ಲಿರುವ ಗುಣಗಳು ಮತ್ತಾವ ಉದ್ಯೋಗದಲ್ಲೂ ಇರುವುದಿಲ್ಲ. ಈ ಗುಣಗಳು ಸಂಕ್ಷೇಪವಾಗಿ ಇಂತಿರುವವು:

(ಅ) ಈ ಉದ್ಯೋಗವು ಸುಸಾಧ್ಯವೂ ತತ್ಕಾಲ-ಸಾಧ್ಯವೂ ಇರುತ್ತದೆ. ಏಕೆಂದರೆ:

(೧) ಇದಕ್ಕೆ ದೊಡ್ಡ ಉಪಕರಣಗಳೂ ಸಾಧನಗಳೂ ಬೇಕಾಗುವುದಿಲ್ಲ. ಹತ್ತಿಯು ಮನೆಯದು, ಉಪಕರಣಗಳೂ ಮನೆಯವೇ.

(೨) ಇದಕ್ಕೆ ವಿಶೇಷ ಬುದ್ಧಿಯೂ ಕೌಶಲ್ಯವೂ ಬೇಕಾಗುವುದಿಲ್ಲ. ಶುದ್ಧ ಅಶಿಕ್ಷಿತ ಒಕ್ಕಲಿಗನು ಕೂಡ ಇದನ್ನು ಮಾಡಬಲ್ಲನು.

(೩) ಇದಕ್ಕೆ ಹೆಚ್ಚು ಪರಿಶ್ರಮವೂ ಬೇಡ. ಹೆಂಗುಸರು ನೂಲಬಹುದು; ಚಿಕ್ಕ ಮಕ್ಕಳು, ಮುದುಕರು, ಮತ್ತು ಬೇನೆ-ಬೇಸರಿಕೆಯುವರು ಕೂಡ ನೂಲಬಹುದು. ಮತ್ತು

(೪) ಇದು ಅನೇಕ ಶತಕಗಳ ಅನುಭವದಿಂದ ಸಿದ್ಧವಾದ ಕಸುಬು.

(ಆ) ನೂಲುವವರಿಗೆ ಮನೆಯಲ್ಲಿಯೆ ಉದ್ಯೋಗವು ಸಿಕ್ಕಿದಂತಾಗುವುದು. ಅವರ ನೂಲು ಯಾವಾಗಲೂ ವೆಚ್ಚವಾಗುವುದು. ಬಡವರ ಮನೆಯಲ್ಲಿ ನಾಲ್ಕು ಕಾಸು ಉಳಿಯುವುದು.

(ಇ) ಇದಕ್ಕೆ ಮಳೆಗಾಲವೇ ಬೇಕೆಂದಿಲ್ಲ. ಬೇಸಿಗೆಯಲ್ಲೂ ಇದು ಹಸಿದವರ ಹೊಟ್ಟೆಗೆ ತುತ್ತು ಅನ್ನ ಹಾಕುವುದು.

(ಈ) ಇದಕ್ಕೆ ಧರ್ಮದ ನಿಷೇಧವಿಲ್ಲ; ಮತ್ತು ಇದು ಜನರಿಗೆ ರುಚಿಸದ

---

* ೧೯೨೬ನೇ ಅಕ್ಟೋಬರ್ ೩೧ರ "ನವಜೀವನ"ದಲ್ಲಿ ಪ್ರಕಟವಾದ ಗಾಂಧಿಯವರ ಲೇಖವು ಶ್ರೀಯುತ ಗ್ರೇಗ್‌ರ 'ಖಾದಿಯ ವ್ಯಾಪಕ ಅರ್ಥಶಾಸ್ತ್ರ' ಎಂಬ ಪುಸ್ತಕದಲ್ಲಿ ಉದ್ಧೃತವಾಗಿದೆ. ಅದನ್ನು ಇಲ್ಲಿ ತೆಗೆದುಕೊಂಡಿದೆ.

ಕಸುಬಲ್ಲ.

(ಉ) ಇದು ಜನರಿಗೆ ಮನೆಯಲ್ಲಿ ಕುಳಿತಲ್ಲಿಯೆ ಕೆಲಸ ಕೊಡುವುದು. ಗಿರಣಿಯ ಕೂಲಿಕಾರರಾದರೋ ದುಡಿಯುವುದಕ್ಕಾಗಿ ಮನೆಯನ್ನೂ ಹೊಲವನ್ನೂ ಬಿಟ್ಟು ಗಿರಣಿಗೆ ಹೋಗಬೇಕಾಗುವುದು. ಅದರಿಂದ ಅವರ ಮನೆತನವು ಮುಕ್ಕಾಗುವುದು. ಇದರಲ್ಲಿ ಆ ತರದ ಭಯವಿಲ್ಲ.

(ಊ) ಹಿಂದೂಸ್ತಾನದ ಗ್ರಾಮ-ಪಂಚಾಯತಿಗಳು ಇಂದು ಮರಣೋನ್ಮುಖವಾಗಿರುವವು. ಇದು ಅವುಗಳ ಪುನರುಜ್ಜೀವನವನ್ನು ಮಾಡಬಲ್ಲುದು.

(ಎ) ಒಕ್ಕಲಿಗನಿಗೆ ಇದನ್ನು ಬಿಟ್ಟರೆ ಹೇಗೆ ಬೇರೆ ಗತಿ ಇಲ್ಲವೊ, ಹಾಗೆಯೇ ನೇಕಾರನಿಗೂ ಇದರ ಹೊರತು ಕಾರ್ಯ ಸಾಗುವುದಿಲ್ಲ. ಇಂದು ಹಿಂದುಸ್ತಾನದಲ್ಲಿ ಬಳಸುವ ಬಟ್ಟೆಯ ಗ್ಷದಷ್ಟು ಬಟ್ಟೆಯನ್ನು ನೇಕಾರರು ನೇಯುವರು. ರಾಟಿ ನಿರ್ನಾಮವಾದರೆ ಅವರು ಒಂದಲ್ಲ ಒಂದು ದಿನ ನಿರ್ಗತಿಕರಾಗಬಹುದು.

(ಏ) ಇದರ ಪುನರುದ್ಧಾರದಿಂದ ಸಾವಿರಾರು ಉದ್ಯೋಗಗಳ ಉದ್ಧಾರವಾಗುವುದು. ಬಡಿಗರು, ಕಮ್ಮಾರರು, ಪಿಂಜಾರರು, ಬಣ್ಣಗಾರರು, ಮುಂತಾದವರಲ್ಲಿ ಪುನಃ ಜೀವಕಳೆ ಬರುವುದು.

(ಐ) ಇದೊಂದರಿಂದಲೆ ಧನದ ಅಸಮಾನ ವಿಭಜನೆಯು ಅಳಿದು ಸಮಾನತೆಯು ಬರಬಹುದು.

(ಒ) ಇದರಿಂದಲೆ ಉದ್ಯೋಗಗೇಡಿತನವು ದೂರವಾಗುವುದು. ಒಕ್ಕಲಿಗನಿಗೆ ಬಿಡುವಿನ ಸಮಯದಲ್ಲಿ ಮಾತ್ರವೇ ಅಲ್ಲ, ಇಂದು ಕೆಲಸವಿಲ್ಲದೆ ಗುಂಪುಗುಂಪಾಗಿ ಅಲೆದಾಡುವ ಶಿಕ್ಷಿತ ಜನರಿಗೂ ಕೆಲಸ ದೊರೆಯುವುದು. ಈ ಕೈಗಾರಿಕೆಯ ಪುನರುದ್ಧಾರದ ಕಾರ್ಯವು ಅಷ್ಟಿಷ್ಟು ದೊಡ್ಡದಲ್ಲ. ಇದರಲ್ಲಿ ಸಾವಿರಾರು ಸುಶಿಕ್ಷಿತ ಜನರು ತೊಡಗಿದರೂ ಕಡಮೆಯೇ.

೨ ಇನ್ನು, ರಾಟೆಗಳು ಪುನಃ ಪ್ರಚಾರಗೊಂಡಲ್ಲೆಲ್ಲ ಅವು ಅನೇಕರಿಗೆ ಅನೇಕ ತರದ ಲಾಭಗಳನ್ನು ಮಾಡಿಕೊಟ್ಟಿವೆ. ಈ ಲಾಭಗಳು ಕೂಡ ರಾಟೆಯ ಗುಣಗಳೇ. ಆ ಲಾಭಗಳು ಇಂತಿರುವವು:*

---

*ಈ ಸೂತ್ರದೊಳಗಿನ ಭಾಗವು ಕೂಡ, ೧೯೨೬ನೇ ನವಂಬರ್ ೭ರ 'ನವಜೀವನ'ದಲ್ಲಿ ಪ್ರಕಟವಾದ ಲೇಖ-ಮಾಲೆಯಿಂದ ಶ್ರೀ. ಗ್ರೇಗರು ತಮ್ಮ ಪುಸ್ತಕದಲ್ಲಿ ಎತ್ತಿದ್ದು. ಅದನ್ನು ಇಲ್ಲಿ ಮತ್ತೆ ಉದ್ಧರಿಸಿದೆ.

(ಅ) 'ರಾಟೆಗಳು ಎಷ್ಟೋ ಜನರ ಜೀವನ-ಪರಿವರ್ತನೆಯನ್ನೂ ಹೃದಯ ಪರಿವರ್ತನೆಯನ್ನೂ ಮಾಡಿವೆ.'

(ಆ) 'ರಾಟೆಗಳಿಂದಲೆ ಹೆಂಡದ ಚಟವು ಕಡಮೆಯಾಗಲಾರಂಭಿಸಿ ಒಕ್ಕಲಿಗರು ಸಾಲದಿಂದ ಮುಕ್ತರಾಗುತ್ತಿದ್ದಾರೆ.'

(ಇ) ಬರಗಾಲದಲ್ಲಿ ಸಂಕಟಗಳ ನಿವಾರಣೆ ಮಾಡುವ ಕಾರ್ಯದಲ್ಲಿ ಇದು ಹೆಸರು-ವಾಸಿಯಾಗಿದೆ.

೨ ರಾಟೆಯನ್ನು ಕುರಿತ ತಪ್ಪು-ವಿಚಾರಗಳು

೧ 'ರಾಟೆಯನ್ನು ಕುರಿತು ಅನೇಕರು ಅನೇಕ ತರದ ಟೀಕೆಗಳನ್ನು ಮಾಡುತ್ತಾರೆ. ಈ ಟೀಕೆಗೆ ರಾಟೆಯನ್ನು ಕುರಿತ ಅವರ ತಪ್ಪು-ವಿಚಾರಗಳೆ ಕಾರಣ.' ಕೆಳಗಿನ ಉತ್ತರಗಳಿಂದ ಆ ತಪ್ಪು-ವಿಚಾರಗಳು ಯಾವುವು ಎನ್ನುವುದು ತಿಳಿದುಬರುವುದು.

೨ 'ರಾಟೆಯು ಗಿರಣಿಯೊಡನೆ ಮೇಲಾಟ ಮಾಡುವ ಉದ್ಯೋಗವಲ್ಲ. ಗಿರಣಿಯ ಸ್ಥಾನವನ್ನು ರಾಟೆಯು ಪಡೆಯತಕ್ಕದ್ದೆಂಬ ವಿಚಾರವೇ ಇರುವುದಿಲ್ಲ. ಅದಕ್ಕೆ ಬದಲಾಗಿ ಗಿರಣಿಗಳೇ ರಾಟೆಯ ಪ್ರತಿ-ಸ್ಪರ್ಧಿಗಳು. ಆ ಮಟ್ಟಿಗೆ ಅವುಗಳ ನಿಯಂತ್ರಣವು ಅವಶ್ಯ.'

೩ ರಾಟೆಯು ಯಾವುದಾದರೊಂದು ಮುಖ್ಯ ಉದ್ಯೋಗದ ಸ್ಥಾನದಲ್ಲಿ ವಿರಾಜಮಾನವಾಗಬೇಕೆಂದು ಬಯಸುವುದಿಲ್ಲ. 'ತನ್ನ ಪೂರ್ಣ ಶಕ್ತಿಯನ್ನೂ ಸಂಪೂರ್ಣ ಸಮಯವನ್ನೂ ಉಪಯೋಗಿಸಲು ತಕ್ಕಷ್ಟು ಕಾರ್ಯವು ಇರುವ ಸಶಕ್ತ ಮನುಷ್ಯನು ತನ್ನ ಆ ಕೆಲಸವನ್ನು ಮಾಡಬಾರದೆಂದು ರಾಟೆಯು ಹೇಳುವುದಿಲ್ಲ.' ಆದ್ದರಿಂದ ಈ ಕೈಗಾರಿಕೆಯಿಂದ ಬಂದ ಗಳಿಕೆಯನ್ನು ಉಳಿದ ಕೈಗಾರಿಕೆಗಳಿಂದ ಬಂದ ಗಳಿಕೆಯೊಡನೆ ಹೋಲಿಸಿದರೆ ದೊಡ್ಡ ತಪ್ಪಾಗುವುದು.

೪ 'ರಾಟೆಯಿಂದ ಹೊಟ್ಟೆ ತುಂಬಿಕೊಳ್ಳಿರಿ..... ಬೇರೆ ಉದ್ಯೋಗಗಳನ್ನು ಬಿಟ್ಟು ರಾಟೆಯನ್ನು ತಿರುಗಿಸಿರಿ ಎಂದು ಯಾರೂ ಹೇಳುವುದಿಲ್ಲ.'

೫ 'ರಾಟೆಯಿಂದ ದೇಶದ ಧನವು ತಪ್ಪದೆ ವೃದ್ಧಿಹೊಂದುವುದು. ಪೂರ್ಣ ಕೂಲಿ ಕೊಟ್ಟರೆ ಅದರಿಂದ ಹೊಟ್ಟೆಯೂ ತುಂಬಬಹುದು. ಆದರೆ ಯಾರಾದರೂ ರಾಟೆಯಿಂದ ಸಿರಿವಂತರಾಗಲು ಆಶೆಪಟ್ಟರೆ ಅವರು ನಿರಾಶರಾಗುವರು.

ಇದು ರಾಟೆಯ ಗುಣವೇ ಹೊರತು ದೋಷವಲ್ಲ. ಆ ಮಟ್ಟಿಗೆ ಅದು ಆರ್ಥಿಕ ಸಮಾನತೆಯ ಸಾಧನವಾಗುವುದು.'

೬ 'ಹಿಂದೂಸ್ತಾನದ ಒಕ್ಕಲಿಗರ ಆರು ತಿಂಗಳು ವ್ಯರ್ಥವಾಗಿ ಹಾಳಾಗುವುವು. ಇದರಿಂದ ಅವರ ಎದುರು, ನಿರುದ್ಯೋಗದ ಮತ್ತು ಬಡತನದ ದೊಡ್ಡ ಪ್ರಶ್ನೆಯು ನಿಲ್ಲುವುದು. ಈ ಪ್ರಶ್ನೆಯನ್ನು ರಾಟೆಯು ಅಲ್ಲಿಂದಲೇ ಬಗೆಹರಿಸಬಲ್ಲುದು. ಆದುದರಿಂದ ವ್ಯಾವಹಾರಿಕ ಹಾಗೂ ಕೊನೆಯ ವರೆಗೆ ಬಾಳುವಂಥ ಉಪಾಯವು ಇದೇ ಎಂದು ರಾಟೆಯ ಪುರಸ್ಕರ್ತರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತಾರೆ.'

೭ 'ರಾಟೆಯಿಂದ ಬಂದ ಹುಟ್ಟುವಳಿ ಒಂದು ಒಡಕು ಕವಡೆಯಷ್ಟು ಇರಬಹುದು. ಆದರೂ ಒಕ್ಕಲಿಗರ ವರ್ಷದಲ್ಲಿ ಅರ್ಧದಷ್ಟು ವೇಳೆಯು ವ್ಯರ್ಥವಾಗಿ ಹೋಗುವುದು. ಆ ಕಾಲದಲ್ಲಿ ಅವರಿಗೆ ಒಡಕು ಕವಡೆಯಷ್ಟು ಉತ್ಪನ್ನವಾಗುವುದಿಲ್ಲ. ಅಲ್ಲದೆ, ಅವರಿಗೆ ನಿರುದ್ಯೋಗದ ರೋಗವೂ ಅಂಟಿಕೊಳ್ಳುವುದು. ಇಂತಹ ಪರಿಸ್ಥಿತಿ ಇದ್ದಿರದಿದ್ದರೆ ಹಿಂದುಸ್ತಾನದ ಅರ್ಥಶಾಸ್ತ್ರದಲ್ಲಿ ರಾಟೆಗೆ ಸ್ಥಾನವೆ ಇರುತ್ತಿರಲಿಲ್ಲ '

೮ ರಾಟೆಯಿಂದ ಅತ್ಯಲ್ಪವಾದರೂ ಗಳಿಸಬಹುದೆಂದು ಮೇಲೆ ಹೇಳಿದೆ. ನಾವು ಹಾಗೆ ಹೇಳಿದ್ದು ಆತ್ಮ-ಸಂತೋಷಕ್ಕಾಗಿ ಅಲ್ಲ, ರಾಟೆಯು ಎಷ್ಟು ಉಪಯುಕ್ತವೆಂಬುದನ್ನು ತೋರಿಸುವುದಕ್ಕಾಗಿ. ವಾಸ್ತವಿಕವಾಗಿ ರಾಟೆಯಿಂದಲೆ ಆಗಲಿ, ಮತ್ತಾವ ಕೆಲಸದಿಂದಲೆ ಆಗಲಿ, ಅತ್ಯಲ್ಪವೆ ಉತ್ಪನ್ನ ದೊರೆಯುವ ಸ್ಥಿತಿ ಸಂತೋಷಜನಕವಲ್ಲ. ಈ ವಿಷಯವಾಗಿ 'ಸ್ವಾವಲಂಬಿಯಾದ ಮತ್ತು ಕೂಲಿಯ ಖಾದಿ' ಎಂಬ ಪ್ರಕರಣದಲ್ಲಿ ಹೆಚ್ಚು ವಿಚಾರಗಳನ್ನು ಮಂಡಿಸಲಾಗಿದೆ.

೩ ಖಾದಿ ಮತ್ತು ಗಿರಣಿ-ಬಟ್ಟೆ

೧ ಖಾದಿಗೂ ಗಿರಣಿ-ಬಟ್ಟೆಗೂ ಮೇಲಾಟವಾಗಗೊಡತಕ್ಕದ್ದಲ್ಲ. ಈ ಮೇಲಾಟವು ಒಳಿತಾದುದೂ ಅಲ್ಲ.

೨ ರಾಟೆಯು ಕೋಟಿಗಟ್ಟಲೆ ಜನರ ಗೃಹೋದ್ಯೋಗ, ಜೀವನದ ಆಧಾರ. ಈ ಗೃಹೋದ್ಯೋಗವು ನಾಶವಾಗುವಂತೆ ಗಿರಣಿಗಳ ಉದ್ಯೋಗ ನಡೆದರೆ, ಅಥವಾ ನಡೆಯಗೊಟ್ಟರೆ, ಅದನ್ನು ನಡೆಸುವವನೂ ನಡೆಯಗೊಡು

ವವನೂ ಜನರ ಕ್ಷೇಮ-ಚಿಂತನೆ ಮಾಡುವುದಿಲ್ಲವೆನ್ನಬಹುದು.

೩ ಆದ್ದರಿಂದ, ಗಿರಣಿಗಳು ಒಂದು ವೇಳೆ ಇದ್ದರೂ ಅವು ರಾಟಿಯ ಕಾರ್ಯಕ್ಕೆ ಅಡ್ಡಿ ಮಾಡಕೂಡದು. ಕೋಟಿಗಟ್ಟಲೆ ಜನರು ಯಾವ ಬಗೆಯ ನೂಲನ್ನು ನೂಲುವರೊ, ಮತ್ತು ಯಾವ ಬಗೆಯ ಬಟ್ಟೆಯನ್ನು ನೇಯುವರೊ, ಅದನ್ನು ಗಿರಣಿಗಳು ಮಾಡಕೂಡದೆಂದು ಅಪ್ಪಣೆ ಇರತಕ್ಕದ್ದು.

೪ ವ್ಯಕ್ತಿಯ ಪ್ರಶ್ನೆಯನ್ನು ಬಿಟ್ಟು ರಾಷ್ಟ್ರೀಯ ಅರ್ಥಶಾಸ್ತ್ರದ ದೃಷ್ಟಿಯಿಂದ ಯೋಚಿಸಿದರೆ, ಯಾವುದಾದರೂ ವಸ್ತುವಿನ ಮೂಲ ಬೆಲೆಯನ್ನು ಕಂಡುಹಿಡಿಯುವಾಗ ಅದಕ್ಕಾಗಿ ಉಪಯೋಗಿಸಿದ ಪದಾರ್ಥ, ಭಂಡವಲು, ಕೂಲಿ, ಮತ್ತು ಅದನ್ನು ಮಾಡುವವನಿಗೆ ತಗಲಿದ ವೆಚ್ಚದ ವಿಚಾರವನ್ನು ಮಾತ್ರವೇ ಮಾಡತಕ್ಕದ್ದಲ್ಲ. ಆದರೆ ಈ ರೀತಿ ಆ ವಸ್ತುಗಳನ್ನು ಹುಟ್ಟಿಸುವುದರಿಂದ ನಿರುದ್ಯೋಗಿಗಳ ಸಂಖ್ಯೆಯು ಬೆಳೆಯುತ್ತಿದ್ದರೆ ಆ ನಿರುದ್ಯೋಗಿಗಳನ್ನು ಕಾಪಾಡುವ ವೆಚ್ಚವೂ ಪ್ರಜೆಗಳ ಮೇಲೆಯೆ ಬೀಳುವುದು, ಎಂದರೆ ಈ ವೆಚ್ಚವು ಆ ವಸ್ತುಗಳ ಮೇಲೆಯೇ ಬೀಳಬೇಕು ಎಂಬುದನ್ನು ತಿಳಿಯತಕ್ಕದ್ದು. ಈ ದೃಷ್ಟಿಯಿಂದ ನೋಡಿದರೆ ಖಾದಿಗಿಂತಲೂ ಗಿರಣಿ-ಬಟ್ಟೆಯೆ ತುಟ್ಟಿಯಾಗುವುದೆಂಬುದು ಗೊತ್ತಾಗುವುದು.*

---

* ಹೆಚ್ಚು ವಿವರಗಳಿಗಾಗಿ ಶ್ರೀ. ಗ್ರೇಗರ ಪುಸ್ತಕದಿಂದ ಎತ್ತಿದ ಈ ಅಂಕೆಗಳು ಹೆಚ್ಚು ಉಪಯುಕ್ತವಾಗಿವೆ. ಒಬ್ಬನು ಒಂದು ಗಂಟೆಯಲ್ಲಿ ಕೈಯಿಂದ ಎಷ್ಟು ನೇಯಬಲ್ಲನೋ, ಅದಕ್ಕಿಂತಲೂ ೨೦೩ರಿಂದ ೨೩೬ ಪಟ್ಟು ಹೆಚ್ಚಾಗಿ ಗಿರಣಿಯಲ್ಲಿ ನೂಲಬಲ್ಲನು; ಕೈಯಿಂದ ಎಷ್ಟು ನೂಲಬಲ್ಲನೋ ಅದಕ್ಕಿಂತಲೂ ೨೦ ಪಟ್ಟು ಹೆಚ್ಚಾಗಿ ಗಿರಣಿಯಲ್ಲಿ ನೇಯಬಲ್ಲನು. (ಇದು ೧೯೨೬ರ ಲೆಕ್ಕ.) ಇಬ್ಬರೂ ಸಮವಾಗಿ ಕೆಲಸ ಮಾಡಿದರೆ ಗಿರಣಿಯಲ್ಲಿ ನೂಲುವವನು ೨೦೦ಕ್ಕಿಂತ ಹೆಚ್ಚು ಜನ ಕೈಯಿಂದ ನೂಲುವವರನ್ನೂ, ಗಿರಣಿಯ ನೇಕಾರನು ೨೦ಕ್ಕಿಂತ ಹೆಚ್ಚು ಜನ ಕೈಯಿಂದ ನೇಯುವವರನ್ನೂ ಕೆಲಸಗೇಡಿಗಳನ್ನಾಗಿ ಮಾಡುತ್ತಾನೆ. ಇಂಥ ನಿರುದ್ಯೋಗಿಗಳ ಮುಕ್ಕಾಲು ಪಾಲು ಕಾಲವು ಅನ್ಯ ಉದ್ಯೋಗಗಳಲ್ಲಿ ಕಳೆದುಹೋಗುತ್ತದೆಂಬ ತಿಳಿವಳಿಕೆಯಿಂದ ಹೆಚ್ಚು ಸಡಿಲುಮಾಡಿ ಲೆಕ್ಕಹಾಕಿದರೂ ೨೬೧೯ ಲಕ್ಷ ಜನರಿಗೆ, ದಿನಕ್ಕೆ ಪ್ರತಿ ಒಬ್ಬನಿಗೂ ೩ ಆಣೆಗಳಷ್ಟು ಹಾನಿಯಾಗುತ್ತದೆ. ಈ ನಿರುದ್ಯೋಗಿಗಳನ್ನು ಸಲಹುವ ವೆಚ್ಚವನ್ನು ಪರದೇಶಿ ಮತ್ತು ಸ್ವದೇಶೀ ಗಿರಣಿಗಳ ಬಟ್ಟೆಯ ಮೇಲೆ ಹಾಕಿದರೆ ಪ್ರತಿಯೊಂದು ಗಜಕ್ಕೆ ೦-೧-೯ಯಷ್ಟು, ಬರಿಯ ಪರದೇಶೀ ಗಿರಣಿಗಳ ಬಟ್ಟೆಯ ಮೇಲೆ ಹಾಕಿದರೆ ಪ್ರತಿಯೊಂದು ಗಜಕ್ಕೆ ೦-೫-೨ಯಷ್ಟು ಬೆಲೆಯು ಹೆಚ್ಚಾಗುವುದು. ೧೯೨೬ರಲ್ಲಿ ಮಾಡಿದ ಲೆಕ್ಕದ ಪ್ರಕಾರ ಖಾದಿ ಮತ್ತು ಗಿರಣಿ-ಬಟ್ಟೆಯ

೫ ಹೀಗೆ, ಪ್ರಜೆಗಳ ಹಿತಚಿಂತನೆಯನ್ನು ಬಯಸುವ ಸರಕಾರವಿದ್ದರೆ, ನಿರುದ್ಯೋಗದ ನಿರ್ಮೂಲನವನ್ನು ಮಾಡಿದ ಹೊರತು ಖಾದಿಯೊಡನೆ ಗಿರಣಿ ಮೇಲಾಟ ನಡೆಸಲು ಎಂದೂ ಅನುವುಗೊಡಲಿಕ್ಕಿಲ್ಲ.

೬ ಇಂಥ ಸರಕಾರವು ಇಲ್ಲದ್ದರಿಂದ ಜನರು ಬಡವರ ಮೇಲಿನ ಕನಿಕರದಿಂದಾದರೂ ಗಿರಣಿಯು ಇಂಥ ಉದ್ಯೋಗವನ್ನು ನಿಲ್ಲಿಸತಕ್ಕದ್ದು.

೭ ಗಿರಣಿಯು ಮಾಡುವ ಹಾನಿಕರವಾದ ಈ ಮೇಲಾಟವನ್ನು ನಿಲ್ಲಿಸುವುದಕ್ಕಾಗಿ ಖಾದಿಯ ಕ್ಷೇತ್ರದಲ್ಲಿ ಕೈಹಾಕುವ ದೇಶೀ ಪರದೇಶೀ ಗಿರಣಿಗಳ ಬಹಿಷ್ಕಾರ, ಖಾದಿಯನ್ನೇ ಧರಿಸುವ ಪ್ರತಿಜ್ಞೆ, ಖಾದಿಯ ಬಗ್ಗೆ ದಾನ, ಯಜ್ಞ-ಕರ್ಮವೆಂದು ತಿಳಿದು ನೂಲುವುದು, ಮುಂತಾದುವು ಅಹಿಂಸಾತ್ಮಕ ಮಾರ್ಗಗಳು.

೪ ರಾಟೆಯೂ ಕೈಮಗ್ಗವೂ

೧ ಕೈನೂಲಿನ ಬದಲು ಕೇವಲ ಕೈನೇಯ್ಗೆಗೆ ಮಾತ್ರ ಉತ್ತೇಜನವನ್ನು ಕೊಡತಕ್ಕದ್ದು, ಗಿರಣಿಯ ನೂಲನ್ನು ಬಹಿಷ್ಕರಿಸದೆ ಗಿರಣಿಯ ನೇಯ್ಗೆಯನ್ನು ಮಾತ್ರ ಬಹಿಷ್ಕರಿಸತಕ್ಕದ್ದು ಎನ್ನುವ ವಿಚಾರ, ರಾಟೆಯ ವಿಷಯದಲ್ಲಿದ್ದ ತಪ್ಪು ತಿಳಿವಳಿಕೆಯಿಂದ ಹುಟ್ಟಿದೆ. ಏಕೆಂದರೆ:

೨ 'ನೂಲುವ ಕಸುಬು ಹೇಗೆ ಸಾರ್ವತ್ರಿಕವಾಗಬಲ್ಲುದೋ ಹಾಗೆ ಕೈನೇಯ್ಗೆಯ ಕಸುಬು ಸಾರ್ವತ್ರಿಕವಾಗಲಾರದು.*

ನಡುವೆ ಗಜಕ್ಕೆ ೦–೨–೦ಯ ಅಂತರವಿತ್ತು. ಇಂದು ಇದಕ್ಕೂ ಕಡಮೆ ಆಗಿದೆ. ಪ್ರಜಾತಂತ್ರ ಸರಕಾರವೇ, ಈ ನಿರುದ್ಯೋಗಿಗಳ ನಿರ್ವಾಹದ ವೆಚ್ಚವನ್ನು ಬಟ್ಟೆಯ ಗಿರಣಿಗಳಿಂದ ತೆರಿಗೆಯ ರೂಪದಿಂದ ವಸೂಲು ಮಾಡಬೇಕಾದೀತು. ಆಗ, ಗಿರಣಿ-ಬಟ್ಟೆಯು ಅಗ್ಗವಾಗುವುದಿಲ್ಲವೆಂಬುದು ಗೊತ್ತಾದೀತು. ಆದರೆ ಈಗಲಾದರೋ ಈ ವೆಚ್ಚವನ್ನು ಪ್ರಜೆಗಳು ಪರೋಕ್ಷವಾಗಿ ಕೊಡುತ್ತಿದ್ದಾರೆ. ಆದರೆ ಇದು ಪೇಟೆಯ ದರದಲ್ಲಿ ಮಾತ್ರ ಕಂಡುಬರುವುದಿಲ್ಲ. ಇದರ ಬಗೆಗೆ ಹೆಚ್ಚು ವಿಷಯವನ್ನು ಶ್ರೀ. ಗ್ರೇಗರ ಪುಸ್ತಕದಿಂದ ತಿಳಿದುಕೊಳ್ಳಬಹುದು. —ಕಿ. ಘ. ಮಶ್ರುವಾಲಾ

*'ಹಿಂದುಸ್ತಾನಕ್ಕೆ ಪ್ರತಿ ವರ್ಷ ೪೬೬ ಕೋಟಿ ಗಜ ಬಟ್ಟೆಯು ಬೇಕಾಗುತ್ತದೆ. ಇಷ್ಟೆಲ್ಲವನ್ನೂ ಕೈಮಗ್ಗದಲ್ಲಿಯೇ ನೇಯಿಸಿದರೂ, ಪರಮಾವಧಿ ಎಂದರೆ ದಿನಾಲು ಎರಡು ಗಂಟೆ ಕೆಲಸ ಮಾಡುವ ೯೦ ಲಕ್ಷ ನೇಕಾರರನ್ನು ಈ ಕಾರ್ಯದಲ್ಲಿ ತೊಡಗಿಸಬಹುದು.

೩ ನೂಲುವುದೇನೋ ಪೋಷಕ ಉದ್ಯೋಗವಾಗಬಲ್ಲುದು. ಆದರೆ ನೇಯ್ಗೆ ಮಾತ್ರ ಸ್ವತಂತ್ರ ಉದ್ಯೋಗವೇ. ಈ ವಿಚಾರವು ಈ ಸೂಚನೆ ಮಾಡುವವರ ಗಮನಕ್ಕೆ ಬಂದಿಲ್ಲ.

೪ ಒಂದು ವೇಳೆ ಕ್ಯಾದೆಯಿಂದಾದರೂ ಗಿರಣಿಯ ನೇಯ್ಗೆಯು ನಿಲ್ಲಿಸಲ್ಪಡದಿದ್ದರೆ ಜನರು ತಮ್ಮ ಪ್ರಯತ್ನದಿಂದಲೆ ಅದನ್ನು ಬಹಿಷ್ಕರಿಸಬೇಕಾಗುವುದು. ಮತ್ತು ನೇಕಾರರು ಗಿರಣಿಗಳ ಯಜಮಾನರ ದಯೆಯಿಂದಲೆ ಉಪಜೀವಿಸಬೇಕಾಗುವುದು. 'ಏಕೆಂದರೆ ಗಿರಣಿಗಳು ಕೈನೇಯ್ಗೆಯೊಡನೆ ಮೇಲಾಟ ಮಾಡುತ್ತಿವೆ ...(ಮತ್ತು) ದಿನ ದಿನಕ್ಕೂ ಗಿರಣಿಗಳೆ ಹೆಚ್ಚು ಹೆಚ್ಚಾಗಿ ನೇಯ್ಗೆ ಕಾರ್ಯವನ್ನು ಮಾಡುತ್ತ ಸಾಗಿವೆ ... ಈ ಮೇಲಾಟವು ಹೆಚ್ಚು ವಿಷಮವೂ ಘಾತಕವೂ ಆಗುತ್ತ ಹೋಗುವುದು.'

೫ ಇದಕ್ಕೆ ವಿಪರೀತವಾಗಿ 'ಕೈಮಗ್ಗ ಮತ್ತು ರಾಟಿ, ಇವೆರಡೂ ಅವಳಿ ಜವಳಿ ಸಹೋದರ-ಸಹೋದರಿಯರಂತಿವೆ. ಇವುಗಳಲ್ಲಿ ಒಂದು ಇನ್ನೊಂದನ್ನು ಬಿಟ್ಟು ಬದುಕಿರಲಾರದು.'

೬ 'ಪ್ರತಿಯೊಂದು ಮನೆಯಲ್ಲೂ ಒಂದು ರಾಟಿ ಇರತಕ್ಕದ್ದು. ಪ್ರತಿಯೊಂದು ಚಿಕ್ಕ ವಸತಿಯ ಗ್ರಾಮದಲ್ಲೂ ಒಂದು ಕೈಮಗ್ಗವಿರತಕ್ಕದ್ದು. ಇವು ಭಾವೀ ಯುಗದ ಘಟನೆಯ ಮಂತ್ರಗಳು.'

೫ ಖಾದೀ ಉತ್ಪತ್ತಿಯ ಕ್ರಿಯೆಗಳು

೧ ಹಿಂಜುವುದು ಮೊದಲುಗೊಂಡು ನೇಯ್ಗೆಯ ವರೆಗಿನ ಖಾದಿಯ ಹುಟ್ಟುವಳಿಯ ಎಲ್ಲ ಕಾರ್ಯಗಳು ಮನೆಯಲ್ಲೇ ಆಗತಕ್ಕದ್ದು. ಇವುಗಳಲ್ಲಿ ಒಂದೇ ಒಂದು ಕ್ರಿಯೆ ಕಾರ್ಖಾನೆಯನ್ನು ಅವಲಂಬಿಸಿದರೂ ಅದು ಒಂದಿಲ್ಲೊಂದು ದಿನ ಖಾದಿಯ ಉದ್ದೇಶವನ್ನು ಕುತ್ತಿಗೇಡುಮಾಡುವುದು.

ಇಷ್ಟು ನೇಕಾರರಿಗಿಂತ ಇಷ್ಟು ಕುಟುಂಬಗಳನ್ನು ತೊಡಗಿಸುವುದು ಒಳಿತೆಂದು ಒಪ್ಪಿದರೆ ದಿನದ ಎರಡಾಣೆಗಳು ಅಷ್ಟು ಜನರಲ್ಲಿ ಹಂಚಿಹೋಗುವುವು. ಇದರಿಂದ ಪ್ರತಿಯೊಬ್ಬನ ಗಳಿಕೆಯು ಪ್ರಮಾಣತಃ ನೋಡಿದರೆ ಕಡಮೆಯಾಗುವುದು.'(೧೯೨೬ನೇ ವರ್ಷದ ನವಂಬರ್ ೧೪ರ 'ನವಜೀವನ'ದ ಆಧಾರದಿಂದಲೆ ಈ ಪ್ರಕರಣದ ಸೂತ್ರಗಳು ಬರೆಯಲ್ಪಟ್ಟವೆ. ಶ್ರೀ. ಗ್ರೇಗರ ಪುಸ್ತಕದಲ್ಲಿ ಈ ಲೇಖವು ಸಂಪೂರ್ಣವಾಗಿ ಕೊಡಲ್ಪಟ್ಟದೆ)—ಮಶ್ರುವಾಲಾ.

೨ ಆದ್ದರಿಂದ ನೂಲುವ ರಾಟಿಯು ಜೊತೆಯಲ್ಲಿ ಅರೆಯುವ ರಾಟಿ, ಹಿಂಜುವ ಬಿಲ್ಲು, ಇರಬೇಕಾದುವೇ ಎಂದು ತಿಳಿಯತಕ್ಕದ್ದು.

೩ ಹತ್ತಿ ಅರೆಯುವ ರಾಟಿ, ಹಿಂಜುವ ಬಿಲ್ಲು, ಮತ್ತು ನೂಲುವ ರಾಟಿಯಲ್ಲಿ ಸುಧಾರಣೆ ಅವಶ್ಯವೆನಿಸಿದರೆ ಅವು ಗೃಹೋದ್ಯೋಗಗಳಾಗಿ ಉಳಿಯುವಂತೆಯೆ ಸುಧಾರಣೆ ಮಾಡತಕ್ಕದ್ದು.

೪ ಖಾದಿಯನ್ನು ಸುಧಾರಿಸಬೇಕಾದರೆ ಹತ್ತಿಯ ಸಂಗ್ರಹದಿಂದ ಮೊದಲುಗೊಂಡು ನೇಯ್ಗೆ ವರೆಗಿನ ಎಲ್ಲ ಕ್ರಿಯೆಗಳ, ಮತ್ತು ಎಲ್ಲ ಯಂತ್ರಗಳ ಅಭ್ಯಾಸವನ್ನು ಸೂಕ್ಷ್ಮವಾಗಿ ಮಾಡತಕ್ಕದ್ದು. ಅವುಗಳ ಸುಧಾರಣೆಗೆ ಆ ಮೇಲೆ ಕೈ-ಹಾಕುವುದು ಒಳಿತು.

೫ ಹತ್ತಿಯ ಹೊಲವಿದ್ದವರು ತಮ್ಮ ಹೊಲದ ಹತ್ತಿಯನ್ನೇ ಉಪಯೋಗಿಸುವುದು ತಮ್ಮ ಮೊದಲನೆ ಕೆಲಸ ಹೀಗೆ ಮಾಡುವ ಒಕ್ಕಲಿಗನು ಒಳ್ಳೆಯ ಹತ್ತಿ-ಕಾಳುಗಳನ್ನು ದೊರಕಿಸಲು ಯತ್ನಿಸಬಲ್ಲ; ಕಸುರು ಬರದಂತೆ ಹತ್ತಿಯನ್ನು ಬಿಡಿಸಿಕೊಳ್ಳಬಲ್ಲ. ತನ್ನ ಈ ಕೆಲಸವನ್ನು ಒಕ್ಕಲಿಗನು ತಾನೇ ಮಾಡುತ್ತ ಹೋಗಬಲ್ಲ. ಆದರೆ ಅವನಿಗೆ ಅದರ ಮಹತ್ವವನ್ನು ತಿಳಿಸಿ ಸರಿಯಾದ ಮಾರ್ಗವನ್ನು ತೋರಿಸಿ ಆಗಾಗ ಸಲಹೆ ಕೊಡುವುದು ಅಗತ್ಯ.

೬ ರಾಟಿಯಿಂದ ಹತ್ತಿ ಅರೆದರೆ ಕಾಳುಗಳಿಗೆ ಪೆಟ್ಟು ತಗಲುವುದಿಲ್ಲ, ಎಳೆಯ ಕಸುವೂ ಕಡಮೆಯಾಗುವುದಿಲ್ಲ. ಆಗ ಮಾತ್ರವೇ ಕಾಳು ತೆಗೆದ ಹತ್ತಿ ನೂಲಲಿಕ್ಕೆ ಬಹು ಒಳ್ಳೆಯದು. ಆ ಹತ್ತಿಯಿಂದ ನೂಲಲು ಶ್ರಮವಾಗುವುದಿಲ್ಲ.

೭ ಉತ್ತಮ ನೂಲು ಹೊರಡಬೇಕಾದರೆ ಹಂಜಿ ಉತ್ತಮವಿರಬೇಕು. ಸರಿಯಾಗಿ ನೂಲಲು ಬರುವವರಿಗೆ ಒಳ್ಳೆಯ ಮತ್ತು ಕೆಟ್ಟ ಹಂಜಿಯೊಳಗಿನ ಭೇದವು ಗೊತ್ತಾಗುವುದು. ಹಿಂಜುವುದನ್ನರಿತವರಿಗೆ ಅದರಲ್ಲಿನ ಕ್ರಿಯೆಯ ಭೇದಗಳು ತಿಳಿಯುವವು. ಆದ್ದರಿಂದ ಹಿಂಜುವುದನ್ನು ಸರಿಯಾಗಿ ಬಲ್ಲವರು ಎರಡನೆಯವರ ಹಂಜಿಯನ್ನು ಉಪಯೋಗಿಸಲು ಹಿಂಜರಿಯುವರು.

೮ ಕೆಟ್ಟ ಹಂಜಿಯಿಂದ ಕಡಮೆ ತರಗತಿಯ ನೂಲು ಹೊರಡುತ್ತದೆ; ಎಳೆಗಳು ಆಗಾಗ್ಗೆ ಹರಿಯುತ್ತವೆ. ಇದರಿಂದ ಬಹಳ ಆರ್ಥಿಕ ಹಾನಿಯಾಗುವುದು.

೯ ಯಾವ ಹತ್ತಿಯಿಂದ ಎಷ್ಟು ಜಿನುಗು ಎಷ್ಟು ದಪ್ಪ ನೂಲು ಹೊರಡಬಹುದೊ ಅದಕ್ಕಿಂತ ಹೆಚ್ಚು ದಪ್ಪ ಹೆಚ್ಚು ಜಿನುಗು ನೂಲುವುದು ಹಾನಿಕರ. ಸಾಮಾನ್ಯವಾಗಿ ಸರ್ವರ ಒಲವೂ ದಪ್ಪ ನೂಲುವುದರ ಕಡೆಗೇ ಇರುವುದು.

ಇದನ್ನು ತಡೆಯುತಕ್ಕದ್ದು. ಸಾಧ್ಯವಿದ್ದಷ್ಟು ಜಿನುಗು ನೂಲಿನ ಕಡೆಗೆ ಖಾದೀ ಉತ್ಪಾದಕರು ಗಮನಕೊಡತಕ್ಕದ್ದು.

೧೦ ನೂಲಿನ ಹುರಿಕಟ್ಟಿನ ಕಡೆಗೂ ಸಮಾನತೆಯು ಕಡೆಗೂ ಉತ್ಪಾದಕರು ಗಮನಕೊಡತಕ್ಕದ್ದು.

೧೧ ಜಿನುಗು ನೂಲೆಂದರೆ ಸ್ವಲ್ಪ ಹತ್ತಿಯಲ್ಲಿ ಹೆಚ್ಚು ಬಟ್ಟೆ. ಹುರಿಕಟ್ಟಿನ ನೂಲೆಂದರೆ ತಾಳಿಕೆಯು ಬಟ್ಟೆ. ಸಮವಾದ ನೂಲೆಂದರೆ ನಯವಾದ ಸುಂದರವಾದ ಬಟ್ಟೆ. ನೂಲು ಹುರಿಕಟ್ಟಿನದೂ ಸಮನಾದದ್ದೂ ಇದ್ದರೆ ನೇಕಾರನು ಕಡಮೆ ಕೂಲಿಯಿಂದ ನೇಯುತ್ತಾನೆ. ಆದುದರಿಂದ ಇವೆಲ್ಲವೂ ಖಾದಿಯನ್ನು ಅಗ್ಗಗೊಳಿಸುವ ಮಹತ್ವದ ಅಂಗಗಳೆಂಬುದು ಸ್ಪಷ್ಟ.

೧೨ ಖಾದೀ ಸೇವಕನಿಗೆ ಖಾದೀ ಉತ್ಪತ್ತಿಯು ಸರ್ವ ಕ್ರಿಯೆಗಳ ಅನುಭವಜನ್ಯ ಜ್ಞಾನವಿರತಕ್ಕದ್ದು. ಖಾದಿಯು ಹುಟ್ಟುವಳಿಗಾಗಿ ಉಪಯೋಗಿಸಲ್ಪಡುವ ಎಲ್ಲ ಯಂತ್ರಗಳ ಗುಣ ದೋಷಗಳೂ, ಅವನ್ನು ಸರಿಪಡಿಸುವ ಜ್ಞಾನವೂ ಇರತಕ್ಕದ್ದು. ಹಳ್ಳಿಯ ಒಕ್ಕಲಿಗರಿಗಷ್ಟೆ ಅಲ್ಲ, ಬಡಿಗ, ಕಮ್ಮಾರ ಮುಂತಾದ ಕೆಲಸಗಾರರಿಗೂ ಇದನ್ನು ಕಲಿಸುವಷ್ಟು ನೈಪುಣ್ಯ ಅವನಲ್ಲಿರತಕ್ಕದ್ದು. ಮಾತ್ರವಲ್ಲ, ಎಲ್ಲವನ್ನೂ ತೂಗಿಸಿಕೊಂಡು ಹೋಗುವ ಶಕ್ತಿಯೂ ಅವನಲ್ಲಿರಬೇಕು ಅರ್ಥಾತ್ ಅವನೊಬ್ಬ ಕುಶಲ ಶಿಲ್ಪಿಯಾಗಬೇಕು; ಖಾದಿಯು ಅರ್ಥಶಾಸ್ತ್ರವನ್ನು ಬಲ್ಲವನೂ ಇರಬೇಕು.

೬ ಸ್ವಾವಲಂಬಿಯಾದ ಮತ್ತು ಕೂಲಿಯ ಖಾದಿ

೧ ಒಕ್ಕಲಿಗನು ತನ್ನ ಹೊಲದ ಹತ್ತಿಯನ್ನೇ ಕಾಳು ತೆಗೆದು ಹಿಂಜಿ ನೂಲಬೇಕು; ಕೂಲಿ ಕೊಟ್ಟು ನೇಕಾರನಿಂದ ನೇಯಿಸಿಕೊಳ್ಳಬೇಕು. ಹೀಗೆ ಮಾಡಿದರೆ ಅವನಿಗೆ ಗಿರಣಿಯ ಬಟ್ಟೆಗಿಂತಲೂ ಖಾದಿ ಅಗ್ಗವಾಗುವುದು. ಹೀಗೆ ಮಾಡಿಕೊಂಡ ಖಾದಿಯೇ ಸ್ವಾವಲಂಬಿ ಖಾದಿ.

೨ ಒಕ್ಕಲಿಗನು ವಾಹನದ ವೆಚ್ಚ ಸೇರಿದ ಹತ್ತಿಯನ್ನು ಕೊಂಡು ಹಿಂಜಿ, ನೂತು ನೇಯಿಸಿಕೊಂಡ ಬಟ್ಟೆಯೂ ಗಿರಣಿಯ ಬಟ್ಟೆಗಿಂತ ಅಗ್ಗವಾಗುವುದು; ಎಂದರೆ ಗಿರಣಿಯ ಬಟ್ಟೆಗಿಂತಲೂ ತೀರ ಕಡಮೆ ತುಟ್ಟಿಯಾಗುವುದು. ಈ ತುಟ್ಟಿತನ ಕೂಡ ನೂಲು ಹುರಿಕಟ್ಟಿನದಿದ್ದರೆ, ನೂಲಿನ ತರಗತಿಯಲ್ಲಿ ಸುಧಾರಣೆಯಾದರೆ ಇಲ್ಲದಂತಾಗುವುದು.

೩ ಕೂಲಿಯಿಂದ ಮಾಡಿಸಿದ ಖಾದಿಯ ಪ್ರಕಾರಗಳಲ್ಲೂ ಅಗ್ಗಳತೆಯ ವಿಷಯದಲ್ಲೂ ಇಂದಿನ ವರೆಗಾದ ಪ್ರಗತಿಯು, ಅದರ ಭಾವೀ ಉನ್ನತಿಯನ್ನೂ ಚರಖಾ-ಪ್ರವೃತ್ತಿಯು ಸರಿಯಾದ ಮಾರ್ಗ ಹಿಡಿದಿರುವುದನ್ನೂ ಸೂಚಿಸುತ್ತಿರುವುದೆಂದು ನಿರಾತಂಕವಾಗಿ ಹೇಳಬಹುದು.

೪ ಕೂಲಿಯು ಖಾದಿಯನ್ನು ಅಗ್ಗ ಮಾಡುವುದಕ್ಕಾಗಿ ಪಟ್ಟ ಪರಿಶ್ರಮವು ಯೋಗ್ಯ ಮಾರ್ಗಗಳಿಂದ ನಡೆಯಲಿಲ್ಲವೆಂದು ಸ್ಪಷ್ಟವಾಗಿ ಕಂಡುಬಂದಿದೆ. ಯಾವ ಬಡವರ ಕಲ್ಯಾಣಕ್ಕಾಗಿ ಈ ಕಾರ್ಯವು ಮೊದಲಾಯಿತೊ ಅದರಿಂದ ಅವರಿಗೆ ಹೊಟ್ಟೆಯ ಮಟ್ಟಿಗಾದರೂ ಪ್ರತಿಫಲವು ದೊರೆಯುತ್ತದೊ ಇಲ್ಲವೊ ಎನ್ನುವುದರ ಕಡೆಗೆ ಸಂಪೂರ್ಣ ಗಮನವು ಕೊಡಲ್ಪಡಲಿಲ್ಲ.

೫ ಖಾದಿ ಇಲ್ಲವೆ ಉಳಿದ ಉದ್ಯೋಗಗಳ ಉದ್ಧಾರಕ್ಕಾಗಿ ದುಡಿಯುವ ಸೇವಕರ ಮತ್ತು ಸಂಘಗಳ ಧರ್ಮವು ಕೇವಲ ಉದ್ಯೋಗಗಳನ್ನು ಅಂತೂ ಇಂತೂ ನಡೆಸಿಕೊಂಡು ಹೋಗುವುದಷ್ಟೆ ಅಲ್ಲ. ಆ ಉದ್ಯೋಗಗಳಲ್ಲಿ ತೊಡಗಿದವರಿಗೆ ಹೊಟ್ಟೆಯ ಮಟ್ಟಿಗಾದರೂ ಪ್ರತಿಫಲವು ಸಿಕ್ಕುವುದೊ ಇಲ್ಲವೊ ಎಂಬುದನ್ನು ಕೂಲಂಕಷವಾಗಿ ನೋಡುವುದೂ ಅವರ ಧರ್ಮ. ಒಂದು ವೇಳೆ ದುಡಿಯುವವರಿಗೆ ಅಷ್ಟಾದರೂ ಪ್ರತಿಫಲವು ದೊರೆಯದಿದ್ದರೆ ಆ ಉದ್ಯೋಗಗಳನ್ನು ನಡೆಸುವುದೆಂದರೆ ಬಡವರ ಪರಿಶ್ರಮದ ಅಯೋಗ್ಯ ಲಾಭ ತೆಗೆದುಕೊಂಡಂತೆ ಆಗುವುದೆಂದು ಹೇಳಬೇಕಾಗುವುದು.

೬ ಪರಿಶ್ರಮ ಪಡುವವರಿಗೆ ಹೊಟ್ಟೆಗೆ ಸಾಕಾಗುವಷ್ಟು ಪ್ರತಿಫಲವು ಮುಟ್ಟಿದ್ದನ್ನು ಮಾತ್ರ ನೋಡಿ ಖಾದೀ ಕೆಲಸಗಾರರು ಸಂತೋಷಪಡಕೂಡದು. ಅವರು ಪ್ರತಿಯೊಬ್ಬ ಕೂಲಿಕಾರನ ಜೀವನದಲ್ಲಿ ಪ್ರವೇಶಿಸಿ ಅವನು ತನ್ನ ಉದ್ಯೋಗದಲ್ಲಿ ಕುಶಲ ಶಿಲ್ಪಿಯಾಗುವಂತೆ, ತನ್ನ ಗಳಿಕೆಯನ್ನು ಯೋಗ್ಯ ರೀತಿಯಿಂದ ವೆಚ್ಚಮಾಡುವಂತೆ ನೋಡಿಕೊಳ್ಳತಕ್ಕದ್ದು.

೭ ಖಾದಿಯ ವಿಷಯವಾಗಿ ಸೂಚಿಸಲ್ಪಟ್ಟ ಈ ಕೆಳಗಿನ ನಿಯಮಗಳು ಎಲ್ಲ ಗ್ರಾಮೋದ್ಯೋಗಗಳಿಗೂ ಅನ್ವಯಿಸಬಲ್ಲುವು:

(೧) ಪ್ರತಿಯೊಬ್ಬ ಕಾರ್ಯಕರ್ತನೂ ಹತ್ತಿ ಬಿಡಿಸುವುದನ್ನು ಮೊದಲುಗೊಂಡು ನೇಯಿಗೆ ವರೆಗಿನ ಎಲ್ಲ ಕೆಲಸಗಳನ್ನೂ ಸರಿಯಾಗಿ ಅರಿತವನಿರಬೇಕು. ಎಂದರೆ ಮಾತ್ರ ಅವನು ಅನ್ಯರಿಗೆ ಕಲಿಸಬಲ್ಲನು.

(೨) ವ್ಯವಸ್ಥಾಪಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುವ

ಪಿಂಜಾರರು, ನೂಲುವವರು, ನೇಯುವವರು, ಮುಂತಾದವರ ಪಟ್ಟಿಯನ್ನು ಇಡತಕ್ಕದ್ದು.

(೩) ನೂಲುವವನು ಯಾವ ಜಾತಿಯ ಹತ್ತಿಯನ್ನು ಉಪಯೋಗಿಸುವನೆಂಬುದನ್ನೂ ತಿಳಿದುಕೊಂಡು ಆ ಹತ್ತಿಯಿಂದ ಎಷ್ಟು ನಂಬರಿನ ನೂಲು ಹೊರಡಬಲ್ಲುದೊ ಅದಕ್ಕಿಂತಲೂ ಹೆಚ್ಚು ನಂಬರಿನ ನೂಲನ್ನು ಅವನು ತೆಗೆಯದಂತೆ ಎಚ್ಚರಪಡತಕ್ಕದ್ದು.

(೪) ನೂಲುವವರೂ ಖಾದಿಯ ಹುಟ್ಟುವಳಿಗೆ ನೆರವಾಗುವಂಥ ಶಿಲ್ಪಿಗಳೂ ತಮ್ಮ ತಮ್ಮ ಮನೆಯಲ್ಲಿ ಖಾದಿಯನ್ನು ಉಪಯೋಗಿಸದಿದ್ದರೆ ಅವರಿಗೆ ಕೆಲಸವು ಸಿಕ್ಕಲಾರದೆಂದು ಸ್ಪಷ್ಟವಾಗಿ ಹೇಳಿಬಿಡತಕ್ಕದ್ದು.

(೫) ಈ ಎಚ್ಚರಿಕೆಯ ಜೊತೆಯಲ್ಲಿಯೆ ಅವರಿಗೆ ಖಾದಿಯು ಅವರ ಕೂಲಿಯ ಬದಲಾಗಿಯೇ ದೊರೆಯುವಂತೆ ಕೂಡ ಅನುಕೂಲತೆಯನ್ನು ಮಾಡಿಕೊಡತಕ್ಕದ್ದು.

(೬) ಖಾದೀ ಕಾರ್ಯಾಲಯಕ್ಕೆ ಬರುವ ನೂಲಿನ ಪ್ರತಿಯೊಂದು ಪಟ್ಟಿಯ ಗಟ್ಟಿತನ ಮತ್ತು ಸಮಾನತೆಯನ್ನು ಪರೀಕ್ಷಿಸತಕ್ಕದ್ದು. ಸರಿಯಾಗಿ ಬೇಯದಿದ್ದ ರೊಟ್ಟಿಯು ತಿನ್ನಲು ಹೇಗೆ ಅಯೋಗ್ಯವೊ, ಹಾಗೆಯೆ ಗಟ್ಟಿಯಿಲ್ಲದ ಮತ್ತು ಸಮಾನವಿಲ್ಲದ ನೂಲು ಕೂಡ ಸ್ವೀಕರಿಸಲು ಅಯೋಗ್ಯವು.

(೭) ಸಾಮಾನ್ಯತಃ ಪ್ರತಿಯೊಬ್ಬನ ನೂಲನ್ನು ಪ್ರತ್ಯೇಕವಾಗಿ ಇಡತಕ್ಕದ್ದು. ಅದು ಒಂದು ಬಟ್ಟೆಯನ್ನು ನೇಯುವಷ್ಟು ಆಯಿತೆಂದರೆ ಅದನ್ನು ಪ್ರತ್ಯೇಕವಾಗಿಯೇ ನೇಯಿಸತಕ್ಕದ್ದು. ಇದರಿಂದ ಖಾದಿಯು ತಾಳಿಕೆಯುಳ್ಳದ್ದಾಗಿ ಅದರ ನೇಯಿಗೆಯೂ ಸೌಂದರ್ಯವೂ ಸುಧಾರಿಸುವುದು.

(೮) ಹೀಗೆ ಸಿದ್ಧವಾದ ಪ್ರತಿಯೊಂದು ಥಾನಿನ ಮೇಲೆ ಹತ್ತಿಕಾಳು ತೆಗೆಯುವವನ, ಹಿಂಜುವವನ, ನೂಲುವವನ, ಮತ್ತು ನೇಯುವವನ ಹೆಸರಿನ ಚೀಟಿಯೊಂದನ್ನು ಅಂಟಿಸತಕ್ಕದ್ದು.

(೯) ಶಿಲ್ಪಿಗಳಿಗೆ ಪರಿವಾರವಿದ್ದಲ್ಲಿ ಖಾದೀ ಹುಟ್ಟುವಳಿಯ ಸರ್ವ ಕಾರ್ಯಗಳನ್ನೂ ತಮ್ಮ ಪರಿವಾರಗಳಲ್ಲಿಯೆ ಮಾಡಿಕೊಳ್ಳಲು ಅವರಿಗೆ ತಿಳಿಸಿ ಉತ್ತೇಜನ ಕೊಡತಕ್ಕದ್ದು. ಕೂಲಿಯನ್ನು ಸಮಾನ ಮಾಡಿಬಿಟ್ಟರೆ ಎಲ್ಲವೂ ಸರಳವಾಗುವುದು.

೧೦ ಶಿಲ್ಪಿಗಳ ಜೀವನಕ್ಕೆ ತಗಲುವ ವೆಚ್ಚವೆಷ್ಟು, ಅವರ ಆದಾಯವೆಷ್ಟು

ಎಂಬುದನ್ನು ತಿಳಿದುಕೊಂಡು, ಅದರ ಅಭ್ಯಾಸ ಮಾಡಬೇಕು. ತನ್ನ ಆದಾಯದ ಸದ್ವಿನಿಯೋಗವನ್ನು ಸದಸದ್ವಿವೇಕದಿಂದ ಮಾಡುತ್ತಿರುವವನಿಗೆ ಸಹಾಯ ಮಾಡಬೇಕು.

(೧೧) ಯಾವುದಾದರೂ ಸಂದರ್ಭದಲ್ಲಿ ಗ್ರಾಹಕರ ಸಂಖ್ಯೆಯು ಕಡಮೆಯಾಗಿ ಸಂಘದ ಕೈಕೆಳಗೆ ಕೆಲಸ ಮಾಡುವ ಶಿಲ್ಪಿಗಳನ್ನು ಕಡಮೆ ಮಾಡಬೇಕಾದ ಸಮಯವು ಬಂದರೆ, ಅನ್ಯ ಉದ್ಯೋಗಗಳಿಂದ ಹೊಟ್ಟೆ ತುಂಬಿಕೊಳ್ಳಬಲ್ಲ ಶಿಲ್ಪಿಗೆ ಮೊದಲು ಬಿಡುವು ಕೊಡತಕ್ಕದ್ದು. ಕೆಲವು ಪ್ರಾಂತಗಳಲ್ಲಿ ಉಪಜೀವನದ ಅವಶ್ಯಕತೆ ಇದ್ದವರಷ್ಟೇ ನೂಲುವ, ಉಳಿದವರು ನೂಲದಿರುವ ಪರಿಸ್ಥಿತಿಯೇನೂ ಸದ್ಯಕ್ಕೆ ಇಲ್ಲ. ಅಂತೂ ಇಂತೂ ಎರಡು ಕಾಸು ಸಂಗ್ರಹಿಸಿ ಸಣ್ಣಪುಟ್ಟ ಪದಾರ್ಥಗಳನ್ನು ಕೊಳ್ಳಲು ಬಯಸುವ ಸ್ತ್ರೀಯರು ಕೂಡ ನೂಲುತ್ತಾರೆಂದು ನನ್ನ ಗ್ರಹಿಕೆ. ಇಂಥವರು ಇದರಿಂದಲೆ ಒಳ್ಳೆಯ ಆಹಾರವನ್ನು ದೊರಕಿಸಬೇಕು, ಅಥವಾ ತಮ್ಮ ಸಾಲವನ್ನು ಸಲ್ಲಿಸಬೇಕು ಎಂಬ ವಿಚಾರವನ್ನೆ ಮಾಡುವುದಿಲ್ಲ.

(೧೨) ಪ್ರತಿಯೊಂದು ಕಡೆಯಲ್ಲಿ ಕಾರ್ಯಕರ್ತರು ಹಂಜಿಯನ್ನು ಮಾಡುವ ಸಾಧನಗಳನ್ನೂ ರಾಟೆಯನ್ನೂ ಕೂಲಂಕಷವಾಗಿ ಪರೀಕ್ಷಿಸತಕ್ಕದ್ದು. ವಿಶೇಷತಃ ಕದಿರು ತಕ್ಕಷ್ಟು ಸುತ್ತು ಚನ್ನಾಗಿ ತಿರುಗುತ್ತದೊ ಇಲ್ಲವೊ ಎಂಬುದನ್ನು ನೋಡತಕ್ಕದ್ದು. ಏಕೆಂದರೆ ಸರಿ ಇಲ್ಲದ ಕದಿರಿನಿಂದ ಸರಿಯಾದ ನೂಲು ಬರದು. ಆದರೂ ಅವನಿಗೆ ಎಷ್ಟು ನೂತರೂ ಅಷ್ಟೇ ಕೊಡಬೇಕು, ಅಥವಾ ಬೇಕಾದವನು ಬೇಕಾದಷ್ಟು ನೂತರೂ ಅವನಿಗೆ ಹೆಚ್ಚು ದರವನ್ನು ಕೊಡಬೇಕು ಎಂದು ಯಾರೂ ತಿಳಿದುಕೊಳ್ಳಕೂಡದು. ನಿಶ್ಚಿತ ಸಮಯದಲ್ಲಿ ಯಾರು ಹೆಚ್ಚು ಗಜ ಮತ್ತು ಹೆಚ್ಚು ಸಮನಾದ ನೂಲನ್ನು ತೆಗೆಯುವರೊ ಅವರಿಗೆ ಹೆಚ್ಚು ಕೂಲಿಯು ದೊರೆಯತಕ್ಕದ್ದು ಯೋಗ್ಯ. ನೂಲುವವನು ತನ್ನ ನೂಲುವ ರೀತಿಯಲ್ಲಿ ಸುಧಾರಣೆ ಮಾಡಿಕೊಳ್ಳದಿದ್ದರೆ ಅವನಿಗೆ ಹೆಚ್ಚಿನ ಕೂಲಿ ದೊರೆಯುವ ಸಂಭವವಿಲ್ಲ.

(೧೩) ಮೇಲೆ ಹೇಳಿದ ಮಾತುಗಳಿಂದ ಸಿದ್ಧವಾಗುವುದೇನೆಂದರೆ: ಚರ್ಖಾ ಸಂಘವು ಹೊಸ ರಾಟೆ ಹೊಸ ಕದಿರು ಮುಂತಾದ ಎಲ್ಲ ಸಾಧನಗಳನ್ನು ಮೊದಲಿಗೆ ಅಗ್ಗವಾಗಿ ಪೂರೈಸತಕ್ಕದ್ದು. ಎಷ್ಟೋ ಕಡೆಯಲ್ಲಿ ರಾಟೆಯು ಕದಿರು ಮುಂತಾದುವುಗಳಲ್ಲಿ ಸುಧಾರಣೆ ಮಾಡಿದರೆ ಸಾಕು, ನೂಲು ತಾನಾ

ಗಿಯೆ ಸುಧಾರಿಸುವುದು.

೭ ನೂಲುವುದು ಒಂದು ಯಜ್ಞ-ಕಾರ್ಯ

೧ ತನ್ನ ಆರ್ಥಿಕ ಲಾಭದ ಕಡೆಗೆ ಗಮನಿಸದೆ ಬಡವರ ಉಪಯೋಗಕ್ಕಾಗಿ ನೂಲುವುದು ಯಜ್ಞ-ಕಾರ್ಯವೆನಿಸುವುದು.

೨ ಬಡವರ ಮತ್ತು ದೇಶದ ಹಿತವನ್ನು ಬಯಸುವವರು ದಿನವೂ ನೂಲುವ ಯಜ್ಞ-ಕಾರ್ಯವನ್ನು ಮಾಡತಕ್ಕದ್ದು.

೩ ಹೀಗೆ ಮಾಡುವುದರಿಂದ ಅಲ್ಪವಾದರೂ ಆರ್ಥಿಕ ಲಾಭವನ್ನು ಪಡೆಯ ಬೇಕೆನ್ನುವ ಬಡವರು ಕೂಡ ನೂಲತೊಡಗುವರು.

೪ ಇದರಿಂದ ಉತ್ಪಾದಕ ಶ್ರಮಪಡದೆ ನಾನಾ ವಸ್ತುಗಳನ್ನು ಉಪ-ಭೋಗಿಸುವಂಥ ನಮಗೆ ಇಂಥ ಉತ್ಪಾದಕ-ಶ್ರಮದ ಮಹಿಮೆಯು ತಿಳಿಯುವುದಲ್ಲದೆ ನಾವು ಅದಕ್ಕಾಗಿ ಸ್ವಲ್ಪವಾದರೂ ಶ್ರಮವನ್ನು ವಹಿಸಲು ತೊಡಗುವೆವು.

೫ ಹೀಗೆ ಶ್ರೀಮಂತರೂ ಬಡವರೂ ಒಂದೇ ತರದ ಶ್ರಮದಲ್ಲಿ ಸಮಾನ ಪಾಲುಗಾರರಾಗಿ ಒಬ್ಬರು ಇನ್ನೊಬ್ಬರೊಡನೆ ಬಳಕೆಯನ್ನಿಡಲು ಆರಂಭಿಸುವರು.

೬ ನಾವು ರಾಟಿಯನ್ನು ಬಿಟ್ಟುಕೊಟ್ಟು ಪರದೇಶೀ ವಸ್ತ್ರಗಳನ್ನು ಬಳಸುವ ಪಾಪವನ್ನು ಮಾಡಿದ್ದಕ್ಕಾಗಿ ನೂಲುವ ಯಜ್ಞ-ಕಾರ್ಯವನ್ನು ಮಾಡುವುದೆ ಪ್ರಾಯಶ್ಚಿತ್ತವೆನಿಸುವುದು.

೭ ಆದ್ದರಿಂದ ನೂಲುವುದು ಇಂದು ಬರಿಯ ಸ್ತ್ರೀಯರ ಕರ್ತವ್ಯವಲ್ಲ, ಬಾಲಕರ ಮತ್ತು ಪುರುಷರ ಕರ್ತವ್ಯವೂ ಆಗಿದೆ.

೮ ತಮಗೆ ಬೇಕಾಗುವ ನೂಲನ್ನು ತಾವೇ ತೆಗೆಯುವವರು ತಮ್ಮ ಮಟ್ಟಿಗೆ ಹೊಣೆಯನ್ನು ಹೊತ್ತುಕೊಂಡು ಒಟ್ಟು ದೇಶಕ್ಕೆ ಬೇಕಾಗುವ ಬಟ್ಟೆಯನ್ನು ಅಂಶತಃ ಹುಟ್ಟಿಸುವ ಕಾರ್ಯದಲ್ಲಿ ಸಹಾಯ ಮಾಡಿದಂತಾಗುವುದೆಂಬುದು ನಿಜ. ಆದರೆ ಹೀಗೆ ನೂಲುವುದು ಯಜ್ಞ-ಕಾರ್ಯವೆನಿಸುವುದಿಲ್ಲ.

೯ ಹೀಗೆ ನೂಲುವುದರಿಂದ ದೊರೆತ ಕೂಲಿಯ ದಾನವು ದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ದೊರೆತರೆ ಆದರಿಂದ ಬಡವರ ಕೂಲಿಯೂ ಕಡಮೆ ಆಗುವುದಿಲ್ಲ, ಕೂಲಿಯ ಖಾದಿಯೂ ಅಗ್ಗವಾಗಬಲ್ಲುದು.

ಯಜ್ಞಾರ್ಥ ನೂಲುವುದು:

ಕಾಂಗ್ರೆಸ್ಸಿನ ನಾಲ್ಕಾಣೆ ಸಭಾಸದರೆಲ್ಲರೂ ಯಜ್ಞಾರ್ಥವಾಗಿ ನೂತು ಕಾಂಗ್ರೆಸ್ ಸಂಸ್ಥೆಗೆ ವರುಷಕ್ಕೆ ೧೨೦೦೦ ಗಜ ನೂಲು ದಾನವಾಗಿ ಕೊಟ್ಟರೆ ಎಷ್ಟು ಲಾಭವಾಗುವುದು, ಹಾಗೂ ರಾಷ್ಟ್ರದ ಖಾದೀ ಉದ್ಯೋಗದ ಮೇಲೆ ಅದರ ಪರಿಣಾಮವೇನಾಗುವುದು, ಎಂಬುದನ್ನು ಶ್ರೀ. ಕೃಷ್ಣದಾಸ ಗಾಂಧಿ ಯವರು ಕೆಳಗಿನಂತೆ ವಿವರಿಸಿದ್ದಾರೆ:

(೧) ಪ್ರಾಥಮಿಕ ಸಭಾಸದರ ಸಂಖ್ಯೆ ೪೦ ಲಕ್ಷ.

(೨) ಪ್ರತಿ ಸಭಾಸದನು ತಿಂಗಳಿಗೆ ಒಂದು ಸಾವಿರ ಗಜದಂತೆ ವರ್ಷಕ್ಕೆ ೧೨೦೦೦ ಗಜ ಕೊಟ್ಟರೆ ಅದರ ಸರಾಸರಿ ಬೆಲೆ ೪೦ ಲಕ್ಷ ರೂಪಾಯಿ.

(೩) ಆ ನೂಲಿನಿಂದ ಹುಟ್ಟಿದ ಖಾದೀ ಬಟ್ಟೆಯ ಬೆಲೆ ೪೮ ಲಕ್ಷ ರೂಪಾಯಿ. ೧೯೩೯ರಲ್ಲಿ ಚರ್‌ಖಾ ಸಂಘದ ಖಾದೀ ಮಾರಾಟ ೭೫ ಲಕ್ಷ ರೂಪಾಯಿ. ಇವೆರಡೂ ಕೂಡಿ ಒಟ್ಟು ಖಾದೀ ಮಾರಾಟ ೧೨೩ ಲಕ್ಷ ರೂಪಾಯಿ. ಖಾದಿಯನ್ನು ನಿರ್ಮಿಸಲು ಚರಖಾ ಸಂಘಕ್ಕೆ ವೆಚ್ಚ ೮೩ ಲಕ್ಷ ರೂಪಾಯಿ. (೧೨೩ ಲಕ್ಷ–೪೦ ಲಕ್ಷ.) ಅರ್ಥಾತ್ ಖಾದೀ ಹುಟ್ಟುವಳಿಯಲ್ಲಿ ಹೆಚ್ಚಳ ನೂರಕ್ಕೆ ೬೪, ಅಥವಾ ಖಾದೀ ಮಾರಾಟದ ದರದಲ್ಲಿ ಕಡಮೆ ನೂರಕ್ಕೆ ೩೨·೫, ಅಥವಾ ದರ ಇಳಿಸದೆ ನೂಲುವವರಿಗೆ ಕೊಟ್ಟ ಹೆಚ್ಚು ಕೂಲಿ ಬಹುಶಃ ನೂರಕ್ಕೆ ೮೦ರಿಂದ ೧೦೦.

(೪) ಚರ್‌ಖಾ ಸಂಘದ ನಿಯಮದಂತೆ ಸಭಾಸದನು ಹತ್ತಿಯ ಬೆಲೆ ಯನ್ನು ಕಳೆದು (೫ ಆಣೆ) ನೂಲನ್ನು ತಿರುಗಿ (೧೧ ಆಣೆಗೆ) ಕೊಳ್ಳಬಹುದು. ಹಾಗೆ ಎಲ್ಲರೂ ಮಾಡಿದ್ದಾದರೆ, ಚರ್‌ಖಾ ಸಂಘಕ್ಕೆ ೨೭.೫ ಲಕ್ಷ ರೂಪಾಯಿ, ಆ ಮೂಲಕ ಚರ್‌ಖಾ ಸಂಘದ ಖಾದಿಯ ಮೂಲ ಬೆಲೆ (೭೫ ರೂಪಾಯಿ–೨೭·೫ ರೂಪಾಯಿ) ೪೭·೫ ಲಕ್ಷ ರೂಪಾಯಿ ಆಗುವುದು. ಈ ಮೂಲಕ ಚರ್‌ಖಾ ಸಂಘವು ಮೇಲಿನ ಲೆಕ್ಕದಲ್ಲಿ ಹೇಳಿದ ನೂರಕ್ಕೆ ೩೨·೫ರ ಬದಲು ನೂರಕ್ಕೆ ೩೭ರಂತೆ ಬೆಲೆ ಕಡಮೆ ಮಾಡಬಹುದು. ವರ್‌ಗಣಿ ಎಂದು ಕೊಟ್ಟ ನೂಲು ೪೦ ಲಕ್ಷ ರೂಪಾಯಿಯದು ಇದ್ದ ಪಕ್ಷದಲ್ಲಿ ಪ್ರತಿಯೊಬ್ಬ ಸಭಾಸದನು ನಿಜವಾಗಿ ಎಂಟೇ ಆಣೆ ಕೊಟ್ಟಂತಾಗುವುದು. ಉಳಿದದ್ದು ಅವನ ಶ್ರಮದ ಬೆಲೆ; ನಗದು ಹಣವಲ್ಲ. ಈ ಎಂಟಾಣೆ ಎಂದರೆ ಹತ್ತಿಯ ಬೆಲೆ ಮತ್ತು ಹಿಂಜುವ ಕೂಲಿ ಮಾತ್ರ. ಅವನು ಸ್ವತಃ ಹಿಂಜಿ ಹಂಜಿ ಮಾಡುತ್ತಿದ್ದರೆ

ಅವನ ಬೊಕ್ಕಣದಿಂದ ಎಂಟಾಣೆ ಸಹ ಹೋಗುವುದಿಲ್ಲ. ನೂಲಿನ ನಂಬರು ಹೆಚ್ಚು ಇದ್ದ ಹಾಗೆಲ್ಲ ಹತ್ತಿ ಕಡಮೆ ಬೇಕಾಗುವುದು, ಹಾಗೂ ನೂಲುವ ಪರಿಶ್ರಮ ಹೆಚ್ಚು ಆಗುವುದು.

ಪೂರ್ವಗ್ರಹಗಳನ್ನು ಬಿಟ್ಟು ಯೋಚಿಸುವವರಿಗೆ ಈ ಮೇಲಿನ ಮಾತುಗಳಲ್ಲಿ ಬೇಕಾದಷ್ಟು ಆಸ್ಪದವಿದೆ.

೮ ಖಾದೀ ಕಾರ್ಯ

೧ ಖಾದೀ ಹುಟ್ಟುವಳಿಯು ಮತ್ತು ಮಾರಾಟದ ಕಾರ್ಯದಲ್ಲಿ ಮಹತ್ವಾಕಾಂಕ್ಷಿಗಳಾದ ನೂರಾರು ತರುಣರು ತಮ್ಮ ಬುದ್ಧಿ, ವ್ಯವಸ್ಥಾಶಕ್ತಿ, ವ್ಯಾಪಾರ-ಕೌಶಲ್ಯ, ಮತ್ತು ಶಾಸ್ತ್ರೀಯ ಜ್ಞಾನವನ್ನು ತೋರಿಸಲು ತಕ್ಕಷ್ಟು ಅವಕಾಶವಿದೆ. ಇದೊಂದೇ ಕಾರ್ಯವನ್ನು ಚನ್ನಾಗಿ ನಡೆಸಿ ತೋರಿಸಿದರೆ ಪ್ರಜೆಗಳಲ್ಲಿ ಸ್ವರಾಜ್ಯವನ್ನು ನಡೆಸುವ ಶಕ್ತಿಯೂ ಇದೆಯೆಂದು ಸಿದ್ಧಮಾಡಿದಂತಾಗುವುದು.

೨ ಖಾದೀ ಸೂರ್ಯನ ಸುತ್ತುಮುತ್ತಲು ಹಳ್ಳಿಯ ಉದ್ಯೋಗಗಳು ಗ್ರಹಗಳಂತೆ ಹೊಳೆಯಲಾರಂಭಿಸಬಹುದು; ಈಗ ಬಲಾತ್ಕಾರದಿಂದ ನಿರುದ್ಯೋಗಿಗಳೂ ಸೋಮಾರಿಗಳೂ ಆದ ಪ್ರಜೆಗಳ ಮನೆಗಳು ಆ ಉದ್ಯೋಗಗಳಿಂದಲೂ ಅದರಿಂದ ದೊರೆಯುತಕ್ಕ ಉಪಜೀವನದಿಂದಲೂ ಶೋಭಿಸಲಾರಂಭಿಸುವುವು.

೩ ಇಂದು ಈ ಕಾರ್ಯವು ಆತ್ಮಶುದ್ಧಿಯ ವಿಷಯದಲ್ಲಿ ಚನ್ನಾಗಿ ನೆರವಾಗುತ್ತಲಿರುವುದು. ಈ ಕಾರಣದಿಂದ ಕಾರ್ಯಕರ್ತರು ಹಳ್ಳಿ ಹಳ್ಳಿಗೆ ಸ್ವರಾಜ್ಯದ ಮತ್ತು ಅದರ ಸಿದ್ಧತೆಗಾಗಿ ಪ್ರಜೆಗಳನ್ನು ಅಣಿ ಮಾಡುವುದಕ್ಕೋಸ್ಕರ ಮಾಡತಕ್ಕ ನಾನಾ ಕಾರ್ಯಕ್ರಮಗಳ (ಅಹಿಂಸೆ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಸ್ವಚ್ಛತೆ, ಜಾತೀಯ ಐಕ್ಯ, ಮುಂತಾದುವುಗಳ) ಸಂದೇಶವನ್ನು ಮುಟ್ಟಿಸುತ್ತಿದ್ದಾರೆ.

೪ ಖಾದೀ ಶಾಸ್ತ್ರವನ್ನು ಕುರಿತು ಸರ್ವವಿಧದ ಜ್ಞಾನವನ್ನೂ ಮಾಡಿಕೊಡುವಂಥ, ಮತ್ತು ಅದರಲ್ಲಿ ಶೋಧಗಳನ್ನು ಮಾಡುವಂಥ ಒಂದು ವಿಭಾಗವು ಇರುವುದು ಆಗತ್ಯ.

ದಶಮ ಖಂಡ

ಸ್ವಚ್ಛತೆಯೂ ಆರೋಗ್ಯವೂ

—♦—

೧ ಶಾರೀರಿಕ ಸ್ವಚ್ಛತೆ

೧ ಹಿಂದುಸ್ಥಾನದ ಎಷ್ಟೋ ಜಾತಿಗಳು ಶಾರೀರಿಕ ಸ್ವಚ್ಛತೆಯ ಕಡೆಗೆ ತಕ್ಕಷ್ಟು ಗಮನ ಕೊಟ್ಟಿರುವವು. ಆದರೆ ಇನ್ನೂ ಸಾಮಾನ್ಯ ಜನತೆಯಲ್ಲಿ ಈ ಬಗೆಗೆ ಬಹಳ ಕೆಲಸ ಮಾಡಬೇಕಾಗಿದೆ.

೨ ಉಚ್ಚ ಜಾತಿಯ ಜನರು ತಮ್ಮ ಮಕ್ಕಳ ಸ್ವಚ್ಛತೆಯ ಕಡೆಗೆ ತೀರ ಸ್ವಲ್ಪ ಗಮನ ಕೊಟ್ಟಿರುವರು. ಮಕ್ಕಳು ತಾವೇ ಚೊಕ್ಕಟವಾಗಿರುವ ಶಕ್ತಿಯನ್ನು ಸಂಪಾದಿಸಿಕೊಳ್ಳುವ ಮೊದಲು ತಂದೆ-ತಾಯಂದಿರು ತಮ್ಮ ಮಕ್ಕಳ ಸ್ವಚ್ಛತೆಯ ಕಡೆಗೆ ತಕ್ಕಷ್ಟು ಲಕ್ಷ್ಯಕೊಡುವಂತೆ ಕಂಡುಬರುವುದಿಲ್ಲ.

೩ ಸ್ನಾನವು ತಮ್ಮ ಧರ್ಮದ ಒಂದು ಅಂಗವೆಂದು ಅನೇಕ ಹಿಂದು ಜನರು ಒಪ್ಪುತ್ತಾರೆ. ಆದರೆ ಎಲ್ಲ ಹಿಂದುಗಳು ಹಾಗೆ ಒಪ್ಪುತ್ತಾರೆಂದು ಹೇಳಲಾಗದು. ಹಿಂದುಸ್ಥಾನದಲ್ಲಿ ಇತರ ಜಾತಿಗಳಲ್ಲಿ ದಿನಂಪ್ರತಿ ಸ್ನಾನ ಮಾಡುವ ಅಭ್ಯಾಸವಿಲ್ಲ. ಹಿಂದುಸ್ಥಾನದ ಹವಾಮಾನದ ದೃಷ್ಟಿಯಿಂದ ಸ್ವಚ್ಛತೆಯನ್ನೂ ಆರೋಗ್ಯವನ್ನೂ ಕಾಯ್ದುಕೊಳ್ಳುವುದಕ್ಕಾಗಿ ದಿನವೂ ಸ್ನಾನ ಮಾಡುವುದು ಅಗತ್ಯವಾದದ್ದು.

೪ ಒಂದೆರಡು ತಂಬಿಗೆ ನೀರು ಹುಯ್ದುಕೊಂಡು ಮೈ ತೋಯ್ಸಿಕೊಳ್ಳುವುದು ಸ್ನಾನವೆನಿಸುವುದಿಲ್ಲ. ಎಷ್ಟೋ ಜನರು ಹೀಗೆಯೇ ಸ್ನಾನ ಮಾಡುತ್ತಾರೆ. ಶರೀರದ ಮೇಲಿನ ಹೊಲಸನ್ನು ನೀರಿನಿಂದ ಚನ್ನಾಗಿ ತೊಳೆದು ಚರ್ಮ-ಛಿದ್ರಗಳನ್ನು ತೆರೆಯುವುದೆ ಸ್ನಾನವೆನಿಸುವುದು. ಆದ್ದರಿಂದ ಸ್ನಾನದ ನೀರು, ಕುಡಿಯುವ ನೀರಿನಷ್ಟೆ ಚೊಕ್ಕಟವಾಗಿರತಕ್ಕದ್ದು. ಹಸನಾದ ನೀರು ತಕ್ಕಷ್ಟು ದೊರೆಯದಿದ್ದರೆ ಹೊಲಸು ನೀರಿನಿಂದ ಮೀಯುವುದಕ್ಕಿಂತ ಒಳ್ಳೇ ನೀರಿನಲ್ಲಿ ಬಟ್ಟೆಯನ್ನು ತೋಯಿಸಿ ಅದರಿಂದ ಮೈಯನ್ನು ಚನ್ನಾಗಿ ತಿಕ್ಕಿಕೊಳ್ಳುವುದು ಲೇಸು. ನಮ್ಮ ದೇಶದ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಸ್ನಾನದ ನೀರು ಸ್ನಾನಕ್ಕೆ ಯೋಗ್ಯವಾಗುವಷ್ಟು ಸ್ವಚ್ಛವಾಗಿರುವುದೆಂದು ಹೇಳಲಾಗುವುದಿಲ್ಲ.

೫ ಕಣ್ಣು, ಕಿವಿ, ಮೂಗು, ಹಲ್ಲು, ಉಗುರು, ಕಂಕುಳು ಮುಂತಾದ ಸಂದುಗಳಲ್ಲಿ ಆಗಾಗ ಉಂಟಾಗುತ್ತಿರುವ ಕೊಳೆಯನ್ನು ತೆಗೆದುಹಾಕುವುದರ ಕಡೆಗೆ ಬಹು ಜನರ ಲಕ್ಷ್ಯವು ಹೋಗುವುದಿಲ್ಲ. ವಿಶೇಷತಃ ಚಿಕ್ಕ ಮಕ್ಕಳ ಈ ಅಂಗಗಳ ಸ್ವಚ್ಛತೆಯ ಕಡೆಗೆ ಹಿರಿಯರು ಗಮನಕೊಡುವುದಿಲ್ಲ. ಮಕ್ಕಳ ಕಣ್ಣು ಮೂಗಿನೊಳಗಿನ ಹೊಲಸನ್ನು ದಿನವೂ ನಿರ್ಮಲವಾದ ನೀರು-ಬಟ್ಟೆಯಿಂದ ಸ್ವಚ್ಛ ಮಾಡುವುದಿಲ್ಲ. ಇದ್ದರಿಂದಲೆ ಕಣ್ಣು-ಬೇನೆಯು ಬರುತ್ತದೆ. ಈ ಅಂಗಗಳನ್ನು ಸ್ವಚ್ಛವಾಗಿಡುವ ಅಭ್ಯಾಸವೂ ಹೊಲಸಿನ ಬಗೆಗೆ ತಿರಸ್ಕಾರವೂ ನಮ್ಮ ಜನಗಳಲ್ಲಿ ಇಲ್ಲವೆನ್ನುವುದು ಎದ್ದು ಕಾಣುತ್ತದೆ. ಆದ್ದರಿಂದ ಇದು ಗ್ರಾಮ ಸೇವಕರೂ ಶಿಕ್ಷಕರೂ ಹೆಚ್ಚು ಗಮನಕೊಡತಕ್ಕಂಥ ವಿಷಯವಾಗಿದೆ.

೬ ಬಟ್ಟೆಗಳ ಸ್ವಚ್ಛತೆಯೂ ಶಾರೀರಿಕ ಸ್ವಚ್ಛತೆಯ ಒಂದು ಅಂಗ. ಬಟ್ಟೆಗಳ ಅಸ್ವಚ್ಛತೆಗೆ ಬಡತನವು ಕಾರಣವಲ್ಲವೆನ್ನಬಹುದು. ಆಲಸ್ಯದಿಂದಲೂ, ಉತ್ತಮ ರೂಢಿಗಳ ಅಭಾವದಿಂದಲೂ ಬಟ್ಟೆಗಳಲ್ಲಿ ಕೊಳೆ ಸೇರಿಕೊಳ್ಳುತ್ತದೆ.

೭ ತೇಪೆ ಹಚ್ಚಿ ಹೊಲಿದ ಬಟ್ಟೆಗಳಿಂದ ಪ್ರಕಟವಾಗುವುದು ಮನುಷ್ಯನ ಬಡತನವಲ್ಲ. ಅದಕ್ಕೋಸುಗ ನಾಚಿಕೊಳ್ಳಬೇಕಾಗಿಯೂ ಇಲ್ಲ. ಪಟು-ಭಟರಿಗೆ ಗಾಯಗಳು ಹೇಗೋ ಹಾಗೆ ಬಡವರಿಗೆ ತೇಪೆಗಳು ಭೂಷಣಗಳು. ಆದರೆ ಬಟ್ಟೆಗಳನ್ನು ಕೊಳಕಾಗಿಟ್ಟುಕೊಳ್ಳುವುದು, ಹರಿದಿದ್ದರೆ ಅವನ್ನು ಹೊಲಿಯದೆ ಇರುವುದು, ಮನುಷ್ಯನ ಬಡತನವನ್ನೂ ಆಲಸ್ಯವನ್ನೂ ಬೈಲಿಗೆಳೆಯುವವು. ಇದು ನಾಚಿಕೆಪಡಬೇಕಾದ ಮಾತು.

೮ ಸ್ವಚ್ಛ ಬಟ್ಟೆಗಳೆಂದರೆ ಹಾಲಿನಷ್ಟು ಬೆಳ್ಳಗಿರಬೇಕೆಂದು ತಿಳಿಯತಕ್ಕದ್ದಲ್ಲ. ಶಾರೀರಿಕ ಶ್ರಮದ ಮತ್ತು ಕೂಲಿಯ ಬಡಜನರು ತಮ್ಮ ಬಟ್ಟೆಗಳನ್ನು ಸುಣ್ಣದ ಹಾಗೆ ಬೆಳ್ಳಗೆ ಇಡಲಾರರು. ಆದರೆ ಅವರು ತಮ್ಮ ಬಟ್ಟೆಗಳನ್ನು ನಿರ್ಮಲವಾದ ನೀರಿನಲ್ಲಿ ತೊಳೆದುಕೊಳ್ಳುವುದು, ಆಗಾಗ ಸಾಬೋನು ಅಂಟ್ವಾಳ ಕಾಯಿ ಮುಂತಾದ ಪದಾರ್ಥಗಳಿಂದ ಸ್ವಚ್ಛ ಮಾಡಿಕೊಳ್ಳುವುದು, ಕುದಿಯುವ ನೀರಿನಲ್ಲಿ ಅದ್ದಿ ಒಗೆದುಕೊಂಡು ಜಂತುರಹಿತ ಮಾಡಿಕೊಳ್ಳುವುದು ಅಗತ್ಯವಾದದ್ದು.

೯ ತೊಟ್ಟ ಬಟ್ಟೆಯಿಂದಲೆ ಮೂಗು ಕೈ ಮುಂತಾದುವುಗಳನ್ನು ಉಜ್ಜಿಕೊಳ್ಳುವುದು, ಮತ್ತು ಅದೇ ಬಟ್ಟೆಯಲ್ಲಿ ರೊಟ್ಟಿ ಮೊದಲಾದ ಪದಾರ್ಥಗಳನ್ನು ಕಟ್ಟಿಕೊಂಡು ಒಯ್ಯುವುದು ಅತ್ಯಂತ ಹೇಸಿ ಚಟ. ತೊಟ್ಟ ಬಟ್ಟೆಯ ಹೊರತು

ಬೇರೆ ಬಟ್ಟೆಯೆ ಇಲ್ಲದವರು ಹಳೆಯ ಬಟ್ಟೆಗಳಿಂದ ಕೈವಸ್ತ್ರಗಳನ್ನೂ ಅಂಗವಸ್ತ್ರಗಳನ್ನೂ ಮಾಡಿಕೊಂಡು ಅವನ್ನು ಮೇಲಿನ ಕಾರ್ಯಕ್ಕಾಗಿ ಉಪಯೋಗಿಸತಕ್ಕದ್ದು. ಇದಕ್ಕೆ ಹೆಚ್ಚು ಶ್ರಮವೂ ಬೇಕಾಗುವುದಿಲ್ಲ, ಹೆಚ್ಚು ವೆಚ್ಚವೂ ತಗಲುವುದಿಲ್ಲ. ಇದರಿಂದ, ಧರಿಸಿದ ಬಟ್ಟೆಗಳೂ ಸ್ವಚ್ಛವಾಗಿ ಉಳಿಯುವವು; ಮತ್ತು ಈ ಚಿಕ್ಕ ವಸ್ತ್ರಗಳನ್ನು ಚೊಕ್ಕಟವಾಗಿಡುವುದೂ ಸುಲಭವಾಗುವುದು.

೨ ಒಳ್ಳೆಯ ಮತ್ತು ಸ್ವಚ್ಛ ರೂಢಿಗಳು

ಶಾರೀರಿಕ ಸ್ವಚ್ಛತೆಯ ಅಭ್ಯಾಸವಲ್ಲದೆ ಒಳ್ಳೆಯ ಮತ್ತು ಸ್ವಚ್ಛವಾದ ಇನ್ನೂ ಕೆಲವು ಸಂಸ್ಕಾರದ ಅಭ್ಯಾಸಗಳನ್ನು ಇಟ್ಟುಕೊಳ್ಳುವುದು ಅವಶ್ಯವಿದೆ. ನಮ್ಮಲ್ಲಿ ಈ ಸ್ವಭಾವವಿಲ್ಲದ್ದರಿಂದ ನಮ್ಮನ್ನು ನೋಡಿ ಒಳ್ಳೆಯ ಅಭ್ಯಾಸಗಳಿದ್ದ ಜನರು ಹೇಸಿಕೊಳ್ಳುವರು. ನಮ್ಮ ಬಗೆಗೆ ಅವರಲ್ಲಿ ತಿರಸ್ಕಾರವು ಹುಟ್ಟುವುದು.

೨ ಕೊಳಕುತನವನ್ನು ಎಂದೂ ಸಹಿಸಿಕೊಳ್ಳದಂಥ ಶಿಕ್ಷಣವನ್ನು ನಾವು ನಮ್ಮ ಕಣ್ಣುಗಳಿಗೆ ಕೊಡತಕ್ಕದ್ದು. ಹೊಲಸನ್ನು ಕಂಡ ಕೂಡಲೆ ಓಡಿಹೋಗಬೇಕೆಂದು ಅದರ ಅರ್ಥವಲ್ಲ. ಆ ಸ್ಥಳವನ್ನು ಸ್ವಚ್ಛವಾಗಿಡಲು ಯತ್ನಿಸಬೇಕೆಂಬುದೇ ಅದರ ತಾತ್ಪರ್ಯ.

೩ ನಿರ್ದುಷ್ಟ ರೂಢಿಗಳನ್ನಿಟ್ಟುಕೊಂಡ ಮನುಷ್ಯನು ತಾನು ಕುಳಿತುಕೊಳ್ಳುವ ಸ್ಥಳವನ್ನು ಸ್ವಚ್ಛ ಮಾಡದೆ ಕುಳಿತುಕೊಳ್ಳುವುದಿಲ್ಲ. ಕೂತಾಗ ಹೊಲಸು ಬಿದ್ದಿದ್ದರೆ ಎದ್ದ ಮೇಲೂ ಆ ಸ್ಥಳವನ್ನು ಸ್ವಚ್ಛಮಾಡುವನು. ಅವನು ಕಾಗದಗಳನ್ನು ಹರಿದು ಮನಬಂದತ್ತ ಚಲ್ಲುವುದಿಲ್ಲ; ಅಲ್ಲಿ-ಇಲ್ಲಿ ಉಗುಳುವುದಿಲ್ಲ; ಹಲ್ಲು ಉಜ್ಜುವ ಕಡ್ಡಿಗಳನ್ನೂ ಬೀಡಿಯ ತುಣುಕುಗಳನ್ನೂ ಬೆಂಕಿಕಡ್ಡಿಯ ಚೂರುಗಳನ್ನೂ ಇದೇ ಬಗೆಯ ಪದಾರ್ಥಗಳನ್ನೂ ಕೈಹೋದತ್ತ ಎಸೆಯುವುದಿಲ್ಲ. ಇವುಗಳ ಸಲುವಾಗಿ ಪ್ರತ್ಯೇಕವಾಗಿ ಒಂದು ಬುಟ್ಟಿಯನ್ನಾಗಲಿ ಪಾತ್ರೆಯನ್ನಾಗಲಿ ಒಂದೆಡೆಯಲ್ಲಿ ಇಟ್ಟು ಅದರೊಳಗೇ ಎಸೆಯುವನು. ನಿರ್ದುಷ್ಟ ಮತ್ತು ಸ್ವಚ್ಛ ರೂಢಿಗಳುಳ್ಳವರಾಗಬೇಕಾದರೆ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು:

೪ ನೀರು ತೆಗೆದುಕೊಳ್ಳದೆ ಮಲಮೂತ್ರ-ವಿಸರ್ಜನೆಗೆ ಹೋಗಕೂಡದು.

೫ ಮಲವಿಸರ್ಜನೆಗೆ ಹೋಗಿ ಬಂದ ಬಳಿಕ ಕೈಕಾಲುಗಳನ್ನು ಚನ್ನಾಗಿ

ತೊಳೆದುಕೊಂಡು ತಂಬಿಗೆಯನ್ನೂ ತಿಕ್ಕಿ ತೊಳೆದಿಡತಕ್ಕದ್ದು.

೬ ಕುಡಿಯುವ ನೀರಿನಲ್ಲಿ ಅದ್ದಲು ಪ್ರತ್ಯೇಕ ಪಾತ್ರೆ ಇರತಕ್ಕದ್ದು. ಎಂಜಲು ಪಾತ್ರೆಯನ್ನು ಅದರಲ್ಲಿ ಎಂದೂ ಅದ್ದಕೂಡದು. ಕುಡಿಯುವ ಪಾತ್ರೆಗೆ ನೀರು ಸಿಡಿಯುವಂತೆ, ಅಥವಾ ಅದರ ಮೇಲೆ ನೀರು ಬೀಳುವಂತೆ, ಅದರ ಬಳಿ ನಿಂತು ನೀರು ಕುಡಿಯತಕ್ಕದ್ದಲ್ಲ.

೭ ನೀರು ಕುಡಿಯಲು ಬಹಳ ಜನರಿಗೆ ಒಂದೇ ಪಾತ್ರೆಯು ಇದ್ದರೆ ಅದನ್ನು ಕಚ್ಚಿ ನೀರು ಕುಡಿಯುವುದು ತರವಲ್ಲ. ಪಾತ್ರೆಯನ್ನು ಕಚ್ಚದೆ ನೀರು ಕುಡಿಯುವ ರೂಢಿಯನ್ನಿಡತಕ್ಕದ್ದು. ಕಚ್ಚಿ ಕುಡಿಯುವ ಅಭ್ಯಾಸವಿದ್ದವರು ತಮಗಾಗಿ ಒಂದು ಬೇರೆ ಪಾತ್ರೆಯನ್ನೇ ಇಟ್ಟುಕೊಳ್ಳತಕ್ಕದ್ದು, ಇಲ್ಲವೆ ಬೊಗಸೆಯಿಂದ ನೀರು ಕುಡಿಯತಕ್ಕದ್ದು.

೮ ಊಟ ಮಾಡಿದ ಸ್ಥಾನದಲ್ಲಿ ಮುಸುರೆಯ ಪದಾರ್ಥಗಳನ್ನು ಹರಡಿದ್ದರೆ ಅವನ್ನು ತೆಗೆದು ಆ ಸ್ಥಾನವನ್ನು ಸಗಣಿಯಿಂದ ಸಾರಿಸಬೇಕು. ಆ ಸ್ಥಳ ಮನೆಯ ಹೊರಗೆ ಇದ್ದರೆ ಚನ್ನಾಗಿ ಗೂಡಿಸಿ ನೀರು ಚಿಮುಕಿಸಬೇಕು. ಹೀಗೆ ಮಾಡುವ ಮೊದಲು ಆ ಸ್ಥಳದಲ್ಲಿ ತಿರುಗಾಡುವುದು, ತಿರುಗಾಡಿದ ಮೇಲೆ ಪಾದಪ್ರಕ್ಷಾಲನ ಮಾಡಿಕೊಳ್ಳದೆ ಸ್ವಚ್ಛವಾದ ಕೋಣೆಗಳಲ್ಲಿ ಪ್ರವೇಶಿಸುವುದು, ಆ ಸ್ಥಾನಗಳಲ್ಲಿ ಬೇರೆಯವರಿಗೆ ಊಟಕ್ಕೆ ಹಾಕುವುದು ಲೇಸಲ್ಲ.

೯ ಸಾಮಾನ್ಯವಾಗಿ ಸೌಟು ಮತ್ತು ಚಮಚದಿಂದಲೆ ಊಟಕ್ಕೆ ಬಡಿಸತಕ್ಕದ್ದು. ಕಾಯಿಪಲ್ಲೆ ಬೇಳೆ ಅನ್ನ ಮುಂತಾದ ಪದಾರ್ಥಗಳನ್ನು ಕೈಯಿಂದ ಬಡಿಸುವುದು ಯೋಗ್ಯವಲ್ಲ. ಎಂಜಲು ಕೈಯಿಂದ ಊಟಕ್ಕೆ ನೀಡುವುದಂತೂ ತೀರ ಅಯೋಗ್ಯ. ರೊಟ್ಟಿಯನ್ನೂ, ಅಥವಾ ಪುರೆಯಂಥ ಒಣ ಮತ್ತು ಕರೆದ ಪದಾರ್ಥಗಳನ್ನೂ ಎಂಜಲು ಕೈಯಿಂದ ಕೊಡತಕ್ಕದ್ದಲ್ಲ.

೧೦ ಉಣ್ಣುವವನ ತಟ್ಟೆಗೆ ಇಲ್ಲವೆ ಬಟ್ಟಲಿಗೆ ತಾಗುವಂತೆ ಬಡಿಸುವುದು ಅಸ್ವಚ್ಛತೆಯ ಗುರುತು; ಮತ್ತು ತಾಗುವುದೆಂಬ ಭಯದಿಂದ ಉಣ್ಣುವ ತಟ್ಟೆಯಲ್ಲಿ ಪದಾರ್ಥಗಳನ್ನು ಮೇಲಿನಿಂದ ಚಲ್ಲುವುದು ಅಸಭ್ಯತನ.

೧೧ ಕೊಳಕು ಕಾಲಿನಿಂದ ಹೋಗಿ ಹಾಸಿಗೆಯ ಮೇಲೆ ಕುಳಿತುಕೊಳ್ಳಕೂಡದು. ಜನರು ಮಲಗುವ ಸ್ಥಾನದಲ್ಲಿ ಯಾರ ಹಾಸಿಗೆಯ ಮೇಲೂ ಕಾಲು ಬೀಳದಂತೆ ಎಚ್ಚರಪಡತಕ್ಕದ್ದು.

೧೨ ದುಡಿದು ಬಂದ ಮೇಲೂ, ಮೂತ್ರವಿಸರ್ಜನೆ ಮಾಡಿ ಬಂದ ಮೇಲೂ,

ಕೈಕಾಲು ತೊಳೆದುಕೊಳ್ಳದೆ ತಿಂಡಿ ತಿನಿಸುಗಳನ್ನು ಮುಟ್ಟಕೂಡದು; ಕುಡಿಯುವ ನೀರಿನಲ್ಲಿ ಕೈ ಅದ್ದಕೂಡದು. ತಾಂಬೂಲದ, ಹೊಗೆಸೊಪ್ಪಿನ, ಇಲ್ಲವೆ ಬೀಡಿಯ ಚಟದವರು ಇತ್ತ ಹೆಚ್ಚು ಗಮನಕೊಡತಕ್ಕದ್ದು. ಆಗಾಗ ತುರಿಸಿಕೊಳ್ಳುವ, ಮೂಗಿನೊಳಗಿನ ಕೊಳೆಯನ್ನು ತೆಗೆದುಹಾಕುವ ಚಟವಿದ್ದವರು ಕೈ ತೊಳೆದುಕೊಳ್ಳದೆ ತಿನ್ನುವ ಪದಾರ್ಥಗಳನ್ನು ಮುಟ್ಟತಕ್ಕದ್ದಲ್ಲ.

೧೩. ಬಟ್ಟೆಗಳನ್ನು ಒಗೆಯುವುದಕ್ಕಾಗಿ ಉಪಯೋಗಿಸಿದ ಪಾತ್ರೆಯನ್ನು ಚನ್ನಾಗಿ ತಿಕ್ಕಿ ತೊಳೆಯದೆ ಬಾವಿಯಲ್ಲಿ ಬಿಡಬಾರದು; ಕುಡಿಯುವ ಹಾಗೂ ಅಡಿಗೆ ಮಾಡುವ ನೀರನ್ನು ಅದರಲ್ಲಿ ತುಂಬಬಾರದು.

೧೪ ಮೂತ್ರ ವಿಸರ್ಜನೆ, ಬಾಯಿ ಮುಕ್ಕುಳಿಸುವಿಕೆ, ಉಗುಳುವಿಕೆ, ಮುಂತಾದ್ದಕ್ಕಾಗಿ ಬಚ್ಚಲು-ಹರಿಗಳನ್ನು ಉಪಯೋಗಿಸುವ ವಾಡಿಕೆ ತೀರ ಹೊಲಸಾದದ್ದು. ಇಂಥ ಹರಿಗಳನ್ನು ಮನೆಯಲ್ಲಿ ಮಾಡಿಸದಿರುವುದೇ ಇಷ್ಟವಾದದ್ದು. ಮೇಲಿನ ಕಾರ್ಯಗಳಿಗಾಗಿ ಪ್ರತ್ಯೇಕವಾಗಿ ಒಂದು ಪಾತ್ರೆಯನ್ನು ಉಪಯೋಗಿಸುವುದು ಮತ್ತು ಆ ಹೊಲಸನ್ನು ದೂರ ಒಯ್ದು ಚೆಲ್ಲಿ ಪಾತ್ರೆಯನ್ನು ಚೊಕ್ಕಟ ಮಾಡುವುದು ಒಳ್ಳೇ ನಿರ್ದುಷ್ಟವಾದ ನಡತೆ. ಕಾಲುವೆ (ಚರಂಡಿ)ಗಳು ಇಲ್ಲದ ಊರುಗಳಲ್ಲಿ ಹರಿಗಳನ್ನು ಉಪಯೋಗಿಸಕೂಡದು.

೧೫. ಆದರೆ ಎಲ್ಲಿ ಬಚ್ಚಲು-ಹರಿಗಳನ್ನು ಉಪಯೋಗಿಸುವುದು ಅವಶ್ಯವಿದೆಯೊ ಅಲ್ಲಿ ಹರಿಗಳಲ್ಲಿ ಮೂತ್ರ-ವಿಸರ್ಜನೆ ಮಾಡಲು ಕುಳಿತುಕೊಳ್ಳುವವರು ಸಮೀಪದಲ್ಲಿ ಪಾತ್ರೆಗಳು ಬಿದ್ದಿದ್ದರೆ ಅವುಗಳನ್ನು ಮೂತ್ರದ ಹನಿಗಳು ಸಿಡಿಯದಷ್ಟು ದೂರದಲ್ಲಿಡತಕ್ಕದ್ದು. ಅವುಗಳಿಗೆ ಹನಿಗಳು ಸಿಡಿಯುವ ಹಾಗೆ ಕೈ ತೊಳೆದುಕೊಳ್ಳತಕ್ಕದ್ದಲ್ಲ, ಬಾಯಿ ಮುಕ್ಕುಳಿಸತಕ್ಕದ್ದಲ್ಲ.

೧೬ ತಾನು ತೊಟ್ಟ ಬಟ್ಟೆಗಳನ್ನು ಸ್ವಚ್ಛಮಾಡದೆ ಬೇರೆಯವರಿಗೆ ಅವನ್ನು ಧರಿಸಲು ಎಂದಿಗೂ ಕೊಡಕೂಡದು.

೧೭ ಬಾಯಿಂದ ಅವಾಚ್ಯ ಶಬ್ದಗಳನ್ನೂ ಬೈಗಳನ್ನೂ ಉಚ್ಚರಿಸುವುದು ಕೂಡ ಶಾರೀರಿಕ ಅಸ್ವಚ್ಛತೆಯೆನಿಸುವುದು. ಪರಮಾತ್ಮನ ನಾಮೋಚ್ಚಾರಣೆ ಮಾಡುವ ನಾಲಗೆಯಿಂದ ಕೆಟ್ಟ ಬೈಗಳನ್ನು ನುಡಿಯುವುದು ಸ್ನಾನ ಮಾಡಿ ತಿಪ್ಪೆಯ ಮೇಲೆ ಮಲಗಿಕೊಳ್ಳುವುದಕ್ಕಿಂತಲೂ ಮಲಿನವಾದುದು, ಹೇಯವಾದುದು. ಏಕೆಂದರೆ ಅದರಿಂದ ನಾಲಗೆಯೊಡನೆ ಮನವೂ ಅಪವಿತ್ರವಾಗುವುದು.

೩ ಬಾಹ್ಯ ಸ್ವಚ್ಛತೆ

೧ ಸ್ವಂತ ಶಾರೀರಿಕ ಸ್ವಚ್ಛತೆಯ ಬಗೆಗೆ ಉಚ್ಚ ವರ್ಗಗಳಿಗೆ ಪ್ರಮಾಣ-ಪತ್ರವನ್ನು ಕೊಟ್ಟರೂ ಕೊಡಬಹುದು; ಆದರೆ ಮನೆ, ಅಂಗಳ, ಹರಿ, ಓಣಿ, ಮಾರ್ಗ ಮೊದಲಾದುವುಗಳ ಸ್ವಚ್ಛತೆಯ ಬಗೆಗೆ ಮಾತ್ರ ಅವರು ತೀರ ಹಿಂದೆ ಬಿದ್ದಿರುತ್ತಾರೆ. ಈ ವಿಷಯದಲ್ಲಿ ದಲಿತ ವರ್ಗಗಳು ಸ್ವಲ್ಪ ಮಟ್ಟಿಗೆ ಒಳ್ಳೇ ಮಟ್ಟವನ್ನು ಇನ್ನೂ ಕಾಯ್ದುಕೊಂಡು ಬಂದಿವೆ. ಒಟ್ಟಿನಲ್ಲಿ ಸರ್ವರೂ ತಮ್ಮ ಜೀವನದಲ್ಲಿ ಈ ಬಗೆಗೆ ಸುಧಾರಣೆ ಮಾಡಿಕೊಳ್ಳುವುದು ಅವಶ್ಯವಾದದ್ದು.

೨ ಅಲ್ಲಿ ಇಲ್ಲಿ ಉಗುಳುವುದು, ಮಲ ಮೂತ್ರ ವಿಸರ್ಜಿಸುವುದು, ಕಸ ಚಲ್ಲುವುದು ಮತ್ತು ಕಸ ಒಂದೆಡೆ ಕೂಡಿಬೀಳುವಂತೆ ಮಾಡುವುದು, ಹಿಂದೀಯರಿಗೆ ರೂಢಿಯಾಗಿಬಿಟ್ಟಿದೆ. ಈ ಅಭ್ಯಾಸದಿಂದ ಹಿಂದುಸ್ತಾನದ ಹಳ್ಳಿ ಪಟ್ಟಣಗಳು, ತೀರ್ಥಕ್ಷೇತ್ರಗಳು, ಮಾರ್ಗಗಳು, ಕೆರೆ-ಕಾಲುವೆಗಳು, ಹೊಳೆ ಹಳ್ಳಗಳು, ಧರ್ಮಶಾಲೆಗಳು, ಉಗಿಬಂಡಿಗಳು, ಸ್ಟೀಮರುಗಳು, ಮುಂತಾದುವೆಲ್ಲ ಕಲಂಕಿತವಾಗಿವೆ.

೩ ಈ ನಡೆವಳಿಕೆಯ ಮೂಲದಲ್ಲಿ ಒಂದು ಬಗೆಯ ಅಸ್ಪೃಶ್ಯತೆಯ ಭಾವನೆ ಇದೆ. ಮನುಷ್ಯನಿದ್ದ ಕಡೆಯಲ್ಲೆಲ್ಲ ಹೊಲಸು ಉಂಟಾಗತಕ್ಕದ್ದೇ. ಆದರೂ ಹಿಂದುಸ್ತಾನದ ಸ್ಪೃಶ್ಯ-ವರ್ಗಗಳು ಸ್ವತಃ ಹೊಲಸನ್ನು ದೂರ ಮಾಡುವುದು ಕೀಳೆಂದು ಭಾವಿಸಿ, ಈ ಪರೋಪಕಾರದ ಕೆಲಸ ಮಾಡುವವರು ಅಸ್ಪೃಶ್ಯರು ಎಂದೆಣಿಸಿ ಹೊಲಸು ತೆಗೆಯುವುದನ್ನು ಬಿಟ್ಟು, ಅದು ಕೂಡಿ-ಬೀಳುವ ರೂಢಿಯನ್ನು ಆಚರಣೆಯಲ್ಲಿ ತಂದಿರುವುವು; ಹೊಲಸನ್ನು ದೂರ ಮಾಡುವ ಕಾರ್ಯದಲ್ಲಿ ನೆರವಾಗುವುದನ್ನೂ ಬಿಟ್ಟಿರುವುವು. ಇದರಿಂದ ಅಸ್ಪೃಶ್ಯರು ಎಷ್ಟು ದುಡಿದರೂ ತೀರದಷ್ಟು ಕಾರ್ಯವನ್ನು ಅವರ ಮೇಲೆ ಸ್ಪೃಶ್ಯ ವರ್ಗಗಳು ಹಾಕಿದಂತಾಗಿದೆ. ಆದ್ದರಿಂದಲೆ ಇಂದು ರಾಷ್ಟ್ರದಲ್ಲಿ ನಾನಾ ತರದ ರೋಗಗಳೂ ಉಪದ್ರವಗಳೂ ಉದ್ಭವಿಸಿರುವವು; ಮತ್ತು ಉಪಯುಕ್ತ ಸ್ಥಾನಗಳೆಲ್ಲ ಓಕರಿಕೆಯನ್ನುಂಟುಮಾಡುವಷ್ಟು ಕೊಳಕಾಗಿರುವುವು.

೪ ಮೇಲೆ ವರ್ಣಿಸಿದ ಸ್ಥಳಗಳಲ್ಲಿ ಉಗುಳುವುದು, ಮಲ ಮೂತ್ರ ವಿಸರ್-ಜಿಸುವುದು, ಮತ್ತು ಕಸ ಚಲ್ಲುವುದು ಮುಂತಾದ ಕಾರ್ಯಗಳು ಪಾಪಮಯವೆಂದೂ ಅಪರಾಧವೆಂದೂ ಎಣಿಸತಕ್ಕದ್ದು.

೫ ತಾಂಬೂಲ ಮತ್ತು ಹೊಗೆಸೊಪ್ಪು ತಿನ್ನುವ ಚಟವಿಲ್ಲದ ನಿರೋಗಿಯಾದ ಮನುಷ್ಯನು ಹಲ್ಲುಜ್ಜುವಾಗ ಮಾತ್ರ ಉಗುಳಬೇಕಾಗುವುದು, ಇತರ ಸಮಯದಲ್ಲಿ ಉಗುಳಬೇಕಾಗುವುದಿಲ್ಲ. ಹಲ್ಲಿನ, ಮೂಗಿನ, ಮತ್ತು ಪುಪ್ಪುಸದ ರೋಗಗಳಿದ್ದವರು ಆಗಾಗ ಉಗುಳಬೇಕಾಗುವುದು. ಇಲ್ಲವೆ ಮೂಗು ಸ್ವಚ್ಛ ಮಾಡಿಕೊಳ್ಳಬೇಕಾಗುವುದು. ನಿರೋಗಿಯಾಗಿದ್ದರೂ ತಾಂಬೂಲ ಹೊಗೆಸೊಪ್ಪು ಸೇವನೆಯ ಚಟವನ್ನಿಟ್ಟುಕೊಳ್ಳುವುದೆಂದರೆ ರೋಗಿಯಾದ ಮನುಷ್ಯನ ಕಷ್ಟಗಳನ್ನು ಅನುಭವಿಸಲು ಒಪ್ಪಿದಂತೆಯೆ ಸೈ. ಮನುಷ್ಯನ ಉಗುಳಿನಲ್ಲೂ ಕಫದಲ್ಲೂ ನಾನಾ ಬಗೆಯ ವಿಷಗಳಿರುವವು. ಅವು ಗಾಳಿಯಲ್ಲಿ ಬೆರೆತು ನಿರೋಗಿಯಾದ ಮನುಷ್ಯರಲ್ಲಿಯೂ ಸೇರುವವು. ಆದ್ದರಿಂದ ಉಗುಳನ್ನೂ ಕಫವನ್ನೂ ನಾಶ ಮಾಡುವ ವ್ಯವಸ್ಥೆ ಮಾಡತಕ್ಕದ್ದು.

೬ ಪ್ರತಿಯೊಂದು ಮನೆಯಲ್ಲಿ ಉಗುಳಲು ಬೂದಿಯಿಂದ ತುಂಬಿದ ಒಂದು ಹರಿವಾಣವನ್ನಿಟ್ಟು ಅದರಲ್ಲೇ ಉಗುಳತಕ್ಕದ್ದು. ಆ ಹರಿವಾಣವನ್ನು ದಿನವೂ ದೂರ ಒಯ್ದು ಚಲ್ಲಿ ಚೊಕ್ಕಟ ಮಾಡಿ ತಂದು ಪುನಃ ಅದರಲ್ಲಿ ಹಸನಾದ ಬೂದಿಯನ್ನು ತುಂಬಿ ಇಡತಕ್ಕದ್ದು. ಪೀಕ್‌ದಾನಿಯನ್ನು ಉಪಯೋಗಿಸುತ್ತಿದ್ದರೆ ಉಗುಳನ್ನು ಸಿಕ್ಕಸಿಕ್ಕಲ್ಲಿ ಚಲ್ಲತಕ್ಕದ್ದಲ್ಲ. ಮುಂಬೈಯಂಥ ದೊಡ್ಡ ಪಟ್ಟಣಗಳಲ್ಲಿ, ಚರಂಡಿಗಳ ಸಂಪೂರ್ಣ ವ್ಯವಸ್ಥೆ ಇದ್ದ ಊರುಗಳಲ್ಲಿ ಉಗುಳನ್ನು ಚರಂಡಿಯಲ್ಲಿ ಚಲ್ಲಿ ಪೀಕ್‌ದಾನಿಯನ್ನು ಸ್ವಚ್ಛ ಮಾಡಬಹುದು. ಆದರೆ ಹಳ್ಳಿಗಳಲ್ಲಿ, ಚರಂಡಿಗಳ ಸರಿಯಾದ ವ್ಯವಸ್ಥೆ ಇಲ್ಲದ ಊರುಗಳಲ್ಲಿ, ಉಗುಳನ್ನು ದೂರದ ಹೊಲಗಳಲ್ಲಿ ಚಲ್ಲಿ ಅದರ ಮೇಲೆ ಒಣ ಮಣ್ಣು ಹಾಕತಕ್ಕದ್ದು. ಇಲ್ಲವೆ ಅದನ್ನು ಬಿಸಿ ಬಿಸಿ ಬೂದಿಯಲ್ಲಿ ಕಲಸಿ ದೂರ ಬಿಸುಟು ಬರತಕ್ಕದ್ದು.

೪ ಶೌಚ*

೧ ಮಾರ್ಗದಲ್ಲಿ ಮಲ-ವಿಸರ್ಜನ ಮಾಡುವ ಅಭ್ಯಾಸವು ಎಳ್ಳಷ್ಟೂ

---

* ಇದೂ ಇದರ ಮುಂದಿನ ಕೆಲವು ಪ್ರಕರಣಗಳೂ ಗಾಂಧೀಜಿಯವರ 'ಗಾಮ್ ಡಾನೀ ವಹಾರೆ' ಎಂದು ಪ್ರಕಟವಾದ ಲೇಖಮಾಲೆಯ ಆಧಾರದಿಂದ ಬರೆಯಲ್ಪಟ್ಟವೆ. ಈ ಲೇಖಮಾಲೆಯ ಪುಸ್ತಕವನ್ನು ಸರ್ವರೂ ಅವಶ್ಯವಾಗಿ ಓದಬೇಕು.

—ಕಿ. ಘ. ಮ.

ಯೋಗ್ಯವಲ್ಲ. ಮರೆಯಿಲ್ಲದ ಬೈಲು ಪ್ರದೇಶದಲ್ಲಿ ಎಲ್ಲರಿಗೂ ಕಾಣುವಂತೆ ಮಲತ್ಯಾಗ ಮಾಡುವುದೂ ಮಕ್ಕಳಿಂದ ಹಾಗೆ ಮಾಡಿಸುವುದೂ ಅಸಭ್ಯತನ.

೨ ಆದುದರಿಂದ ಪ್ರತಿಯೊಂದು ಹಳ್ಳಿಯಲ್ಲಿ ತಿಪ್ಪೆಯ ಹತ್ತಿರ ತೀರ ಕಡಮೆ ಬೆಲೆಯಲ್ಲಿ ಒಂದು ಕಕ್ಕಸು ಕಟ್ಟಿಸಿ ಅದನ್ನು ದಿನವೂ ನಿಯಮಿತವಾಗಿ ಸ್ವಚ್ಛ ಮಾಡತಕ್ಕದ್ದು.

೩ ಮಲವಿಸರ್ಜನೆಗೆ ಬೈಲಿಗೇ ಹೋಗುವುದಿದ್ದಲ್ಲಿ ಊರಿನಿಂದ ಒಂದು ಮೈಲು ದೂರ, ಜನರ ಸುಳಿದಾಟವಿಲ್ಲದ ಸ್ಥಾನಕ್ಕೆ ಹೋಗಬೇಕು. ಅಲ್ಲಿ ಒಂದು ಹೊಂಡ ತೆಗೆದು ಅದರಲ್ಲಿ ಮಲತ್ಯಾಗ ಮಾಡಿ ಅದರ ಮೇಲೆ ತಕ್ಕಷ್ಟು ಮಣ್ಣು ಹಾಕಿ ಬರಬೇಕು. ಜಾಣನಾದ ಒಕ್ಕಲಿಗನು ಒಂದು ಕಕ್ಕಸನ್ನು ತನ್ನ ಹೊಲದಲ್ಲೇ ಅಗ್ಗವಾಗಿ ಕಟ್ಟಿಸಿಕೊಂಡು, ಅದರಲ್ಲಿ ವಿಸರ್ಜನೆ ಮಾಡಿದ ಮಲವನ್ನು ಹೊಲದಲ್ಲಿ ಹುಗಿದು, ಮೇಲೆ ಮಣ್ಣು ಹಾಕಿ ಪುಕ್ಕಟೆಯಾಗಿ ಗೊಬ್ಬರವನ್ನು ಮಾಡಿಕೊಳ್ಳುವನು.

೪ ಇದಾದನಂತರ, ಬಾಲಕರ ಮತ್ತು ರೋಗಿಗಳ ಸಲುವಾಗಿಯೂ ಆಗತ್ಯದ ವೇಳೆಯಲ್ಲಿ ಉಪಯೋಗಿಸುವುದಕ್ಕಾಗಿಯೂ ಮನೆಗೊಂದು ಕಕ್ಕಸು ಬೇಕೇ ಬೇಕು. ಈ ಕಕ್ಕಸುಗಳಲ್ಲಿ ತಗಡಿನ ಡಬ್ಬಗಳನ್ನು ಉಪಯೋಗಿಸಬಹುದು. ಇಲ್ಲಿಯೂ ಶೌಚಕ್ರಿಯೆಯು ತೀರಿದ ಮೇಲೆ ಮಲದ ಮೇಲೆ ತಕ್ಕಷ್ಟು ಮಣ್ಣು ಹಾಕತಕ್ಕದ್ದು. ಈ ಡಬ್ಬವನ್ನು ದಿನವೂ ಹೊಲಕ್ಕೊಯ್ದು ತಗ್ಗು ತೋಡಿ ಅದರಲ್ಲಿ ಸುರಿದು ಸಾಕಷ್ಟು ಮಣ್ಣು ಮುಚ್ಚಿ ಬರತಕ್ಕದ್ದು. ಡಬ್ಬದಿಂದ ನಾತ ಬರದಂತೆ ತಿಕ್ಕಿ ತಿಕ್ಕಿ ಚೊಕ್ಕಟ ಮಾಡಿ ಉಪಯೋಗಿಸತಕ್ಕದ್ದು.

೫ ಕಕ್ಕಸಿನಲ್ಲಿ ನೀರಿಗಾಗಿಯೂ ಮೂತ್ರಕ್ಕಾಗಿಯೂ ಬೇರೆ ಬೇರೆ ಡಬ್ಬಗಳನ್ನು ಇಟ್ಟಿರಬೇಕು. ಮತ್ತು ಮೂತ್ರವಾಗಲಿ ನೀರಾಗಲಿ ಅತ್ತ ಇತ್ತ ಬೀಳದಂತೆ ಎಚ್ಚರಪಡತಕ್ಕದ್ದು.

೬ ಈಗಿನ ಶೌಚಕೂಪಗಳು ಅತ್ಯಂತ ನಿರುಪಯುಕ್ತವಾದುವು. ಗೊಬ್ಬರ ಮಾಡುವ ಜಂತುಗಳು ಬಹಳ ಆಳವಾದ ಕೂಪದಲ್ಲಿ ಇರುವುದಿಲ್ಲ. ಇಂಥ ಶೌಚಕೂಪಗಳಿಂದ ದುರ್ಗಂಧವು ಎದ್ದು ಗಾಳಿಯನ್ನು ಕೆಡಿಸುವುದು.

೭ ಬೀದಿಗಳಲ್ಲಿ ಮೂತ್ರವಿಸರ್ಜನೆ ಮಾಡುವುದು ಪಾಪಕರ್ಮವೆಂದು ತಿಳಿಯತಕ್ಕದ್ದು. ಇದಕ್ಕೂ ಮಣ್ಣಿನಿಂದ ತುಂಬಿದ ಡಬ್ಬಗಳನ್ನು ಇಡ

ತಕ್ಕದ್ದು. ಎಂದರೆ ದುರ್ಗಂಧವೂ ಏಳಲಾರದು, ಹನಿಗಳೂ ಸಿಡಿಯಲಾರವು.

೮ ಪ್ರತಿಯೊಬ್ಬ ಮನುಷ್ಯನು ಕಕ್ಕಸು ಚೊಕ್ಕಟ ಮಾಡುವುದನ್ನು ಕಲಿಯಬೇಕು. ಇದರಿಂದ ಅಯೋಗ್ಯ ರೀತಿಯಿಂದ ಕಕ್ಕಸು ಉಪಯೋಗಿಸುವುದರಿಂದಲೂ ಡಬ್ಬಗಳನ್ನು ಸರಿಯಾಗಿ ಇಡದಿರುವುದರಿಂದಲೂ ಎಷ್ಟು ಶ್ರಮವಾಗುವುದೆಂಬ ಕಲ್ಪನೆಯು ಬರುವುದು, ಭಂಗಿಯು ಮಾಡುವ ಸಮಾಜಸೇವೆ ಎಷ್ಟು ಉಚ್ಚಮಟ್ಟದ್ದೆಂಬುದು ಗೊತ್ತಾಗುವುದು. ಇದಲ್ಲದೆ, ಯೋಗ್ಯ ರೀತಿಯಿಂದ ಉಪಯೋಗಿಸಿದ ಪಾಯಖಾನೆಯನ್ನು ಸ್ವಚ್ಛ ಮಾಡುವುದರಲ್ಲೇನೂ ಹೇಸಿಕೆ ಇಲ್ಲವೆಂದೂ, ಭಂಗಿಗಳ ತೊಂದರೆಗಳ ಕಾರಣವು ಈ ಕಾರ್ಯದ ಹೊಲಸುತನದಲ್ಲಿರದೆ ಅದನ್ನು ಉಪಯೋಗಿಸುವುದರಲ್ಲಿಯೂ ನಮ್ಮ ದುರ್ಲಕ್ಷ್ಯದಲ್ಲಿಯೂ ಇರುವುದೆಂದೂ ಗೊತ್ತಾಗುವುದು.

೯ ಮನುಷ್ಯನ ಮಲ-ಮೂತ್ರದಂತೆ ದನಗಳ ಮಲ-ಮೂತ್ರವನ್ನೂ ಗೊಬ್ಬರ ಮಾಡಿಕೊಂಡು ಉಪಯೋಗಿಸತಕ್ಕದ್ದು. ಸಗಣಿಯಿಂದ ಬೆರಣೆಗಳನ್ನು ಮಾಡಿಕೊಳ್ಳುವುದೆಂದರೆ ಕಾಗದದ ನಾಣ್ಯಗಳನ್ನು (ನೋಟುಗಳನ್ನು) ಸುಟ್ಟು ಕಾಯಿಸಿಕೊಂಡಂತೆಯೆ ಸರಿ! ದನದ ಮೂತ್ರವು ಇನ್ನಾವ ಕೆಲಸಕ್ಕೂ ಪ್ರಯೋಜನವಿಲ್ಲ. ಅದನ್ನು ಗೊಬ್ಬರದಂತೆ ಉಪಯೋಗಿಸದಿದ್ದರೆ ಆರ್ಥಿಕ ದೃಷ್ಟಿಯಿಂದಲೂ ಆರೋಗ್ಯದ ದೃಷ್ಟಿಯಿಂದಲೂ ಹಾನಿಯಾಗುತ್ತದೆ.

೫ ಜಲಾಶಯುಗಳು

೧ ಕೆರೆ, ಬಾವಿ ಮತ್ತು ನದಿಗಳ ನೀರು ನಿರ್ಮಲವಿರಬೇಕು. ಇತ್ತ ಕಡೆ ಗ್ರಾಮಪಂಚಾಯತಿಗಳೂ ಗ್ರಾಮಸೇವಕರೂ ಚನ್ನಾಗಿ ಗಮನಕೊಡಬೇಕು.

೨ ಇಂದು ಜಲಾಶಯುಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಜನರು ಕೆರೆಗಳಲ್ಲೇ ಪಾತ್ರೆ ತೊಳೆಯುತ್ತಾರೆ, ಸ್ನಾನ ಮಾಡುತ್ತಾರೆ, ಬಟ್ಟೆಗಳನ್ನೂ ಒಗೆಯುತ್ತಾರೆ. ದನಗಳೂ ಅಲ್ಲಿಯೆ ತಮ್ಮ ಮೈ ತೊಳೆದುಕೊಳ್ಳುತ್ತವೆ, ನೀರು ಕುಡಿಯುತ್ತವೆ, ಮತ್ತು ಬಿದ್ದುಕೊಂಡಿರುತ್ತವೆ. ಹುಡುಗರೂ ಹಿರಿಯರೂ ಮಲ ತೊಳೆದುಕೊಳ್ಳುವುದೂ ಅಲ್ಲಿಯೇ. ಅವುಗಳ ಸುತ್ತುಮುತ್ತಲಿನ ನಿಕಟ ಪ್ರದೇಶದಲ್ಲಿ ಮಲತ್ಯಾಗ ಮಾಡುತ್ತಾರೆ. ಅದೇ ನೀರನ್ನು ಕುಡಿಯಲೂ ಅಡಿಗೆ ಮಾಡಲೂ ಉಪಯೋಗಿಸುತ್ತಾರೆ. ಇದೆಲ್ಲವೂ ಪಾಪವೆಂದು ತಿಳಿದುಕೊಂಡು ಇದನ್ನು ನಿಲ್ಲಿಸತಕ್ಕದ್ದು.

೩ ಗ್ರಾಮದ ಕೆರೆಯನ್ನು ದನಗಳು ಪ್ರವೇಶಿಸದಂತೆ ಕಟ್ಟಿಸಬೇಕು; ಹಾಗೂ ಬಾವಿಗಳ ಹತ್ತಿರ ದೋಣಿಗಳನ್ನು ಕಟ್ಟಿಸುವಂತೆ ಕೆರೆಯ ಹತ್ತಿರವೂ ಕಟ್ಟಿಸಬೇಕು.

೪ ಹಾಗೆಯೇ, ಬಟ್ಟೆಗಳನ್ನು ಒಗೆಯುವುದಕ್ಕೂ ಕೆರೆಯ ಹತ್ತಿರವೇ ಒಂದು ತೊಟ್ಟಿ ಇರತಕ್ಕದ್ದು. ಒಗೆದ ನೀರು ಪುನಃ ಕೆರೆಯನ್ನು ಸೇರದ ಹಾಗೆ ಒಡ್ಡು ಕಟ್ಟಬೇಕು. ಅಲ್ಲದೆ ಆ ನೀರು ದೂರ ಹರಿದುಹೋಗುವಂತೆ ಮಾಡ ತಕ್ಕದ್ದು

೫ ಈ ದೋಣಿಯನ್ನು ದಿನವೂ ಊರ ಜನರೇ ತಮ್ಮ ಕೈಯಿಂದ ತುಂಬಿ ದರೆ ಬಹಳ ಉತ್ತಮ. ಇಲ್ಲವಾದರೆ ಯಾರಿಗಾದರೂ ಸ್ವಲ್ಪ ಕೂಲಿ ಕೊಟ್ಟು ತುಂಬಿಸಬೇಕು.

೬ ಎಂಜಲು ಪಾತ್ರೆಗಳನ್ನು ಕೆರೆಯಲ್ಲಿ ಅಥವಾ ಜನರು ಇಳಿದು ತುಂಬುವ ಬಾವಿಯಲ್ಲಿ ತೊಳೆಯಕೂಡದು. ಆದರೆ ಬಳಿಯಲ್ಲಿದ್ದ ದೋಣಿಯ ಹತ್ತಿರ ತಿಕ್ಕಿ ತೊಳೆದ ಬಳಿಕ ಅವನ್ನು ಕೆರೆಯಲ್ಲಿ ಅದ್ದಬಹುದು.

೭ ನೀರು ತುಂಬುವವರು ಕೆರೆಯಲ್ಲಿ ಕಾಲಿಡದೆ ನೀರು ತುಂಬಿಕೊಳ್ಳಲು ಬರುವ ಹಾಗೆ ಕೆರೆಯ ಏರ್ಪಾಡು ಇರತಕ್ಕದ್ದು.

೮ ಒಂದೇ ಕೆರೆ ಇರುವ ಊರಿನಲ್ಲಿ ಯಾರೂ ಕೆರೆಯಲ್ಲಿ ಇಳಿದು ಸ್ನಾನ ವನ್ನು ಮಾಡಕೂಡದು. ಅನೇಕ ಕೆರೆಗಳು ಇದ್ದ ಊರುಗಳಲ್ಲಿ ಕುಡಿಯುವ ನೀರಿನ ಕೆರೆಯು ಪ್ರತ್ಯೇಕವಾಗಿರತಕ್ಕದ್ದು. ಎಂದರೆ, ಕುಡಿಯುವುದಕ್ಕಾಗಿ ಒಂದು ಕೆರೆಯು ಮೀಸಲಾಗಿರತಕ್ಕದ್ದು.

೯ ಬಾವಿಗಳನ್ನು ಆಗಾಗ ಬಳಸಿ ಸ್ವಚ್ಛವಿಡತಕ್ಕದ್ದು. ಅವುಗಳ ಸುತ್ತಲೂ ಗೋಡೆಯು ಇರಬೇಕು, ಮತ್ತು ಕೆಸರು ಆಗಗೊಡಬಾರದು. ಆದ್ದರಿಂದ ಆವಾರದ ಗೋಡೆಯು ಗಚ್ಚಿನದಿರಬೇಕು. ಬಾವಿಯ ಸುತ್ತಲೂ ಬಿದ್ದ ನೀರು ಅಲ್ಲಿಯೇ ಇಂಗದಂತೆ ವ್ಯವಸ್ಥೆ ಮಾಡಬೇಕು. ಕಾಲುವೆಗಳನ್ನು ಕಟ್ಟಿಸಿ ಅವು ಗಳ ಮುಖಾಂತರ ನೀರು ದೂರ ಹರಿಯುವಂತೆ ಮಾಡಬೇಕು.

೧೦ ಹೀಗೆ ನೀರು ದೂರ ಹರಿದುಹೋಗುವುದಕ್ಕಾಗಿ ಕಟ್ಟಿದ ಮನೆಯ ಬಾವಿ ಮುಂತಾದುವುಗಳ ಮುಂದಿನ ಕಾಲುವೆಗಳಲ್ಲಿ ಹಸುರುಗಟ್ಟುವುದು, ಅದರಿಂದ ದುರ್ಗಂಧವು ಏಳುವುದು, ಮತ್ತು ಸೊಳ್ಳೆಗಳೂ ಹೆಚ್ಚಾಗುವವು. ಆದ್ದರಿಂದ ಈ ಹರಿಗಳ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನಕೊಡತಕ್ಕದ್ದು.

ಬಿದಿರಿನ ಪೊರಕೆಗಳಿಂದ ಅವನ್ನು ದಿನವೂ ತಿಕ್ಕಿ ತಿಕ್ಕಿ ತೊಳೆದು ಚೊಕ್ಕಟವಾಗಿ ಇಡತಕ್ಕದ್ದು.

೬ ರೋಗಗಳು

೧ ರೋಗ ಮತ್ತು ರೋಗದ ಬಾಹ್ಯ ಲಕ್ಷಣಗಳೊಳಗಿನ ಭೇದವನ್ನು ತಿಳಿದುಕೊಳ್ಳತಕ್ಕದ್ದು.

೨ ತಲೆನೋವು, ಜ್ವರ, ಉಬ್ಬಸ ಮುಂತಾದುವು ರೋಗಗಳಲ್ಲ; ಆದರೆ ಇವು ದೇಹದಲ್ಲಿ ಉದ್ಭವಿಸಿದ ವಿಷಗಳ ಅಥವಾ ರೋಗಗಳ ಬಾಹ್ಯ ಪರಿಣಾಮಗಳು.

೩ ಪ್ರಾಣಿಯ ರಕ್ತದಲ್ಲಿ ಪರೋಪಕಾರಿ ಜಂತುಗಳಿರುವವು. ಅವು ಯಾವಾಗಲೂ ಶರೀರದಲ್ಲಿ ಹುಟ್ಟುವ ವಿಷಗಳನ್ನು ನಾಶ ಮಾಡಲು ಹೆಣಗುತ್ತಿರುವವು. ಈ ಹೆಣಗಾಟವೇ ಜ್ವರದ ರೂಪದಲ್ಲೂ ಉಬ್ಬಸದ ರೂಪದಲ್ಲೂ ಹೊರಗೆ ಗೋಚರವಾಗುವುದು.

೪ ಎದರ ಕಾರಣದಿಂದ ಈ ವಿಷಗಳು ಹುಟ್ಟಿರುವವೊ ಅಥವಾ ಹುಟ್ಟುತ್ತಿರುವವೊ, ಅದೇ ನಿಜವಾದ ರೋಗ. ಜ್ವರ ಮೊದಲಾದುವು ಅದರ ಕೇವಲ ಬಾಹ್ಯಚಿಹ್ನಗಳು.

೫ ಬೀಳುವುದು, ಪೆಟ್ಟು ತಗಲುವುದು, ಮುಂತಾದ ಆಕಸ್ಮಿಕ ಘಟನೆಗಳಿಂದ ಹುಟ್ಟುವ ರೋಗಗಳನ್ನು ಬಿಟ್ಟರೆ ಉಳಿದ ಎಲ್ಲ ರೋಗಗಳ ಮೂಲ ಕಾರಣವು ಸಂಯಮರಹಿತ ಜೀವನವೇ ಎನ್ನಬಹುದು.

೬ ಊಟ-ಉಡಿಗೆ, ವಿಷಯೋಪಭೋಗ, ನಿದ್ರೆ-ಜಾಗರಣೆ, ಆಲಸ್ಯ, ಅತಿಶ್ರಮ, ನಾಟಕ-ಸಿನೇಮಾದಿಗಳ ವಿಲಾಸ, ಕ್ರೋಧ, ದ್ವೇಷ, ರಾಗ ಮುಂತಾದ ಭಾವನೆಗಳ ಉದ್ವೇಗದಲ್ಲಿ ನಾವು ತೋರಿಸುತ್ತಿರುವ ಅಸಂಯಮವೆ ರೋಗಗಳ ಮುಖ್ಯ ಕಾರಣ.

೭ ಈ ಅಸಂಯಮವು ಅನಿವಾರ್ಯವಾಗಿ ಅಜ್ಞಾನದಿಂದಲೂ ಮೈಮರೆವಿನಿಂದಲೂ ಆಗಿರಲಿ, ಅಥವಾ ತಿಳಿದೂ ತಿಳಿದು ಆಗಿರಲಿ, ಅದರ ಪರಿಣಾಮದ ಫಲವಾದ ರೋಗಗಳನ್ನು ಶರೀರವು ಭೋಗಿಸಲೇ ಬೇಕಾಗುವುದು.

೮ ಈ ಅಸಂಯಮಕ್ಕೆ ಅಶುದ್ಧ ಗಾಳಿ, ಕೊಳಕು ನೀರು, ಅಥವಾ ಮತ್ತಾವುದಾದರೂ ಹೊಲಸು ಸೇರಿದರೆ ರೋಗವು ಬಂದೇ ಬರುವುದು.

೯ ನಿರ್ಮಲವೂ ಸಂಯಮಪೂರ್ಣವೂ ಆದ ಜೀವನವನ್ನಿಟ್ಟುಕೊಂಡ ಮನುಷ್ಯನು ಅಂಟುರೋಗಿಗಳ ಮಧ್ಯದಲ್ಲಿದ್ದರೂ ಅವನಿಗೆ ರೋಗಗಳು ಅಂಟುವುದಿಲ್ಲವೆಂಬಂತೆ ತೋರುತ್ತದೆ. ಸಂಯಮಿಯಾದ ಮನುಷ್ಯನ ರಕ್ತದಲ್ಲಿ ಹೊರಗಿನಿಂದ ಬರುವ ವಿಷಗಳನ್ನು ಓಡಿಸುವ ಶಕ್ತಿಯು ಅಪಾರವಾಗಿರುತ್ತದೆಂಬುದು ಗೊತ್ತಾಗುವುದು. ಆದರೆ ಅಸಂಯಮದಿಂದ ಈ ಶಕ್ತಿಯು ಕುಂದಿದ ಕೂಡಲೆ ಅಂಟುರೋಗಗಳು ಅಂಟಿಕೊಳ್ಳುವವು.

೧೦ ರೋಗದ ಕಾರಣಗಳನ್ನು ತಡೆದು-ನಿಲ್ಲಿಸುವುದೇ ಮೊದಲನೆಯ ಉಪಚಾರ. ಈ ಉಪಚಾರಗಳಲ್ಲಿ ಮೊದಲನೆಯ ಉಪಚಾರವು ಇಂದ್ರಿಯಗಳ ಮತ್ತು ಮನಸ್ಸಿನ ಸಂಯಮ. ಇದರ ಜೊತೆಯಲ್ಲಿ, ನಿಯಮಿತವಾದ ಸ್ವಚ್ಛ ಆಹಾರ-ವಿಹಾರವೂ ಸಾಕಷ್ಟು ಪರಿಶ್ರಮ ಮತ್ತು ನಿದ್ರೆಯೂ ಅವಶ್ಯಕ; ಸ್ವಚ್ಛ ಹವೆ, ನಿರ್ಮಲ ನೀರು, ಹಸನಾದ ಬಟ್ಟೆ, ಮನೆ ಅಂಗಳ ಮತ್ತು ಬೀದಿಯ ಸ್ವಚ್ಛತೆ, ಇವು ಎರಡನೆಯ ಉಪಚಾರ.

೭ ಉಪಚಾರಗಳು

೧ ಮೈಯಲ್ಲಿ ಸರಿಯಾಗಿಲ್ಲವೆಂದು ತೋರಿದ ಕೂಡಲೆ ರೋಗಗಳನ್ನು ತಡೆಯುವ ಉಪಾಯಗಳನ್ನು ಕೈಕೊಳ್ಳುವುದು ಮೊದಲನೆಯ ಉಪಚಾರ.

೨ ಈ ಉಪಚಾರವು ಸರಿಯಾಗಿ ನಡೆದರೆ ಸಾಮಾನ್ಯವಾಗಿ ರೋಗಗಳು ತಾನಾಗಿಯೆ ವಾಸಿಯಾಗುವವು. ಔಷಧ ಸೇವನೆಯು ಅನೇಕ ಸಲ ಹಾನಿಕರವೂ ವ್ಯರ್ಥವೂ ಆಗಿರುವುದು.

೩ ಆಹಾರ-ವಿಹಾರದಲ್ಲಿನ ದೋಷಗಳನ್ನು ದೂರ ಮಾಡದೆ ಒಳ್ಳೇ ಹವೆ ನೀರು ಮುಂತಾದುವುಗಳಿಂದ ರೋಗ ನಿವಾರಣೆ ಮಾಡಲು ಯತ್ನಿಸುವುದು, ಕೈಯನ್ನು ನಿರ್ಮಲವಾದ ನೀರಿನಿಂದ ತೊಳೆದುಕೊಂಡು ಹೊಲಸು ಬಟ್ಟೆಯಿಂದ ಒರೆಸಿಕೊಂಡಂತೆಯೆ ಸರಿ. ಆಹಾರ ವಿಹಾರ, ಗಾಳಿ ನೀರು ಇವೆರಡರಲ್ಲಿಯೂ ಸುಧಾರಣೆ ಮಾಡದೆ ಔಷಧದಿಂದಲೆ ಗುಣಹೊಂದಲಿಚ್ಛಿಸುವುದು ಕೊಳಕು ಬಟ್ಟೆಗೆ ಕಪ್ಪು ಬಣ್ಣ ಹಾಕಿ ಅದು ಶುಭ್ರವಾಗಿದೆ, ಸ್ವಚ್ಛವಾಗಿದೆಯೆಂದು ತಿಳಿದುಕೊಂಡಂತೆಯೆ ಸರಿ.

೪ ಔಷಧದ ಹೊರತು ಅನ್ಯ ಶಾಸ್ತ್ರೀಯ ಉಪಚಾರಗಳೂ ಉಂಟು. ಅವುಗಳ ಜ್ಞಾನವು ಪ್ರತಿಯೊಬ್ಬರಿಗೂ ಇರತಕ್ಕದ್ದು. ಇವು ಸರಳವಿರುವು

ವಲ್ಲದೆ ಇವುಗಳನ್ನು ಮಾಡಲಿಕ್ಕೆ ಹಣ ವೆಚ್ಚ ಮಾಡಬೇಕಾದದ್ದೇನೂ ಇಲ್ಲ.

೫ ಪ್ರತಿಯೊಂದು ಊರಲ್ಲಿ ಒಂದು ಔಷಧಾಲಯವು ಇರಲೇ ಬೇಕೆನ್ನುವ ಗ್ರಹಿಕೆ ತಪ್ಪಾದುದು. ಅನೇಕ ಊರುಗಳ ನಡುವೆ ಒಂದು ಔಷಧಾಲಯ ವಿದ್ದರೆ ಸಾಕು. ಹಳ್ಳಿಯ ದವಾಖಾನೆಯೆಂದರೆ ಗ್ರಾಮಸೇವಕನು ಮಾಡುವ ಉಪಚಾರಗಳು ಎಂದು ತಿಳಿಯತಕ್ಕದ್ದು.

೬ ಉತ್ತಮ ಉಪಚಾರಗಳಲ್ಲಿ ಉಪವಾಸ, ಕಟಿಸ್ನಾನ ಮತ್ತು ಸೂರ್ಯ ಸ್ನಾನ ಸರ್ವೋತ್ಕೃಷ್ಟವಾದುವು. ಇವುಗಳ ಬಗೆಗೆ ಬೇಕಾಗುವ ಜ್ಞಾನವನ್ನು ಸ್ವಯಂಸೇವಕರು ಪಡೆದುಕೊಳ್ಳತಕ್ಕದ್ದು.*

೭ ಸೋಸಿದ ಹಸೆಮಣ್ಣಿನ ಲೇಪದಿಂದಲೂ ಎಷ್ಟೋ ರೋಗಗಳೂ ಜ್ವರ ಗಳೂ ವಾಸಿಯಾಗುವವು. ವಿಪರೀತ ಜ್ವರ, ತಲೆನೋವು, ಹೊಟ್ಟೆ ಕಿಬ್ಬೊಟ್ಟೆ ನೋವು, ಪೆಟ್ಟಿನಿಂದ ಇಲ್ಲವೆ ಮತ್ತಾವುದಾದರೂ ಕಾರಣದಿಂದ ಉಂಟಾದ ಬಾವು, ಮೂಗಿನ ಸೊಳ್ಳೆ ಒಡೆಯುವಿಕೆ, ತುರಿ ಕಜ್ಜಿ ಮುಂತಾದ ಚರ್ಮರೋಗ ಗಳು, ಮಲಬದ್ಧತೆ, ನಿದ್ರೆ ಚನ್ನಾಗಿ ಬರದಿರುವಿಕೆ, ವಿಷಕಾರಕ ಜಂತುಗಳು ಕಚ್ಚುವಿಕೆ, ಮುಂತಾದ ನೋವುಗಳಿಗೆ ಮರಳಿಲ್ಲದ ಸೂಸು-ಮಣ್ಣಿನ ಲೇಪ ಹಾಕುವುದು ರಾಮಬಾಣ ಉಪಚಾರ. ಅದರ ಒಂದು ಪಟ್ಟಿ ಒಣಗಿದ ಮೇಲೆ ಮತ್ತೊಂದು ಪಟ್ಟಿಯನ್ನು ಕಟ್ಟತಕ್ಕದ್ದು.

೮ ಹುಣ್ಣುಗಳನ್ನು ಹಣ್ಣುಮಾಡಬೇಕಾದಲ್ಲಿ, ಶ್ವಾಸೋಚ್ಛ್ವಾಸದಲ್ಲಿ ತೊಂದರೆಯಾಗುತ್ತಿದ್ದರೆ, ದಣುವಿನಿಂದಲೂ ಶೀತದಿಂದಲೂ ಚಳಿಯಾಗು ತ್ತಿದ್ದರೆ, ಬಿಸಿ ಬಿಸಿ ನೀರಿನಲ್ಲಿ ವಸ್ತ್ರವನ್ನು ಅದ್ದಿ ಅದನ್ನು ಹಿಂಡಿ ಚರ್ಮವು ಸುಡ ದಂತೆ ಕಾವು ಕೊಟ್ಟರೆ ಬಹಳ ಸುಖವೆನಿಸುವುದು. ಉಸುಕು, ಮಣ್ಣು, ಇಲ್ಲವೆ ಇಟ್ಟಿಗೆಯನ್ನು ಕಾಸಿ ಒಂದು ಬಟ್ಟೆಯಲ್ಲಿ ಸುತ್ತಿ ಅದರಿಂದಲೂ ಕಾವು ಕೊಡ ಬಹುದು.

೯ ಮನುಷ್ಯನು ಬೇನೆ ಬೀಳುತ್ತಲೆ ಅವನ ಹಾಸಿಗೆಯನ್ನು ಉಳಿದವರ ಹಾಸಿಗೆಗಳಿಂದ ಬೇರೆ ಮಾಡಬೇಕು. ಅವನ ಸುತ್ತಲು ಸಾಮಾನುಗಳು ದಟ್ಟ ವಾಗಿ ಹರಡಿದ್ದರೆ ಅವನ್ನು ದೂರ ಮಾಡಬೇಕು. ಅಲ್ಲಿ ಹೆಚ್ಚು ಜನರು ಸೇರ ಗೊಡಬಾರದು. ಗಾಳಿಯ ಮತ್ತು ಬಿಸಿಲಿನ ತಾಪವು ತಟ್ಟದಂಥ ಮತ್ತು

*ಈ ವಿಷಯವನ್ನು ಚರ್ಚಿಸಿದ ಗಾಂಧಿಜಿಯವರ 'ಆರೋಗ್ಯ ರಕ್ಷಣೆ' ಎಂಬ ಪುಸ್ತ ಕದ ಅಧ್ಯಯನ ಮಾಡಬೇಕು.

ತಕ್ಕಷ್ಟು ಗಾಳಿಯು ಸಿಗುವಂಥ ಸ್ಥಳದಲ್ಲಿ ಅವನನ್ನು ಮಲಗಿಸಬೇಕು. ಅವನ ಬಟ್ಟೆ, ಮಗ್ಗಲು-ಹಾಸಿಗೆ, ಮತ್ತು ಹೊದ್ದುಕೊಳ್ಳುವ ವಸ್ತ್ರಗಳನ್ನು ಆಗಾಗ ಒಗೆದು ಸ್ವಚ್ಛವಾಗಿಡಬೇಕು. ಹಾಸಿಗೆ, ಕಂಬಳಿ, ದಿಂಬು ಮುಂತಾದುವನ್ನು ಆಗಾಗ ಬಿಸಿಲಿಗೆ ಹಾಕಬೇಕು.

೧೦ ರೋಗಿಗೆ ಔಷಧ ಕೊಡುವುದಕ್ಕಿಂತಲೂ ಅವನ ಶರೀರ, ಮನಸ್ಸು ಹಾಗೂ ಹೊಟ್ಟೆಗೆ ವಿಶ್ರಾಂತಿಯನ್ನು ಕೊಡುವುದು ಹೆಚ್ಚು ಅವಶ್ಯವಾದುದು. ಆದರೆ ನಮ್ಮಲ್ಲಿ ಹೊಟ್ಟೆಯ ವಿಶ್ರಾಂತಿಯ ಕಡೆಗೆ ಹೆಚ್ಚು ಗಮನವನ್ನೇ ಕೊಡುವುದಿಲ್ಲ.

೧೧ ಹೊಟ್ಟೆಯು ಕೆಡದಿದ್ದರೆ ಮನುಷ್ಯನಿಗೆ ಯಾವುದೇ ರೋಗ ಬರುವುದು ತೀರ ಅಪರೂಪ. ಹೊಟ್ಟೆಯು ಕೆಟ್ಟರೆ ರೋಗಬರುವ ಸಂದರ್ಭ ಹೆಚ್ಚು. ಆದ್ದರಿಂದ ಮೊಟ್ಟಮೊದಲು ರೋಗಿಯ ಹೊಟ್ಟೆಯನ್ನು ಹಗುರು ಮಾಡುವುದು ಉಪಚಾರಕನ ಮೊದಲ ಕರ್ತವ್ಯ. ಇದಕ್ಕಾಗಿ ಬಸ್ತಿ(ಎನಿಮಾ) ಕೊಡುವುದು ಪ್ರಥಮೋಪಾಯ. ಜ್ವರ ಹೆಚ್ಚು ಇಲ್ಲದಿದ್ದರೆ ಒಂದೆರಡು ಸಲ ಜುಲಾಬು ಆಗುವ ರೇಚಕ ಕೊಡಬಹುದು. ಇದರೊಡನೆಯೆ ರೋಗಿಯು ಒಂದೆರಡು ಉಪವಾಸಗಳನ್ನು ಮಾಡಿದರೆ ಯಾವ ಹಾನಿಯೂ ಆಗುವುದಿಲ್ಲ. ಅತ್ಯಂತ ಅಶಕ್ತನಾಗಿದ್ದರೆ ಅವನು ಉಪವಾಸ ಮಾಡಬೇಕೊ ಮಾಡಬಾರದೊ ಎಂಬ ವಿಷಯದಲ್ಲಿ ಅನುಭವಿಗಳ ಸಲಹೆ ತೆಗೆದುಕೊಳ್ಳತಕ್ಕದ್ದು. ಇಂಥ ಸಲಹೆಗಾರರು ಇದ್ದರೂ ಸರಿ ಇಲ್ಲದಿದ್ದರೂ ಸರಿ, ರೋಗಿಯ ರಕ್ತವು ರೋಗದ ವಿಷಗಳೊಡನೆ ಹೋರಾಡುತ್ತಿರುವಾಗ ಅನ್ನ ಪಚನಮಾಡುವ ಭಾರವು ಅವನ ಹೊಟ್ಟೆಯ ಮೇಲೆ ಬೀಳದಂತೆ ಮಾಡಬೇಕು ಎಂಬುದನ್ನು ಯಾವಾಗಲೂ ಗಮನದಲ್ಲಿಡತಕ್ಕದ್ದು. ಆಹಾರವನ್ನು ಕೊಡಲೇ ಬೇಕಾಗಿದ್ದರೆ ಹಗುರವಾದ ಮತ್ತು ಜೀವನಾಧಾರಕ್ಕೆ ಬೇಕಾಗುವಷ್ಟು ಆಹಾರವನ್ನು ಮಾತ್ರವೇ ಕೊಡಬೇಕು.

೧೨ ಹಸುವಿನ ಅಥವಾ ಆಡಿನ ಹಾಲು ಬಹಳ ಹಗುರಾಗಿರುವುದು. ಬೇನೆ ಬಿದ್ದಾಗ ಪ್ರಾಣಾಧಾರಕ್ಕೆ ೧೦ರಿಂದ ೨೦ ತೊಲೆ ಹಾಲು ಸಾಕಾಗುವುದು.

೧೩ ಬೇನೆಬಿದ್ದಾಗಲೂ ಉಪವಾಸ ಮಾಡಿದಾಗಲೂ ರೋಗಿಗೆ ತಕ್ಕಷ್ಟು ಪ್ರಮಾಣದಲ್ಲಿ ಸ್ವಚ್ಛವಾದ ನೀರನ್ನು ಕುಡಿಸಬೇಕು. ನೀರಿನೊಡನೆ ಉಪ್ಪು ಇಲ್ಲವೆ ಸೋಡಾ ಬೈಕಾರ್ಬ್ ಬೆರೆಸಿ ಕೊಡುವುದು ಒಳಿತು. ಹುಳಿ ನಿಂಬೆಯ

ರಸವನ್ನೂ ಕೊಡಬಹುದು. ಚಳಿಜ್ವರ, ತಲೆನೋವು, ಮತ್ತು ವಾಂತಿ ಇದ್ದರೆ ನಿಂಬೆಹಣ್ಣಿನ ರಸವನ್ನು ಖಂಡಿತವಾಗಿ ಕೊಡತಕ್ಕದ್ದು.

೧೪ ಅಸ್ಥಿಜ್ವರಕ್ಕೂ ಚಳಿಜ್ವರಕ್ಕೂ ಕ್ವಿನೀನು ಕೊಡಬೇಕಾಗುವುದು; ಮೇಲೆ ವಿವರಿಸಿದ ಉಪಚಾರಗಳನ್ನು ಸರಿಯಾಗಿ ಮಾಡಿದರೆ ಡಾಕ್ಟರರು ಕೊಡುವಷ್ಟು ಪ್ರಮಾಣದಲ್ಲಿ ಕ್ವಿನೀನು ಕೊಡಬೇಕಾಗುವುದಿಲ್ಲ. ನಿಂಬೆ ಹಣ್ಣಿನ ರಸದಲ್ಲಿ ಕ್ವಿನೀನು ಬೆರೆಸಿ ಸೋಡಾದೊಡನೆ ಸೇವಿಸಿದರೆ ಹೆಚ್ಚು ಹಾನಿ ಇಲ್ಲ.

೧೫ ಜ್ವರವು ಅತ್ಯಧಿಕವಾಗಿದ್ದು ಅದನ್ನು ಬೇಗನೆ ಇಳಿಸುವುದು ಅಗತ್ಯ ವಿದ್ದಲ್ಲಿ ಒದ್ದೆ-ಬಟ್ಟೆಯ ಉಪಚಾರವನ್ನು ಮಾಡತಕ್ಕದ್ದು. 'ಆರೋಗ್ಯ ರಕ್ಷಣೆಯ ಸಾಮಾನ್ಯ ಜ್ಞಾನ' ಎಂಬ ಪುಸ್ತಕದಿಂದ ಈ ಉಪಚಾರವನ್ನು ಅರಿತುಕೊಳ್ಳಬೇಕು.

೧೬ ಕಟ್ಟನ ಜ್ವರ (ವಾಯ್ದೆ ಜ್ವರ)ವಲ್ಲದಿದ್ದರೂ ಬಹಳ ದಿನಗಳ ವರೆಗೆ ಜ್ವರವು ನಿಲ್ಲದೆ ಬರುತ್ತಿದ್ದರೆ ನೀರು ಹವೆ ಬದಲಾಯಿಸುವುದು ಅವಶ್ಯವೆಂದು ತಿಳಿದು ರೋಗಿಯನ್ನು ನೀರು ಮತ್ತು ಗಾಳಿ ಚನ್ನಾಗಿದ್ದ ಕಡೆಗೆ ಕರೆದು ಕೊಂಡು ಹೋಗಬೇಕು. ಆರೋಗ್ಯ-ವರ್ಧನೆಗೆ ಹೆಸರಾದ ಸ್ಥಳಗಳಿಗೆ ಹೋಗ ಬೇಕಾದದ್ದೇನೂ ಇಲ್ಲ.

೧೭ ಮೇಲೆ ಸೂಚಿಸಿದ ಉಪಚಾರಗಳು ಹೆಚ್ಚು ಉಗ್ರವಲ್ಲದ ಚಿಕ್ಕ ಚಿಕ್ಕ ರೋಗಗಳಿಗೋಸ್ಕರ ಇರುವವು. ಕ್ಷಯ, ತೊನ್ನು, ರಕ್ತಪಿತ್ತ, ಹಳೆಯ ರೋಗ ಮುಂತಾದ ದೊಡ್ಡ ರೋಗಗಳಿಗೂ ಈ ಉಪಚಾರಗಳನ್ನು ಮಾಡಬಹುದು. ಆದರೆ ಇದಕ್ಕೆ ಅನುಭವಿಗಳ ಸಲಹೆ, ಸಮಾಧಾನದಿಂದ ಕಾರ್ಯ ಮಾಡುವ ಗುಣ ಮತ್ತು ತಾಳ್ಮೆ ಬೇಕು.

೧೮ ಔಷಧಗಳ ಮೇಲೆ ವಿಶ್ವಾಸವಿಡುವ ಅಭ್ಯಾಸವು ಒಳಿತಾದದ್ದಲ್ಲ. ಔಷಧದಿಂದ ಯಾವ ಹಳೆಯ ರೋಗವೂ ಗುಣವಾಗಲಾರದೆಂದು ಇಲ್ಲಿ ಹೇಳಿ ದರೆ ಅತಿಶಯೋಕ್ತಿಯಲ್ಲ.

೧೯ ಡಾಕ್ಟರರು ರೋಗಿಗಳಿಗೆ ಸರಳವಾದ ಉಪಚಾರಗಳನ್ನು ಕಲಿಸ ಬೇಕೇ ಹೊರತು ಔಷಧಗಳ ಮೇಲೆ ಅವಾಸ್ತವ ನಂಬಿಗೆ ಹುಟ್ಟಿಸಕೂಡದು.

೨೦ ಗಾರುಡಿಗರ ಯಂತ್ರ-ಮಂತ್ರದ ಮೇಲಿರುವಷ್ಟೆ ಅಂಥ ವಿಶ್ವಾಸವು ಎಷ್ಟೋ ಸಲ ಡಾಕ್ಟರುಗಳ ಔಷಧಗಳ ಮೇಲೂ ಇರುವುದು. ವಾಸ್ತವಿಕ

ವಾಗಿ ರೋಗಿಯ ರಕ್ತದಲ್ಲಿದ್ದ ಜೀವನಶಕ್ತಿಯೆ ಅವನನ್ನು ನಿರೋಗಿಯನ್ನಾಗಿ ಮಾಡುವುದು. ಈ ಶಕ್ತಿಯು ಕಡಮೆಯಾಗಿರದಿದ್ದರೆ ರೋಗಿಯು ಬದುಕುವನು. ಅವನ ಈ ಶಕ್ತಿಯನ್ನು ಕುಂದಿಸದಿರುವುದಕ್ಕೆ ಮೇಲೆ ವಿವರಿಸಿದ ಉಪಚಾರಗಳು ತಕ್ಕಷ್ಟಾಗುವವು. ಈ ಉಪಚಾರಗಳನ್ನು ಮಾಡಿದ ಮೇಲೂ ಬದುಕದಿದ್ದರೆ ಅವನ ಆಯುಷ್ಯವೆ ಮುಗಿಯಿತೆಂದು ಭಾವಿಸಬೇಕು. ಡಾಕ್ಟ-ರರ ಮತ್ತು ಯಂತ್ರ-ಮಂತ್ರ-ತಂತ್ರಗಾರರ ಬಳಿಗೆ ಸಿಕ್ಕು ಹಣವನ್ನು ಕಳೆದುಕೊಳ್ಳಬಾರದು.

೨೧ ಸೋಡಾ ಬೈಕಾರ್ಬ್ಬು, ಹರಳೆಣ್ಣೆ, ಕ್ವಿನೀನು, ಮತ್ತು ಬಾಹ್ಯ ಉಪಚಾರಗಳಿಗಾಗಿ ಅಯೋಡಿನ್, ಇವುಗಳ ಹೊರತಾಗಿ ಹೆಚ್ಚಿಗೆ ಔಷಧಗಳು ಗ್ರಾಮಸೇವಕನಿಗೆ ಬೇಕಾಗುವುದಿಲ್ಲ. ಇವುಗಳೊಡನೆ ಒಂದು ಎನಿಮಾ ಇದ್ದರೆ ಅವನ ಔಷಧಾಲಯವು ಪರಿಪೂರ್ಣವಾಯಿತೆಂದು ತಿಳಿಯತಕ್ಕದ್ದು.

೮ ಆಹಾರ

೧ ಮನುಷ್ಯನಿಗೆ ಮಾಂಸಾಹಾರದ ಅವಶ್ಯಕತೆಯೇ ಇಲ್ಲ.

೨ ಮಾಂಸಾಹಾರವನ್ನು ಬಿಟ್ಟದ್ದರಿಂದಲೆ ಹಿಂದೂ ಜನರ ಅಧಃಪತನವಾಗಿದೆಯೆಂದು ತಿಳಿಯುವುದು ತಪ್ಪಾದುದು, ನಿರಾಧಾರವಾದುದು. ಏಕೆಂದರೆ ಹಿಂದೂ ರಾಜರೂ ಸೈನಿಕ ಜಾತಿಯವರೂ ಬಹು ಕಾಲ ಮಾಂಸಾಹಾರವನ್ನು ಬಿಟ್ಟಂತೆ ತೋರುವುದಿಲ್ಲ. ಎಂದ ಬಳಿಕ ಹಲವು ಜನರು ಬಿಟ್ಟದ್ದು ಈ ಅಧಃಪತನಕ್ಕೆ ಕಾರಣವಾಗಲಾರದು.

೩ ಇದಲ್ಲದೆ ಮಾಂಸಾಹಾರವನ್ನು ಬಿಟ್ಟವರು ಸಶಕ್ತರೂ ನಿರೋಗಿಗಳೂ ಬಂಟರೂ ಆಗಲಾರರೆಂದು ತಿಳಿಯಲು ಕಾರಣಗಳೇ ಇಲ್ಲ.

೪ ನಿರಾಮಿಷ ಆಹಾರದ ಪಕ್ಷವನ್ನು ಕಟ್ಟಿದರೂ ಮಾಂಸಾಹಾರಿಗಳನ್ನು ದ್ವೇಷಿಸುವುದು ಯೋಗ್ಯವಲ್ಲ. ಬಡತನ ಇರುವುದರಿಂದಲೇ ಹಿಂದುಸ್ತಾನದ ಎಷ್ಟೋ ಜಾತಿಗಳು ಮಾಂಸಾಹಾರವನ್ನು ಮಾಡಬೇಕಾಗಿರುವುದು.

೫ ಹಾಲೂ ಮಾಂಸವೇ. ಆದರೆ ಮಾಂಸಕ್ಕಾಗಿ ಪ್ರಾಣಿವಧೆಯನ್ನೂ ಹಿಂಸೆಯನ್ನೂ ಮಾಡಬೇಕಾಗುತ್ತದೆ, ಹಾಲಿಗಾಗಿ ಅವನ್ನು ಮಾಡಬೇಕಾಗುವುದಿಲ್ಲ; ಇವೆರಡರಲ್ಲೂ ಇರುವ ಅಂತರ ಇಷ್ಟೇ. ಚಿತ್ತಶುದ್ಧಿಗೆ ಹಾಲಿನ ಆಹಾರವೂ ಬಾಧಕವಾಗುವುದು.

೬ ಆದರೆ ನಿರಾಮಿಷ ಆಹಾರಗಳಿಗೆ ಹಾಲಿನ ಬದಲು ಅದರಷ್ಟೆ ಪುಷ್ಟಿವರ್ಧಕವಾದ ವನಸ್ಪತಿ ಆಹಾರವನ್ನು ಸೂಚಿಸಲಾಗುವುದಿಲ್ಲ ಆದ್ದರಿಂದ ಹಾಲು ಅಪವಾದಸ್ವರೂಪವೆಂದು ನಿರ್ಧರಿಸಿದ ಹೊರತು ಗತ್ಯಂತರವಿಲ್ಲ. ಹಾಲು ಸರ್ವರಿಗೂ ಸಿಕ್ಕುವಂತೆ ಉಪಾಯುಗಳನ್ನು ಯೋಜಿಸುವುದೂ ಅವಶ್ಯ.

೭ ವನದ ಪಕ್ವ ಅಥವಾ ಬೇಯಿಸದೆ ಇದ್ದ ಆಹಾರವು ಸೃಷ್ಟಿನಿರ್ಮಿತವಾಗಿರುವುದರಿಂದ ಅದು ನಿರಾಮಿಷ ಆಹಾರದಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಎಲ್ಲ ಪ್ರಾಣಿಗಳೂ, ನಿಸರ್ಗವು ಸಿದ್ಧಪಡಿಸಿದ ಆಹಾರವನ್ನು ಬೇಯಿಸದೆ ಅದರ ಮೂಲರೂಪದಲ್ಲಿಯೆ ತಿನ್ನುವವು. ಈ ನಿಯಮಕ್ಕೆ ಮನುಷ್ಯನು ಮಾತ್ರ ಅಪವಾದವಾಗಲು ಯಾವ ಕಾರಣವೂ ಇಲ್ಲ.

೮ ನಾವು ನೈಸರ್ಗಿಕ ಸ್ಥಿತಿಯಿಂದ ಪತಿತರಾಗಿ ಅಡಿಗೆಯ ಜಾಲದಲ್ಲಿ ಸಿಕ್ಕು ಬಿದ್ದಿದ್ದೇವೆ. ಆದ್ದರಿಂದಲೇ ಮನುಷ್ಯ-ಜಾತಿಯ ಅತಿ ದೊಡ್ಡ ಭಾಗವು ನೈಸರ್ಗಿಕ ಆಹಾರದಿಂದ ಜೀವಿಸಲು ಅಯೋಗ್ಯವಾದಂತಾಗಿದೆ. ಯಾವ ಆಹಾರವನ್ನು ನಾವು ಸ್ವಾಭಾವಿಕವಾಗಿ ತೆಗೆದುಕೊಳ್ಳುತ್ತ ಇರಬೇಕಾಗಿದೆಯೊ, ಅದನ್ನು ಈಗ ಕುಶಲ ಅನ್ನ-ಶಾಸ್ತ್ರಜ್ಞನ ಸಲಹೆಯ ಹೊರತು ತೆಗೆದುಕೊಳ್ಳಲು ಬರದಂಥ ಸ್ಥಿತಿಯು ಬಂದುಬಿಟ್ಟಿದೆ.

೯ ಆದ್ದರಿಂದ ಈಗ ಬಹು ಜನರು ಅಡಿಗೆಯನ್ನು ಮಾಡಿಕೊಳ್ಳಲೆ ಬೇಕಾಗಿದೆ. ಆಹಾರವನ್ನು ಬೇಯಿಸುವುದು, ಸುಡುವುದು, ಮತ್ತು ಹುರಿಯುವುದು ಇಷ್ಟೇ ಅಡಿಗೆ ಎನಿಸುವುದು. ಆದರೆ ಮನುಷ್ಯನು ಇಲ್ಲಿಗೇ ನಿಲ್ಲಲಿಲ್ಲ. ಅಡಿಗೆಯೆಂಬ ಸುಧಾರಣೆ(?) ಮಾಡಿದ ಬಳಿಕ ನಾಲಗೆ-ರುಚಿಯ ಬಲೆಗೆ ಬಿದ್ದು ನಾನಾ ತರದ ಮಸಾಲೆಗಳನ್ನೂ ಪಕ್ವಾನ್ನಗಳನ್ನೂ ಶೋಧಿಸಿದ್ದಾನೆ. ಶರೀರವನ್ನು ಉಳಿಸಿಕೊಳ್ಳುವುದಕ್ಕಾಗಿ ಯಾವ ವಸ್ತುವನ್ನು (ಅಡಿಗೆ) ಔಷಧದಂತೆ ಉಪಯೋಗಿಸಬೇಕಾಗಿತ್ತೊ ಆ ವಸ್ತು ಈಗ ಜೀವನದ ಮಹತ್ವದ ವ್ಯವಸಾಯವಾಗಿದೆ. ಮತ್ತು ಅದಕ್ಕಾಗಿ ಜೀವನದ ಎಷ್ಟೋ ಸಮಯವೂ ಶಕ್ತಿಯೂ ವ್ಯರ್ಥವಾಗಿ ವೆಚ್ಚವಾಗುತ್ತಿದೆ.

೧೦ ಆರೋಗ್ಯದ ದೃಷ್ಟಿಯಿಂದ, ವಿಕಾರಗಳ ದೃಷ್ಟಿಯಿಂದ, ಹಾಗೆಯೆ ಸಮಯದ ದೃಷ್ಟಿಯಿಂದ, ಮಸಾಲೆಯನ್ನೂ ನಾನಾ ತರದ ಸವಿ ಸವಿ ಆಹಾರ ಪದಾರ್ಥಗಳನ್ನೂ ಉಪಯೋಗಿಸುವುದು ದೋಷಯುಕ್ತವಾಗಿರುವುದು, ಅಲ್ಲದೆ, ತ್ಯಾಜ್ಯವೂ ಆಗಿರುವುದು.

೧೧ ಹಿಂದುಸ್ತಾನದಲ್ಲಿ ಈಗ ನಾವು ಕಾಯಿಪಲ್ಲೆಯನ್ನೂ ಹಣ್ಣುಹಂಪಲುಗಳನ್ನೂ ಯಾವ ಪ್ರಮಾಣದಲ್ಲಿ ತಿನ್ನುವೆವೊ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ತಿನ್ನತಕ್ಕದ್ದು. ವಿಶೇಷತಃ ಟೊಮ್ಯಾಟೊ, ಮೂಲಂಗಿ, ಸೌತೇಕಾಯಿ ಮುಂತಾದ ಎಷ್ಟೋ ಕಾಯಿಪಲ್ಲೆಗಳನ್ನು ಬೇಯಿಸದೆ ತಿನ್ನುವುದು ಅಗತ್ಯ. ಊಟಕ್ಕೆ ಬೇಳೆಗಿಂತಲೂ ಕಾಯಿಪಲ್ಲೆ, ವಿಶೇಷತಃ ಬೇಯಿಸದೆ ಇದ್ದ ಹಸುರು ತೊಪ್ಪಲು ಮತ್ತು ಕಾಯಿಪಲ್ಲೆ ಹೆಚ್ಚು ಬೇಕು.

೧೨ ಚಹವೂ ಕಾಫಿಯೂ ಅತ್ಯಂತ ಹೊಸ ಚಟಗಳು. ನಮಗೆ ಇಂಥ ಪೇಯಗಳ ಚಟವು ಇದ್ದಿಲ್ಲ. ಇವುಗಳ ಸೇವನೆಯಿಂದ ನಮಗೆ ಯಾವ ಲಾಭವೂ ಆಗಿಲ್ಲ. ಇಷ್ಟೆ ಅಲ್ಲ, ಇವೆರಡೂ ಹಾನಿಕಾರಕ ಪದಾರ್ಥಗಳು. ಚಹಾ ತೋಟಗಳಲ್ಲಿ ಮಾನವ-ಹಿಂಸೆಯು ಬಹಳವಾಗುತ್ತಿರುವುದು. ಇವು ನಮ್ಮ ಆಹಾರದ ವೆಚ್ಚವನ್ನು ವ್ಯರ್ಥವಾಗಿ ಬೆಳೆಯಿಸಿವೆ. ಇದರಿಂದ ಹಳ್ಳಿಗಳಲ್ಲಿ ಹಾಲು ಉಳಿಯುವುದಿಲ್ಲ, ಮತ್ತು ಸಕ್ಕರೆಯ ಉಪಯೋಗವೂ ಬೆಳೆದು ಹೆಚ್ಚು ಹಾನಿಯಾಗುತ್ತಿದೆ.

೧೩ ಚಹಾ, ಕಾಫಿ, ಹೊಗೆಸೊಪ್ಪು, ಅಫೀಮು, ಗಾಂಜಿ, ಮತ್ತು ಭಾಂಗುಗಳನ್ನು ಸೇವಿಸುವ ವ್ಯಸನಿಗಳು, ತಾವು ಸ್ಥಿರವೀರ್ಯವುಳ್ಳವರೆಂದು ಹೇಳಿಕೊಂಡರೆ ನಂಬಲಾಗದೆಂದು ಎಷ್ಟೋ ಅನುಭವಿಗಳ ಅಭಿಪ್ರಾಯವಿದೆ.

೯ ವ್ಯಾಯಾಮ

೧ ಚಿಕ್ಕಂದಿನಿಂದ ತಕ್ಕಷ್ಟು ಶಾರೀರಿಕ ಶ್ರಮಪಡಬೇಕಾಗುವವರಿಗೆ ಗರಡೀ-ಸಾಧನೆಯ ಅವಶ್ಯಕತೆ ಅಷ್ಟು ಇರುವುದಿಲ್ಲ.

೨ ಕುಳಿತು ಉದ್ಯೋಗ ಮಾಡುವವರಿಗೆ, ಸಿಪಾಯಿಗಳಿಗೆ, ಅಥವಾ ಉದರ ನಿರ್ವಾಹಕ್ಕಾಗಿ ಕುಸ್ತಿ ಆಡುವ ಜಟ್ಟಿಗಳಿಗೆ ಮಾತ್ರ ಗರಡಿಯ ವ್ಯಾಯಾಮವು ಬೇಕು.

೩ ವ್ಯಾಯಾಮ ಶಾಲೆಯ ಕಸರತ್ತುಗಳಿಂದ ಮನುಷ್ಯರು ದೀರ್ಘಾಯುಷಿಗಳೂ ನಿರೋಗಿಗಳೂ ಕಲಿಗಳೂ ಶ್ರಮ-ಸಹಿಷ್ಣುಗಳೂ ಆಗಿಯೆ ಆಗುವರೆಂದು ಹೇಳಲಾಗದು. ಈ ಅನುಭವವೂ ಬಂದಿಲ್ಲ. ಎಷ್ಟೋ ವ್ಯಾಯಾಮ ವಿಶಾರದರ ಮೈಕಟ್ಟು ಬಲಿಷ್ಠವಾಗಿದ್ದರೂ ಅವರು ಹೇಡಿಗಳಾಗಿರುತ್ತಾರೆ. ಕಸರತ್ತಿನ ಹೊರತು ಬೇರೆ ಬಗೆಯ ಪರಿಶ್ರಮವನ್ನು ಹೆಚ್ಚು ಮಾಡಿದ ಕೂಡಲೆ

ಮತ್ತು ಬಿಸಿಲು, ಚಳಿ, ಹೆಚ್ಚು ತಗಲಿದ ಕೂಡಲೆ ಹಣ್ಣಾಗುವ ಮಲ್ಲರೂ ಅನೇಕರಿದ್ದಾರೆ. ಇದೂ ನಮ್ಮ ದೃಷ್ಟಿಗೆ ಬೀಳುವ ಸಂಗತಿ.

೪ ವ್ಯಾಯಾಮ-ಶಾಲೆಯ ಕಸರತ್ತುಗಳು ವಿಕಾರವರ್ಧಕವಿರುವವು. ಅವುಗಳಿಂದ ಸಾಮಾನ್ಯವಾಗಿ ಶರೀರದಲ್ಲಿ ಕಾವು ಹೆಚ್ಚಾಗಿ, ಭೋಜನಕ್ಕೂ ಭೋಗವೃತ್ತಿಗೂ ಉತ್ತೇಜನ ದೊರೆಯುವುದು.

೫ ವ್ಯಾಯಾಮ-ಶಾಲೆಯೊಳಗಿನ ಎಲ್ಲ ಅಂಗಸಾಧನೆಗಳನ್ನೂ ನಿಷೇಧಿಸಬೇಕೆಂದು ನಮ್ಮ ಅಭಿಪ್ರಾಯವಲ್ಲ. ಉಳಿದ ಅಂಗಸಾಧನೆಗಳಂತೆ ಅವಕ್ಕೂ ಒಂದು ಮೇರೆ ಇರಬೇಕು.

೬ ಸಂಘವ್ಯಾಯಾಮ–ಕವಾಯಿತು–ಡ್ರಿಲ್–ಅತ್ಯಂತ ಉಪಯುಕ್ತವಾದ ವ್ಯಾಯಾಮ. ಇದು ಎಲ್ಲ ತರುಣ-ತರುಣಿಯರಿಗೂ ಅವಶ್ಯವಾಗಿ ದೊರೆಯಬೇಕು.

೭ ಸಾತ್ವಿಕ ವ್ಯಾಯಾಮಗಳಲ್ಲಿ ತಿರುಗಾಡುವುದು ಒಂದು ಶ್ರೇಷ್ಠ ವ್ಯಾಯಾಮ. ಇದು ಶರೀರದ ಆರೋಗ್ಯಕ್ಕಾಗಿ ಅವಶ್ಯವಾಗಿ ಬೇಕು. ಇದು ವ್ಯಾಯಾಮಗಳ ಅರಸನೆಂದು ಹೇಳುವುದು ಸರಿಯಾದದ್ದು.

೮ ಬಳಿಕ, ಆಸನಗಳೂ ಪ್ರಾಣಾಯಾಮವೂ ಸಾತ್ವಿಕ ವ್ಯಾಯಾಮಗಳೆನಿಸುವವು. ಈ ವ್ಯಾಯಾಮಗಳ ಉದ್ದೇಶವು ಶರೀರವನ್ನು ಶುದ್ಧಮಾಡುವುದೇ ಹೊರತು ಭೋಗಕ್ಕೆ ಅಣಿಮಾಡುವುದಲ್ಲ. ಇವುಗಳಿಂದ ಎಷ್ಟೋ ರೋಗಗಳೂ ಗುಣಹೊಂದುವವು.

೯ ಆದರೆ ಈ ವ್ಯಾಯಾಮಗಳನ್ನು ತಮ್ಮ ಉಪಜೀವನದ ವ್ಯವಸಾಯವನ್ನಾಗಿ ಮಾಡಿಕೊಂಡು ಅವುಗಳಿಂದ ದೊರೆಯುವ ಸಿದ್ಧಿಯ ಬೆನ್ನುಹತ್ತಿದರೆ ಅವುಗಳ ದುರುಪಯೋಗ ಮಾಡಿಕೊಂಡಂತಾಗುವುದು. ಶರೀರದ ಅಶುದ್ಧಿಗಳನ್ನು ಮಲ ಮೂತ್ರಗಳ ಮುಖಾಂತರ ಹೇಗೆ ಹೊರಗೆ ಹಾಕಬಹುದೋ, ಹಾಗೆಯೆ ಆಸನ ಪ್ರಾಣಾಯಾಮಾದಿಗಳಿಂದಲೂ ಹೊರಗೆ ಹಾಕಿ ಶರೀರವನ್ನು ಸ್ವಚ್ಛಮಾಡಬಹುದು. ಶರೀರವನ್ನು ನಿರ್ಮಲಮಾಡುವುದೇ ಇವುಗಳ ಗುರಿ.

ಏಕಾದಶ ಖಂಡ

ಶಿಕ್ಷಣ

—♦—

೧ ಶಿಕ್ಷಣದ ಧ್ಯೇಯ

೧ ಸಾ ವಿದ್ಯಾ ಯಾ ವಿಮುಕ್ತಯೇ: ಮುಕ್ತಿಯನ್ನು ದೊರಕಿಸಿಕೊಡುವಂತಹದೇ ವಿದ್ಯೆ, ಉಳಿದುದೆಲ್ಲವೂ ಅವಿದ್ಯೆ.

೨ ಆದ್ದರಿಂದ ಯಾವುದು ಚಿತ್ತಶುದ್ಧಿಯನ್ನು ಮಾಡುವುದಿಲ್ಲವೊ, ಮನಸ್ಸನ್ನೂ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಳ್ಳಲು ಕಲಿಸುವುದಿಲ್ಲವೊ, ಧೈರ್ಯವನ್ನು ಹುಟ್ಟಿಸುವುದಿಲ್ಲವೊ, ಸ್ವಾವಲಂಬನೆಯನ್ನೂ ಉಪಜೀವನದ ಮಾರ್ಗವನ್ನೂ ತೋರಿಸುವುದಿಲ್ಲವೊ, ಪಾರತಂತ್ರ್ಯದಿಂದ ಬಿಡುಗಡೆಯಾಗಿ ಸ್ವಾತಂತ್ರ್ಯದಿಂದ ಬಾಳುವ ಕಳಕಳಿಯನ್ನೂ ಸಾಹಸವನ್ನೂ ಸಾಮರ್ಥ್ಯವನ್ನೂ ಹುಟ್ಟಿಸುವುದಿಲ್ಲವೊ, ಆ ಶಿಕ್ಷಣದಲ್ಲಿ ಜ್ಞಾನದ ಬೊಕ್ಕಸವೂ ತಾರ್ಕಿಕ ಕೌಶಲ್ಯವೂ ಭಾಷಾ-ಪಾಂಡಿತ್ಯವೂ ಎಷ್ಟೇ ಇದ್ದರೂ ಅದು ಶಿಕ್ಷಣವಲ್ಲ, ಅಪೂರ್ಣ ಶಿಕ್ಷಣ.

೨ ಅರಾಷ್ಟ್ರೀಯ ಶಿಕ್ಷಣ

೧ ನೂರಕ್ಕೆ ೮೦–೮೫ ಜನರ ಜೀವನದ ಅವಶ್ಯಕತೆಗಳನ್ನು ಯೋಚಿಸುವುದರ ಬದಲು, ನಾಲ್ಕಾರು ಜನರ ಅಥವಾ ರಾಜ್ಯದ ಕೆಲವು ವಿಭಾಗಗಳ ಅವಶ್ಯಕತೆಗಳನ್ನು ಕುರಿತು ಮಾತ್ರ ಯೋಚಿಸುವ ಶಿಕ್ಷಣ ರಾಷ್ಟ್ರೀಯ ಶಿಕ್ಷಣವೆನಿಸುವುದೇ ಇಲ್ಲ. ಅದು ಅಸತ್ಯ-ಶಿಕ್ಷಣವಾಗಿರುವುದರಿಂದ ಅವಿದ್ಯೆಯೆ ಸರಿ.

೨ ಇಂಥ ಶಿಕ್ಷಣವು ಶಿಕ್ಷಿತರ ಮತ್ತು ಅಶಿಕ್ಷಿತರ ನಡುವೆ ಮಹದಂತರವನ್ನುಂಟುಮಾಡಿದೆ; ವಿದ್ವಾಂಸರನ್ನು ಪ್ರಜೆಗಳ ಮುಂದಾಳುಗಳನ್ನಾಗಿಯೂ ಮಾರ್ಗದರ್ಶಕರನ್ನಾಗಿಯೂ ಪ್ರತಿನಿಧಿಗಳನ್ನಾಗಿಯೂ ಮಾಡುವುದರ ಬದಲು, ಅವರನ್ನು ಪ್ರಜೆಗಳಿಂದ ಬೇರ್ಪಡಿಸಿ ಪ್ರಜೆಗಳ ಜೀವನವನ್ನೂ ಭಾವಗಳನ್ನೂ ಅರಿಯದವರನ್ನಾಗಿ ಮಾಡಿರುವುದಲ್ಲದೆ ಪ್ರಜಾಪಕ್ಷವನ್ನು ಮಂಡಿಸಲು ಅಯೋಗ್ಯರನ್ನಾಗಿ ಮಾಡಿಬಿಟ್ಟಿದೆ.

೩ ಈ ಶಿಕ್ಷಣವು ತನ್ನ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕಾಗಿ ಭವ್ಯವಾದ ಭವನಗಳನ್ನು ಕಟ್ಟಿಸಿ, ದೊಡ್ಡ ಸಾಧನಗಳನ್ನು ನಿರ್ಮಿಸಿ, ಪುಸ್ತಕಗಳನ್ನು ರಚಿಸಿ, ಮರೀಚಿಕಾ-ಜಲದಂತೆ ಮೋಸಮಾಡುವ ಲಾಭದ ಆಶೆಗಳನ್ನು ದೂರದಿಂದ ತೋರಿಸಿ, ಆಡಂಬರದ ಜೀವನವನ್ನು ಜನತೆಯ ಕಣ್ಣೆದುರಿನಲ್ಲಿಟ್ಟು, ಜನರನ್ನು ಸಾಲದಲ್ಲಿ ಮುಳುಗಿಸಿಬಿಟ್ಟಿರುವುದು.

೪ ಈ ಶಿಕ್ಷಣವು ಜನತೆಯಲ್ಲಿ ಅನೇಕ ಭ್ರಮೆಗಳನ್ನು ಹುಟ್ಟಿಸಿದೆ. ಉದಾಹರಣೆಗೆ: ಅಕ್ಷರ-ಜ್ಞಾನವೂ ಶಿಕ್ಷಣವೂ ಒಂದೇ, ಅಕ್ಷರಜ್ಞಾನದ ಹೊರತು ಶಿಕ್ಷಣವು ಸಿಗದು, ಶಿಕ್ಷಿತನು ಕೂಲಿಕಾರನಂತೆ ಜೀವಿಸಿದರೆ ಅವನು ಶಿಕ್ಷಣವನ್ನು ಹೀಯಾಳಿಸಿದಂತೆ, ಇಂಗ್ಲಿಷ್ ಓದಿದವರೇ ಶಿಕ್ಷಿತರು, ಇತ್ಯಾದಿ.

೫ ಈ ಶಿಕ್ಷಣವು ಪ್ರಜೆಗಳನ್ನು ಧರ್ಮದಿಂದ ವಿಮುಖಮಾಡಿ, ಅನೇಕ ಪೀಳಿಗೆಗಳಿಂದ ನಡೆದು-ಬಂದ ಧರ್ಮದ ಮತ್ತು ಸಂಯಮದ ಸಂಸ್ಕಾರಗಳನ್ನು ಸುಟ್ಟುಬಿಡುವ ಕೆಲಸವನ್ನೇ ಮಾಡುತ್ತಿದೆ.

೬ ಚಿತ್ತಶುದ್ಧಿಗೆ ಬೇಕಾಗುವ ಮಹತ್ವಪೂರ್ಣವಾದ ಅಂಗಗಳನ್ನು ಕುರಿತೂ ಈಶ್ವರ ಗುರು-ಹಿರಿಯರು ಮೊದಲಾದವರಲ್ಲಿ ಭಕ್ತಿ, ನೀತಿ-ಪೂರ್ಣ ಜೀವನಕ್ಕೆ ಬೇಕಾದ ಆಗ್ರಹ ಸಂಯಮ ಮತ್ತು ತಪಸ್ಸಿನಲ್ಲಿ ಶ್ರದ್ಧೆ ಮುಂತಾದ ಅನೇಕ ವಿಷಯಗಳನ್ನು ಕುರಿತೂ, ಆಧುನಿಕ ಶಿಕ್ಷಣವನ್ನು ಪಡೆದವರಲ್ಲಿ ನಾನಾ ಸಂಶಯಗಳನ್ನು ಹುಟ್ಟಿಸಿದೆ; ಅವರನ್ನು ನಾಸ್ತಿಕವಾದಿಗಳನ್ನಾಗಿ ಮಾಡಲು ಯತ್ನಿಸುತ್ತಿದೆ.

೭ ಮೇಲೆ ವಿವರಿಸಿದ ಪರಿಣಾಮಗಳಿಗೆ ಯಾರಾದರೂ ಹೊರತಾಗಿದ್ದರೆ ಅದು ಈ ಶಿಕ್ಷಣದಿಂದಲ್ಲ, ಆದರೆ ಅವರವರ ಮನೆಯ ಉಚ್ಚವಾತಾವರಣದಿಂದ.

೮ ಈ ಶಿಕ್ಷಣವು ಭೋಗದಲ್ಲೂ ಸಂಪತ್ತಿನಲ್ಲೂ ಅಚಲಶ್ರದ್ಧೆಯನ್ನು ಹುಟ್ಟಿಸುವುದರಿಂದ ಅವುಗಳನ್ನು ಕಡಮೆ ಮಾಡಲು ಅವರಿಗೆ ಧೈರ್ಯವೆ ಸಾಲುವುದಿಲ್ಲ. ಭೋಗಾದಿಗಳು ಕಡಮೆಯಾಗಬಹುದೆಂಬ ಬೆದರಿನಿಂದ ಅವರು ಅಂಜುಬುರುಕರಾಗುತ್ತಾರೆ; ಸ್ಪಷ್ಟವಾಗಿ ತೋರುವ ಧರ್ಮವನ್ನು ಆಚರಿಸಲೂ ತಾವು ಅಸಮರ್ಥರೆಂದು ಹೇಳುತ್ತಾರೆ.

೩ ರಾಷ್ಟ್ರೀಯ ಶಿಕ್ಷಣ

೧ ಹಿಂದುಸ್ಥಾನದ ರಾಷ್ಟ್ರೀಯ ಶಿಕ್ಷಣವು ಹಿಂದುಸ್ಥಾನದಲ್ಲಿ ನೂರಕ್ಕೆ

೮೦-೮೫ ಜನರು ಯಾವ ತರದ ಜೀವನವನ್ನು ಕಳೆಯಬೇಕಾಗುವುದೋ, ಅದನ್ನು ಕುರಿತು ಯೋಚಿಸಿ ಯೋಜಿಸಿದ್ದಿರಬೇಕು.

೨ ಹಿಂದುಸ್ತಾನದಲ್ಲಿ ನೂರಕ್ಕೆ ೮೦-೮೫ ಜನರು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಒಕ್ಕಲುತನದಿಂದ ಜೀವಿಸುವರು. ಆದ್ದರಿಂದ ಇವರನ್ನು ಒಳ್ಳೆಯ ಒಕ್ಕಲಿಗರನ್ನಾಗಿ ಮಾಡುವ ದೃಷ್ಟಿಯಿಂದಲೂ. ಒಕ್ಕಲುತನಕ್ಕೆ ಸಂಬಂಧಪಟ್ಟ ಉದ್ಯೋಗಗಳ ಜ್ಞಾನವನ್ನು ಇವರಿಗೆ ಮಾಡಿಕೊಡುವ ದೃಷ್ಟಿಯಿಂದಲೂ ಇವರ ಶಿಕ್ಷಣವು ಯೋಜಿಸಿದ್ದಿರಬೇಕು.

೩ ಶಿಕ್ಷಣದಿಂದ ಜೀವನ-ನಿರ್ವಾಹದ ಪ್ರಶ್ನೆಯು ಬಿಡಿಸಲ್ಪಡಬೇಕು. ಅದಕ್ಕೋಸ್ಕರ ಔದ್ಯೋಗಿಕ ಶಿಕ್ಷಣವು ಈ ಶಿಕ್ಷಣದ ಮುಖ್ಯ ಅಂಗವಾಗಿರಬೇಕು.

೪ ಎಲ್ಲಿಯ ವರೆಗೆ ಉದರ-ನಿರ್ವಾಹದ ಪ್ರಶ್ನೆಯು ಬಿಡಿಸಲ್ಪಡುವುದಿಲ್ಲವೊ, ಅಲ್ಲಿಯ ವರೆಗೆ 'ಸಂಸ್ಕೃತಿ (Culture) ಶಿಕ್ಷಣ', ಇಲ್ಲವೆ 'ಈಶ್ವರೀ ಜ್ಞಾನವನ್ನು ಮಾಡಿಕೊಡುವ ಶಿಕ್ಷಣ' ಮುಂತಾದ ಮಾತುಗಳು ನಿರರ್ಥಕ.

೫ ಇಂಥ ಶಿಕ್ಷಣವನ್ನು ಹೊಲದಲ್ಲಿ ಇಲ್ಲವೆ ಹಳ್ಳಿಯಲ್ಲೇ ಕೊಡಬಹುದು. ಅದು ದೊಡ್ಡ ಊರುಗಳಲ್ಲೂ ಪಟ್ಟಣಗಳಲ್ಲೂ ದೊರೆಯುವುದಿಲ್ಲ.

೬ ಓದುವುದಕ್ಕೂ ಬರೆಯುವುದಕ್ಕೂ ಕಲಿಸುವುದಕ್ಕಿಂತ ಮೊದಲು ಈ ಶಿಕ್ಷಣವನ್ನು ಕೊಡಲು ಬರುವುದೇ ಇಲ್ಲವೆಂದರೆ ಹಿಂದುಸ್ತಾನದ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲು ಹತ್ತಿಪ್ಪತ್ತು ಶತಮಾನಗಳು ಬೇಕು.

೭ ಆದರೆ ಅಕ್ಷರಜ್ಞಾನದ (ಓದು ಬರಹದ ಜ್ಞಾನ) ಮಾತನ್ನು ವಿರೋಧಿಸದೆ, ಅದರ ಹೊರತು ಶಿಕ್ಷಣವನ್ನು ಕೊಡಬಹುದೆಂದೂ ಕೊಡತಕ್ಕದ್ದೆಂದೂ ಹೇಳತಕ್ಕದ್ದು.

೮ ಓದು-ಬರಹದ ಜ್ಞಾನವಿಲ್ಲದಿದ್ದರೂ ಮನುಷನು ಅಂಕೆ ಮಗ್ಗಿಯನ್ನು ಕಲಿಯಬಲ್ಲನು, ತನ್ನ ಉದ್ಯೋಗಕ್ಕೆ ಬೇಕಾಗುವಂಥ ಜ್ಞಾನಾರ್ಜನೆ ಮಾಡಿಕೊಳ್ಳಬಲ್ಲನು, ಸಾಹಿತ್ಯವನ್ನರಿತುಕೊಳ್ಳಬಲ್ಲನು, ಸಾಹಿತ್ಯವನ್ನು ಕೇಳಬಲ್ಲನು, ಕಂಠಸ್ಥ ಮಾಡಿಕೊಳ್ಳಬಲ್ಲನು, ಹಾಗೂ ಸಾಮರ್ಥ್ಯವಿದ್ದರೆ ಸೃಜಿಸಲೂ ಬಲ್ಲನು. ಅವನಲ್ಲಿ ಸತ್ಯದ ಸಾಕ್ಷಾತ್ಕಾರದ ಬಗೆಗೆ ಕಳಕಳಿ ಇದ್ದರೆ ಪರಮಾತ್ಮ-ಜ್ಞಾನವನ್ನು ಕೂಡ ಸಂಪಾದಿಸಬಲ್ಲನು.

೯ ವಿದ್ಯಾವಂತರಾದ ನೂರಾರು ಜನರ ಜ್ಞಾನ-ಭಂಡಾರವು ಕೂಡ ಅನೇಕ ಗ್ರಂಥಗಳನ್ನು ಓದಿದ ಬಳಿಕವೂ ಅತ್ಯಲ್ಪವಿರುವ ಉದಾಹರಣೆಗಳು ಹೇರಳ

ವಾಗಿವೆ. ತಮ್ಮಷ್ಟೇ ಜ್ಞಾನ-ಭಂಡಾರದ ಸಂಪಾದನೆಗೆ ಓದು ಅಗತ್ಯವೆಂದು ತಿಳಿದು ಅವರು ಲಕ್ಷಾಂತರ ಜನರನ್ನು ಓದು-ಬರಹದ ತೊಡಕಿನಲ್ಲಿ ಸಿಕ್ಕಿಸುವುದಕ್ಕಿಂತಲೂ ಅವರಿಗೆ ಬಾಯಿಂದ ಶಿಕ್ಷಣವನ್ನು ಕೊಟ್ಟರೆ ಅನೇಕ ವರ್ಷಗಳಲ್ಲಿ ಕೊಡಬಹುದಾದ ಜ್ಞಾನವನ್ನು ಸ್ವಲ್ಪ ವರ್ಷಗಳಲ್ಲಿ ಕೊಡಬಹುದೆಂಬ ಅನುಭವ ಉಂಟಾಗುವುದು.

೧೦ ಮೇಲಾಗಿ, ಬಡ ಹಿಂದುಸ್ತಾನದ ಶಿಕ್ಷಣ-ಪದ್ಧತಿಯು ಅತಿ ವೆಚ್ಚದ ಪದ್ಧತಿಯಾಗಿರತಕ್ಕದ್ದಲ್ಲ.

೧೧ ಆದ್ದರಿಂದ ಈ ಶಿಕ್ಷಣವನ್ನು ಬೇಗನೆ ಪೂರ್ತಿಗೊಳಿಸಬೇಕೆಂದು ಯಾರೂ ಹವ್ಯಾಸಪಡಕೂಡದು. ಉದ್ಯೋಗ ಮಾಡುತ್ತ, ನಿರ್ವಾಹವನ್ನು ಸಾಗಿಸುತ್ತ, ಇದನ್ನು ಆಜನ್ಮ ಪರಿಯಂತ ಪಡೆಯುತ್ತಿರಬಹುದು ನಮ್ಮ ಶಿಕ್ಷಣ-ಪದ್ಧತಿಯು ಇರಬೇಕಾದುದು ಹೀಗೆಯೇ.

೧೨ ಈ ಶಿಕ್ಷಣವು ಗ್ರಂಥಗಳನ್ನು ಹೆಚ್ಚಾಗಿ ಅವಲಂಬಿಸಕೂಡದು. ಗ್ರಂಥಗಳು ಬೇಕಾಗುವುದೇ ಇಲ್ಲ, ಅವು ಇರಲೇಕೂಡದು ಎಂದು ನಮ್ಮ ಅಭಿಪ್ರಾಯವಲ್ಲ. ಆದರೆ ಶಿಕ್ಷಣವನ್ನು ಓದಿಗಿಂತಲೂ ಶ್ರವಣದ ಮುಖಾಂತರ, ದರ್ಶನದ ಮುಖಾಂತರ, ಮತ್ತು ಕ್ರಿಯೆಯ ಮುಖಾಂತರವಾಗಿಯೆ ವಿಶೇಷವಾಗಿ ಕೊಡತಕ್ಕದ್ದು.

೪ ಉದ್ಯೋಗದ ಮೂಲಕ ಶಿಕ್ಷಣ

೧ ಶಿಕ್ಷಣದ ಪ್ರಾರಂಭವು ಅಕ್ಷರ-ಜ್ಞಾನದಿಂದ ಆಗುವುದರ ಬದಲು ಔದ್ಯೋಗಿಕ ಶಿಕ್ಷಣದಿಂದಲೂ, ಅದರ ಮುಖಾಂತರವೂ ಆಗಬೇಕು. ಯಾವ ಉದ್ಯೋಗಗಳಿಂದ ಉದರನಿರ್ವಾಹವು ಸುಸೂತ್ರವಾಗಿ ಸಾಗುವುದೊ, ಅವುಗಳ ಬಗೆಗೆ ಬಾಲಕರಿಗೆ ಚಿಕ್ಕಂದಿನಿಂದಲೆ ಜ್ಞಾನವನ್ನು ಮಾಡಿಕೊಡತಕ್ಕದ್ದು.

೨ ಉದ್ಯೋಗವು ಉದರ ನಿರ್ವಾಹವನ್ನು ಸಾಗಿಸಬಲ್ಲದ್ದು, ಜನರ ಜೀವನಕ್ಕೆ ಉಪಯುಕ್ತವಾದ ವಸ್ತುಗಳನ್ನು ನಿರ್ಮಿಸುವಂತಹದು ಇರಬೇಕು.

೩ ಆ ಆ ವಸ್ತುವನ್ನು ಉತ್ಪಾದಿಸುತ್ತಿರುವಾಗಲೆ ಹುಡುಗರಿಗೆ ಆ ಆ ಉದ್ಯೋಗಕ್ಕೆ ಸಂಬಂಧಿಸಿದ ಗಣಿತ, ಸಾಹಿತ್ಯ, ವಿಜ್ಞಾನ, ಚಿತ್ರಕಲೆ, ಇತಿಹಾಸ, ಭೂಗೋಲ, ಮುಂತಾದ ವಿಷಯಗಳನ್ನೂ ತಿಳಿಸಿಹೇಳಬೇಕು. ಹೀಗೆ ಉದ್ಯೋಗವು ಶಿಕ್ಷಣದ ಕೇವಲ ಒಂದು ವಿಷಯವಾಗುವುದರ ಬದಲು ಇಡಿಯ

ಶಿಕ್ಷಣದ ಮತ್ತು ಮನೋವಿಕಾಸದ ಮಾಧ್ಯಮವಾಗಬೇಕು.

೪ ಹೀಗೆ ಉದ್ಯೋಗದ ಮುಖಾಂತರ ಶಿಕ್ಷಣಕೊಡುವ ಸಂಸ್ಥೆಯು ತಕ್ಕ ಮಟ್ಟಿಗಾದರೂ ಸ್ವಾವಲಂಬಿಯಾಗುವ ವರೆಗೆ ಆ ಸಂಸ್ಥೆಯ ಇಲ್ಲವೆ ವಿದ್ಯಾರ್ಥಿಗಳ ಪ್ರಗತಿ ತಕ್ಕಷ್ಟಾಗಿದೆಯೆಂದು ಹೇಳಲಾಗುವುದಿಲ್ಲ. ಪ್ರತಿಯೊಬ್ಬನ ಪ್ರತಿಯೊಂದು ಕ್ಷಣವೂ ಉಪಯುಕ್ತ ವಸ್ತು-ನಿರ್ಮಾಣದಲ್ಲಿ ಕಳೆಯಬೇಕೆಂಬ ಮುಖ್ಯ ತತ್ವದ ಜ್ಞಾನದಿಂದ ಕಾರ್ಯ ನಡೆದರೆ, ಆರ್ಥಿಕೋನ್ನತಿ ಆಗಿಯೇ ಆಗುವುದೆಂದು ಗಾಂಧಿಜಿಯವರ ಮತ.

೫ ಒಕ್ಕಲುತನವೂ ವಸ್ತ್ರದ ಉದ್ಯೋಗವೂ ಹಿಂದುಸ್ತಾನದ ರಾಷ್ಟ್ರೀಯ ಉದ್ಯೋಗಗಳು. ಆದ್ದರಿಂದ ಇವೆರಡೂ ಉದ್ಯೋಗಗಳ ಪ್ರಾಥಮಿಕ ಜ್ಞಾನವನ್ನು ಮಾಡಿಕೊಡುವುದಕ್ಕೆ ಪ್ರತಿಯೊಂದು ಪಾಠಶಾಲೆಯಲ್ಲಿಯೂ ಅನುಕೂಲತೆಗಳು ಇರತಕ್ಕದ್ದು.

೬ ಇವೆರಡೂ ಉದ್ಯೋಗಗಳ ಪ್ರಾಥಮಿಕ ಜ್ಞಾನವನ್ನು ಸರ್ವರೂ ಸಂಪಾದಿಸುವುದು ಅವಶ್ಯ. ಏಕೆಂದರೆ, ಇವುಗಳಿಂದ ಉಪಜೀವನ ಮಾಡುವ ಬಯಕೆ ಇಲ್ಲದವರಿಗೂ, ಪೂರ್ಣ ಶಿಕ್ಷಣದ ಮತ್ತು ಇಂದ್ರಿಯ ಶಿಕ್ಷಣದ ದೃಷ್ಟಿಯಿಂದಲೂ, ಈ ಜ್ಞಾನವು ಅತ್ಯಂತ ಮಹತ್ವದ್ದು.

೭ ಒಕ್ಕಲುತನಕ್ಕೆ ಮತ್ತು ವಸ್ತ್ರದ ಉದ್ಯೋಗಗಳಿಗೆ ಬಡಿಗತನ, ಕಮ್ಮಾರಿಕೆ, ಬಣ್ಣಗಾರಿಕೆ ಮುಂತಾದ ಉದ್ಯೋಗಗಳ ನೆರವೂ ಬೇಕು. ಆದ್ದರಿಂದ ಪ್ರತಿಯೊಬ್ಬ ಒಕ್ಕಲಿಗನಿಗೂ ನೇಕಾರನಿಗೂ ಇವುಗಳ ಸಾಮಾನ್ಯ ಜ್ಞಾನವನ್ನು ಮಾಡಿಕೊಡಬೇಕು.

೮ ಕಬ್ಬು, ನೀಲಿ, ಎಣ್ಣೆ-ಕಾಳುಗಳ ಒಕ್ಕಲುತನ, ಸುತ್ತುಮುತ್ತಲಿನ ಆರಣ್ಯದಲ್ಲಿ ದೊರೆಯುವ ವನಸ್ಪತಿ ಮುಂತಾದುವುಗಳ ಉಪಯೋಗ, ಮುಂತಾದ ಅನೇಕ ತರದ ಉದ್ಯೋಗಗಳನ್ನು ಶೋಧಿಸಿ ಆರಳಿಸಬಹುದು, ಬೆಳೆಸಬಹುದು. ಈ ಉದ್ಯೋಗಗಳ ಶಿಕ್ಷಣವನ್ನು ಅಲ್ಲಿಯೆ ಕೊಡತಕ್ಕದ್ದು.

೫ ಮಕ್ಕಳ ಶಿಕ್ಷಣ

೧ ಮಕ್ಕಳ ಶಿಕ್ಷಣವು ಮೊದಲಾಗತಕ್ಕದ್ದು ಅಕ್ಷರ-ಜ್ಞಾನದ ಮೂಲಕವಲ್ಲ, ಸ್ವಚ್ಛತೆಯ ಮೂಲಕ.

೨ ಮಕ್ಕಳ ಶಿಕ್ಷಕನು (ಅಥವಾ ಶಿಕ್ಷಿಕೆಯು) ಮಕ್ಕಳಿಗೆ ವರ್ಣಮಾಲಿ

ಯನ್ನು ಕಲಿಸಲು ಹಾತೊರೆಯಕೂಡದು. ಅವರಿಗೆ ತಮ್ಮ ಕೈ ಕಾಲು, ಮೂಗು, ಕಣ್ಣು, ಹಲ್ಲು, ಉಗುರು ಮುಂತಾದುವುಗಳನ್ನು ಚೊಕ್ಕಟವಾಗಿಡುವುದಕ್ಕೂ ಸ್ನಾನ ಮಾಡುವುದಕ್ಕೂ ಬಟ್ಟೆಗಳನ್ನು ನಿರ್ಮಲ ಮಾಡುವುದಕ್ಕೂ ಮೂಗು ಮುಂತಾದ ಅವಯವಗಳನ್ನು ಕೈ-ವಸ್ತ್ರದಿಂದಲೇ ಒರೆಸಿಕೊಳ್ಳುವುದಕ್ಕೂ ಕಲಿಸತಕ್ಕದ್ದು.

೩ ಆ ಮೇಲೆ ಶಿಕ್ಷಕನು ಮಕ್ಕಳ ಕೈಯಲ್ಲಿ ಕದಿರುಂಡಿಗೆ (ತಕಲಿ)ಯನ್ನೂ ರಾಟೆ (ಚರಕ)ಯನ್ನೂ ಕೊಟ್ಟು, ನೂಲುವುದಕ್ಕೆ ಬೇಕಾಗುವ ಎಲ್ಲ ಕ್ರಿಯೆಗಳನ್ನು ಸಮಾಧಾನದಿಂದ ಕಲಿಸುತ್ತಾ ಇದರ ಅಭ್ಯಾಸ ಮಾಡಿಸಬೇಕು.

೪ ಓದು-ಬರಹ ಬರುವ ತನಕ ಅವರನ್ನು ಅಜ್ಞಾನದಲ್ಲಿಡಕೂಡದು. ಚಿಕ್ಕ ಕತೆಗಳ ಮುಖಾಂತರ ಇತಿಹಾಸ ಭೂಗೋಲಗಳ ಜ್ಞಾನವನ್ನೂ, ಕತೆ ಭಜನೆಯ ಮುಖಾಂತರ ಧರ್ಮದ ಜ್ಞಾನವನ್ನೂ, ಪ್ರತ್ಯಕ್ಷ ವಸ್ತುಗಳನ್ನು ತೋರಿಸಿ ಪದಾರ್ಥ ವಿಜ್ಞಾನದ ಜ್ಞಾನವನ್ನೂ, ವನಸ್ಪತಿ ಭೂಮಿ ಆಕಾಶಗಳ ಜ್ಞಾನವನ್ನೂ ಮಾಡಿಕೊಡಬೇಕು. ಪ್ರತ್ಯಕ್ಷ ಪದಾರ್ಥಗಳ ಮುಖಾಂತರ ಅಂಕಗಣಿತವನ್ನು ಕಲಿಸಬೇಕು. ಈ ರೀತಿ ಓದು-ಬರಹ ಬರುವ ತನಕ ಕನ್ನಡ ಮೂರನೆ ನಾಲ್ಕನೆ ತರಗತಿಯ ವರೆಗಿನ ಜ್ಞಾನವನ್ನು ಮಾಡಿಕೊಡಬೇಕು.

೫ ಇದಲ್ಲದೆ ಅಕ್ಷರಗಳನ್ನು ಬರೆಸುವ ಪೂರ್ವದಲ್ಲಿ ಅವರಿಗೆ ಚಿತ್ರಗಳನ್ನೂ ಸುಳಿವುಗಳನ್ನೂ ಬರೆಯಲು ಕಲಿಸಬೇಕು. ಮತ್ತು ತಮ್ಮ ವಿಚಾರಗಳನ್ನು ಚಿತ್ರಗಳ ಮುಖಾಂತರವಾಗಿಯೆ ತಿಳಿಸಲು ಕಲಿಸಬೇಕು.

೬ ಭಜನೆಯ ಅನೇಕ ಪದಗಳನ್ನೂ ಶ್ಲೋಕಗಳನ್ನೂ ಕವಿತೆಗಳನ್ನೂ ಮುಖೋದ್ಗತ ಮಾಡಿಸಬೇಕು, ಉಚ್ಚಾರವನ್ನು ತಿದ್ದಬೇಕು. ಅಲ್ಲದೆ ನಾನಾ ಬಗೆಯ ಸಾಹಿತ್ಯವನ್ನು ಕಂಠಸ್ಥ ಮಾಡಿಸಬೇಕು.

೭ ತದನಂತರ ಸುಂದರವಾಗಿಯೂ ಸ್ಪಷ್ಟವಾಗಿಯೂ ಅಕ್ಷರಗಳನ್ನು ಬರೆಯಲು ಕಲಿಸಬೇಕು. ಇಷ್ಟು ತಡಮಾಡಿ ಅಕ್ಷರ-ಜ್ಞಾನ ಮಾಡಿಸುವುದರಿಂದ ಮಕ್ಕಳ ಸಮಯವನ್ನು ನಷ್ಟಪಡಿಸಿದಂತಾಗುವುದಿಲ್ಲವೆಂದು ಅನುಭವವಾಗುವುದು.

೬ ಹಳ್ಳಿಗರ ಶಿಕ್ಷಣ

೧ ಅಕ್ಷರ-ಜ್ಞಾನದ ನಂತರವೇ ಶಿಕ್ಷಣ ಹೊಂದತಕ್ಕದ್ದು ಎಂಬ ತಿಳಿ

ವಳಿಕೆಯನ್ನು ಹಳ್ಳಿಗಳ ವಯೋವೃದ್ಧರು ಬಿಟ್ಟುಬಿಡುವುದು ಅವಶ್ಯವಾದದ್ದು.

೨ ಶಕ್ತಿಯೂ ಉತ್ಸಾಹವೂ ಇದ್ದವರಿಗೆ ಅಕ್ಷರ-ಜ್ಞಾನವನ್ನು ಮಾಡಿಕೊಡಲು ಯತ್ನಿಸುವುದು ಯೋಗ್ಯ. ಇದಕ್ಕೆ ಅವರಿಗೆ ಉತ್ತೇಜನವನ್ನೂ ಕೊಟ್ಟು, ತಕ್ಕಷ್ಟು ಹೆಚ್ಚು ಅನುಕೂಲತೆಗಳನ್ನೂ ಒದಗಿಸತಕ್ಕದ್ದು.

೩ ಇಳಿ-ವಯಸ್ಸಿನಲ್ಲಿ ಓದು-ಬರಹ ಕಲಿಯುವ ಇಚ್ಛೆಯಾಗುವುದು ಕಠಿಣ. ಆದರೆ ಇಂಥವರು ಪ್ರೌಢರ ಪಾಠಶಾಲೆಗೆ ಬರಲೇ ಕೂಡದೆಂಬ ನಿಯಮವಿರಕೂಡದು.

೪ ಹಳ್ಳಿಗಳ ಪುಸ್ತಕ-ಭಂಡಾರವು ಚಿಕ್ಕದೇ ಇರಬಲ್ಲುದು. ಹಳ್ಳಿಗರಲ್ಲಿ ಪುಸ್ತಕಗಳನ್ನು ಕೊಳ್ಳುವ ಶಕ್ತಿಯು ತೀರ ಕಡಮೆ. ಸ್ವಲ್ಪ ಹೆಚ್ಚು ಕಡಮೆ ಓದು-ಬರಹ ಬಂದ ಕೂಡಲೆ ಅವರು ತಮ್ಮ ಜ್ಞಾನ ಭಂಡಾರವನ್ನು ತಾವೇ ಬೆಳೆಸಿಕೊಳ್ಳಲು ಸಮರ್ಥರಾಗುತ್ತಾರೆಂಬುದು ಅನುಭವದಿಂದ ಇನ್ನೂ ಸಿದ್ಧವಾಗಿಲ್ಲ.

೫ ಆದ್ದರಿಂದ, ಶಿಕ್ಷಿತರು ಇತರರಿಗೆ ಓದಿತೋರಿಸಿ, ತಿಳಿಸಿ, ಮತ್ತು ವ್ಯಾಖ್ಯಾನಗಳನ್ನು ಕೊಟ್ಟು ಕಲಿಸಿದರೆ ಕಲಿತವರು ಎಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳಬಲ್ಲರೋ, ಓದು-ಬರಹ ಬರದ ಹಳ್ಳಿಗನೂ ಅಷ್ಟೇ ಜ್ಞಾನವನ್ನು ಸಂಪಾದಿಸಿಕೊಳ್ಳಬಲ್ಲನು.

೬ ಓದು-ಬರಹ ಬಂದ ಮಾತ್ರಕ್ಕೇ ಅರಿತುಕೊಳ್ಳುವ ಶಕ್ತಿಯು ವೃದ್ಧಿಹೊಂದುತ್ತದೆಂದು ಹೇಳಲಾಗುವುದಿಲ್ಲ. ಎಷ್ಟೋ ಸಲ ಶ್ರವಣದಿಂದ ಸಂಪಾದಿಸಿದ ಹಳ್ಳಿಗನ ಜ್ಞಾನವು ಶಿಕ್ಷಿತನ ಜ್ಞಾನಕ್ಕಿಂತಲೂ ಮಿಗಿಲಾಗಿರುವುದೆಂದು ಕಂಡುಬರುತ್ತದೆ.

೭ ಜ್ಞಾನದ ಝರಿಯು ಅವಲೋಕನ, ಅನುಭವ, ಮತ್ತು ವಿಚಾರಶಕ್ತಿಯಲ್ಲಿರುವುದೇ ಹೊರತು ಪುಸ್ತಕಗಳಲ್ಲಿ ಅಲ್ಲ. ಈ ಮಾತನ್ನು ನಾವು ಮರೆತುಬಿಟ್ಟಿರುವುದರಿಂದ ಪುಸ್ತಕಗಳ ಜ್ಞಾನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟು ಅವನ್ನೇ ಅವಲಂಬಿಸಿದ್ದೇವೆ.

೭ ಸ್ತ್ರೀ-ಶಿಕ್ಷಣ

೧ ಶಿಕ್ಷಣವನ್ನು ಪಡೆಯಲು ಪುರುಷರಂತೆ ಸ್ತ್ರೀಯರಿಗೂ ಸಂಪೂರ್ಣ ಅಧಿಕಾರವುಂಟು. ಆದ್ದರಿಂದ ಶಿಕ್ಷಣಕ್ಕೆ ಪುರುಷರಿಗೆ ಅನುಕೂಲತೆಗಳಿರುವಂತೆ

ಸ್ತ್ರೀಯರಿಗೂ ಇರತಕ್ಕದ್ದು.

೨ ಪುರುಷನಿಗಿಂತಲೂ ಸ್ತ್ರೀಯ ಪಟ್ಟವೂ ಅಧಿಕಾರವೂ ಕಡಮೆ ಇರುವುದು ಎಂಬ ಭಾವನೆಯನ್ನು ನಿರ್ಮೂಲ ಮಾಡುವುದು ಒಳಿತು.

೩ ಶಿಕ್ಷಣವನ್ನು ಪಡೆಯಲು ಪುರುಷರಂತೆ ಸ್ತ್ರೀಯರಿಗೂ ಬಂಧನವಿರಕೂಡದು. ಆದರೆ ನೂರಕ್ಕೆ ೯೯ ಸ್ತ್ರೀಯರು ಮಾತೃಪದವನ್ನು ಪಡೆಯಬೇಕಾಗುವುದೆಂಬುದನ್ನು ಗಮನದಲ್ಲಿಟ್ಟುಕೊಂಡು ಸ್ತ್ರೀ-ಶಿಕ್ಷಣದ ಏರ್ಪಾಡು ಮಾಡತಕ್ಕದ್ದು.

೪ ಒಕ್ಕಲಿಗರೂ ನೇಕಾರರೂ ಅಲ್ಲದವರಿಗೂ ಹೇಗೆ ಆ ಉದ್ಯೋಗಗಳ ಪ್ರಾಥಮಿಕ ಜ್ಞಾನವಿರುವುದು ಒಳಿತೋ, ಹಾಗೆಯೆ ಮಾತೃಪದವನ್ನು ಪಡೆಯಲು ಬೇಡವಾದ ಮತ್ತು ಮನೆತನವನ್ನು ನಡೆಸಿಕೊಂಡು ಹೋಗುವುದು ಬೇಡವಾದ ಸ್ತ್ರೀಗೂ ಮಾತೃತ್ವದ ಶಿಕ್ಷಣವನ್ನೂ ಗೃಹಕರ್ಮದ ಶಿಕ್ಷಣವನ್ನೂ ಕೊಡುವುದು ಒಳಿತು.

೮ ಧಾರ್ಮಿಕ ಶಿಕ್ಷಣ

೧ ಧಾರ್ಮಿಕ ಶಿಕ್ಷಣಕ್ಕೆ ಆಸ್ಪದವಿಲ್ಲದ ಶಿಕ್ಷಣ-ಕ್ರಮವು ಶಿಕ್ಷಣವೆನಿಸಿಕೊಳ್ಳಲು ಯೋಗ್ಯವಲ್ಲ.

೨ ಯಾವ ಬಾಲಕನು ಯಾವ ಧರ್ಮದಲ್ಲಿ ಜನ್ಮವೆತ್ತುವನೊ ಅವನಿಗೆ ಆ ಧರ್ಮದ ಮುಖ್ಯ ಗ್ರಂಥಗಳ, ಮಹಾ ಪುರುಷರ, ಸಾಧು ಸಂತರ, ಮತ್ತು ಆ ಧರ್ಮದ ಮುಖ್ಯ ಸಿದ್ಧಾಂತಗಳ ವಿಷಯದ ಶ್ರದ್ಧಾಪುರಸ್ಸರ ಜ್ಞಾನವನ್ನು ಮಾಡಿಕೊಡತಕ್ಕದ್ದು.

೩ ಈ ಸಂದರ್ಭದಲ್ಲಿ ಧರ್ಮವೆಂದರೆ ವೈದಿಕ, ಮುಸಲ್ಮಾನ್, ಕ್ರಿಸ್ತ, ಯಹೂದಿ, ಪಾರ್ಸಿ, ಶಿಖ್, ಜೈನ, ಬುದ್ಧ ಮುಂತಾದ ಮುಖ್ಯ ಧರ್ಮಗಳೇ ಹೊರತು, ಈ ಧರ್ಮಗಳಿಂದ ಹುಟ್ಟಿದ ಸಂಪ್ರದಾಯಗಳು, ಉಪಶಾಖೆಗಳು ಅಲ್ಲ. ಸಂಪ್ರದಾಯದ ಮತ್ತು ಉಪಶಾಖೆಗಳ ಸಂಸ್ಕಾರವು ಆ ಆ ಸಂಪ್ರದಾಯದ ಸಂಸ್ಥೆಗಳಿಂದಲೆ ದೊರೆಯಬಲ್ಲುದು.

೪ ಬಾಲಕನಿಗೆ ಅವನ ಧರ್ಮದ ಹೊರತು ಉಳಿದ ಮಹಾನ್ ಧರ್ಮಗಳ ಸಾಮಾನ್ಯ ಜ್ಞಾನವನ್ನೂ ಸಮಭಾವನೆಯಿಂದ ಕೊಡಿಸಲು ಯತ್ನಿಸಬೇಕು.

೫ ಮನುಷ್ಯನ ಶರೀರರಕ್ಷಣೆಗಾಗಿ ಆಹಾರವೂ ಶ್ರಮವೂ ವಿಶ್ರಾಂತಿಯೂ

ಅವಶ್ಯವಾಗಿ ಬೇಕಾಗುವಂತೆ ಚಿತ್ತದ ಉನ್ನತಿಗಾಗಿ ಧರ್ಮದ ಆಧಾರವು ಬೇಕೇ ಬೇಕು. ಪ್ರತಿಯೊಂದು ಧರ್ಮವೂ ಇಂಥ ಆಧಾರವನ್ನೀಯಬಲ್ಲುದು. ಆದ್ದರಿಂದ ಯಾರಿಗೂ ಧರ್ಮಾಂತರ ಮಾಡುವ ಅವಶ್ಯಕತೆಯು ಉಂಟಾಗುವುದಿಲ್ಲ. ಪ್ರತಿಯೊಂದು ಧರ್ಮದ ಪ್ರಚಾರವೂ ಆದದ್ದು ಮನುಷ್ಯನಿಂದಲೆ. ಆದ್ದರಿಂದ ಅದರಲ್ಲಿ ದೋಷಗಳು ಇದ್ದೇ ಇರುವವು, ಅನೇಕ ದೋಷಗಳು ಆಗಾಗ್ಗೆ ಉಂಟಾಗುತ್ತಲೂ ಇರುವವು. ಈ ದೋಷಗಳನ್ನು ಆಗಾಗ ಪರಿಹರಿಸಿ ಅದನ್ನು ಪರಿಶುದ್ಧ ಮಾಡಬೇಕಾಗುತ್ತದೆ. ಹೀಗಿದ್ದರೂ ಯಾವ ಧರ್ಮವೂ ಸರ್ವಥಾ ತ್ಯಾಜ್ಯವಲ್ಲ. ಮೇಲೆ ಹೇಳಿದ ಸಂಸ್ಕಾರವು ಧಾರ್ಮಿಕ ಶಿಕ್ಷಣದಿಂದ ನಿರ್ಮಾಣವಾಗುವಂತೆ ಯತ್ನಿಸತಕ್ಕದ್ದು.

೬ ಭಿನ್ನ ಭಿನ್ನ ಮಾನವ ಸಮಾಜಗಳಲ್ಲಿ ಭಿನ್ನ ಭಿನ್ನ ಧರ್ಮಗಳು ಹುಟ್ಟಿರುವುದರಿಂದ ಅವುಗಳೊಳಗಿನ ಸಮಾಜ-ರಚನೆಯಲ್ಲಿ, ವಿಧಿ ವಿಧಾನಗಳಲ್ಲೂ, ಮತ್ತು ರೂಢಿಗಳಲ್ಲಿ ಪರಸ್ಪರ ವಿರೋಧಿಯೆನಿಸುವ ಭೇದಗಳು ಇದ್ದರೂ, ಪ್ರತಿಯೊಂದು ಧರ್ಮದಲ್ಲಿ ಧಾರ್ಮಿಕಜೀವನದ ಸಾಮಾನ್ಯ ಅಂಗಗಳಾದ ಸತ್ಯರೂಪೀ ಪರಮಾತ್ಮನ ಶೋಧವೂ, ಅವನ ಆಧಾರವೂ, ನೀತಿಪರಾಯಣತೆಯು ಮತ್ತು ಸಂಯಮದ ಜೀವನವೂ, ಪರರಿಗೋಸ್ಕರ ತಾವು ಸವೆದುಹೋಗಬೇಕೆನ್ನುವ ಮತ್ತು ಸ್ವಾರ್ಥಕ್ಕಿಂತಲೂ ಪರರ ಹಿತವನ್ನು ಸಾಧಿಸಬೇಕೆನ್ನುವ ವೃತ್ತಿಯೂ ಇವೆ. ವಿಸ್ತಾರವಾದ ಕ್ಷೇತ್ರದಲ್ಲಿ ಈ ಸಂಸ್ಕಾರಗಳು ಯಾವಾಗಲೂ ಹೊಂದುವ ವಿಕಾಸವೇ ಧಾರ್ಮಿಕ ಜೀವನ-ವಿಕಾಸ. ಆದ್ದರಿಂದ ಧಾರ್ಮಿಕ ಶಿಕ್ಷಣದಲ್ಲಿ ಈ ಅಂಗಗಳ ಮಹತ್ವವನ್ನು ತಿಳಿಸಿ, ಬಾಹ್ಯಭೇದಗಳು ಗೌಣವೆಂದು ಅರಿತುಕೊಳ್ಳಲು ಎಲ್ಲರಿಗೂ ಕಲಿಸತಕ್ಕದ್ದು.

೯ ಶಿಕ್ಷಣದ ಮಾಧ್ಯಮ

೧ ಉಚ್ಚಾತಿ ಉಚ್ಚ ಶಿಕ್ಷಣವನ್ನು ಕೂಡ ಸ್ವಭಾಷೆಯ ಮೂಲಕವೇ ಕೊಡತಕ್ಕದ್ದು.

೨ ಇಂಗ್ಲಿಷಿನಂಥ ಪೂರ್ಣ ಪರದೇಶೀ ಭಾಷೆಯನ್ನು ಶಿಕ್ಷಣದ ಬೋಧ ಭಾಷೆಯನ್ನಾಗಿ ಮಾಡಿಕೊಂಡು ನಾವು ಶಿಕ್ಷಣಕ್ಕಾಗಿ ಪಟ್ಟ ಹಾಗೂ ಪಡುತ್ತಿರುವ ಪರಿಶ್ರಮವು ವ್ಯರ್ಥವಾಗಿದೆ.

೩ ಇಂಗ್ಲಿಷ್ ಜ್ಞಾನವಿಲ್ಲದಿದ್ದರೆ ಉಚ್ಚ ಶಿಕ್ಷಣವನ್ನು ಪಡೆಯಲಾಗು

ವುದೇ ಇಲ್ಲ ಎಂಬುದು ಈಗಿನ ಸ್ಥಿತಿ. ಇದು ಕರುಣಾಜನಕವೂ ಲಜ್ಜಾಸ್ಪದವೂ ಆಗಿದೆ.

೪ ಶಿಕ್ಷಣವು ಇನ್ನೂ ಮನೆ ಮನೆಗೂ ಹಳ್ಳಿ ಹಳ್ಳಿಗೂ ಮುಟ್ಟಿಲ್ಲ. ಅದನ್ನು ಸ್ವಭಾಷೆಯ ಮೂಲಕ ಕೊಡದಿರುವುದೇ ಹೀಗಾಗಲು ಮುಖ್ಯ ಕಾರಣ.

೫ ಇಂಗ್ಲಿಷೇ ಶಿಕ್ಷಣದ ಮಾಧ್ಯಮವೆಂದು ನಿರ್ಧರಿಸಿದ್ದರಿಂದ ದೇಶೀ ಭಾಷೆಗಳ ಉನ್ನತಿಯಾಗಿರುವುದಿಲ್ಲ. ಇಂಗ್ಲಿಷಿನಲ್ಲಿದ್ದ ವಿಚಾರಗಳನ್ನು ಈಗ ಸಂಸ್ಕೃತದಲ್ಲಾಗಲಿ ಪಾರ್ಸಿಯಲ್ಲಾಗಲಿ ಅನುವಾದಿಸಿ, ಸ್ವಭಾಷೆಯ ಪ್ರತ್ಯಯಗಳನ್ನು ಹಚ್ಚಿ ಮಾಡುವ ಸೇವೆಯೇ ಶಿಕ್ಷಿತರು ಮಾಡುವ ಸ್ವಭಾಷಾ-ಸೇವೆ ಎನಿಸಿದೆ. ಆದ್ದರಿಂದಲೆ ಈ ಸಾಹಿತ್ಯವು ಸಾಮಾನ್ಯ ಜನತೆಯಲ್ಲಿ ಪ್ರಚಾರವಾಗಿಲ್ಲ, ಮತ್ತು ಅದರಿಂದ ಯಾವ ಪರಿಣಾಮವೂ ಆಗಿಲ್ಲ.

೬ ಪರಭಾಷೆಯು ಶಿಕ್ಷಣದ ಮಾಧ್ಯಮವಾಗಿದ್ದರಿಂದ ಆಗಿರುವ ಇನ್ನೂ ಒಂದು ದುಷ್ಪರಿಣಾಮವೇನೆಂದರೆ–ಎಷ್ಟೋ ಶಿಕ್ಷಿತರು ಇಂಗ್ಲಿಷಿನಲ್ಲಿ ಮಾತ್ರವೇ ಯೋಚಿಸಬಲ್ಲರು, ಸ್ವಭಾಷೆಯಲ್ಲಿ ಯೋಚನೆ ಮಾಡಲಾರರು. ಇದು ವಿಷಾದದ ಸಂಗತಿ.

೭ ಗುಜರಾತ್ ವಿದ್ಯಾಪೀಠದಂಥ ಚಿಕ್ಕ ಶಿಕ್ಷಣ-ಸಂಸ್ಥೆಯಲ್ಲಿ ಗುಜರಾತಿಯನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಮಾಡಿದ್ದರಿಂದ ಗುಜರಾತೀ ಸಾಹಿತ್ಯದಲ್ಲಿ ಎಷ್ಟು ಪ್ರಗತಿಯಾಗಿದೆಯೆನ್ನುವುದು ಕೆಲವು ವರ್ಷಗಳ ಗುಜರಾತೀ ಸಾಹಿತ್ಯದ ಇತಿಹಾಸದಿಂದ ಮನವರಿಕೆಯಾಗುವುದು.

೮ ಲೋಕಮಾನ್ಯರು ಮರಾಠಿಯ ಮುಖಾಂತರವೇ ತಮ್ಮ ಪ್ರಾಂತದ ಸೇವೆ ಮಾಡಿದ್ದರಿಂದ ಮರಾಠಿ ಸಾಹಿತ್ಯವು ಬಹಳ ಸಮೃದ್ಧವಾಗಿದೆ. ಇದು ಈ ವಿಷಯಕ್ಕೆ ಸಾಕ್ಷಿಯಾಗಿದೆ.

೧೦ ಇಂಗ್ಲಿಷ್ ಭಾಷೆ

೧ ಇಂಗ್ಲಿಷ್ ಭಾಷೆಯ ಜ್ಞಾನವನ್ನು ಸಂಪಾದಿಸಿದ ಹೊರತು ಶಿಕ್ಷಣವು ಪೂರ್ತಿಯಾಗುವುದಿಲ್ಲ ಎಂಬ ತಿಳಿವಳಿಕೆಯನ್ನು ದೂರಮಾಡುವುದು ಅವಶ್ಯ.

೨ ಇಂಗ್ಲಿಷ್ ಭಾಷೆಯ ವಿಶಾಲ ಸಾಹಿತ್ಯದಲ್ಲಿದ್ದ ಸುಂದರವಾದ ರತ್ನಗಳನ್ನು ಆಯ್ದು ತಮ್ಮ ತಮ್ಮ ಭಾಷೆಗೆ ಪರಿವರ್ತಿಸುವುದು ಇಂಗ್ಲಿಷ್ ಭಾಷಾ ಜ್ಞಾನಿಗಳ ಒಂದು ಕರ್ತವ್ಯ. ಈ ರತ್ನಗಳ ಸೌಂದರ್ಯವನ್ನು ಸವಿಯುವುದ

ಕ್ಕಾಗಿ ಕೋಟ್ಯಂತರ ಜನರನ್ನು ಇಂಗ್ಲಿಷ್ ಕಲಿಯಬೇಕೆನ್ನುವ ಹವ್ಯಾಸದಲ್ಲಿ ತೊಡಗಿಸುವುದು ಕ್ರೂರತನ.

೩ ಇಂಗ್ಲಿಷ್ ಭಾಷೆ ವ್ಯವಹಾರಕ್ಕೆ ಹೆಚ್ಚಾಗಿ ಅವಶ್ಯಕವೆನ್ನುವುದು ನಿಜ. ಆದರೆ ಇಂಥ ವ್ಯವಹಾರವನ್ನು ಬರಿಯ ಕೆಲವೇ ಜನರು ಮಾಡಬಲ್ಲರು. ಮೇಲಾಗಿ ಈ ಜನರು ಮಾಡುವ ವ್ಯವಹಾರದ ಬಹು ಭಾಗವು ಇಂಗ್ಲಿಷಿನಲ್ಲಿ ಆಗುವುದು ನಿಷ್ಕಾರಣವಾಗಿ; ಮತ್ತು ಅದು ಇಂಗ್ಲಿಷಿನಲ್ಲಿ ಆಗುವುದೂ ನಮ್ಮ ದಾಸ್ಯದಿಂದಲೆ. ಕೆಲವರೇ ಆದ ಇಂಗ್ಲಿಷ್ ಜನರಿಗೆ ನಮ್ಮ ದೇಶೀಯ ಭಾಷೆಗಳನ್ನು ಕಲಿಯುವ ತೊಂದರೆಯಾಗಬಾರದೆಂದು ಇಡೀ ಪ್ರಜಾ-ಕೋಟಿಯ ಮೇಲೆ ಇಂಗ್ಲಿಷ್ ಶಿಕ್ಷಣದ ಭಾರ ಹೊರಿಸುವುದು, ನಮ್ಮ ದೇಶವು ಬ್ರಿಟಿಷ್ ರಾಜ್ಯಕ್ಕೆ ಕೊಡುತ್ತಿರುವಂಥ ಒಂದು ಪ್ರಕಾರದ ಕರಭಾರವೇ ಸರಿ.

೪ ಇಂಗ್ಲಿಷು ಅವಶ್ಯವಾಗಿ ಕಲಿಯಬೇಕಾದ ಭಾಷೆಯೆಂದು ನಿಯಮ ಮಾಡಿ ಬ್ರಿಟಿಷ್ ರಾಜ್ಯವು ತನ್ನ ತಳಹದಿಯನ್ನು ಹೆಚ್ಚು ಗಟ್ಟಿಮಾಡಿಕೊಂಡಿದೆಯಲ್ಲದೆ, ಈ ಭಾಷೆಯ ದಾಸ್ಯವನ್ನು ಸ್ವೀಕರಿಸುವಂತೆ ಮಾಡಿ ಪ್ರಜೆಗಳನ್ನು ಶರೀರದಿಂದ ಮಾತ್ರವಲ್ಲ, ಮನಸ್ಸಿನಿಂದಲೂ ಅಡಿಯಾಳುಗಳನ್ನಾಗಿ ಮಾಡಿದೆ. ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡದ್ದರಿಂದ ಪ್ರಜೆಗಳಿಗೆ ಆದದ್ದಕ್ಕಿಂತ ಹೆಚ್ಚು ಹಾನಿ ಇಂಗ್ಲಿಷ್ ಹೇರಿದ್ದರಿಂದ ಆಗಿದೆ.

೫ ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದೆ ದೇಶದ ಮಹತ್ವದ ಕಾರಭಾರದಲ್ಲಿ ಪಾಲುಗೊಳ್ಳಲು ಬರುವುದಿಲ್ಲವೆಂದು ಕಟ್ಟುಮಾಡಿರುವುದು ಶಿಕ್ಷಣದ ದೃಷ್ಟಿಯಿಂದ, ಶಿಕ್ಷಣ-ಶಾಸ್ತ್ರದ ದೃಷ್ಟಿಯಿಂದ, ಹಾಗೆಯೆ ರಾಜಕೀಯದ ದೃಷ್ಟಿಯಿಂದ ಕೂಡ, ಅತ್ಯಂತ ಹಾನಿಕರವಾಗಿದೆ.

೬ ಯುರೋಪಿನ ಜ್ಞಾನವನ್ನು ಪಡೆಯುವುದಕ್ಕಾಗಿ ಯುರೋಪಿನ ಯಾವುದಾದರೂ ಒಂದು ಭಾಷೆಯನ್ನು ಕಲಿಯುವುದು ಅವಶ್ಯವೆಂಬುದನ್ನು ಒಪ್ಪಬಹುದು. ಆದರೆ ಇಂದು ನಾವು ಅದಕ್ಕಾಗಿ ಕಳೆದುಕೊಳ್ಳುತ್ತಿರುವಷ್ಟು ಸಮಯವನ್ನೂ ಪರಿಶ್ರಮವನ್ನೂ ಕಳೆದುಕೊಳ್ಳಲಾಗದು. ಯುರೋಪಿನ ಜ್ಞಾನಾರ್ಜನೆಗೆ ಯುರೋಪಿನ ಭಾಷೆಯು ಎಷ್ಟು ಅಗತ್ಯವೋ ಅಷ್ಟನ್ನೇ ಕಲಿಯಬೇಕು. ತಿಳಿಯುವಷ್ಟು ಬಂದರೆ ಸಾಕೆಂಬುದೇ ಆ ಭಾಷೆಯ ವಿಷಯದಲ್ಲಿ ನಮ್ಮ ಧ್ಯೇಯವಿರಬೇಕು. ಇಂದು, ಇಂಗ್ಲಿಷು ನಮ್ಮ ಮಾತೃಭಾಷೆಯೊ ಏನೋ, ಅಥವಾ ಅದಕ್ಕಿಂತಲೂ ಹೆಚ್ಚು ಮಹತ್ವವುಳ್ಳದ್ದೋ

ಏನೋ ಎನ್ನುವಂತೆ ಆ ಭಾಷೆಯಲ್ಲಿ ಲೇಖನ ಬರೆಯುವುದನ್ನು ಕಲಿಯುವುದಕ್ಕೂ ಆ ಭಾಷೆಯ ಉಚ್ಚಾರಗಳನ್ನು ಸರಿಯಾಗಿ ಮಾಡುವುದನ್ನು ಕಲಿಯುವುದಕ್ಕೂ ನಾವು ಭಗೀರಥಪ್ರಯತ್ನ ಮಾಡುತ್ತಿರುತ್ತೇವೆ. ಎಷ್ಟೊ ವರ್ಷಗಳ ವರೆಗೆ ಸತತ ಪ್ರಯತ್ನ ಮಾಡಿದರೂ ಆ ಭಾಷೆಯಲ್ಲಿ ನಾವು ಪ್ರಭುತ್ವ ಪಡೆಯುವುದು ಕಷ್ಟ.

೭ ನಮ್ಮ ಭಾಷೆಯನ್ನೂ ನೆರೆಹೊರೆಯ ಪ್ರಾಂತದ ಭಾಷೆಯನ್ನೂ ಸರಿಯಾಗಿ ಮಾತಾಡಲು ಬರೆಯಲು ಬರದಿದ್ದರೆ ನಮಗೆ ನಾಚಿಕೆ ಎನಿಸುವುದಿಲ್ಲ. ಆದರೆ ಇಂಗ್ಲಿಷಿನಲ್ಲಿ ತಪ್ಪುಗಳಾದರೋ ನಾವು ತುಂಬಾ ನಾಚಿಕೊಳ್ಳುತ್ತೇವೆ. ತಪ್ಪು ಮಾಡಿದವರಿಗೆ ಹಾಸ್ಯ ಮಾಡುತ್ತೇವೆ. ಇದೆಲ್ಲವೂ ಆ ಭಾಷೆಗೆ ನಾವು ಎಷ್ಟು ಮರುಳಾಗಿರುವೆವೆಂಬುದನ್ನು ತೋರಿಸುವುದು. ವಾಸ್ತವಿಕವಾಗಿ ನೋಡಿದರೆ, ಇಂಗ್ಲಿಷು ಪೂರ್ಣ ಪರಕೀಯ ಭಾಷೆಯಾಗಿರುವುದರಿಂದ ನಾವು ತಪ್ಪು ಬರೆದರೂ ತಪ್ಪು ಉಚ್ಚರಿಸಿದರೂ ಆಶ್ಚರ್ಯಪಡತಕ್ಕ, ಹಾಸ್ಯ ಮಾಡತಕ್ಕ, ಅಗತ್ಯವೇನೂ ಇಲ್ಲ.

೮ ಆದರೆ ನಾವು ಈ ಭಾಷೆಗೆ ಮರುಳಾಗಿ ನಮ್ಮ ಶಿಕ್ಷಣದ ಅರ್ಧ ಸಮಯವನ್ನು, ಅಥವಾ ಅದಕ್ಕೂ ಹೆಚ್ಚು ಸಮಯವನ್ನು, ಈ ಭಾಷೆಯ ಪ್ರಭುತ್ವ ಸಂಪಾದನೆಗಾಗಿ ವೆಚ್ಚಮಾಡುತ್ತೇವೆ. ಇದರಿಂದ ವಿದ್ಯಾರ್ಥಿಯ ಎಷ್ಟೋ ಸಮಯವೂ ಶ್ರಮವೂ ವ್ಯರ್ಥವಾಗುವುದು, ದುರ್ವ್ಯಯವಾಗುವುದು.

೧೧ ಭಾಷಾ-ಜ್ಞಾನ

೧ ವ್ಯವಸ್ಥಿತವಾಗಿ ನಡೆಯುವ ಶಿಕ್ಷಣಕ್ರಮದಲ್ಲಿ, ಭಾಷಾವಿಷಯಗಳಲ್ಲಿ ಸ್ವಭಾಷೆಗೆ ಪ್ರಥಮ ಸ್ಥಾನವು ದೊರೆಯತಕ್ಕದ್ದು. ಸ್ವಭಾಷೆಯಲ್ಲಿ ಶುದ್ಧವಾಗಿ ಓದಲು ಮಾತನಾಡಲು ಮತ್ತು ಬರೆಯಲು ಬರುವ ವರೆಗೆ ಇಂಗ್ಲಿಷಿನಂಥ ಪರಕೀಯ ಭಾಷೆಯನ್ನು ಕಲಿಯಲು ಪ್ರಾರಂಭಿಸತಕ್ಕದ್ದಲ್ಲ.

೨ ಸ್ವಭಾಷೆಯ ನಂತರದ ಸ್ಥಾನವು ರಾಷ್ಟ್ರ-ಭಾಷೆಗೆ ಇರಬೇಕು. ನಮಗೆ ಹಿಂದುಸ್ತಾನಿಯೆ ರಾಷ್ಟ್ರ-ಭಾಷೆ. ಈ ವಿಷಯವನ್ನು ಕುರಿತು ಹೆಚ್ಚಿನ ಮಾತುಗಳನ್ನು ಮುಂದೆ ಹೇಳಲಾಗುವುದು.

೩ ಮೂರನೆಯ ಸ್ಥಾನವು ಮೂಲ ಭಾಷೆಗೆ ದೊರೆಯುವುದು. ಹಿಂದೂ ವಿದ್ಯಾರ್ಥಿಗಳಿಗೆ ಸಂಸ್ಕೃತ, ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಅರಬೀ ಅಥವಾ

ಪಾರ್ಸಿ, ಪಾರ್ಸೀ ವಿದ್ಯಾರ್ಥಿಗಳಿಗೆ ಪಹೇಲ್ವಿ, ಮುಂತಾದುವು ಮೂಲ ಭಾಷೆಗಳೆನಿಸುವವು. ಈ ಭಾಷೆಗಳು ಸ್ವಧರ್ಮದ ಮತ್ತು ಸ್ವಭಾಷೆಯ ತಳ ಹದಿಯಾಗಿರುವುದರಿಂದ ಅವುಗಳ ಜ್ಞಾನವನ್ನು ಪಡೆಯುವುದು ಬಹಳ ಮಹತ್ವದ್ದು. ಒಳ್ಳೇ ಶಿಕ್ಷಿತನೆಂದೆನಿಸಿಕೊಳ್ಳುವ ಮನುಷ್ಯನಿಗೆ ತನ್ನ ಮೂಲ ಭಾಷೆಯ ಸಾಮಾನ್ಯ ಜ್ಞಾನವು ಇರಲೇ ಬೇಕು.

೪ ಭಾಷೆಗಳನ್ನು ಕಲಿಯುವ ಇಚ್ಛೆ ಇದ್ದವರು, ರುಚಿ ಇದ್ದವರು, ಹಿಂದುಸ್ತಾನದ ಅನ್ಯ ಪ್ರಾಂತೀಯ ಭಾಷೆಗಳನ್ನು ಕಲಿಯುವುದು ಅವಶ್ಯ. ವಿಶೇಷತಃ ದ್ರವಿಡ ಭಾಷೆಗಳಲ್ಲಿ ಒಂದೆರಡನ್ನು ಕಲಿಯಲು ಪ್ರಯತ್ನಿಸತಕ್ಕದ್ದು. ಸಂಸ್ಕೃತ ಜನ್ಯ ಭಾಷೆಗಳಲ್ಲಿ ಒಂದೆರಡನ್ನು ಕಲಿಯುವುದಂತೂ ಇದ್ದೇ ಇದೆ.

೫ ಶಿಕ್ಷಣದ ದೃಷ್ಟಿಯಿಂದ ಇಂಗ್ಲಿಷಿಗೆ ಈ ಎಲ್ಲ ಭಾಷೆಗಳ ನಂತರ ಸ್ಥಾನವಿದೆ. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಮಾತ್ರ ಇದರ ಬೆಲೆ ಹೆಚ್ಚಾಗಿದೆ. ಆದರೂ ಇದಕ್ಕೆ ಸ್ವಭಾಷೆ, ರಾಷ್ಟ್ರಭಾಷೆ, ಮತ್ತು ಮೂಲ ಭಾಷೆಯ ನಂತರವೇ ಸ್ಥಾನಕೊಡಬೇಕು.

೧೨ ರಾಷ್ಟ್ರಭಾಷೆ

೧ ಹಿಂದಿ ಮತ್ತು ಉರ್ದು ಮಿಶ್ರಿತ ಭಾಷೆಯೆ ಹಿಂದುಸ್ತಾನಿ. ಇದನ್ನು ಸಾಮಾನ್ಯವಾಗಿ ದಿಲ್ಲಿ, ಲಖ್ನೌ, ಪ್ರಯಾಗನಂಥ ಪಟ್ಟಣಗಳಲ್ಲಿ ಸಾಮಾನ್ಯ ಜನರು ಆಡುತ್ತಾರೆ. ಇದೇ ಹಿಂದುಸ್ತಾನದ ರಾಷ್ಟ್ರಭಾಷೆ. ದಕ್ಷಿಣ ಹಿಂದುಸ್ತಾನವನ್ನು ಹೊರತುಪಡಿಸಿ ಇಡೀ ದೇಶದ ಜನರಲ್ಲಿ ಇದರ ಬಳಕೆ ನೂರಾರು ವರ್ಷಗಳಿಂದ ನಡೆದುಬಂದಿದೆ.

೨ ಶಿಕ್ಷಿತ ಮನುಷ್ಯನಿಗೆ ಈ ಭಾಷೆಯು ಶುದ್ಧವಾಗಿ ಮಾತನಾಡಲಿಕ್ಕೂ ಬರೆಯಲಿಕ್ಕೂ ಓದಲಿಕ್ಕೂ ಬರತಕ್ಕದ್ದು.

೩ ಈ ಭಾಷೆಯನ್ನು ನಾಗರೀ ಲಿಪಿಯಲ್ಲಾಗಲಿ, ಉರ್ದು ಲಿಪಿಯಲ್ಲಾಗಲಿ ಬರೆಯುತ್ತಾರೆ. ಆದ್ದರಿಂದ ಪ್ರತಿಯೊಬ್ಬನಿಗೂ ಎರಡೂ ಲಿಪಿಗಳು ಗೊತ್ತಿರುವುದು ಒಳಿತು.

೪ ರಾಷ್ಟ್ರಭಾಷೆ ಇರುವುದು ಪ್ರಾಂತೀಯ ಭಾಷೆಯನ್ನು ಗೌಣಗೊಳಿಸುವುದಕ್ಕಾಗಿ ಅಲ್ಲ. ರಾಷ್ಟ್ರಭಾಷೆಯು ಬೇಕಾಗುವುದು ಇಡೀ ದೇಶದ ವ್ಯವಹಾರಕ್ಕಾಗಿ. ಇದಕ್ಕೆ ಸ್ಥಾನವನ್ನು ಕೊಟ್ಟದ್ದು ಹೊಸದಾಗಿ ಅಲ್ಲ. ವ್ಯವಹಾರದಲ್ಲಿ

ಇದ್ದುದಕ್ಕೇ ಇಲ್ಲಿ ನಾವು ಒಪ್ಪಿಗೆ ಕೊಟ್ಟಿದ್ದೇವೆ.

೧೩ ಇತಿಹಾಸ

೧ ಇಂದು ಇತಿಹಾಸವನ್ನು ಕಲಿಸುವುದು ತಪ್ಪು ಉದ್ದೇಶದಿಂದ, ತಪ್ಪು ದೃಷ್ಟಿಬಿಂದುಗಳಿಂದ. ಆದ್ದರಿಂದ ಈಗ ನಮಗೆ ಕಲಿಸುತ್ತಿರುವ ಇತಿಹಾಸದ ಸಂಗತಿಗಳು ನಿಜವಿದ್ದರೂ ಅವು ನಮ್ಮ ಪೂರ್ವಜರ ಭೂತಕಾಲದ ಸ್ಥಿತಿಯ ತಪ್ಪು ಕಲ್ಪನೆಯನ್ನು ಮಾಡಿಕೊಡುತ್ತವೆ.

೨ ಜನಾಂಗದ ಇತಿಹಾಸವೆಂದರೆ ಬರಿಯ ಅರಸು-ಮನೆತನಗಳ ಏರಿಳಿತವೂ ಯುದ್ಧದ ವರ್ಣನೆಯೂ ಅಲ್ಲ. ಇದು ಹಿಂದುಸ್ತಾನದಂಥ ಜನಾಂಗದ ಇತಿಹಾಸವಂತೂ ಅಲ್ಲವೇ ಅಲ್ಲ ಇದು ಆಗಾಗ ಜನಾಂಗದ ಶರೀರದ ಮೇಲೆ ಎದ್ದ ಗುಳ್ಳೆಗಳ ಇತಿಹಾಸವೆನಿಸುವುದು. ಜನಾಂಗದ ಜೀವನದಲ್ಲಿ ಯುದ್ಧಗಳು ದಿನವೂ ಜರುಗುವುದಿಲ್ಲ. ಅವು ಜರುಗುವುದು ಎಂದೋ ಒಮ್ಮೆ ಬೀಳುವ ಉಲ್ಕಾಪಾತಗಳಂತೆ. ಅರ್ಥಾತ್ ಯುದ್ಧಗಳು ಜನಾಂಗದ ನಿತ್ಯಜೀವನವಲ್ಲ. ಜನಾಂಗದ ನಿತ್ಯಜೀವನದಲ್ಲಿ ಅರಿವು, ಬಂಧುತ್ವ, ಪರಸ್ಪರ ಕಷ್ಟಸಹನ-ಪ್ರಿಯತೆ, ಮತ್ತು ಸಹಕಾರವು ಇರುತ್ತದೆ. ಈಗಿನ ಇತಿಹಾಸವು ಇವುಗಳಿಂದಾದ ಪ್ರಗತಿಯನ್ನು ಬಹು ಗೌಣ ರೀತಿಯಿಂದ ವರ್ಣಿಸುತ್ತದೆ. ಆದ್ದರಿಂದ ಸದ್ಯಕ್ಕೆ ಇತಿಹಾಸವು ಭೂತಕಾಲದ ಭ್ರಮಾತ್ಮಕ ಚಿತ್ರವನ್ನು ನಮ್ಮೆದುರು ಇಡುತ್ತದೆ.

೩ ಅಂತೂ ಇತಿಹಾಸವನ್ನು ಈ ದೃಷ್ಟಿಯಿಂದ ಪರಿಶೀಲಿಸಿ ನೋಡಿದರೆ ನಮಗೆ ಜನಾಂಗದ ನಿತ್ಯ-ವ್ಯವಹಾರದಲ್ಲಿ ಹಿಂಸಾಮಯ ಕಲಹಗಳಿಗಿಂತಲೂ ಅಹಿಂಸಾಮಯ ಸತ್ಯಾಗ್ರಹದ ಪ್ರಯೋಗಗಳೆ ಹೆಚ್ಚಾಗಿ ನಡೆದದ್ದು ಕಂಡು ಬರುತ್ತದೆ.

೪ ಇತಿಹಾಸದ ಶಿಕ್ಷಣದಲ್ಲಿರುವ ದೋಷವು ಇದೊಂದೇ ಅಲ್ಲ. ಸದ್ಯಕ್ಕಂತೂ ಇತಿಹಾಸದ ಶಿಕ್ಷಣವು ತಿಳಿದೂ ತಿಳಿದು ತಪ್ಪು-ಕಲ್ಪನೆಗಳುಂಟಾಗಬೇಕೆಂಬ ಉದ್ದೇಶದಿಂದಲೇ ಕೊಡಲ್ಪಡುತ್ತಿದ್ದು, ಇಂಗ್ಲಿಷರು ಬರುವ ಪೂರ್ವಕಾಲದ ಭಾರತದ ಚಿತ್ರವು ಅತ್ಯಂತ ಕುರೂಪಿಯಾಗಿ ಕಾಣುವಂತೆ ಚಿತ್ರಿಸಲ್ಪಟ್ಟಿದೆ, ಅತ್ಯಂತ ಕೆಡುಕು ರೀತಿಯಲ್ಲಿ ವರ್ಣಿಸಲ್ಪಟ್ಟಿದೆ. ಇಂಗ್ಲಿಷ್ ರಾಜ್ಯದ ಬಗೆಗೆ ಮೋಹವುಂಟಾಗುವಂತೆ ಚಿಕ್ಕಂದಿನಿಂದಲೇ ಇತಿಹಾಸದ ಶಿಕ್ಷಣವು ಕೊಡ

ಲ್ಪಡುತ್ತಿದೆ. ಅದರಲ್ಲಿ ಅಸತ್ಯವಷ್ಟೆ ಅಲ್ಲ, ಅಪ್ರಾಮಾಣಿಕತೆಯೂ ಇರುವುದು.

೧೪ ಶಿಕ್ಷಣದ ಅನ್ಯ ವಿಷಯಗಳು

೧ ಹಿಂದುಸ್ತಾನದಲ್ಲಿ ಸಂಗೀತಕ್ಕೆ ತೀರ ಕಡಮೆ ಗಮನವು ಕೊಡಲ್ಪಟ್ಟಿದೆ. ಚಿತ್ತದ ಭಾವನೆಗಳನ್ನು ಎಚ್ಚರಿಸಲು ಸಂಗೀತವು ಒಂದು ಉತ್ತಮ ಸಾಧನ. ಅದರಂತೆ, ಸಾತ್ವಿಕ ಸಂಗೀತವು ಆಧ್ಯಾತ್ಮಿಕ ವಿಕಾಸಕ್ಕೆ ಅತ್ಯಂತ ಅಗತ್ಯವಾದ ಸಾಧನ. ಬಾಲಕನಲ್ಲಿದ್ದ ಈ ನೈಸರ್ಗಿಕ ಶಕ್ತಿಯನ್ನು ಸಾತ್ವಿಕ ಉಪಾಯಗಳಿಂದ ಅರಳಿಸಬೇಕು.

೨ ಕರ್ಮೇಂದ್ರಿಯ-ಕಾರ್ಯಗಳಿಗೂ ಸಾರ್ವಜನಿಕ ಕಾರ್ಯಗಳಿಗೂ ಅಚ್ಚುಕಟ್ಟುತನದ ಶಿಕ್ಷಣವು ಬೇಕು, ಕವಾಯತಿನ ಜ್ಞಾನವು ಬೇಕು. ಇದರ ಕೊರತೆಯ ಮೂಲಕ ಎಷ್ಟೋ ಅವ್ಯವಸ್ಥೆ, ಶಕ್ತಿಯ ಅಪವ್ಯಯ, ಗೊಂದಲ ಹಾಗೂ ವಿತ್ತ ಜೀವಿತಗಳ ಹಾನಿ ಉಂಟಾಗುವುದು. ಶಿಸ್ತಿನಿಂದ ಏಳುವ, ನಡೆಯುವ, ಮತ್ತು ಕೆಲಸ ಮಾಡುವ, ೮-೧೦ ಜನರು ಒಂದೆಡೆ ಸೇರುತ್ತಲೇ ಕವಾಯತ್ ಮಾಡುವವರಂತೆ ವ್ಯವಸ್ಥಿತವಾಗಿ ಕೆಲಸ ಮಾಡುವ ರೂಢಿಯು ನಮಗೆ ಬೀಳತಕ್ಕದ್ದು. ಆದ್ದರಿಂದ ಪಾಠಶಾಲೆಗಳಲ್ಲಿ ಕವಾಯತ್ (ಡ್ರಿಲ್) ಶಿಕ್ಷಣವನ್ನು ಕೊಡಬೇಕು. ವಯಸ್ಸಾದವರೂ ಇದರ ಶಿಕ್ಷಣವನ್ನು ಪಡೆಯಬೇಕು.

೩ ಹಿಂದುಸ್ಥಾನದಲ್ಲಿ ಶಸ್ತ್ರಾಸ್ತ್ರಗಳನ್ನು ಬಲಾತ್ಕಾರದಿಂದ ಕಸಿದುಕೊಂಡಿದ್ದಾರೆ. ಭಾರತೀಯರು ಅವನ್ನು ತ್ಯಜಿಸಿದ್ದು ತಮ್ಮ ಇಚ್ಛೆಯಿಂದ ಅಲ್ಲ. ಶಸ್ತ್ರಾಸ್ತ್ರಗಳನ್ನು ಧರಿಸುವ ಮತ್ತು ಸೈನಿಕ ಶಿಕ್ಷಣವನ್ನು ಪಡೆಯುವ ಅಧಿಕಾರವು ಪ್ರತಿಯೊಬ್ಬನಿಗೂ ಉಂಟು. ಆದ್ದರಿಂದ ಇಷ್ಟಪಟ್ಟವರಿಗೆ ಸೈನಿಕ ಶಿಕ್ಷಣವೂ ಶಿಕ್ಷಣದ ಅನಿವಾರ್ಯ ವಿಷಯವಾಗಬೇಕು.

೧೫ ಶಿಕ್ಷಕ

೧ ಶಿಕ್ಷಕನು ತಾನು ಕಲಿಸುವ ವಿಷಯದಲ್ಲಿ ಪ್ರವೀಣನಿರಬೇಕು. ಅವನ ನಡತೆ ಹೇಗಿದ್ದರೂ ಸರಿ ಎಂದು ತಿಳಿಯುವುದು ತೀರ ತಪ್ಪಾದುದು, ದೋಷಯುಕ್ತವಾದದ್ದು.

೨ ಪ್ರವೀಣನಾದ, ಆದರೆ ನಡತೆಯು ಚನ್ನಾಗಿಲ್ಲದ ಶಿಕ್ಷಕನಿಂದ ಶಿಕ್ಷಣ

ವನ್ನು ಹೊಂದಿ ವಿದ್ಯಾರ್ಥಿಯು ಒಂದೆರಡು ವಿಷಯಗಳಲ್ಲಿ ನೈಪುಣ್ಯವನ್ನು ಪಡೆಯುವುದಕ್ಕಿಂತ, ಕಡಮೆ ಪ್ರವೀಣನಿದ್ದು ಚನ್ನಾದ ನಡತೆಯುಳ್ಳ ಶಿಕ್ಷಕನಿಂದ ಶಿಕ್ಷಣವನ್ನು ಪಡೆಯುವುದು ಸಾವಿರ ಪಾಲು ಉತ್ತಮ.

೩ ತನಗೆ ಒಪ್ಪಿಸಿದ ವಿಷಯವನ್ನು ಚನ್ನಾಗಿ ಕಲಿಸಲು ಮಾತ್ರ ತಾನು ಹೊಣೆಯೆಂದು ತಿಳಿದುಕೊಂಡು, ವಿದ್ಯಾರ್ಥಿಯ ನಡತೆಯನ್ನು ತಿದ್ದುವ ಹೊಣೆಯನ್ನು ಹೊರಲು ಒಪ್ಪದಿರುವ ಶಿಕ್ಷಕನು ಶಿಕ್ಷಕನೇ ಅಲ್ಲ.

೪ ಆದರ್ಶ ಶಿಕ್ಷಕನು ವಿದ್ಯಾರ್ಥಿಯ ಪಾಠದ ಕಡೆಗೆ ಮಾತ್ರವೇ ಗಮನ ಕೊಡುವುದರ ಬದಲು, ಅವನ ಇಡೀ ಜೀವನದ ಉನ್ನತಿಯ ಕಡೆಗೆ ಸಂಪೂರ್ಣ ದೃಷ್ಟಿಯನ್ನಿಟ್ಟು ಅವನ ಅಂತರಾಳದಲ್ಲಿ ಇಳಿಯಲು ಪ್ರಯತ್ನಿಸುವನು.

೫ ಇಂತಹ ಶಿಕ್ಷಕನು ವಿದ್ಯಾರ್ಥಿಗೆ ಭಯಂಕರ ಮನುಷ್ಯನಂತೆ, ಇಲ್ಲವೆ ಯಮನಂತೆ ಕಾಣುವುದರ ಬದಲು, ಪೂಜ್ಯನಾಗಿಯೂ ತಾಯಿಯಂತೆ ಸಮೀಪದ ಬಂಧುವಾಗಿಯೂ ತೋರುವನು.

೬ ಶಿಕ್ಷಕನು ತನ್ನ ಯೋಗ್ಯತೆಯನ್ನು ಬೆಳೆಸಿಕೊಳ್ಳಲು ಸದಾ ಪ್ರಯತ್ನಪಡತಕ್ಕದ್ದು. ತಾನು ಹೇಳಬೇಕಾದ ವಿಷಯವನ್ನು ಕುರಿತು ಹೊಸ ಹೊಸ ಜ್ಞಾನವನ್ನು ಸಂಪಾದಿಸಿಕೊಂಡೇ, ವಿಷಯವನ್ನು ಚನ್ನಾಗಿ ತಯಾರಿಸಿಕೊಂಡೇ ಅವನು ವರ್ಗವನ್ನು ಪ್ರವೇಶಿಸಬೇಕು.

೭ ಶಿಕ್ಷಕನು ವಿದ್ಯಾರ್ಥಿಗಿಂತಲೂ ಹೆಚ್ಚು ಉತ್ತಮವಾದ ವಿದ್ಯಾರ್ಥಿಜೀವನವನ್ನು ಕಳೆಯಬೇಕೆಂಬುದೇ, ಹೆಚ್ಚು ಅಧ್ಯಯನದಲ್ಲಿ ತೊಡಗಿರಬೇಕೆಂಬುದೇ, ಮೇಲಿನ ಮಾತಿನ ತಾತ್ಪರ್ಯ.

೮ ಪೂರ್ಣ ಸಿದ್ಧತೆ ಮಾಡಿಕೊಳ್ಳದೆ ಶಿಕ್ಷಣ ಕಾರ್ಯವನ್ನು ಕೈಕೊಳ್ಳುವ ಶಿಕ್ಷಕನು ವಿದ್ಯಾರ್ಥಿಗಳ ಅಮೂಲ್ಯ ಸಮಯವನ್ನು ನಷ್ಟಪಡಿಸಿದಂತೆಯೇ ಸರಿ.

೯ ಶಿಕ್ಷಕನು ಶ್ರೇಷ್ಠತರ ಶಿಕ್ಷಣಪದ್ಧತಿಯನ್ನು ಶೋಧಿಸುತ್ತಲೆ ಇರಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ವೈಶಿಷ್ಟ್ಯವನ್ನೂ ಪರೀಕ್ಷಿಸಿ ಯಾವ ವಿಷಯದಲ್ಲಿ ಅವನಿಗೆ ಹೆಚ್ಚು ಗೀಳು ಇದೆಯೆಂಬುದನ್ನು ಕಂಡುಹಿಡಿಯಬೇಕು. ಅವನಿಗೆ ಆ ಆ ವಿಷಯಗಳಲ್ಲಿ ಹೆಚ್ಚು ರುಚಿಯೂ ಪ್ರಗತಿಯೂ ಆಗುವಂತೆ ಯತ್ನಿಸಬೇಕು. ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಲು ಅಸ್ಪದ ಕೊಡಬೇಕು, ಅವರಿಗೆ ಸಮರ್ಪಕ ಉತ್ತರಗಳನ್ನಿತ್ತು ಅವರನ್ನು ಸಮಾಧಾನಪಡಿಸಬೇಕು.

೧೦ ಹೊಡೆಯಲು, ಬೈಯಲು, ತಿರಸ್ಕರಿಸಲು, ಅಥವಾ ಯಾವುದಾದರೂ ಶಿಕ್ಷೆಯನ್ನು ವಿಧಿಸಲು ಶಿಕ್ಷಕನಿಗೆ ಪ್ರತಿಬಂಧ ಇರಬೇಕು.

೧೧ ತನ್ನ ಕೆಲಸವನ್ನು ಚನ್ನಾಗಿ ಮಾಡಬೇಕೆನ್ನುವ ಶಿಕ್ಷಕನು ಬಹಳ ವಿದ್ಯಾರ್ಥಿಗಳ ದೊಡ್ಡ ವರ್ಗದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಲಾರನೆಂಬುದು ಅನುಭವದ ಮಾತು.

೧೨ ನೂರಾರು ವಿದ್ಯಾರ್ಥಿಗಳುಳ್ಳ ವಿದ್ಯಾಲಯಗಳೂ ಇರಕೂಡದು.

೧೬ ವಿದ್ಯಾರ್ಥಿ

೧ ವಿದ್ಯೆಯು ವಿನಯದಿಂದ ಶೋಭಿಸುವುದು. ಇಷ್ಟೇ ಅಲ್ಲ, ವಿನಯವಿಲ್ಲದಿದ್ದರೆ ವಿದ್ಯೆ ದೊರೆಯುವುದೂ ಇಲ್ಲ.

೨ ವಿದ್ಯಾರ್ಥಿಯು ಶಿಕ್ಷಕನೊಡನೆ ಗುರು-ಭಾವನೆಯಿಂದ ವರ್ತಿಸಬೇಕು, ಗುರುವಿನಲ್ಲಿ ಶ್ರದ್ಧೆಯನ್ನು ಇಡಬೇಕು. ಅವನೊಡನೆ ವಿನಯದಿಂದಲೂ ಸೇವಾ ಭಾವನೆಯಿಂದಲೂ ನಡೆಯಬೇಕು.

೩ ಶಿಕ್ಷಕನು ಇಂಥ ಶ್ರದ್ಧೆಗೆ ಯೋಗ್ಯನಲ್ಲವೆಂದು ಮನದಟ್ಟಾದರೆ ವಿದ್ಯಾರ್ಥಿಯು ವಿನಯದಿಂದಲೇ ಅವನನ್ನು ತ್ಯಜಿಸಬೇಕು.

೪ ವಿದ್ಯಾರ್ಥಿಗಳು ಪ್ರಶ್ನೆಗಳನ್ನು ಕೇಳಿ ಕೇಳಿ ಶಿಕ್ಷಕರಿಂದ ತಮ್ಮ ಸಂಶಯಗಳನ್ನು ದೂರ ಮಾಡಿಕೊಳ್ಳಬೇಕು.

೫ ವಿದ್ಯಾರ್ಥಿಯು ಶಿಕ್ಷಕನಿಂದ ಸರ್ವಜ್ಞಾನವನ್ನೂ ಹೀರಿಕೊಳ್ಳಲು ಆತುರ ಪಡುತ್ತಿರುವನೆಂದು ತೋರಿಸಕೂಡದು. ವಿನಯದಿಂದ ವರ್ತಿಸಿ ಶಿಕ್ಷಕನ ಮನಸ್ಸನ್ನು ಪ್ರಸನ್ನಗೊಳಿಸಲು ಯತ್ನಿಸುವ ವಿದ್ಯಾರ್ಥಿಗೆ ಶಿಕ್ಷಕನು ತನ್ನ ಜ್ಞಾನ ಭಂಡಾರವನ್ನು ಅರ್ಪಿಸಲು ತಾನಾಗಿ ಸಿದ್ಧನಾಗುವನು, ಆತುರನಾಗುವನು. ಶಿಕ್ಷಕನಲ್ಲಿ ಈ ಆತುರತೆ ಉಂಟಾಗುವ ತನಕ ವಿದ್ಯಾರ್ಥಿ ತಾಳ್ಮೆಯಿಂದಿರಬೇಕು.

೬ ಆದರೆ ಶಿಕ್ಷಕನು ತನ್ನ ಜ್ಞಾನದ ಮಳೆಯನ್ನು ಸುರಿಸತೊಡಗಿದಾಗ ವಿದ್ಯಾರ್ಥಿ ಸೋಮಾರಿತನದಿಂದ ಆ ಸುಪ್ರಸಂಗವನ್ನು ಕಳೆದುಕೊಳ್ಳತಕ್ಕದ್ದಲ್ಲ.

೧೭ ವಿದ್ಯಾರ್ಥಿ-ನಿಲಯ

೧ ವಿದ್ಯಾರ್ಥಿಗಳಿಗೆ ಬರಿಯ ವಾಸಕ್ಕಾಗಿಯೂ ಭೋಜನಕ್ಕಾಗಿಯೂ ಅನುಕೂಲತೆಯನ್ನು ಮಾಡಿಕೊಡುವಂಥ ಭೋಜನಾಲಯವು ವಿದ್ಯಾರ್ಥಿ

ನಿಲಯವೆನಿಸುವುದಿಲ್ಲ.

೨ ಪಾಠಶಾಲೆಗಿಂತಲೂ ವಿದ್ಯಾರ್ಥಿನಿಲಯದ ಮಹತ್ವ ಬಹಳ ಹೆಚ್ಚು. ವಿದ್ಯಾರ್ಥಿನಿಲಯವು ತಂದೆ ತಾಯಂದಿರ ಮನೆಯ ಬದಲಾಗಿ ಇರುವುದು, ತೌರುಮನೆಯಲ್ಲಿ ದೊರೆಯದ ಸಂಸ್ಕಾರಗಳು ಇಲ್ಲಿ ದೊರೆಯಬಲ್ಲುವು, ಎಂಬುದನ್ನು ಗೃಹಪತಿಯು ಸಿದ್ಧಮಾಡಬೇಕು.

೩ ಆದ್ದರಿಂದ ಪಾಠಶಾಲೆಯ ಆಚಾರ್ಯರಿಗಿಂತ, ಅಥವಾ ವರ್ಗದ ಅಧ್ಯಾಪಕರಿಗಿಂತ, ವಿದ್ಯಾರ್ಥಿನಿಲಯದ ಅಧಿಪತಿ ಹೆಚ್ಚು ಯೋಗ್ಯನಾದ ಮನುಷ್ಯನಿರಬೇಕು. ಇವನಲ್ಲಿ ಶಿಕ್ಷಕನ ಗುಣಗಳೂ ಇರಬೇಕು, ತಂದೆ ತಾಯಿಯರ ಗುಣಗಳೂ ಇರಬೇಕು.

೪ ವಿದ್ಯಾರ್ಥಿಗಳ ಪ್ರತಿಯೊಂದು ಕಾರ್ಯದ ಮೇಲೂ ಪ್ರತಿಯೊಂದು ಸಂಗತಿಯ ಮೇಲೂ ಇವನ ದೃಷ್ಟಿ ಇರತಕ್ಕದ್ದು.

೫ ಹುಡುಗರು ಒಟ್ಟುಗೂಡಿ ಇರುವಾಗ ಅವರ ಗುಪ್ತವಾದ ಮತ್ತು ಬಹಿರಂಗದಲ್ಲಿ ಕಾಣುವ ದೋಷಗಳು ದೃಷ್ಟಿಗೋಚರವಾಗುವವು. ಇತ್ತ ಗೃಹಪತಿಯು ಬಹು ಚಾತುರ್ಯದಿಂದ ಗಮನಕೊಟ್ಟಿರಬೇಕು.

೬ ವಿದ್ಯಾರ್ಥಿನಿಲಯದಲ್ಲಿ, ಪಂಕ್ತಿಭೇದವು ಇರಕೂಡದು.

೭ ವಿದ್ಯಾರ್ಥಿನಿಲಯದಲ್ಲಿ, ಸಾಧ್ಯವಾದ ಮಟ್ಟಿಗೆ ಆಳುಗಳನ್ನು ಇಡಕೂಡದು. ವಿದ್ಯಾರ್ಥಿಗಳು ತಮ್ಮ ಕಾರ್ಯಗಳನ್ನು ತಾವೇ ಮಾಡಿಕೊಳ್ಳಬೇಕು.

೮ ಬಡ ದೇಶಕ್ಕೆ ತಕ್ಕಂತೆ ವಿದ್ಯಾರ್ಥಿನಿಲಯದ ವೆಚ್ಚವಿರಬೇಕು.

೯ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಮಿಷ್ಟಾನ್ನವು ದೊರೆಯಲೇ ಬೇಕೆಂಬ ರೂಢಿ ಒಳಿತಾದುದಲ್ಲ.

೧೦ ವಿದ್ಯಾರ್ಥಿನಿಲಯವು ಸರಳತನವನ್ನೂ, ಮಿತವ್ಯಯವನ್ನೂ, ಸುಸಭ್ಯ ನಡತೆಯ ಸಂಸ್ಕಾರಗಳ ಗುರಿಯನ್ನೂ ವಿದ್ಯಾರ್ಥಿಗಳ ಎದುರಿನಲ್ಲಿಡುವಂತಹದಿರಬೇಕು. ವಿದ್ಯಾರ್ಥಿನಿಲಯಕ್ಕೆ ಸೇರಿ ವಿದ್ಯಾರ್ಥಿಯು ವಿನಯಹೀನನೂ ವೆಚ್ಚಬಡಕನೂ ಉಚ್ಛೃಂಖಲನೂ ಆದರೆ ಆ ವಿದ್ಯಾರ್ಥಿನಿಲಯಕ್ಕೆ ಸಫಲತೆ ದೊರೆಯುವುದಿಲ್ಲವೆಂಬುದು ಖಂಡಿತ.

೧೮ ಶಿಕ್ಷಣದ ವೆಚ್ಚ

೧ ಶಿಕ್ಷಣಕ್ಕಾಗಿ ಇಂದು ಬಹಳ ವೆಚ್ಚ ಮಾಡಬೇಕಾಗುತ್ತದೆ. ಆದ್ದರಿಂದ

ಶಿಕ್ಷಣವು ಇಂದು ವೆಚ್ಚದ ಶಿಕ್ಷಣವಾಗಿದೆ. ಈ ಸ್ಥಿತಿ, ಶಿಕ್ಷಣಕ್ರಮವು ಸರಿಯಾಗಿಲ್ಲವೆಂಬುದನ್ನು ತೋರಿಸುತ್ತದೆ.

೨ ಶಿಕ್ಷಕರೂ ವಿದ್ಯಾರ್ಥಿಗಳೂ ತಮ್ಮ ಹೊಟ್ಟೆಗೂ ಬಟ್ಟೆಗೂ ತಗಲುವಷ್ಟು ವೆಚ್ಚವನ್ನು ಸ್ವತಃ ದುಡಿದು ಸಂಪಾದಿಸಲು ಸಮರ್ಥರಾಗಬೇಕು. ಶಿಕ್ಷಣದ ಯೋಜನೆಯನ್ನು ಈ ದೃಷ್ಟಿಯಿಂದ ಮಾಡಬೇಕು. ಮನೆಯ ಮತ್ತು ಸಾಧನಗಳ ಸಲುವಾಗಿ ತಗಲುವ ವೆಚ್ಚವನ್ನು ಜನರಿಂದ ಬೇಡಿ ಪಡೆಯಬೇಕು.

೩ ಇಂದು ಇದು ಸಾಧ್ಯವಿಲ್ಲ. ಏಕೆಂದರೆ ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಪರಿಶ್ರಮಪಡುವ ಅಭ್ಯಾಸವಿಲ್ಲ; ಮತ್ತು ದುಡಿಯಲು ಕಲಿಸಿರುವುದಿಲ್ಲ. ಈ ದಿಕ್ಕಿನಲ್ಲಿ ಪ್ರಯತ್ನವಾಗಬೇಕೆನ್ನುವುದರಲ್ಲಿ ಏನೂ ಸಂದೇಹವಿಲ್ಲ.

೪ ಬಾಲಕನಿಗೆ ಮನೆಯಲ್ಲಿ ದೊರೆಯಲು ಸಾಧ್ಯವಿರುವ ಶಿಕ್ಷಣವನ್ನು ಕೊಡುವುದಕ್ಕಾಗಿ ಪಾಠಶಾಲೆಗಳು ಬೇಕಾಗುವುದಿಲ್ಲ. ಆದುದರಿಂದ ತಂದೆ ತಾಯಿಗಳು ಸುಸಂಸ್ಕೃತರಾಗುವಂತೆ ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಶಿಕ್ಷಣದ ವೆಚ್ಚವು ಕಡಮೆಯಾಗುವುದು.

೫ ಪ್ರಾಥಮಿಕ ಶಿಕ್ಷಣವು ಹೆಚ್ಚಾಗಿ ಮನೆಯಲ್ಲೇ ದೊರೆಯಬೇಕು.

೧೯ ಉಪಸಂಹಾರ

ಪೂಜ್ಯ ಗಾಂಧಿಜಿಯವರು 'ಸತ್ಯಾಗ್ರಹಾಶ್ರಮದ ಇತಿಹಾಸ'ವನ್ನು ಬರೆಯಲಾರಂಭಿಸಿದ್ದಾರೆ. ಅದರಲ್ಲಿ, ಶಿಕ್ಷಣವನ್ನು ಕುರಿತ ಪ್ರಕರಣದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಮುಗಿಸಿದ್ದಾರೆ. ಅದನ್ನೇ ಈ ಖಂಡಕ್ಕೆ ಜೋಡಿಸಿದೆ. ಅವರ ಆ ಹಸ್ತಲಿಖಿತ ಭಾಷೆಯಲ್ಲಿಯೂ ಕೆಳಗೆ ಕೊಟ್ಟ ಭಾಷೆಯಲ್ಲಿಯೂ ಅಲ್ಲಲ್ಲಿ ಸ್ವಲ್ಪ ಅಂತರವಿದೆ. ಪುಸ್ತಕವನ್ನು ಗಾಂಧಿಜಿಯವರು ತಿದ್ದುವಾಗಲೇ ಆ ಅಂತರವು ಆಗಿದೆ. ಈ ಪ್ರಕರಣದ ವಿಚಾರಗಳು ಹಿಂದಿನ ಪ್ರಕರಣಗಳಲ್ಲಿ ಒಂದಿಲ್ಲೊಂದು ರೂಪದಲ್ಲಿ ಬಂದೇ ಇವೆ. –**ಮಶ್ರುವಾಲಾ**

ಶಿಕ್ಷಣದ ವಿಷಯದಲ್ಲಿ ನನ್ನ ಅಭಿಪ್ರಾಯವು ಕೆಳಗಿನಂತಿದೆ:

ಪ್ರಥಮ ಕಾಲ:

೧ ಬಾಲಕ ಬಾಲಿಕೆಯರಿಗೆ ಜೊತೆಯಲ್ಲೇ ಶಿಕ್ಷಣ ಕೊಡತಕ್ಕದ್ದು.

೨ ಬಾಲಕ ಬಾಲಿಕೆಯರು ತಮ್ಮ ವೇಳೆಯನ್ನು ಶಾರೀರಿಕ ಕಾರ್ಯಗಳಲ್ಲೇ ವಿಶೇಷವಾಗಿ ವೆಚ್ಚಮಾಡುತ್ತಿರಬೇಕು. ಅವರು ಮಾಡುವ ಕಾರ್ಯಗಳು ಕೂಡ ಶಿಕ್ಷಣ ಕೊಡುವವನ ಎದುರಿನಲ್ಲೇ ಆಗುತ್ತಿರಬೇಕು. ಶಾರೀರಿಕ ಕಾರ್ಯಗಳು

ಶಿಕ್ಷಣದ ವಿಭಾಗವೆನಿಸಬೇಕು.

೩ ಪ್ರತಿಯೊಬ್ಬ ಬಾಲಕ ಬಾಲಿಕೆಯ ಒಲವನ್ನೂ ಪರೀಕ್ಷಿಸಿ ಕೆಲಸ ಒಪ್ಪಿಸ ಬೇಕು.

೪ ಪ್ರತಿಯೊಂದು ಕೆಲಸವನ್ನು ತೆಗೆದುಕೊಳ್ಳುವಾಗ ಆ ಆ ಕಾರ್ಯದ ತಿಳಿ ವಳಿಕೆಯನ್ನೂ ಕೊಡಬೇಕು.

೫ ಬಾಲಕನಿಗೆ ತಿಳಿವಳಿಕೆ ಬಂದ ಮೇಲೆ ಸಾಮಾನ್ಯ ಜ್ಞಾನವನ್ನು ಮಾಡಿ ಕೊಡಬೇಕು. ಈ ಜ್ಞಾನದಾನವು ಅಕ್ಷರಜ್ಞಾನದ ಮೊದಲೇ ಪ್ರಾರಂಭವಾಗ ತಕ್ಕದ್ದು.

೬ ಅಕ್ಷರಜ್ಞಾನವು ಲೇಖನ(ಚಿತ್ರ)ಕಲೆಯ ವಿಭಾಗವೆಂದೆಣಿಸಿ ಮೊದಲು ಬಾಲಕನಿಗೆ ಭೂಮಿತಿಯ ಆಕೃತಿಗಳನ್ನು ತೆಗೆಯಲು ಕಲಿಸಿ, ಬೆರಳುಗಳಿಗೆ ಚೆನ್ನಾಗಿ ಅಭ್ಯಾಸವಾದ ಮೇಲೆ ಅಕ್ಷರಗಳನ್ನು ಕಲಿಸಬೇಕು. ಅರ್ಥಾತ್ ಮೊದಲಿನಿಂದಲೆ ಶುದ್ಧ ಅಕ್ಷರಗಳನ್ನು ಬರೆಯಲು ಕಲಿಸಬೇಕು.

೭ ಬರಹಕ್ಕಿಂತ ಮೊದಲು ಬಾಲಕನು ಓದಲು ಕಲಿಯಬೇಕು. ಅಕ್ಷರ ಗಳು ಚಿತ್ರಗಳೆಂದು ತಿಳಿದು ಅವನ್ನು ಗುರುತಿಸಲು ಕಲಿತ ನಂತರ ಬರೆಯಲು ಕಲಿಯಬೇಕು.

೮ ಈ ರೀತಿ ಶಿಕ್ಷಕನ ಮುಖದಿಂದ ಜ್ಞಾನವನ್ನು ಪಡೆದ ಬಾಲಕನು, ಎಂಟು ವರ್ಷದಲ್ಲಿ ತನ್ನ ಯೋಗ್ಯತೆಗೆ ತಕ್ಕಂತೆ ಹೆಚ್ಚು ಜ್ಞಾನವನ್ನು ಪಡೆಯ ಬೇಕು.

೯ ಬಾಲಕನಿಗೆ ಬಲಾತ್ಕಾರದಿಂದ ಏನನ್ನೂ ಕಲಿಸಕೂಡದು.

೧೦ ತಾನು ಯಾವುದನ್ನು ಕಲಿಯುವನೋ ಅದರಲ್ಲಿ ಬಾಲಕನಿಗೆ ರುಚಿ ಉಂಟಾಗಬೇಕು.

೧೧ ಬಾಲಕನಿಗೆ ಶಿಕ್ಷಣವು ಆಟದಂತೆ ತೋರಬೇಕು. ಆಟವು ಕೂಡ ಶಿಕ್ಷಣದ ಒಂದು ಅನಿವಾರ್ಯ ಅಂಗ.

೧೨ ಬಾಲಕನ ಎಲ್ಲ ಶಿಕ್ಷಣವು ಮಾತೃಭಾಷೆಯ ಮೂಲಕವೇ ನಡೆಯ ಬೇಕು.

೧೩. ಬಾಲಕನಿಗೆ ಹಿಂದಿಯನ್ನೂ ಉರ್ದುವನ್ನೂ ರಾಷ್ಟ್ರಭಾಷೆಯೆಂದು ಕಲಿಸ ಬೇಕು. ಅವನ್ನು ಕೂಡ ಅಕ್ಷರಜ್ಞಾನಕ್ಕಿಂತ ಮೊದಲೇ ಪ್ರಾರಂಭಿಸಬೇಕು.

೧೪ ಧಾರ್ಮಿಕ ಶಿಕ್ಷಣವು ಅನಿವಾರ್ಯವೆಂದು ತಿಳಿಯಬೇಕು. ಈ ಶಿಕ್ಷಣ

ವನ್ನು ಬಾಲಕನು ಪುಸ್ತಕದಿಂದ ಪಡೆಯುವುದರ ಬದಲು ಶಿಕ್ಷಕನ ವರ್ತನೆಯಿಂದ ಮತ್ತು ಅವನ ಮುಖದಿಂದ ಪಡೆಯಬೇಕು.

ದ್ವಿತೀಯ ಕಾಲ:

೧೫ ೯ರಿಂದ ೧೬ ವರ್ಷಗಳ ವರೆಗಿನ ಕಾಲವು ದ್ವಿತೀಯ ಕಾಲ.

೧೬ ದ್ವಿತೀಯ ಕಾಲದ ಕೊನೆಯ ವರೆಗೂ ಬಾಲಕ ಬಾಲಿಕೆಯರ ಶಿಕ್ಷಣವು ಜೊತೆಯಲ್ಲೇ ಸಾಗಿದರೆ ಒಳಿತು.

೧೭ ದ್ವಿತೀಯ ಕಾಲದಲ್ಲಿ ಹಿಂದೂ ಬಾಲಕನಿಗೆ ಸಂಸ್ಕೃತಜ್ಞಾನವೂ, ಮುಸಲ್ಮಾನ್ ಬಾಲಕನಿಗೆ ಅರಬ್ಬಿಯ ಜ್ಞಾನವೂ ಆಗಬೇಕು.

೧೮ ಈ ಕಾಲದಲ್ಲೂ ಶಾರೀರಿಕ ಕೆಲಸವು ಹಾಗೆಯೇ ಮುಂದುವರಿಯಬೇಕು. ಅಕ್ಷರಜ್ಞಾನಕ್ಕಾಗಿ ಸಮಯವನ್ನು ಬೇಕು ಬೇಕಾದಂತೆ ಬೆಳೆಸಿಕೊಳ್ಳಬೇಕು.

೧೯ ಬಾಲಕರ ತಂದೆ ತಾಯಿಯರು ಯಾವ ನಿಶ್ಚಿತ ಉದ್ಯೋಗವನ್ನು ಮಾಡಲು ತೊಡಗಿರುತ್ತಾರೊ, ಆ ಉದ್ಯೋಗದ ಜ್ಞಾನವನ್ನೂ ಬಾಲಕನಿಗೆ ಈ ಕಾಲದಲ್ಲಿ ಮಾಡಿಕೊಡಬೇಕು. ತಮ್ಮ ಮಾತಾ ಪಿತೃಗಳು ಮಾಡುವ ಉದ್ಯೋಗವನ್ನೇ ಮಾಡಿ ಹೊಟ್ಟೆ ತುಂಬಿಕೊಳ್ಳಲು ಬಯಸುವಂತೆ ಅವನಿಗೆ ಆ ಉದ್ಯೋಗದ ಶಿಕ್ಷಣವನ್ನಿತ್ತು ಅಣಿಗೊಳಿಸಬೇಕು. ಈ ನಿಯಮವು ಬಾಲಿಕೆಯರಿಗೆ ಅನ್ವಯಿಸುವುದಿಲ್ಲ.

೨೦ ಹದಿನಾರನೇ ವರ್ಷವು ಮೊದಲಾಗುವುದರೊಳಗಾಗಿ ಬಾಲಕ ಬಾಲಿಕೆಯರಿಗೆ ಪ್ರಪಂಚದ ಇತಿಹಾಸ, ಭೂಗೋಲ,ವನಸ್ಪತಿ ಶಾಸ್ತ್ರ, ಆಕಾಶ ದರ್ಶನ, ಗಣಿತ, ಭೂಮಿತಿ, ಮತ್ತು ಬೀಜಗಣಿತದ ಸಾಮಾನ್ಯ ಜ್ಞಾನವಾಗಿರಬೇಕು.

೨೧ ಹದಿನಾರು ವರ್ಷದ ಬಾಲಕ ಬಾಲಿಕೆಯರಿಗೆ ಹೊಲಿಗೆಯೂ ಅಡಿಗೆಯೂ ಬರುತ್ತಿರಬೇಕು.

ತೃತೀಯ ಕಾಲ:

೨೨ ೧೬ರಿಂದ ೨೫ ವರ್ಷಗಳ ವರೆಗಿನ ಕಾಲವು ತೃತೀಯ ಕಾಲ. ಈ ಕಾಲದಲ್ಲಿ ಪ್ರತಿಯೊಬ್ಬ ಯುವಕ ಯುವತಿಗೆ ಅವರವರ ಇಚ್ಛೆಯಂತೆ ಮತ್ತು ಅವರವರ ಅನುಕೂಲತೆಯ ಮೇರೆಗೆ ಶಿಕ್ಷಣವು ದೊರೆಯಬೇಕು.

೨೩ ೯ ವರ್ಷದ ಮೇಲೆ ಪ್ರಾರಂಭಿಸತಕ್ಕ ಶಿಕ್ಷಣವು ಸ್ವಾವಲಂಬಿ ಶಿಕ್ಷಣ

ವಾಗಿರತಕ್ಕದ್ದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೇ ಕೆಲವೊಂದು ಉದ್ಯೋಗಗಳಲ್ಲಿ ತೊಡಗಿ, ಅವುಗಳಿಂದ ದೊರೆತ ಉತ್ಪನ್ನದಿಂದ ತಮ್ಮ ಶಿಕ್ಷಣಕ್ಕೆ ತಗಲುವ ವೆಚ್ಚವನ್ನು ಸಾಗಿಸಿಕೊಂಡು ಹೋಗಬೇಕು.

೨೪ ಪಾಠಶಾಲೆಗಳಲ್ಲಿ ಉತ್ಪನ್ನವು ಮೊದಲಿನಿಂದಲೆ ಬರಲು ಪ್ರಾರಂಭಿಸಬೇಕು. ಆದರೆ ಮೊದಲನೆ ವರ್ಷ ಮಾತ್ರ ವೆಚ್ಚಕ್ಕೆ ಸಾಕಾಗುವಷ್ಟು ಉತ್ಪನ್ನ ಬರಲಿಕ್ಕಿಲ್ಲ.

೨೫ ಶಿಕ್ಷಕ-ವರ್ಗದ ಸಂಬಳ ಹೆಚ್ಚಾಗಿರಕೂಡದು. ಅವರ ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ದೊರೆಯಬೇಕು. ಅವರಲ್ಲಿ ಸೇವಾವೃತ್ತಿಯು ಇರಬೇಕು. ಮನಬಂದಂಥ ಶಿಕ್ಷಕನಿಂದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸುವ ಪರಿಪಾಠವು ನಿಂದನೀಯವಾಗಿದೆ. ಶಿಕ್ಷಕರೆಲ್ಲರೂ ಸುಚರಿತರಿರಬೇಕು.

೨೬ ಶಿಕ್ಷಕರಿಗೋಸ್ಕರ ದೊಡ್ಡ ಮತ್ತು ಹೆಚ್ಚು ಬಾಡಿಗೆಯ ಮನೆಗಳ ಅವಶ್ಯಕತೆ ಇರುವುದಿಲ್ಲ.

೨೭ ಇಂಗ್ಲಿಷನ್ನು ಭಾಷಾವಿಷಯವೆಂದು ಕಲಿಯಬೇಕು. ಶಿಕ್ಷಣ ಕ್ರಮದಲ್ಲಿ ಅದಕ್ಕೆ ಸ್ಥಾನವೂ ಇರತಕ್ಕದ್ದು. ಹಿಂದಿಯು ಹೇಗೆ ರಾಷ್ಟ್ರಭಾಷೆಯೊ, ಹಾಗೆಯೆ ಇಂಗ್ಲಿಷು ಪರ ರಾಷ್ಟ್ರಗಳೊಡನೆ ವ್ಯವಹಾರಕ್ಕೂ ವ್ಯಾಪಾರಕ್ಕೂ ಬೇಕಾಗುವುದು.

ಸ್ತ್ರೀ-ಶಿಕ್ಷಣ*

(೨೮) ಸ್ತ್ರೀಯರಿಗೇ ವಿಶಿಷ್ಟವಾದ ಶಿಕ್ಷಣವು ಯಾವುದು, ಅದನ್ನು ಎಲ್ಲಿಂದ ಪ್ರಾರಂಭಿಸಬೇಕು, ಎಂಬ ವಿಷಯದಲ್ಲಿ ನಾನು ಯೋಚನೆ ಮಾಡಿದ್ದೇನೆ, ಬರೆದಿದ್ದೇನೆ. ಆದರೆ ಆವೆಲ್ಲ ವಿಚಾರಗಳು ಇನ್ನೂ ದೃಢವಾಗಿಲ್ಲ. ಆದರೂ ಶಿಕ್ಷಣದ ವಿಷಯದಲ್ಲಿ ಪುರುಷರಿಗೆ ಇರುವಷ್ಟು ಅನುಕೂಲತೆಗಳು ಸ್ತ್ರೀಯರಿಗೂ ಇರಬೇಕೆಂದು ನನ್ನ ದೃಢ ಅಭಿಪ್ರಾಯ. ಅಗತ್ಯವಿದ್ದಲ್ಲಿ ವಿಶೇಷ ಅನುಕೂಲತೆಗಳನ್ನೂ ಒದಗಿಸಿಕೊಡಬೇಕು.

* ೨೮–೩೯ನೇ ಸೂತ್ರಗಳನ್ನು ಗಾಂಧಿಜಿಯವರು ಉಪಸಂಹಾರದ ಕ್ರಮದಲ್ಲಿ ಬರೆದಿಲ್ಲ, ಇದೇ ಪ್ರಕರಣದಲ್ಲಿ ಸ್ವತಂತ್ರವಾಗಿ ಬರೆದಿದ್ದಾರೆ. ಆದ್ದರಿಂದಲೆ ಈ ಸೂತ್ರಗಳ ಅಂಕೆಗಳನ್ನು ಕೌಂಸಿನಲ್ಲಿ ( ) ಬರೆದಿದೆ.

ಪ್ರೌಢ ಶಿಕ್ಷಣ

(೨೯) ಪ್ರೌಢರಾಗಿಯೂ ಕಲಿಯದೆ ಇದ್ದ ಸ್ತ್ರೀ-ಪುರುಷರಿಗೆ ವರ್ಗಗಳು ಬೇಕೇ ಬೇಕು. ಇವರೆಲ್ಲರಿಗೂ ಅಕ್ಷರ-ಜ್ಞಾನವು ಇರಲೇ ಬೇಕೆಂದು ನನ್ನ ಅಭಿಪ್ರಾಯವಲ್ಲ. ಅವರಿಗೆ ವ್ಯಾಖ್ಯಾನ ಮುಂತಾದುವುಗಳ ಮುಖಾಂತರ ಸಾಮಾನ್ಯಜ್ಞಾನವು ದೊರೆಯಬೇಕು, ಇದಕ್ಕಾಗಿ ಅನುಕೂಲತೆಗಳು ಇರಬೇಕು. ಅಕ್ಷರ-ಜ್ಞಾನದ ಬಯಕೆ ಇದ್ದವರಿಗಂತೂ ಸಾಕಷ್ಟು ಅನುಕೂಲತೆಗಳು ಇರಲೇ ಬೇಕು.

ದ್ವಾದಶ ಖಂಡ

ಸಾಹಿತ್ಯವೂ ಕಲೆಯೂ

—♦—

೧ ಸಾಮಾನ್ಯ ಟೀಕೆ

೧ ಸಾಹಿತ್ಯ ಮತ್ತು ಕಲೆ, ಇವೆರಡೂ, ಸತ್ಯವೂ ಕಲ್ಯಾಣಕರವೂ ಮತ್ತು ಉಪಯುಕ್ತತೆಯ ಒರೆಗಲ್ಲಿಗೆ ಹತ್ತಿ ಪಾರಾದವೂ ಇರಬೇಕು.

೨ ಇಲ್ಲಿ 'ಸತ್ಯ'ವನ್ನು ವ್ಯಾಪಕಾರ್ಥದಲ್ಲಿ ಉಪಯೋಗಿಸಿದೆಯೆಂದು ತಿಳಿಯಬೇಕು. ಬರಿಯ ವಿವರಣೆ ಅಥವಾ ಸಂಗತಿ ಸತ್ಯವಿದ್ದರೆ ಅದು ಸತ್ಯವೆನ್ನಲಾಗದು. ಇದರ ಜೊತೆಗೆ ಸಿದ್ಧಾಂತಗಳೂ ಅಥವಾ ಗುರಿಯೂ ಸತ್ಯವಿರಬೇಕು. ಆಗ ಮಾತ್ರ ಅದು ಸತ್ಯ. ಇಲ್ಲಿ 'ಸತ್ಯ' ಎಂಬ ಶಬ್ದವನ್ನು ಈ ಅರ್ಥದಿಂದಲೇ ಉಪಯೋಗಿಸಿದೆ. ಉದಾಹರಣೆಗೆ: ಹರಿಶ್ಚಂದ್ರನ ಅಥವಾ ರಾಮಚಂದ್ರನ ಕತೆಯು ಕೇವಲ ಕಾಲ್ಪನಿಕವಿರಬಹುದು. ಆದರೆ ಅದರೊಳಗಿನ ಸಿದ್ಧಾಂತಗಳು ಮತ್ತು ಗುರಿಗಳು ಸತ್ಯವೂ ಹಿತಕರವೂ ಉಪಯುಕ್ತವೂ ಆಗಿವೆ. ಆದುದರಿಂದ ಈ ಕತೆಯು ಸಾಹಿತ್ಯವು ಈ ಸತ್ಯದ ಒರೆಗಲ್ಲಿಗೆ ತಾಗಿ ಉತ್ತೀರ್ಣವಾಗುವುದು.

೩ ಸಂಗತಿಗಳು ಮತ್ತು ವರ್ಣನೆಗಳು ಸತ್ಯವಿರಬಹುದು; ಅವು ಚಿತ್ರವನ್ನು ಇದ್ದಕ್ಕಿದ್ದ ಹಾಗೆ ನಮ್ಮೆದುರಿನಲ್ಲಿ ಇಡಬಹುದು. ಆದರೆ ಅಷ್ಟರಿಂದಲೆ ಅವು ಯೋಗ್ಯ ಸಾಹಿತ್ಯವಾಗಿವೆ, ಕಲಾತ್ಮಕವಾಗಿವೆ ಎಂದು ಹೇಳಲಾಗುವು

ದಿಲ್ಲ. ಎಷ್ಟೋ ಸಂಗತಿಗಳು ನಿಜವಿದ್ದರೂ ಅವು ಅಹಿತಕರವೂ ನಿರುಪಯುಕ್ತವೂ ಇರುವವು, ಅಥವಾ ಹಾನಿಕರವೆನಿಸುವವು. ಅವನ್ನು ಜನರೆದುರು ಇಡುವಂಥ ಸಾಹಿತ್ಯವೂ ಕಲೆಯೂ ಹಾನಿಕರವೇ ಸರಿ. ಉದಾಹರಣೆಗೆ: ವೇಶ್ಯಾಸದನಗಳ ಚಿತ್ರಗಳು, ವರ್ಣನೆಗಳು.

೪ ಎಷ್ಟೋ ಸಲ ಕೊನೆಯಲ್ಲಿ ಸತ್ಯ, ನೀತಿ, ಮತ್ತು ಧರ್ಮವೇ ಜಯ ಪಡೆದದ್ದನ್ನು ತೋರಿಸಿದರೂ ಮೊದಲು ಚಿತ್ರಿಸಲ್ಪಡುವ ಅಸತ್ಯದ, ಅನೀತಿಯ, ಅಧರ್ಮದ ಬೀಭತ್ಸ ದೃಶ್ಯಗಳು ಜನರ ಅಧಮ ಪ್ರವೃತ್ತಿಗಳಿಗೆ ಉತ್ತೇಜನವನ್ನೀಯುವವು. ಇಂಥ ಸಾಹಿತ್ಯವೂ ಕಲೆಯೂ ಹೇಸಿಕೆಯದೆನಿಸುವುದು.

೨ ಸಾಹಿತ್ಯದ ಶೈಲಿ

೧ ಎಷ್ಟೋ ಸಾಹಿತ್ಯವು ವಿದ್ವಾಂಸರಿಗೆ, ಇಲ್ಲವೆ ಪರಂಪರೆಯಿಂದ ಅದನ್ನು ಅರಿತವರಿಗೆ ಮಾತ್ರ ತಿಳಿಯುವುದು. ಇಷ್ಟು ಗಹನವಿದ್ದರೂ ಅದು ಉತ್ಕೃಷ್ಟವಿರುವುದು ನಿಜ. ಸಾಹಿತ್ಯದ ಈ ಸ್ವಭಾವವು ಒಂದು ಗುಣವಲ್ಲ, ಕುಂದು. ವಿಶಿಷ್ಟ ಕಾರಣಗಳೇನಾದರೂ ಇಲ್ಲದಿದ್ದಲ್ಲಿ ಜನಸಾಮಾನ್ಯರಿಗೂ ಅರ್ಥವಾಗುವ ಶೈಲಿಯನ್ನೆ, ಭಾಷೆಯನ್ನೆ ಸಾಹಿತ್ಯಕಾರನು ಬಳಸಲು ಯತ್ನಿಸಬೇಕು.

೨ ಇದಕ್ಕೆ ಈ ಕೆಳಗಿನ ಕೆಲವು ಅಪವಾದಗಳೂ ಉಂಟು:

(ಅ) ಭಾಷೆಯು ಸುಲಭವೂ ಸುಬೋಧವೂ ಇದ್ದರೂ, ಸಾಹಿತ್ಯದ ವಿಷಯವು ಹೊಸದು, ಅಸಾಧಾರಣ, ಕಠಿಣ ಮತ್ತು ಗಹನವಾದದ್ದಾಗಿದ್ದರೆ ಅದನ್ನು ಸಾಮಾನ್ಯ ಜನರು ಬಲ್ಲಿದರ ಸಹಾಯವಿಲ್ಲದೆ ತಿಳಿದುಕೊಳ್ಳಲಾರರು. ಉದಾಹರಣೆಗೆ: ಭಗವದ್ಗೀತೆಯ ಭಾಷೆಯು ಸಾಮಾನ್ಯ ಸಂಸ್ಕೃತ ಬಲ್ಲ ಸಾಮಾನ್ಯ ಜನರಿಗೂ ತಿಳಿಯುವಂತಹದು. ಆದರೂ ಅದರ ತಾತ್ಪರ್ಯವು ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಇದಕ್ಕಾಗಿ ವಿದ್ವಾಂಸರ ಸಹಾಯವನ್ನು ಕೋರಬೇಕಾಗುತ್ತದೆ. ಏಕೆಂದರೆ ಅದರ ವಿಷಯವು ಕಠಿಣ, ವಿಚಾರಗಳು ಗಹನ. ಬರಿಯ ಸಂಸ್ಕೃತ ಭಾಷಾ-ಜ್ಞಾನದಿಂದ ಅದನ್ನು ತಿಳಿದುಕೊಳ್ಳಲು ಆಗುವುದಿಲ್ಲ.

(ಆ) ಇದೇ ರೀತಿಯ ಶಾಸ್ತ್ರೀಯ ಗ್ರಂಥಗಳೂ ಉಂಟು. ಅವುಗಳಲ್ಲಿ ಒಂದು ವಿಶಿಷ್ಟ ತರದ ಪರಿಭಾಷೆಯು ಉಪಯೋಗಿಸಲ್ಪಟ್ಟಿದೆ. ಆದ್ದರಿಂದ ಅವು ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಇದರಲ್ಲಿ ಆ ಗ್ರಂಥಗಳ ದೋಷ

ವೇನೂ ಇಲ್ಲ. ಉದಾಹರಣೆಗೆ: ತರ್ಕಶಾಸ್ತ್ರ, ಕಾನೂನು, ವೈದ್ಯ ಗ್ರಂಥಗಳು ಮುಂತಾದುವು.

(ಇ) ಮನರಂಜನೆಗಾಗಿ ರಚಿಸಿದ ಒಗಟುಗಳು, ಸಮಸ್ಯೆಗಳು, ಗೂಢೋಕ್ತಿಗಳು, ಕಬೀರನಂಥವರ ಗೂಢ ಕಾವ್ಯಗಳು, ತಿರುವು ಮುರುವು ವಾಕ್ಯಗಳು ಮುಂತಾದುವುಗಳ ಅರ್ಥವು ಸಾಮಾನ್ಯವಾಗಿ ಪರಂಪರೆಯಿಂದಲೆ ತಿಳಿಯ ಬಲ್ಲುದು. ಇಂಥ ಸಾಹಿತ್ಯವು ಅಲ್ಪ ಪ್ರಮಾಣದಲ್ಲಿದ್ದು ಜ್ಞಾನವನ್ನು ಕೊಡು ವಂಥದೂ ದೋಷವಿಲ್ಲದ್ದೂ ಇದ್ದರೆ ಅದನ್ನು ಯಾರೂ ವಿರೋಧಿಸುವುದಿಲ್ಲ.

೩ ಮೊದಲಿನ ಎರಡು ಪ್ರಕಾರದ ಅಪವಾದಗಳಲ್ಲಿ ತೋರಿಸಿದ ಸಾಹಿತ್ಯ ದಿಂದ ಸಾಮಾನ್ಯ ಜನರಿಗೆ ಅವಶ್ಯವಿದ್ದಷ್ಟನ್ನೇ ಮತ್ತು ಉಪಯೋಗಿಯಾದ ಷ್ಟನ್ನೇ ಆಯ್ದುಕೊಂಡು, ಅದನ್ನು ಸರಳವೂ ಸುಲಭವೂ ಆದ ಭಾಷೆಯಲ್ಲಿ ಬರೆಯುವುದು ಆ ಆ ವಿಷಯಗಳಲ್ಲಿ ಪ್ರವೀಣರಾದವರ ಕರ್ತವ್ಯ.

೩ ಭಾಷಾಂತರಗಳು

೧ ಅನ್ಯ ಭಾಷೆಗಳಲ್ಲಿದ್ದ ಉತ್ಕೃಷ್ಟ ಸಾಹಿತ್ಯದ ಪರಿಚಯವನ್ನು ತನ್ನ ಭಾಷೆಯ ಜನರಿಗೂ ಮಾಡಿಕೊಡುವುದು ಕೂಡ ಸಾಹಿತ್ಯದ ಒಂದು ಉಪ ಯುಕ್ತ ಅಂಗ.

೨ ಉತ್ತಮ ಭಾಷಾಂತರದಲ್ಲಿ ಕೆಳಗಿನ ಗುಣಗಳಿರಬೇಕು:

(ಅ) ಶೈಲಿಯು ಸ್ವಭಾಷೆಯಲ್ಲಿಯೆ ಯೋಚಿಸಿ ಬರೆದಷ್ಟು ಸರಳವೂ ಸುಬೋಧವೂ ಉತ್ತಮೋತ್ತಮ ವಾಕ್ಪ್ರಯೋಗಗಳಿಂದ ಕೂಡಿದ್ದೂ ಇರ ಬೇಕು. ಅನುವಾದವು, ಮೂಲ ಕಾವ್ಯದ ವಿಶಿಷ್ಟ ಶಬ್ದಗಳ ಮತ್ತು ವಾಕ್ ಪ್ರಯೋಗಗಳ ಅರ್ಥವು ತಿಳಿಯದಿದ್ದವರಿಗೆ ಕೂಡ ತಿಳಿಯುವಂತಿರಬೇಕು.

(ಆ) ಅನುವಾದದಲ್ಲಿ ಇಂಥ ವಿಶಿಷ್ಟ ಶಬ್ದಗಳನ್ನೂ ವಾಕ್ಪ್ರಯೋಗ ಗಳನ್ನೂ ಉಪಯೋಗಿಸಲೇಬೇಕಾದ ಸಂದರ್ಭದಲ್ಲಿ, ಅಥವಾ ಅಪರಿಚಿತ ರೂಪಕಗಳನ್ನೂ ದೃಷ್ಟಾಂತಗಳನ್ನೂ ದಂತಕಥೆಗಳನ್ನೂ ಉಲ್ಲೇಖಿಸಲೇ ಬೇಕಾದ ಸಂದರ್ಭದಲ್ಲಿ, ಟಿಪ್ಪಣಿಗಳಲ್ಲಿ ಅವುಗಳ ಸ್ಪಷ್ಟೀಕರಣ ಮಾಡಬೇಕು.

(ಇ) ಭಾಷಾಂತರಕಾರನು ಮೂಲ ಪುಸ್ತಕವನ್ನು ಅರೆದು, ಕುಡಿದು, ಚನ್ನಾಗಿ ಪಚನಮಾಡಿಕೊಂಡ ಬಳಿಕವೇ ತನ್ನ ಭಾಷೆಗೆ ರೂಪಾಂತರಿಸಿರುವನೋ ಏನೋ ಎನ್ನುವಂತೆ ಅನುವಾದವು ಇರಬೇಕು.

(ಈ) ಮೂಲ ಪುಸ್ತಕದ ವೈಶಿಷ್ಟ್ಯವೂ ಗುಣಗಳೂ ಅನುವಾದದಲ್ಲಿ ಇಳಿಯದಿದ್ದರೆ ಅದು ಸಾಮಾನ್ಯ ತರಗತಿಯ ಅನುವಾದವೆನಿಸುವುದು.

೩ ಆದ್ದರಿಂದ ಸ್ವತಂತ್ರ ಗ್ರಂಥರಚನೆಗಿಂತ ಅನುವಾದಿಸುವ ಕಾರ್ಯ ಹಗುರಾದದ್ದಲ್ಲ. ಮೂಲ ಲೇಖಕನೊಡನೆ ಸಂಪೂರ್ಣ ಸಮಭಾವನೆಯನ್ನಿಡದ, ಸಮರಸನಾಗದ, ಮತ್ತು ಆವನ ಮನೋಗತವನ್ನು ಗ್ರಹಿಸಲು ಅಸಮರ್ಥನಾದ ಮನುಷ್ಯನು ಅವನ ಪುಸ್ತಕವನ್ನು ಅನುವಾದಿಸಬಾರದು.

೪ ಭಾಷಾಂತರಿಸುವಾಗ ಹಲವು ಬಗೆಯಿಂದ ಯೋಚಿಸಬೇಕಾಗುವುದು, ವಿವೇಕವನ್ನುಪಯೋಗಿಸಬೇಕಾಗುವುದು. ಎಷ್ಟೋ ಪುಸ್ತಕಗಳನ್ನು ಅಕ್ಷರಶಃ ಅನುವಾದಿಸಬೇಕಾಗುವುದು. ಎಷ್ಟೋ ಪುಸ್ತಕಗಳ ಸಾರವನ್ನು ತೆಗೆದರೆ ಸಾಕಾಗುವುದು. ಎಷ್ಟೋ ಪುಸ್ತಕಗಳನ್ನು ತಮ್ಮ ಸಮಾಜಕ್ಕೆ ತಿಳಿಯುವಂತೆ ವೇಷಾಂತರ ಮಾಡಬೇಕಾಗುವುದು. ಎಷ್ಟೋ ಪುಸ್ತಕಗಳು ಅತ್ಯಂತ ಉತ್ಕೃಷ್ಟವಾಗಿದ್ದರೂ, ನಮ್ಮ ಸಮಾಜವು ಆ ಗ್ರಂಥಕ್ಕೆ ಸಂಬಂಧಪಟ್ಟ ಸಮಾಜಕ್ಕಿಂತ ತೀರ ಭಿನ್ನವಾಗಿರಬಹುದಾದ್ದರಿಂದ ಅವುಗಳ ಭಾಷಾಂತರವು ನಮಗೆ ಬೇಕಾಗುವುದೇ ಇಲ್ಲ. ಎಷ್ಟೋ ಪುಸ್ತಕಗಳನ್ನು ಅಕ್ಷರಶಃ ಭಾಷಾಂತರಿಸುವುದಲ್ಲದೆ ಆದರ ಸಾರಾಂಶವನ್ನು ಅನುವಾದಿಸುವುದೂ ಅವಶ್ಯವೆನಿಸಬಹುದು.

೪ ಶುದ್ಧ-ಲೇಖನ

೧ ಭಾಷೆಯ ವೃದ್ಧಿಯೊಡನೆಯೇ ವ್ಯಾಕರಣದ ಹಾಗೂ ಲೇಖನದ ನಿಯಮಗಳೂ ಸ್ವಲ್ಪ ಹೆಚ್ಚುಕಡಮೆಯಾಗಿ ಬದಲಾಗುತ್ತಿರುವುದು ಸ್ವಾಭಾವಿಕ. ಆದರೂ ಸಾಮಾನ್ಯ ವ್ಯವಹಾರದಲ್ಲಿ ಉಪಯೋಗಿಸುತ್ತಿರುವ ಶಬ್ದಗಳ, ವ್ಯಾಕರಣದ, ಮತ್ತು ಶುದ್ಧ-ಲೇಖನದ ನಿಯಮಗಳು ನಿಶ್ಚಿತವಾಗುವುದು ಅವಶ್ಯ.

೨ ಅಪೂರ್ವ ಶಬ್ದಗಳ ಶುದ್ಧತೆಯನ್ನು ಕುರಿತು ವಿದ್ವಾಂಸರಲ್ಲಿ ಮತಭೇದವಿರುವ ಸಾಧ್ಯತೆ ಇದೆ. ಆದರೆ ಸರ್ವಸಾಮಾನ್ಯ ಶಬ್ದಗಳ ಶುದ್ಧತೆಯ ಬಗೆಗೆ ವಿದ್ವಾಂಸರೆಲ್ಲರೂ ಒಂದೇ ಧೋರಣೆ ಸ್ವೀಕರಿಸಬೇಕು.

೩ ಹೀಗೆ ಶಬ್ದಗಳ ರೂಪವನ್ನು ನಿಶ್ಚಯಿಸುವಾಗ ರೂಢಿ, ಬರೆಯುವ ಮತ್ತು ಅಚ್ಚು ಹಾಕುವ ಅನುಕೂಲತೆ, ಉಚ್ಚಾರ, ವ್ಯುತ್ಪತ್ತಿ, ವ್ಯಾಕರಣದ ನಿಯಮ ಮುಂತಾದ ವಿಷಯಗಳತ್ತ ಗಮನ ಕೊಡಲೇ ಬೇಕಾಗುವುದು. ಹಲ

ವೊಂದು ಶಬ್ದಗಳ ರೂಪವನ್ನು ನಿಶ್ಚಯಿಸುವಾಗ ಹಲವೊಂದು ವಿಷಯುಗಳನ್ನು ಗಮನಿಸಬೇಕಾದೀತು. ಹೇಗಿದ್ದರೂ, ಸಾಮಾನ್ಯ ಜನರಿಗೆ ತಬ್ಬಿಬ್ಬಾಗದಂತೆ ಶಬ್ದಗಳ ರೂಪಗಳು ನಿಶ್ಚಯಿಸಲ್ಪಡಬೇಕು, ಬರಹವು ಎಲ್ಲರಿಗೂ ಸರಳವೂ ಸುಲಭವೂ ಆಗಿರಬೇಕು.

೫ ವೃತ್ತಪತ್ರಿಕೆಗಳು

೧ ವರ್ತಮಾನಪತ್ರಿಕೆ, ಮಾಸಪತ್ರಿಕೆ, ಮುಂತಾದುವು ಕೂಡ ಸಾಹಿತ್ಯದ ಅಂಗಗಳು. ಸಾಮಾನ್ಯ ಜನತೆಯಲ್ಲಿ ವಿದ್ಯಾಪ್ರಸಾರ ಮಾಡುವುದಕ್ಕೆ ಇವು ಅತ್ಯಂತ ಬಲವಾದ ಸಾಧನಗಳು.

೨ ಆದರೆ ಈಗ ಈ ಸಾಧನಗಳ ದುರುಪಯೋಗವು ಬಹಳವಾಗಿದೆ. ಜನತೆಗೆ ನಿಜವಾದ ಸುದ್ದಿಗಳನ್ನು, ನಿಜವಾದ ಜ್ಞಾನವನ್ನು, ನಿಜವಾದ ಸಲಹೆಯನ್ನು ಕೊಡುವುದರ ಬದಲು ಬುದ್ಧಿಪೂರ್ವಕವಾಗಿ ಸುಳ್ಳು, ಅರ್ಧಸತ್ಯ, ಅರ್ಧಸುಳ್ಳು, ಅಪೂರ್ಣ, ಅಥವಾ ನಿಜವಾದ ಸಮಾಚಾರವನ್ನು ತಪ್ಪುಗ್ರಹಿಕೆಯಾಗುವಂತೆ ಕೊಟ್ಟು ಜನತೆಯನ್ನು ಅಡ್ಡದಾರಿಗೆ ಒಯ್ಯುವ ಕಾರ್ಯವು ಇವುಗಳ ಮೂಲಕ ವ್ಯವಸ್ಥಿತವಾಗಿ ನಡೆದಿದೆ.

೩ ಮತ್ತು ಇವು, ಪ್ರಕಟನೆಗಳ ಮೂಲಕ ಹಣ ಗಳಿಸಬೇಕೆಂಬ ಆಶೆಯಿಂದ ಅನೇಕ ಪ್ರಕಾರದ ಸುಳ್ಳು ಸಂಗತಿಗಳನ್ನೂ ಅನೀತಿಯನ್ನೂ ಹರಡುವ ಸಾಧನಗಳಾಗಿವೆ.

೪ ಓದುವ ಚಟವಿದ್ದ ಮನುಷ್ಯನಿಗೆ ಬಿಡುವು ದೊರೆತು ಅದನ್ನು ಹರಟೆಯಲ್ಲಿ ಕಳೆಯಲು ಸಂಗಡಿಗರು ಇಲ್ಲದಿದ್ದರೆ ಬೇಸರವಾಗುವುದು. ಅವನು ಬೇಸರದಿಂದ ಹೊತ್ತು ಕಳೆದರೂ ಚಿಂತೆಯಿಲ್ಲ. ಸ್ವಲ್ಪ ಸಮಯ ಬೇಸರದಿಂದಲೇ ಇದ್ದುಕೊಂಡು ಬಳಿಕ ಯಾವುದಾದರೂ ಒಂದು ಕೆಲಸವನ್ನು ಹುಡುಕಿಕೊಂಡು ಅದರಲ್ಲಿ ತೊಡಗುವುದು ಒಳಿತು. ಬರಿಯ ಬಿಡುವಿನ ಸಮಯವನ್ನು ಕಳೆಯುವ ದೃಷ್ಟಿಯಿಂದಲೆ ಹುಟ್ಟಿದ ಪತ್ರಿಕೆ, ಮಾಸಪತ್ರಿಕೆ, ಅಥವಾ ಕತೆ-ಕಾದಂಬರಿಗಳನ್ನು ಓದುತ್ತ ಕುಳಿತರೆ ಮನರಂಜನೆಯಾಯಿತೆಂದು ಆಭಾಸವಾಗುವುದು. ಆದರೆ ಅವನು ಹೆಚ್ಚು ಸಮಯವನ್ನು ಅಪ್ರತ್ಯಕ್ಷವಾಗಿ ಹರಟೆಯಲ್ಲಿ, ಎಂದರೆ ಆಲಸ್ಯದಲ್ಲಿ ಕಳೆದಂತಾಗುವುದು. ಅಲ್ಲದೆ ಮನಸ್ಸಿನಲ್ಲಿ ಅನೇಕ ಹೀನ ಭಾವನೆಗಳನ್ನು ತುಂಬಿಕೊಳ್ಳುವುದೂ ಕುಸಂಸ್ಕಾರಗಳನ್ನು

ಬೆಳೆಸಿಕೊಳ್ಳುವುದೂ ಖಂಡಿತ. ಪತ್ರಿಕೆ, ಮಾಸಪತ್ರಿಕೆ, ಮತ್ತು ಕಾದಂಬರಿಗಳಿಂದ ಎಷ್ಟೋ ಯುವಕ-ಯುವತಿಯರು ವಿಕಾರಗಳ ಸೆಳೆತಕ್ಕೆ ಸಿಕ್ಕಿದ ಮತ್ತು ದುರ್ಮಾರ್ಗವನ್ನು ಹಿಡಿದ ಅನೇಕ ಉದಾಹರಣೆಗಳು ದೊರೆಯುತ್ತವೆ. ಇಂಥ ಸಾಹಿತ್ಯವು ಅಗ್ನಿನಾರಾಯಣನಿಗೆ ಸಮರ್ಪಿಸುವುದಕ್ಕೇ ಯೋಗ್ಯ.

೫ ತನಗೇ ತೋರಿದ, ಇಲ್ಲವೆ ಬೇರೆಯವರಿಂದ ದೊರೆತ ಸತ್ಯವನ್ನೂ ಹಿತಕರವಾದ ಮತ್ತು ಉಪಯುಕ್ತ ಸಂದೇಶಗಳನ್ನೂ, ತಾನೇ ಜನತೆಗೆ ಮುಟ್ಟಿಸಬೇಕಾಗಿದೆಯೆಂದು ಯಾರಿಗೆ ಎನಿಸುವುದೊ, ಅವರೇ ಪತ್ರಿಕಾವ್ಯವ-ಸಾಯದಲ್ಲಿ ಇಲ್ಲವೆ ಲೇಖನವ್ಯವಸಾಯದಲ್ಲಿ ತೊಡಗಬೇಕು. ಅವರು ಸತ್ಯಕ್ಕೆ ಅಂಟಿಕೊಂಡಿರಬೇಕು ತಮಗೆ ವಿರುದ್ಧವಾಗಿದ್ದರೂ ಸತ್ಯವಿದ್ದ ಸಂಗತಿಗಳನ್ನೂ ದೂರುಗಳನ್ನೂ ಪ್ರಕಟಿಸಬೇಕು. ಅಲ್ಲದೆ ತಮ್ಮ ತಪ್ಪುಗಳನ್ನೂ ಪ್ರಾಮಾ-ಣಿಕತನದಿಂದ ಒಪ್ಪಿಕೊಳ್ಳಬೇಕು. ಜಾಹೀರಾತಿನ ಮೂಲಕ ತನ್ನ ವೆಚ್ಚವನ್ನು ತುಂಬಿಕೊಳ್ಳಲು ಬಯಸತಕ್ಕದ್ದಲ್ಲ. ಸಮಾಜಕ್ಕೆ ತಮ್ಮ ಉಪಯುಕ್ತತೆಯನ್ನು ತೋರಿಸಿ, ವೆಚ್ಚವು ಮೈಮೇಲೆ ಬರದಂತಹ ಸ್ಥಿತಿಯನ್ನು ಲೋಕಪ್ರಿಯತೆಯಿಂದಲೆ ತಂದುಕೊಳ್ಳತಕ್ಕದ್ದು. ಆದ್ದರಿಂದ ವೃತ್ತಪತ್ರಿಕೆಗಳು ಕೇವಲ ಕೆಲವೇ ಜನರ ಅವಶ್ಯಕತೆಗಳನ್ನೂ ಕೊರತೆಗಳನ್ನೂ ಚರ್ಚಿಸುವುದರ ಬದಲು ಸಮಸ್ತ ಜನತೆಯ ಅವಶ್ಯಕತೆಯನ್ನೂ ಕೊರತೆ ಸುಖ-ದುಃಖಗಳನ್ನೂ ಚರ್ಚಿಸಬೇಕು.

೬ ಕಲೆ

೧ ಸೃಷ್ಟಿಸೌಂದರ್ಯದ ಎದುರು ಮನುಷ್ಯನಿರ್ಮಿತ ಸರ್ವ ಕಲೆಗಳ ಸೌಂದರ್ಯವೂ ತುಚ್ಛವೆನಿಸುವುದು. ಕಲಾಪ್ರಿಯರಿಗೆ ಆಕಾಶದ ಸೌಂದರ್ಯವೂ ಪೃಥ್ವಿಯ ಸೌಂದರ್ಯವೂ ಸಾಕಷ್ಟು ಆನಂದವನ್ನೀಯಬಲ್ಲುದು. ಇಂಥ ಕಲೆಯ ಆನಂದವು ರುಚಿಸದ ಮನುಷ್ಯನು ಒಂದು ವೇಳೆ ತಾನು ಮಾನವನಿರ್ಮಿತ ಕಲೆಯ ಅಭಿಮಾನಿಯೆಂದು ಭಾವಿಸಿದರೆ, ಅವನು ಬರಿಯ ಮೋಹಕ ದೃಶ್ಯಗಳೆ ಕಲೆ ಎಂದು ತಿಳಿದುಕೊಳ್ಳುವವನೇ ಸರಿ. ಅವನಿಗೆ ನಿಜವಾದ ಕಲೆಯ ಜ್ಞಾನವೇ ಇರಲಿಕ್ಕಿಲ್ಲ.

೨ ಉತ್ಕೃಷ್ಟವಾದ ಸಾಹಿತ್ಯದಂತೆ ನಿಜವಾದ ಕಲೆಯೂ ವಿಚಾರಗಳನ್ನು ಮಂಡಿಸುವ ಸಾಧನ. ಈ ಮೊದಲು ಸಾಹಿತ್ಯಶೈಲಿಯನ್ನು ಕುರಿತು ಯಾವ ವಿಚಾರಗಳನ್ನು ಹೇಳಲಾಗಿದೆಯೊ ಅವೇ ವಿಚಾರಗಳು ಸ್ವಲ್ಪ ಹೆಚ್ಚು ಕಡಮೆ

ಯಾಗಿ ಕಲೆಗೂ ಅನ್ವಯಿಸುವವು.

೩ ಕಲೆಯು ಸಂಬಂಧವಿರುವುದು ನೀತಿ ಕಲ್ಯಾಣ ಉಪಯೋಗಿತೆಗಳೊಡನೆ ಅಲ್ಲ, ಕೇವಲ ಸೌಂದರ್ಯದೊಡನೆ ಎಂದು ಯಾರಾದರೂ ಹೇಳಿದರೆ ಅವರಿಗೆ ಸೌಂದರ್ಯವನ್ನೂ ಕಲೆಯನ್ನೂ ಅರಿತುಕೊಳ್ಳುವ ಶಕ್ತಿಯು ಇಲ್ಲವೇ ಇಲ್ಲವೆನ್ನಬೇಕು. ಸತ್ಯ ಮತ್ತು ಶ್ರೇಷ್ಠ ಸೌಂದರ್ಯವೇ ಉಚ್ಚತಮವಾದ ಕಲೆ. ಮತ್ತು ಅದು ನೀತಿ, ಹಿತ, ಮತ್ತು ಉಪಯೋಗಿತೆಯಿಂದ ರಹಿತವಾಗಿಲ್ಲ.

೪ ಆದ್ದರಿಂದ ಕಲೆಯು ಮನುಷ್ಯನ ಜೀವನೋಪಯೋಗಿ ಸಾಧನ-ಸಾಮಗ್ರಿಗಳಲ್ಲಿ ವ್ಯಕ್ತವಾಗಬೇಕು; ಮತ್ತು ಆ ಸಾಧನ-ಸಾಮಗ್ರಿಗಳು ಕೇವಲ ಸುಂದರವಾಗಿ ಕಾಣುವುದು ಮಾತ್ರವೇ ಅಲ್ಲದೆ ಒಳ್ಳೇ ಉಪಯುಕ್ತವೂ ಇರಬೇಕು.

೫ ಯಾವ ಕಲೆಗಾಗಿ ಪ್ರಾಣಿಗಳ ಮೇಲೆ ಒತ್ತಾಯ, ಹಿಂಸೆ ಮುಂತಾದ್ದು ನಡೆಯುವುದೊ, ಆ ಕಲೆ ಎಷ್ಟೇ ಸುಂದರವಾಗಿ ಕಂಡರೂ ಅದು ಕಲೆಯಲ್ಲ ಕಲಿ, ಯಮ.

೬ ಮನುಷ್ಯನ ಕೀಳು ಪ್ರವೃತ್ತಿಗಳನ್ನು ಉತ್ತೇಜಿಸುವ, ಭೋಗದ ಇಚ್ಛೆಯನ್ನು ಇಮ್ಮಡಿಸುವ ಕಲೆಯು ಬೀಭತ್ಸ ಸಾಹಿತ್ಯದಂತೆಯೆ ಅಸಹ್ಯವೆನಿಸುವುದು.

ತ್ರಯೋದಶ ಖಂಡ

ಲೋಕ-ಸೇವಕ

೧ ಲೋಕ-ಸೇವಕನ ಸಾಮಾನ್ಯ ಲಕ್ಷಣಗಳು

೧ ಪ್ರಾಮುಖ್ಯವಾಗಿ ಜನಸೇವೆಯನ್ನು ಮಾಡುವ ಅಭಿಲಾಷೆಯುಳ್ಳವನೇ ಲೋಕಸೇವಕನು. ಉಪಜೀವನಕ್ಕಾಗಿ ಯಾವುದೊಂದು ಉದ್ಯೋಗವನ್ನು ಮಾಡಲೇ ಬೇಕೆಂದು ಜನಸೇವೆಯನ್ನು ಸ್ವೀಕರಿಸುವವನು ಲೋಕಸೇವಕನಲ್ಲ.

೨ ಅವನು ತನ್ನ ಎಲ್ಲ ಸಮಯವನ್ನೂ ದೇಶಕಾರ್ಯದಲ್ಲಿ, ಜನತೆಯ ಸೇವೆಯಲ್ಲಿ ವೆಚ್ಚಮಾಡುತ್ತಿರುವುದರಿಂದ, ತನ್ನ ಉಪಜೀವನಕ್ಕಾಗಿ, ಜನತಾಸೇವೆ

ಯನ್ನು ಮಾಡುತ್ತಿರುವ ಸಂಸ್ಥೆಗಳಿಂದ ಸ್ವಲ್ಪ ಧನವನ್ನು ಪಡೆದುಕೊಂಡರೆ ಅದರಲ್ಲಿ ದೋಷವೇನೂ ಇಲ್ಲ. ಸೇವಾಕಾರ್ಯವು ಸುಸೂತ್ರವಾಗಿ ಸಾಗಬೇಕಾದರೆ ಇಂಥ ಲೋಕ-ಸೇವಕರು ಅವಶ್ಯವಾಗಿ ಬೇಕೇ ಬೇಕು.

೩ ಆದರೆ ಲೋಕ-ಸೇವಕನ ನಿರ್ವಾಹದ ಧೋರಣೆಯು ಅನ್ಯ ಸೇವಕರ ನಿರ್ವಾಹದ ಧೋರಣೆಗಿಂತ ಭಿನ್ನವಾಗಿರಬೇಕು. ಅವನು ಈ ಕಾರ್ಯದಲ್ಲಿ ತೊಡಗಿರುವುದು ತನ್ನ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂಬ ಇಚ್ಛೆಯಿಂದಲ್ಲ. ಅದ್ದರಿಂದ ಅವನು, ತನ್ನ ಸಂಬಳವು ಹೆಚ್ಚಾಗಬೇಕೆಂದು ಬಯಸುವುದಿಲ್ಲ; ಮತ್ತು ತನ್ನನ್ನು ಅವಲಂಬಿಸಿದವರನ್ನು ಸಲಹುವ ಹೊಣೆಯು ಹೆಚ್ಚಾಗದಂತೆ ಆದಷ್ಟು ಎಚ್ಚರದಿಂದ ಇರುವನು. ಅವನು ತನ್ನ ಕೆಲವು ಪ್ರತ್ಯಕ್ಷ ಅಥವಾ ಭಾವೀ ಆಶೆ-ಆಕಾಂಕ್ಷೆಗಳನ್ನು ತ್ಯಜಿಸಿದವನೆಂದು ತಿಳಿಯಬಹುದು. ತನ್ನ ಸಂಬಳವನ್ನು ಗೊತ್ತುಪಡಿಸಿಕೊಳ್ಳುವಾಗ ಅವನಿಗೆ ತನ್ನ ಗಳಿಕೆಯಲ್ಲಿ ಸ್ವಲ್ಪವನ್ನು ಉಳಿಸಿಕೊಳ್ಳುವ ಧ್ಯೇಯವಿರುವುದಿಲ್ಲ. ಆದರೆ ಸಂಕಟ ಕಾಲದಲ್ಲಿ ಪರಮೇಶ್ವರನು ತನಗೆ ಸಹಾಯವನ್ನು ಮಾಡಿಯೆ ಮಾಡುವನೆಂಬ ಶ್ರದ್ಧೆಯು ಮಾತ್ರ ಅವನಿಗೆ ಇದ್ದೇ ಇರುತ್ತದೆ.

೪ ತಾನು ಸ್ವಲ್ಪ ತ್ಯಾಗಿ, ಪ್ರಜರ ಸೇವಕ, ಅಥವಾ ಆಜೀವ ಸೇವಕ ಎಂಬ ಭಾವನೆಯಾಗಲಿ ಅಭಿಮಾನವಾಗಲಿ ಯಾರಿಗೆ ಇದೆಯೋ, ಅವನು ಲೋಕ-ಸೇವಕನಿದ್ದರೂ ತನ್ನ ಕೀಳುತನವನ್ನು ವ್ಯಕ್ತಪಡಿಸಿದಂತೆಯೇ ಸರಿ.

೫ ಲೋಕಸೇವಕನು ಅತ್ಯಂತ ನಮ್ರನಾಗಿರುವನು, 'ಶೂನ್ಯ'ನಾಗಿರುವನು. ಸಂಬಳವನ್ನು ತೆಗೆದುಕೊಂಡು ಇಲ್ಲವೆ ತಮ್ಮ ಉದ್ಯೋಗ ಮಾಡಿಕೊಂಡು ಉಳಿದ ಸಮಯದಲ್ಲಿ ಸೇವೆ ಮಾಡುವವರಿಗಿಂತಲೂ ತಾನು ಶ್ರೇಷ್ಠನೆಂದು ಅವನು ತಿಳಿಯುವುದಿಲ್ಲ; ಅವರ ಮೇಲೆ ತನ್ನ ಅಧಿಕಾರ ನಡೆಸಲೂ ಯತ್ನಿಸುವುದಿಲ್ಲ.

೬ ಲೋಕಸೇವಕನು ಯಾವುದಾದರೂ ಸ್ವಾರ್ಥದ ಮಹತ್ವಾಕಾಂಕ್ಷೆಯನ್ನು, ಎಂದರೆ ಯಶಸ್ಸು ಅಧಿಕಾರ ಮುಂತಾದ್ದನ್ನು ಪೂರ್ತಿಗೊಳಿಸುವುದಕ್ಕೆಂದು ಜನತಾ ಸೇವೆಯ ಕಾರ್ಯದಲ್ಲಿ ಬೀಳತಕ್ಕದ್ದಲ್ಲ. ಧಾರ್ಮಿಕ ಭಾಷೆಯಲ್ಲಿ ಹೇಳುವುದಾದರೆ ಲೋಕಸೇವೆಯ ಮುಖಾಂತರ ಈಶ್ವರೋಪಾಸನೆ ಮಾಡುವ ಇಚ್ಛೆಯಿಂದಲೂ, ವ್ಯವಹಾರಿಕ ಭಾಷೆಯಲ್ಲಿ ಹೇಳುವುದಾದರೆ ತನ್ನ ದೇಶಬಂಧುಗಳನ್ನು ಅಧಿಕ ಸುಖಕರವಾದ ಮಾರ್ಗಕ್ಕೆ ತೊಡಗಿಸಲು ತಾನು

ನಿಮಿತ್ತಮಾತ್ರನಾಗಬೇಕೆಂಬ ಇಚ್ಛೆಯಿಂದಲೂ ಲೋಕಸೇವಾಕಾರ್ಯದಲ್ಲಿ ತೊಡಗಬೇಕು.

೭ ಹೀಗೆ ಜನತೆಯು ಸೇವಕನು ಮಧುರವಾದ ಮತ್ತು ವಿನಯಪೂರಿತವಾದ ನಡತೆಯಿಂದ ಜನತೆಯ ಮತ್ತು ತನ್ನ ಸಂಗಡಿಗರ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳಬೇಕು; ತನ್ನ ಕಾರ್ಯಕ್ಷೇತ್ರದಲ್ಲಿ ದೊರೆತ ಯಶಸ್ಸನ್ನು ತನ್ನ ಉಳಿದ ಸಂಗಡಿಗರಿಗೆ ಕೊಡಬೇಕು; ತನ್ನ ಸೇವೆಯ ಬಲದಿಂದಲೆ ಅವರ ಪ್ರೇಮಾದರಗಳಿಗೆ ಪಾತ್ರನಾಗಬೇಕು.

೮ ನಿಃಸ್ವಾರ್ಥಿಯಾದ, ನಮ್ರನಾದ, ಪ್ರಾಮಾಣಿಕನಾದ, ಮತ್ತು ಸಚ್ಚರಿತ್ರೆಯುಳ್ಳ ಲೋಕಸೇವಕನು ಲೋಕಪ್ರಿಯನಾಗಿಲ್ಲವೆಂಬ ಉದಾಹರಣೆಯನ್ನು ಈ ವರೆಗೂ ನಾವು ಕಂಡಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ, ಜನತೆಯ ವಿಶ್ವಾಸಕ್ಕೆ ಪಾತ್ರನಾದ ಲೋಕಸೇವಕನು ತನ್ನ ಕಾರ್ಯಕ್ಷೇತ್ರದಲ್ಲಿ ಸರ್ವಾಧಿಕಾರಿಯ ಪದವನ್ನು ಅನುಭೋಗಿಸುತ್ತಿರುವನೆಂಬ ಅನುಭವವು ಬಂದಿರುವುದು. ಇವನು ಹೇಳಿದ್ದನ್ನು ಜನತೆಯು ಕೇಳುವುದು. ಇವನು ಯಾರ ಅನಾದರಕ್ಕೂ ಈರ್ಷೆಗೂ ಪಾತ್ರನಾಗುವುದಿಲ್ಲ, ಯಾರಿಗೂ ಕಷ್ಟದಾಯಕನೆನಿಸುವುದಿಲ್ಲ.

೯ ಜನತೆಯಾಗಲಿ ಅನ್ಯ ಸಂಗಡಿಗರಾಗಲಿ, ಮುಂದಾಳುಗಳಾಗಲಿ ಲೋಕಸೇವಕಮಂಡಳದ ಹೊರಗಿನ ಕಾರ್ಯಕರ್ತರಾಗಲಿ, ಕೃತಘ್ನರಿರುವರೆಂದೂ ಕಾರ್ಯದಲ್ಲಿ ವಿಘ್ನಸ್ವರೂಪರಿರುವರೆಂದೂ ಯಾವ ಲೋಕಸೇವಕನಿಗೆ ಆಗಾಗ ಎನಿಸುವುದೋ, ಅವನು ತನ್ನಲ್ಲಿಯೇ ದೋಷವಿದೆಯೆಂದು ನಿಶ್ಚಯವಾಗಿ ತಿಳಿದುಕೊಳ್ಳಬೇಕು. ಏಕೆಂದರೆ ಜನತೆಯು ಸಾಮಾನ್ಯವಾಗಿ ಕೃತಜ್ಞವಾಗಿಯೆ ಇರುವುದು. ಇಷ್ಟೇ ಅಲ್ಲ, ಲೋಕಸೇವಕನಿಗೆ ಅತ್ಯಂತ ಉದಾರತೆಯಿಂದ ಆದರ-ಸತ್ಕಾರ ಮಾಡಬೇಕೆಂಬ ಬುದ್ಧಿಯುಳ್ಳದ್ದಿರುತ್ತದೆ. ಇದು ಅನುಭವದ ಮಾತು.

೧೦ ಜನತೆಯ ಸೇವಕನಲ್ಲಿ ಕೆಳಗಿನ ಗುಣಗಳು ಇರತಕ್ಕದ್ದು:

(ಅ) ಅವನು ಧಾರ್ಮಿಕ ಪ್ರವೃತ್ತಿಯುಳ್ಳವನಿರಬೇಕು. ಸತ್ಯಾಗ್ರಹದಲ್ಲಿ, ಸತ್ಕರ್ಮದಲ್ಲಿ, ಸದ್ವಾಣಿಯಲ್ಲಿ, ಮತ್ತು ಸದ್ವರ್ತನೆಯಲ್ಲಿ ಅವನ ಪೂರ್ಣ ವಿಶ್ವಾಸವಿರಬೇಕು. ಅವುಗಳಂತೆ ನಡೆಯುವ ಉತ್ಕಟ ಇಚ್ಛೆ, ಅದರಲ್ಲಿ ತಪ್ಪಾದರೆ ಪಶ್ಚಾತ್ತಾಪಪಡುವ ಮನಸ್ಸು, ಮತ್ತು ಅವುಗಳಲ್ಲಿಯೆ ತನ್ನದೂ ಜನತೆಯದೂ

ಶ್ರೇಯಸ್ಸು ಇರುವುದೆಂಬ ದೃಢವಾದ ನಂಬಿಕೆ ಇರಬೇಕು.

(ಆ) ಸ್ತ್ರೀಯರು ಅವನ ಹತ್ತಿರ ನಿರ್ಭಯದಿಂದ ಹೋಗುವಷ್ಟು, ಜನರು ಅವನ ಬಳಿ ತಮ್ಮ ಸ್ತ್ರೀಯರನ್ನು ಕಳಿಸಲು ಸಂಶಯಪಡದಷ್ಟು, ಅವನ ಚರಿತ್ರೆ ಶುದ್ಧವಾಗಿರಬೇಕು, ನಿರ್ಮಲವಾಗಿರಬೇಕು.

(ಇ) ಅವನ ಆರ್ಥಿಕ ವ್ಯವಹಾರವು ಬಹಳ ಚೊಕ್ಕಾಗಿರಬೇಕು. ಎಷ್ಟೋ ಜನರು ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ಪ್ರಾಮಾಣಿಕತನವನ್ನು ತೋರಿಸಿದರೂ, ಹೃದಯದಲ್ಲಿ 'ಪೈಗಳ್ಳ'ರಾಗಿರುತ್ತಾರೆ. ಎಷ್ಟೋ ಜನರು ಪೈಗೆ ಪೈ ಲೆಕ್ಕ ಇಡುತ್ತಾರೆ, ಆದರೆ ದೊಡ್ಡ ಮೊತ್ತದ ಲೆಕ್ಕದಲ್ಲಿ ಮೋಸಮಾಡುತ್ತಾರೆ. ಲೋಕಸೇವಕನು ಇವೆರಡೂ ಆಕ್ಷೇಪಗಳಿಂದ ದೂರದಲ್ಲಿರಬೇಕು, ತನಗೆ ದೊರೆತ ಒಂದೊಂದು ಪೈಯ ಲೆಕ್ಕವನ್ನೂ ಸರಿಯಾಗಿ ಇಡಬೇಕು.

(ಈ) ಅವನು ಯಾವಾಗಲೂ ಉದ್ಯೋಗಿಯಾಗಿರಬೇಕು. ಹರಟೆಯಲ್ಲಿ, ವ್ಯರ್ಥ ಮಾತುಗಳಲ್ಲಿ, ಮತ್ತು ನಿಂದಾಸ್ತುತಿಯಲ್ಲಿ ಕಾಲ ತಳ್ಳುವವನಾದರೆ ಅವನಿಗೆ ಎಂದೂ ಪ್ರತಿಷ್ಠೆಯೂ ಸನ್ಮಾನವೂ ದೊರೆಯದು. ಅವನ ಉದ್ಯೋಗ ತತ್ಪರತೆ ಮತ್ತು ತಲ್ಲೀನತೆ ಜನತೆಗೆ ಉದಾಹರಣೆಯಾಗಿರಬೇಕು.

(ಉ) ಸಮಯಕ್ಕೆ ಸರಿಯಾಗಿ ಕೆಲಸ ಮಾಡುವ ಅಭ್ಯಾಸವು ಅವನಲ್ಲಿ ಇರಲೇ ಬೇಕು. ಯಾವ ಕಾಲದಲ್ಲಿ ಯಾವ ಕೆಲಸವನ್ನು ಮಾಡುವುದಿದೆಯೋ ಆ ಕಾಲದಲ್ಲಿ ಅದನ್ನು ಮಾಡಲು ಎಂದೂ ತಪ್ಪಬಾರದು.

(ಊ) ಅವನು ಸರಿಯಾಗಿ ನಿಯಮಪಾಲನೆಯನ್ನು ಮಾಡಬೇಕೆಂದು ಇದರ ಅರ್ಥ. ಮುಂಜಾವಿನಿಂದ ಸಂಜೆಯ ವರೆಗಿನ ಎಲ್ಲ ಕೆಲಸಗಳು ಗಡಿಯಾರದಂತೆ ಯಥಾಕ್ರಮದಿಂದ ಸಾಗುತ್ತಿರಬೇಕು.

(ಎ) ಅವನು ತನ್ನ ಸಂಸ್ಥೆಯ ಸಿದ್ಧಾಂತಗಳನ್ನು, ನಿಯಮಗಳನ್ನು, ತನ್ನ ಮೇಲಿನವರ ಆಜ್ಞೆಯನ್ನು, ಪುನಃಪೂರ್ವಕವಾಗಿಯೂ ಸರಿಯಾಗಿಯೂ ಪಾಲಿಸಬೇಕು. ಆಜ್ಞೆಯನ್ನು ಚನ್ನಾಗಿ ಪಾಲಿಸಲಾರದವನು ಆಜ್ಞೆಯನ್ನೀಯುವ ಯೋಗ್ಯತೆಯನ್ನು ಪಡೆಯಲಾರನು.

(ಏ) ಲೋಕಸೇವಕನು ದೇಹ-ಗೇಹದ ಚಿಂತೆಯನ್ನು ಪರಮಾತ್ಮನಿಗೆ ಒಪ್ಪಿಸಿ ನಿಶ್ಚಿಂತನಾಗಿರಬೇಕು. ಲೋಕಸೇವೆಗೋಸ್ಕರ ತನ್ನ ಧನ, ಪ್ರಾಣ, ಕುಟುಂಬ, ಸುಖಾನುಕೂಲತೆಗಳು, ಸ್ವಾತಂತ್ರ್ಯ ಮೊದಲಾದುವನ್ನು ಮೊದಲಿಗೇ ಬಿಡುವ ಹೊಣೆಯನ್ನು ಹೊರಬೇಕು. ಸಂಕಟಗಳು ಬಂದ ಸಂದರ್ಭ

ದಲ್ಲಿ ಅವನ್ನು ಎದುರಿಸಿ ಲೋಕಸೇವಾಕಾರ್ಯದಲ್ಲಿ ದುಮುಕಬೇಕು.

(ಐ) ತಾನು ಮೊದಲು ಅತ್ಯಂತ ಸ್ವಚ್ಛನಾಗಿರಬೇಕು. ಅಸ್ವಚ್ಛರಾದ ಜನರೊಡನೆ ಕೂಡಿಕೊಂಡು ಕೆಲಸ ಮಾಡಲು ಮತ್ತು ಅಸ್ವಚ್ಛತೆಯನ್ನು ಹೋಗಲಾಡಿಸುವ ಕಾರ್ಯವನ್ನು ಮಾಡಲು ಅವನು ಹೇಸಬಾರದು.

(ಒ) ಅವನು ದಿನವೂ ದಿನಚರಿಯನ್ನು ಬರೆಯುವ ರೂಢಿಯನ್ನಿಡಬೇಕು. ಅದರಲ್ಲಿ ತಾನು ಮಾಡಿದ ಕಾರ್ಯಗಳನ್ನು ಸರಿಯಾಗಿ ಉಲ್ಲೇಖಿಸಬೇಕು.

(ಓ) ದಿನದ ಕಾರ್ಯವನ್ನು ಪರಮಾತ್ಮನ ಸ್ಮರಣೆಯಿಂದ ಪ್ರಾರಂಭಿಸಿ, ತಾನು ಇಡೀ ದಿನ ಮಾಡಿದ ಕಾರ್ಯಗಳನ್ನೆಲ್ಲ ರಾತ್ರಿಯಲ್ಲಿ ನಿರೀಕ್ಷಿಸಿ, ಮನನಮಾಡಿ, ಪರಮಾತ್ಮನನ್ನು ಸ್ಮರಿಸುತ್ತಾ ಮಲಗುವ ಲೋಕಸೇವಕನು, ಜನತೆಯ ಸೇವೆಯನ್ನು ಮಾಡುತ್ತಿರುವಾಗಲೇ ಶ್ರೇಯಸ್ಸನ್ನು ಹೊಂದುವನು.

(ಔ) ಇಂಥ ಸೇವಕನು ಯೋಚಿಸಿ ನೋಡಿದರೆ, ಲೋಕಸೇವಕನಾದ ತಾನು ಬ್ರಹ್ಮಚರ್ಯದಿಂದ ಇರಬೇಕಾಗುವುದೆಂದು ಅವನಿಗೆ ತಿಳಿಯುವುದು. ಈ ಮಾತು ಎಂದು ಮನದಟ್ಟಾಗುವುದೋ, ಅಂದಿನಿಂದಲೇ ಅವನು ಇತ್ತ ಹೆಜ್ಜೆಯನ್ನಿಡಲಾರಂಭಿಸುವನು.

೨ ಗ್ರಾಮ-ಸೇವಕನ ಕರ್ತವ್ಯಗಳು*

೧ ಗ್ರಾಮನಿವಾಸಿಗಳಿಗೆ ಸ್ವಚ್ಛತೆಯ ಶಿಕ್ಷಣವನ್ನು ಕೊಡುವುದು ಗ್ರಾಮಸೇವಕನ ಮೊದಲ ಕರ್ತವ್ಯ. ಈ ಶಿಕ್ಷಣ-ಪದ್ಧತಿಯಲ್ಲಿ ವ್ಯಾಖ್ಯಾನಗಳೂ ಪತ್ರಿಕೆಗಳೂ ಉಚ್ಚ ಸ್ಥಾನವನ್ನು ಪಡೆಯುವ ಸಾಧನಗಳಲ್ಲ. ಈ ಶಿಕ್ಷಣವನ್ನು ವಸ್ತುಪಾಠದಿಂದಲೆ ಕೊಡಬೇಕು. ಈ ಕಾರ್ಯವನ್ನು ಮಾಡಲು ತಾಳ್ಮೆಯು ಬೇಕೇ ಬೇಕು. ಗ್ರಾಮಸೇವಕನು, ಒಂದೆರಡು ದಿನಗಳಲ್ಲೇ ಜನರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲಾರಂಭಿಸುವರೆಂದು ತಿಳಿಯಬಾರದು.

೨ ಗ್ರಾಮಸೇವಕನು ಮೊದಲು ಗ್ರಾಮನಿವಾಸಿಗಳನ್ನು ಒಂದೆಡೆ ಒಟ್ಟುಗೂಡಿಸಿ, ತಮ್ಮ ಧರ್ಮವನ್ನು ಅವರಿಗೆ ತಿಳಿಸಿಕೊಡಬೇಕು. ಬಳಿಕ ಹಳ್ಳಿಯಿಂದಲೆ ಗುದ್ದಲಿ, ಸಲಿಕೆ, ಬುಟ್ಟಿ, ಬಕೇಟು, ಪೊರಕೆ ಮೊದಲಾದುವನ್ನು ಹುಟ್ಟಿಸಿಕೊಂಡು ಸ್ವತಃ ಸ್ವಚ್ಛತೆಯ ಕಾರ್ಯವನ್ನು ಪ್ರಾರಂಭಿಸಬೇಕು.

* 'ಗಾಮ್‌ಡಾನೀ ವಹಾರೆ' ಲೇಖಮಾಲೆಯ ಆಧಾರದಿಂದ.

೩ ದಾರಿಗಳನ್ನು ಚೆನ್ನಾಗಿ ನಿರೀಕ್ಷಿಸಿ, ಮೊದಲು ಮಲವನ್ನು ಸಲಿಕೆಯಿಂದ ಬುಟ್ಟಿಯಲ್ಲಿ ತುಂಬಬೇಕು. ಬಳಿಕ ಮಲವು ಬಿದ್ದ ಸ್ಥಾನವನ್ನು ಹುಡಿಮಣ್ಣಿನಿಂದ ಮುಚ್ಚಬೇಕು. ಮೂತ್ರ ಬಿದ್ದ ಸ್ಥಾನವನ್ನು ಕೂಡ ಸಲಿಕೆಯಿಂದ ಕೆದರಿ, ಮೂತ್ರ ಬೆರೆತ ಮಣ್ಣನ್ನು ಅದೇ ಬುಟ್ಟಿಯಲ್ಲಿ ತುಂಬಬೇಕು. ಮತ್ತು ಆ ಮೂತ್ರಸ್ಥಳವನ್ನು ಸುತ್ತುಮುತ್ತಲಿನ ಒಣಮಣ್ಣಿನಿಂದ ಮುಚ್ಚಬೇಕು.

೪ ಒಕ್ಕಲಿಗನಿಗೆ ಮಲವೆಂದರೆ ಬಂಗಾರದಂತೆ. ಅದನ್ನು ಹೊಲದಲ್ಲಿ ಹೂಳುವುದರಿಂದ ಉತ್ತಮವಾದ ಗೊಬ್ಬರವಾಗಿ ಬೆಳೆಯು ಚೆನ್ನಾಗಿ ಬರುವುದು. ಈ ಮಾತನ್ನು ಒಕ್ಕಲಿಗನಿಗೆ ತಿಳಿಸಿಹೇಳಬೇಕು. ಹೊಲದಲ್ಲಿ ಸುಮಾರು ಒಂಬತ್ತು ಇಂಚು ಮಾತ್ರ ಹೊಂಡ ತೆಗೆಯಬೇಕು. ಆ ಹೊಂಡದಲ್ಲಿ ಮಲವನ್ನು ಹಾಕಿ ಆ ಮೇಲೆ ಒಣಮಣ್ಣಿನಿಂದ ಚೆನ್ನಾಗಿ ಮುಚ್ಚಬೇಕು.

೫ ಈ ರೀತಿ ಮಲದ ವ್ಯವಸ್ಥೆಯನ್ನು ಮಾಡಿದ ಬಳಿಕ ಕಸದ ವ್ಯವಸ್ಥೆಯನ್ನು ಮಾಡಬೇಕು. ಕಸವು ಎರಡು ತರದ್ದಿರುವುದು: (೧) ಗೊಬ್ಬರಕ್ಕೆ ಯೋಗ್ಯವಾದುದು. ಉದಾಹರಣೆಗೆ: ಸಗಣಿ, ಮೂತ್ರ, ಕಾಯಿಪಲ್ಲೆಗಳ ಕಸುರು, ಎಂಜಲು ಇತ್ಯಾದಿ. (೨) ಕಟ್ಟಿಗೆಯ ತುಂಡು, ಕಬ್ಬಿಣದ ತುಂಡು, ತಗಡಿನ ಚೂರು, ಬಟ್ಟೆಯ ಚಿಂದಿ ಮುಂತಾದ್ದು.

೬ ಗೊಬ್ಬರಕ್ಕೆ ಯೋಗ್ಯವಾದ ಕಸವನ್ನು ಪ್ರತ್ಯೇಕವಾಗಿ ಒಟ್ಟುಗೂಡಿಸಿ ಅದನ್ನು ಹೊಲದಲ್ಲಿ ಹುಗಿಯಬೇಕು, ಇಲ್ಲವೆ ತಿಪ್ಪೆಯಲ್ಲಿ ಸಂಗ್ರಹಿಸಬೇಕು.

೭ ಎರಡನೆಯ ತರದ ಕಸವನ್ನು ಹುಗಿಯಬೇಕಾದ ಆಳುದ್ದ ಹೊಂಡದಲ್ಲಿ ಚೆಲ್ಲಬೇಕು. ಹೊಂಡ ಮುಚ್ಚಿದ ಬಳಿಕ ಅದರ ಮೇಲೆ ತಕ್ಕಷ್ಟು ಮಣ್ಣು ಹಾಕಿ ನೆಲಸಮ ಮಾಡಬೇಕು. ಈ ಕಸದಲ್ಲಿನ ಕಟ್ಟಿಗೆಯ ಚೂರು, ದಂತಧಾವನದ ಚೂರು, ಇದ್ದಲಿ, ಮುಂತಾದ್ದನ್ನು ತೊಳೆದು ಒಣಗಿಸಿ ಉರವಲಿಗೆ ಉಪಯೋಗಿಸಬಹುದು; ಹರಕು ಬಟ್ಟೆಗಳನ್ನು ಮಾರಬಹುದು.

೮ ತಿಪ್ಪೆಯ ಬಳಿಯಲ್ಲಿ ಕಕ್ಕಸು ಕಟ್ಟಿಸಬೇಕೆಂದು ಈ ಮೊದಲು (ಆರೋಗ್ಯ ಖಂಡದಲ್ಲಿ) ಸೂಚಿಸಲಾಗಿದೆ. ಈ ತರದ ವ್ಯವಸ್ಥೆಯು ಇದ್ದ ಸ್ಥಳದಲ್ಲಿ ಒಟ್ಟುಗೂಡಿದ ಮಲವನ್ನು ಉಪಯೋಗಿಸಿಕೊಳ್ಳಲು ಎಲ್ಲಿಯ ವರೆಗೆ ಒಕ್ಕಲಿಗನು ಕಲಿಯುವುದಿಲ್ಲವೊ, ಅಲ್ಲಿಯ ವರೆಗೆ ಗ್ರಾಮಸೇವಕನು ಮಾರ್ಗವನ್ನು ಸ್ವಚ್ಛಮಾಡುವಂತೆ ತಿಪ್ಪೆಯನ್ನೂ ಸ್ವಚ್ಛಮಾಡಬೇಕು.

೯ ಗ್ರಾಮದ ಮಾರ್ಗಗಳನ್ನು ಪಕ್ಕಾ ಮತ್ತು ಸರಿಯಾಗಿ ಮಾಡಿಸು ವುದಕ್ಕಾಗಿ ಉಪಾಯಗಳನ್ನು ಯೋಜಿಸುವ ಕಾರ್ಯವು ಗ್ರಾಮಸೇವಕನದು. ಈ ಉಪಾಯಗಳು ಒಂದೇ ಬಗೆಯವಾಗಿರಲಾರವು, ಸ್ಥಾನಿಕ ಪರಿಸ್ಥಿತಿಗೆ ಅನುಸಾರವಾಗಿ ಭಿನ್ನ ಭಿನ್ನ ರೀತಿಯವಾಗಬಹುದು. ಈ ಕಾರ್ಯದಲ್ಲಿ ಹಳ್ಳಿಯ ವೃದ್ಧರು ಸಲಹೆಗಳನ್ನು ಕೊಟ್ಟು ನೆರವಾಗಬಹುದು.

೧೦ ಸ್ವಚ್ಛತೆಯ ಕೆಲಸವು ಮುಗಿದ ಬಳಿಕ, ಗ್ರಾಮಸೇವಕನು ಅವಶ್ಯಕ ವಿದ್ದ ಉಪಕರಣಗಳನ್ನೂ ಸಾಧನಗಳನ್ನೂ ತೆಗೆದುಕೊಂಡು, ಗ್ರಾಮದಲ್ಲಿ ನಡೆ ಯುವ ರಾಟೆ, ಹತ್ತಿಕಾಳು ತೆಗೆಯುವ ಮತ್ತು ಹಿಂಜುವ ಕಾರ್ಯ, ಮುಂತಾ ದ್ದನ್ನು ನಿರೀಕ್ಷಿಸಲು ಹೊರಡಬೇಕು. ರಾಟೆ ಮುಂತಾದುವನ್ನು ಸುಧಾರಿಸು ವುದು ಸರಿಪಡಿಸುವುದು ಅವಶ್ಯವಿದ್ದರೆ ಸರಿಪಡಿಸಬೇಕು; ಮತ್ತು ಸರಿಪಡಿಸು ವುದಕ್ಕೆ ಕಲಿಸಬೇಕು. ಹೊಸದಾಗಿ ಕಲಿಯಲು ಆರಂಭಿಸಿದವರಿಗೆ, ಅವರ ಕೆಲಸವನ್ನು ನಿರೀಕ್ಷಿಸಿದ ಬಳಿಕ, ಅವಶ್ಯ ಕಂಡರೆ ಯೋಗ್ಯ ಸಲಹೆಗಳನ್ನೂ ಸೂಚನೆಗಳನ್ನೂ ಕೊಡಬೇಕು. ಹೊಸದಾಗಿ ಕಲಿಯಬೇಕೆನ್ನುವವರಿಗೆ ಒಂದು ಪ್ರತ್ಯೇಕ ಸಮಯವನ್ನು ಗೊತ್ತುಮಾಡಿ ಆ ಸಮಯದಲ್ಲಿ ಕಲಿಸ ಬೇಕು. ಆದ್ದರಿಂದ ಹಳ್ಳಿಯಲ್ಲಿ ಈ ಉದ್ಯೋಗಗಳು ಯಾವ ವೇಳೆಯಲ್ಲಿ ನಡೆಯುತ್ತಿರುವವೋ ಆ ವೇಳೆಯಲ್ಲಿಯೇ ಅವುಗಳ ನಿರೀಕ್ಷಣೆಗೆ ಹೊರಡಬೇಕು.

೧೧ ನೂಲುವ, ನೇಯುವ, ಮತ್ತು ಇತರ ಉದ್ಯೋಗಗಳು ಗ್ರಾಮ ಸೇವಕನ ಪರವಾಗಿಯೆ ನಡೆಯುತ್ತಿದ್ದರೆ, ಇವುಗಳಿಗೋಸ್ಕರ ಒಂದು ಸಮಯ ವನ್ನು ಗೊತ್ತುಪಡಿಸಿ, ಅದೇ ವೇಳೆಯಲ್ಲಿ ತನ್ನನ್ನು ಕಾಣಲು ಜನರಿಗೆ ಹೇಳ ಬೇಕು. ಅದೇ ಸಮಯದಲ್ಲಿ, ಬರುವ ಪಾಠವನ್ನು ಅವರಿಂದ ಮಾಡಿಸ ಬೇಕು. ಆ ವೇಳೆಯಲ್ಲೇ ಕೆಲಸವನ್ನು ಪರೀಕ್ಷಿಸಿ, ಅವಶ್ಯ ಕಂಡ ಯೋಗ್ಯ ಸುಧಾರಣೆಗಳನ್ನು ಮಾಡುವ ಬಗೆಗೆ ಸಲಹೆ ಸೂಚನೆಗಳನ್ನೂ ಕೊಡಬೇಕು.

೧೨ ದಿನದಲ್ಲಿ ಕನಿಷ್ಠ ಒಂದು ಸಲವಾದರೂ, ಗ್ರಾಮಕ್ಕೆ ಅನುಕೂಲವಿದ್ದ ಸಮಯದಲ್ಲಿ ಜನರನ್ನೆಲ್ಲ ಒಂದು ಕಡೆ ಸೇರಿಸಿ ಗ್ರಾಮಸೇವಕನು ಸಾಮೂಹಿಕ ಪ್ರಾರ್ಥನೆ ಮಾಡಬೇಕು. ಪ್ರಾರ್ಥನೆಯು ಸರ್ವರಿಗೂ ತಿಳಿಯುವಂತಹ ಭಾಷೆ ಯಲ್ಲಿ ಇರಬೇಕು. ಗ್ರಾಮಸೇವಕನಿಗೆ ಸಂಗೀತದ ಜ್ಞಾನವಿರುವುದು ಒಳಿತು. ಒಂದು ವೇಳೆ ಅವನಿಗೆ ಆ ಜ್ಞಾನವಿರದಿದ್ದರೆ ಗ್ರಾಮದಲ್ಲಿ ಸರಿಯಾಗಿ ಹಾಡು ವವರು ಬೇರೆ ಯಾರಾದರೂ ಇದ್ದರೆ ಅವರಿಂದ ಭಜನೆಯ ಪದಗಳನ್ನು ಹಾಡಿಸ

ಬೇಕು, ಪರಮಾತ್ಮನ ನಾಮಸ್ಮರಣೆಯನ್ನು ಮಾಡಿಸಬೇಕು, ಮತ್ತು ಜನರೂ ಅವನಂತೆಯೆ ಹೇಳುವಂತೆ ಮಾಡಬೇಕು. ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಭಜನ ಮಂಡಳಗಳು ಇರುವವು. ಆ ಮಂಡಲಗಳಿಗೆ ಹೊಸ ಹೊಸ ಭಜನೆಯ ಪದಗಳನ್ನು ಕಲಿಸಿ ಅವುಗಳನ್ನು ಸಾಮೂಹಿಕ ಪ್ರಾರ್ಥನೆಯಲ್ಲಿ ಸೇರಿಸಿಕೊಂಡು ಅವುಗಳಿಂದ ಪ್ರಯೋಜನ ಪಡೆಯಬೇಕು.

೧೩. ಪ್ರಾರ್ಥನೆ ಮುಗಿದ ನಂತರ, ಪತ್ರಿಕೆಗಳೊಳಗಿನ ಉಪಯುಕ್ತ ಸುದ್ದಿಗಳನ್ನೂ ಲೇಖನಗಳನ್ನೂ ಓದಿ ಹೇಳಬೇಕು; ಪುಸ್ತಕಗಳನ್ನೂ ಧಾರ್ಮಿಕ ಗ್ರಂಥಗಳನ್ನೂ ಓದಿ ಹೇಳಬೇಕು; ಒಳ್ಳೆಯ ಕಥೆಗಳನ್ನು ಹೇಳಬೇಕು, ಇಲ್ಲವೆ ಹೇಳಿಸಬೇಕು.

೧೪ ಗ್ರಾಮಸೇವಕನು ಕೆಳಗಿನ ಸೂಚನೆಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು:

(ಅ) ಗ್ರಾಮದಲ್ಲಿ ಪಕ್ಷಗಳು ಇದ್ದರೆ ಗ್ರಾಮಸೇವಕನು ಯಾವ ಪಕ್ಷಕ್ಕೂ ಸೇರಕೂಡದು. ತಟಸ್ಥನಾಗಿದ್ದುಕೊಂಡು ಎಲ್ಲರ ಸೇವೆಯನ್ನು ಸಮನಾಗಿ ಮಾಡಬೇಕು, ಎಲ್ಲರೊಡನೆ ಸಮನಾದ ಮಿತ್ರತ್ವದಿಂದ ಇರಬೇಕು. ಶಕ್ಯವಿದ್ದರೆ ತನ್ನ ಪ್ರತಿಭೆಯಿಂದ ಆ ಪಕ್ಷಗಳನ್ನು ಮುರಿದು ಎಲ್ಲರನ್ನೂ ಒಂದುಗೂಡಿಸಲು ಯತ್ನಿಸಬೇಕು.

(ಆ) ಸಾಮಾನ್ಯವಾಗಿ ಮಿಷ್ಟಾನ್ನದ ಆಮಂತ್ರಣಗಳು ಬಂದರೆ ಗ್ರಾಮಸೇವಕನು ಸ್ವೀಕರಿಸಬಾರದು. ಗ್ರಾಮನಿವಾಸಿಗಳು ಅವನ ಮೇಲಿನ ಪ್ರೀತಿಯಿಂದ, ಆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುವುದಕ್ಕಾಗಿ ಆಗಾಗ ಅವನಿಗೆ ಆಮಂತ್ರಣ ಕೊಡುವರು. ಅವರ ಮನಸ್ಸನ್ನು ನೋಯಿಸಬಾರದೆಂದು ಅವನು ಅದನ್ನು ಸ್ವೀಕರಿಸುವನು. ಇದರಿಂದ ಎಷ್ಟೋ ಗ್ರಾಮಸೇವಕರು ಸ್ವಾದಲೋಲುಪ್ತರಾಗಿ ಯಾವಾಗಲೂ ಇಂಥ ಮನೆಗಳನ್ನೇ ಹುಡುಕುತ್ತಿರುತ್ತಾರೆ. ಅಲ್ಲದೆ, ಇಂಥ ಮಿಷ್ಟಾನ್ನದ ಔತಣಗಳನ್ನು ತಾವಾಗಿಯೇ ಕೇಳಲು ಕೂಡ ಹಿಂಜರಿಯುವುದಿಲ್ಲ. ಆದರೆ ಪರಿಸ್ಥಿತಿಯು ಚೆನ್ನಾಗಿದ್ದ ಗ್ರಾಮವಾಸಿಗಳು ಕೂಡ ಇಂಥ ಸಂದರ್ಭಗಳಲ್ಲಿ ತಮ್ಮ ಶಕ್ತಿ ಮೀರಿ ವೆಚ್ಚಮಾಡುತ್ತಾರೆಂಬುದನ್ನು ಗ್ರಾಮಸೇವಕರು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು ಗ್ರಾಮನಿವಾಸಿಗಳ ಮೇಲೆ ಅತಿಥಿಸತ್ಕಾರದ ಭಾರವು ವಿಪರೀತವಾಗಿ ಬೀಳುತ್ತದೆ. ಆದ್ದರಿಂದ ಗ್ರಾಮಸೇವಕನು, ಅತಿಥಿಸತ್ಕಾರವನ್ನು ಅತ್ಯಂತ ಸಾದಾ ರೀತಿಯಿಂದಲೇ

ಮಾಡುವ ರೂಢಿಯನ್ನು ಗ್ರಾಮನಿವಾಸಿಗಳು ಆಚರಣೆಗೆ ತರುವಂತೆ ಯತ್ನಿಸುವುದು ಅವಶ್ಯ. ಇದಕ್ಕಾಗಿ ಅವನು ಮಿಷ್ಟಾನ್ನದ ಔತಣವನ್ನು ಸ್ವೀಕರಿಸದಿರುವುದೇ ಒಳ್ಳೆಯದು. ಒಂದು ವೇಳೆ ಇಂಥ ಔತಣವನ್ನು ಸ್ವೀಕರಿಸಲೇಬೇಕಾದ ಸಂದರ್ಭ ಬಂದರೆ, ಬೇರೆ ಸಂದರ್ಭಗಳಲ್ಲಿ ಮಿಷ್ಟಾನ್ನವನ್ನು ಉಣ್ಣುತ್ತಿದ್ದರೂ ಇಲ್ಲಿ ಅದನ್ನು ತ್ಯಜಿಸಿ ಸಾದಾ ಆಹಾರವನ್ನು ತೆಗೆದುಕೊಳ್ಳಬೇಕು.

(ಇ) ಇವನಿಗಾಗಿ ತೀರ ಬಡವರೂ ವಿಶೇಷ ಊಟದ ಸಿದ್ಧತೆಯಲ್ಲಿ ತೊಡಗುವ, ಶ್ರಮವಹಿಸುವ ಸಂದರ್ಭ ಬರದಷ್ಟು ಸಾದಾತನವನ್ನು ಇವನು ತನ್ನ ಊಟ-ಉಡಿಗೆಯಲ್ಲಿ ಇಟ್ಟುಕೊಂಡಿರಬೇಕು.

(ಈ) ಗ್ರಾಮಸೇವಕನು ಸಂಯಮನಪೂರ್ಣವಾದ, ತಪೋವ್ರತಮಯವಾದ ಜೀವನವನ್ನು ಕಳೆಯಬೇಕು. ಗ್ರಾಮಸೇವೆಯನ್ನು ಮಾಡಬೇಕಾಗಿರುವವನ ವ್ರತೋಪವಾಸಗಳು ಗ್ರಾಮದ ಪರಿಸ್ಥಿತಿಯನ್ನು ಯೋಚಿಸಿ ಗ್ರಹಣಮಾಡಿದುವುಗಳಿರಬೇಕು. ಇಲ್ಲದಿದ್ದರೆ ವ್ರತಗಳು ಸ್ವಚ್ಛಂದವಾಗಿ. ಗ್ರಾಮವಾಸಿಗಳನ್ನು ತೊಂದರೆಗೆ ಈಡುಮಾಡುತ್ತವೆ. ಉದಾಹರಣೆಗೆ: ಗ್ರಾಮಸೇವಕನು ಸಕ್ಕರೆ ಬೆಲ್ಲವನ್ನು ತ್ಯಜಿಸಿ ಹಾಲಿಗೆ ಜೇನುತುಪ್ಪವನ್ನು ಕೇಳುವುದು, ಚಹಾ ಕಾಫಿ ಬಿಟ್ಟು ಯಾವುದಾದರೂ ಮಸಾಲೆಯ ಕಷಾಯವನ್ನು ಕೇಳುವುದು ಮುಂತಾದ್ದು.

ಚತುರ್ದಶ ಖಂಡ

ಸಂಸ್ಥೆಗಳು

೧ ಸಂಸ್ಥೆಯ ಸಫಲತೆ

೧ ಯಾವುದೇ ಸಂಸ್ಥೆಯ ಸಫಲತೆಯು ಈ ಕೆಳಗಿನ ಮಾತುಗಳನ್ನು ಅವಲಂಬಿಸಿದೆ:

(ಅ) ಸಂಸ್ಥೆಯ ಉದ್ದೇಶದಲ್ಲಿ ಅತ್ಯಂತ ಪ್ರಾಮಾಣಿಕ ನಿಷ್ಠೆ ಮತ್ತು ಆ ಉದ್ದೇಶಪೂರ್ತಿಗಾಗಿ ತಳಮಳ.

(ಆ) ಸಂಸ್ಥೆಯ ನಿಯಮಗಳ ಸ್ಥೂಲ ಪಾಲನೆಯಷ್ಟೆ ಅಲ್ಲ, ಭಾವಗಳ ಪಾಲನೆ.

(ಇ) ಸಂಸ್ಥೆಯ ಸಂಚಾಲಕ, ಸದಸ್ಯ, ಸೇವಕ, ಮುಂತಾದ ಕಾರ್ಯಕರ್ತರಲ್ಲಿ ಬಂಧುಭಾವ ಮತ್ತು ಒಂದೇ ಮನಸ್ಸು.

೨ ಯಾವ ಸಂಸ್ಥೆಯಲ್ಲಿ ಈ ಮೂರು ಮಾತುಗಳಲ್ಲಿ ಒಂದೂ ಪಾಲಿಸಲ್ಪಡುವುದಿಲ್ಲವೋ, ಆ ಸಂಸ್ಥೆಯು ಉಳಿದ ಎಲ್ಲ ಅನುಕೂಲತೆಗಳಿದ್ದರೂ ತೇಜಸ್ವಿಯಾಗಲಾರದು.

೨ ಸಂಸ್ಥೆಯ ಸಂಚಾಲಕ

೧ ಸಂಸ್ಥೆಯ ಸಂಚಾಲಕನು ಸಂಸ್ಥೆಯ ಪ್ರಾಣಸ್ವರೂಪನೆಂದು ಹೇಳಬಹುದು.

೨ ಇವನು ಸಂಸ್ಥೆಯ ಉದ್ದೇಶದಲ್ಲಿಟ್ಟುಕೊಂಡ ನಿಷ್ಠೆ ಮತ್ತು ತಳಮಳ, ಇವನ ನಿಯಮಪಾಲನೆ, ಉಳಿದ ಸದಸ್ಯರೊಡನೆ ಇಟ್ಟುಕೊಂಡ ವರ್ತನೆ, ಉದ್ಯೋಗ ತತ್ಪರತೆ, ಮೊದಲಾದುವುಗಳ ಮೇಲೆಯೇ ಸಂಸ್ಥೆಯ ಸಫಲತೆಯು ನೆಲೆಸಿದೆ.

೩ ಸಂಚಾಲಕನಿಗೆ ತನ್ನ ಅಧಿಕಾರದ ಬಗ್ಗೆ ಗರ್ವವುಂಟಾದರೆ, ಅಥವಾ ಅವನು ಸಂಸ್ಥೆಯ ಅನ್ಯ ಸದಸ್ಯರೊಡನೆ ಅನಾದರದಿಂದಲೂ ಅಪ್ರಸನ್ನತೆಯಿಂದಲೂ ವರ್ತಿಸಿದರೆ ಸಂಸ್ಥೆಗೆ ಹಾನಿ ತಟ್ಟುವುದು.

೪ ಒಳ್ಳೆಯ ಸೇನಾಪತಿಯು ಹೇಗೆ ನಿಯಮಗಳ ಪಾಲನೆಯನ್ನು ಮಾಡಿಸುವಾಗ ಆಗ್ರಹಿಯೂ ಕಠೋರನೂ ಇರುವನೊ, ಅಲ್ಲದೆ ತನ್ನ ಸೈನಿಕರ ಪ್ರೇಮವನ್ನು ಸಂಪಾದಿಸುವ ಚಿಂತನೆಯನ್ನು ಮಾಡುವನೊ, ತನ್ನ ಸೈನಿಕರ ಬಗೆಗೆ ಅಭಿಮಾನವನ್ನು ತಾಳುವನೊ, ಹಾಗೆಯೇ ಸಂಸ್ಥೆಯ ಸಂಚಾಲಕನ ನಡತೆಯೂ ಇರಬೇಕು.

೫ ಸಂಸ್ಥೆಯ ಚಿಕ್ಕ ಪುಟ್ಟ ವಿಷಯಗಳ ಕಡೆಗೂ ಸಂಚಾಲಕನ ಗಮನವಿರಬೇಕು. ಹೇಗೆ ತಾಯಿಯು ಬಾಲಕನ ಸುಖ ದುಃಖದ ಚಿಂತನೆಯನ್ನು ಮಾಡುವಳೋ, ಹಾಗೆಯೇ ಸಂಸ್ಥೆಯ ಸಂಚಾಲಕನೂ ಸಂಸ್ಥೆಯ ಜನರ ಮತ್ತು ಪ್ರಾಣಿಗಳ ಸುಖ ದುಃಖಗಳ ಕಡೆಗೆ ಗಮನಕೊಡತಕ್ಕದ್ದು.

೬ ಸಂಚಾಲಕನು ಸಂದರ್ಭಾನುಸಾರವಾಗಿ ತನ್ನ ಅಧಿಕಾರವನ್ನು ನಡೆಸಿದರೂ ತನ್ನ ಕೈಕೆಳಗಿನವರೊಡನೆ ಸರಿಸಮಾನತೆಯ ಅಥವಾ ಗೆಳೆತನದ ಸಂಬಂಧವನ್ನಿಟುಕೊಂಡಿರಬೇಕು. ಚಿಕ್ಕವರಲ್ಲಿ ಚಿಕ್ಕವನು ಕೂಡ ತನ್ನ ಗೆಳೆ-

ಯನೇ ಎಂದು ತಿಳಿಯಬೇಕು. ತನಗೆ ಸಂಚಾಲಕತ್ವವು ದೊರೆತದ್ದು ತನ್ನ ಬಗೆಗೆ ಇರುವ ತನ್ನ ಸಂಗಡಿಗರ ಪಕ್ಷಪಾತದಿಂದ, ಅಥವಾ ಆದರದಿಂದಲೇ ಹೊರತು, ತನ್ನ ವಿಶೇಷ ಯೋಗ್ಯತೆಯಿಂದ ಅಲ್ಲವೆಂದು ಅವನು ತಿಳಿದುಕೊಳ್ಳ ತಕ್ಕದ್ದು.

೭ ಆದ್ದರಿಂದ ಸಂಚಾಲಕನು ಚಿಕ್ಕವರಲ್ಲಿ ಚಿಕ್ಕವನ ಸೂಚನೆಯನ್ನೂ ಆದರದಿಂದ ಕೇಳಿಕೊಂಡು ಯೋಗ್ಯವಾದದ್ದಿದ್ದರೆ ಅದನ್ನು ಸ್ವೀಕರಿಸಲು ಸಿದ್ಧ ನಾಗಿರಬೇಕು. ಅದು ಅಯೋಗ್ಯವೆನಿಸಿದರೆ ಅದರ ಅಯೋಗ್ಯತೆಯನ್ನು ತಿಳಿಸಿಕೊಡಲು ಯತ್ನಿಸಬೇಕು.

೮ ಸಂಚಾಲಕನು ಅರಗಿನ ಕಿವಿಯವನಾಗಕೂಡದು. ಯಾರ ವಿಷಯ ದಲ್ಲೂ ತತ್‌ಕ್ಷಣವೆ ಪ್ರತಿಕೂಲ ಅಭಿಪ್ರಾಯವನ್ನು ಮಾಡಿಕೊಳ್ಳಬಾರದು. ಮೊದಲು ದೀರ್ಘಾಲೋಚನೆಯನ್ನು ಮಾಡಬೇಕು. ಸ್ಪಷ್ಟ ಪ್ರಮಾಣವು ದೊರೆಯದಿದ್ದರೆ ಪ್ರತಿಕೂಲ ಅಭಿಪ್ರಾಯವನ್ನು ಮಾಡಿಕೊಳ್ಳಬಾರದು.

೯ ತನ್ನ ಕೈಕೆಳಗೆ ಕೆಲಸ ಮಾಡುವವರಲ್ಲಿ ಯಾರೊಬ್ಬರ ಮೇಲೂ ವಿಶೇಷ ಪ್ರೇಮವನ್ನು ವ್ಯಕ್ತಮಾಡಬಾರದು; ಯಾರ ಪಕ್ಷವನ್ನೂ ಕಟ್ಟಬಾರದು, ಪಕ್ಷಪಾತ ಮಾಡಬಾರದು; ಒಬ್ಬನನ್ನು ಅವಮಾನಿಸುವುದಕ್ಕಾಗಿ, ಅಥವಾ ಒಬ್ಬನ ಕೀಳುತನವನ್ನು ತೋರಿಸುವುದಕ್ಕಾಗಿ ಇನ್ನೊಬ್ಬನನ್ನು ಹೊಗಳ ಬಾರದು.

೧೦ ನಿಯಮಗಳ ಸರಿಯಾದ ಪಾಲನೆ ಮಾಡಿಸುವುದಕ್ಕಾಗಿ ಕಠೋರ ವರ್ತನೆಯನ್ನಿಡಬಾರದು, ಕಠೋರವಾಗಿ ನುಡಿಯಬಾರದು, ಶಿಕ್ಷೆಯನ್ನು ಕೊಡುವುದು ಕೂಡ ಅವಶ್ಯವಿಲ್ಲ ಎಂದು ತಿಳಿದಿರಬೇಕು. ನಿಯಮಪಾಲನೆಗೆ ಕಠೋರವರ್ತನೆ, ಕಠೋರನುಡಿ, ಶಿಕ್ಷೆ, ಅವಶ್ಯವೆಂದು ತಿಳಿಯುವ ಸಂಚಾಲಕನ ಯೋಗ್ಯತೆಯಲ್ಲಿ ಕೊರತೆಯಿರುವುದೆಂಬುದು ಎದ್ದು ಕಾಣುವ ಮಾತು.

೩ ಸಂಸ್ಥೆಯ ಸದಸ್ಯರು

೧ ಯಾವ ಸಂಸ್ಥೆಯ ಸದಸ್ಯರಲ್ಲಿ ಪರಸ್ಪರ ಬಂಧುಭಾವವೂ ಆದರವೂ ಇರುವುದಿಲ್ಲವೊ, ಆ ಸಂಸ್ಥೆ ಬಹು ಕಾಲದ ವರೆಗೆ ವೈಭವದಿಂದ ಬಾಳಲಾರದು. ಅದರಲ್ಲಿ ವಿಭಾಗಗಳೂ ಪಕ್ಷಗಳೂ ಉಂಟಾಗುವುವು; ಆದು ತನ್ನ ಧ್ಯೇಯ ವನ್ನು ಮರೆತು ಕಲಹದಲ್ಲೇ ತೊಡಗುವುದು.

೨ ಯಾವ ಸಂಸ್ಥೆಯ ಸದಸ್ಯರು ತಮ್ಮ ಮೇಲಧಿಕಾರಿಗಳ ಆಜ್ಞೆಯನ್ನು ಹರ್ಷದಿಂದ ಪಾಲಿಸಲು ಸಿದ್ಧರಾಗುವುದಿಲ್ಲವೊ ಆ ಸಂಸ್ಥೆ ಬಹಳ ಕಾಲದ ವರೆಗೆ ತೇಜಸ್ವಿಯಾಗಿ ಬಾಳಲಾರದು. ಅದರಲ್ಲಿ ಆಲಸ್ಯವೂ ಸಡಿಲೂ ಹುಟ್ಟಿ ಸದಸ್ಯರು ಅಲಕ್ಷಿಗಳೂ ಆಗುವರು.

೩ ಸಂಚಾಲಕರಲ್ಲಿ ಮತ್ತು ಸದಸ್ಯರಲ್ಲಿ ಸ್ಥೂಲ ಹಾಗೂ ಮಾನಸಿಕ ಸಹಕಾರವು ಇರತಕ್ಕದ್ದು. ಸದಸ್ಯರು ಸಂಚಾಲಕನ ಇಚ್ಛೆಗೂ ಆಜ್ಞೆಗೂ ಒಳಪಟ್ಟಿರಬೇಕೆಂದಿಷ್ಟೇ ಇದರ ತಾತ್ಪರ್ಯವಲ್ಲ. ಆದರೆ ಆ ಇಚ್ಛೆ ಅಥವಾ ಆಜ್ಞೆ ಉಚಿತವೆಂದು ತಿಳಿಯುತ್ತಿದ್ದರೆ, ಅವನು ಆಜ್ಞಾಪಿಸಿದ ಕೆಲಸವನ್ನು ತಾವೇ ಕಲ್ಪಿಸಿಕೊಂಡು ಮಾಡಲು ನಿಶ್ಚಯಿಸಿರುವರೋ ಏನೋ ಎನ್ನುವಂತೆ ನಡತೆಯನ್ನಿಡಬೇಕು.

೪ ಯಾವ ನಿಯಮದ ಮತ್ತು ಆಜ್ಞೆಯ ಔಚಿತ್ಯದ ವಿಷಯದಲ್ಲಿ ಸದಸ್ಯರಿಗೆ ಸಂತೋಷವೂ ವಿಶ್ವಾಸವೂ ಎನ್ನಿಸುವುದಿಲ್ಲವೊ, ಆ ನಿಯಮವನ್ನೂ ಆಜ್ಞೆಯನ್ನೂ ಕುರಿತು ಸಂಚಾಲಕನೊಡನೆ ಮನಬಿಚ್ಚಿ ಮಾತನಾಡಿಕೊಳ್ಳಬೇಕು. ತಮಗೆ ವಿಶ್ವಾಸವಿಲ್ಲದಿದ್ದರೂ ವಿಶ್ವಾಸವಿದೆಯೆಂಬ ಆಭಾಸವನ್ನು ಅವನಲ್ಲಿ ಹುಟ್ಟಿಸಗೊಡಬಾರದು.

೫ ಒಂದು ವೇಳೆ ಇಂಥ ಒಂದು ನಿಯಮವಾಗಲಿ ಆಜ್ಞೆಯಾಗಲಿ ಸತ್ಯಕ್ಕೆ ಅಥವಾ ಧರ್ಮಕ್ಕೆ ವಿರುದ್ಧವೆಂದು ಎನಿಸದಿದ್ದರೆ, ಕೇವಲ ವ್ಯಾವಹಾರಿಕ ದೃಷ್ಟಿಯಿಂದ ಅಯೋಗ್ಯವೆನಿಸಿದರೆ, ಅಂಥ ನಿಯಮದ ಅಥವಾ ಆಜ್ಞೆಯ ಯೋಗ್ಯತೆಯ ವಿಷಯದಲ್ಲಿ ವಿಶ್ವಾಸವುಂಟಾಗದಿದ್ದರೂ ಅದನ್ನು ಸದಸ್ಯನು ಪಾಲಿಸತಕ್ಕದ್ದು. ಒಂದು ವೇಳೆ ಅದು ಸತ್ಯಕ್ಕೆ ಅಥವಾ ಧರ್ಮಕ್ಕೆ ವಿರುದ್ಧವಾದುದೆಂದು ಎನಿಸಿದರೆ ಅವನು ಸಂಸ್ಥೆಯನ್ನು ಬಿಡಲು ಸಿದ್ಧನಾಗಬೇಕು.

೬ ಒಂದು ವೇಳೆ ನಿಯಮವಾಗಲಿ ಆಜ್ಞೆಯಾಗಲಿ ಸತ್ಯಕ್ಕೆ ಅಥವಾ ಧರ್ಮಕ್ಕೆ ವಿರುದ್ಧವಾದದ್ದಿರದಿದ್ದರೂ, ಅದನ್ನು ಪಾಲಿಸುವುದು ತಮ್ಮ ದೌರ್ಬಲ್ಯದ ಮೂಲಕ ಕಠಿಣವೆನಿಸಿದರೆ ಸದಸ್ಯರು ಸಂಸ್ಥೆಯ ಏಳಿಗೆಯ ದೃಷ್ಟಿಯಿಂದ ಸಂಸ್ಥೆಯನ್ನು ಬಿಡುವುದೇ ಒಳಿತು.

೭ ಸದಸ್ಯರಲ್ಲಿ ಪರಸ್ಪರ ಮತಭೇದವುಂಟಾದರೆ, ನಡತೆಯ ವಿಷಯದಲ್ಲಿ ಸಂಶಯವು ಬಂದರೆ, ಮತ್ತು ಅದರಿಂದ ಅಸಂತೋಷವೂ ದುಃಖವೂ ಆಗಿದ್ದರೆ, ಯಾರೊಬ್ಬನ ಮನಃಪ್ರವೃತ್ತಿಯ ವಿಷಯದಲ್ಲಿ ಸಂಶಯವು ಬಂದಿದ್ದರೆ,

ಮೊಟ್ಟ ಮೊದಲು ಅವರು ಇಂಥ ಸರ್ವ ವಿಷಯದಲ್ಲೂ ಆ ವ್ಯಕ್ತಿಯೊಡನೆ ಮಾತನಾಡಿ ಸಂಶಯವನ್ನು ದೂರಮಾಡಿಕೊಳ್ಳತಕ್ಕದ್ದು. ಆದರೆ ಇಷ್ಟರಿಂದಲೂ ಒಂದು ವೇಳೆ ಸಂಶಯ ದೂರವಾಗದಿದ್ದರೆ, ಅವನ ವಿಷಯವಾಗಿ ತಮ್ಮ ಅಭಿಪ್ರಾಯವು ಹೆಚ್ಚು ದೃಢವಾಗುತ್ತ ಹೋದರೆ, ಅವನ ಅಥವಾ ತಮ್ಮ ಮೇಲಧಿಕಾರಿಗೆ ಈ ವಿಷಯವನ್ನು ತಿಳಿಸಿ, ಈ ವಿಷಯದಲ್ಲಿ ಯೋಗ್ಯವೆನಿಸಿದ ಶಾಸನವನ್ನು ಮಾಡಲು ಮೇಲಧಿಕಾರಿಗೆ ಒಪ್ಪಿಸಿಬಿಡಬೇಕು.

೮ ಯಾವ ವ್ಯಕ್ತಿಯ ವಿಷಯದಲ್ಲಿ ಸಂದೇಹವುಂಟಾಗಿದೆಯೋ, ಅದೇ ಮನುಷ್ಯನೊಡನೆ ಸ್ಪಷ್ಟವಾಗಿ ಮಾತನಾಡಿಕೊಳ್ಳಲು ಪ್ರಯತ್ನಿಸದೆ, ಅವನ ಮೇಲಧಿಕಾರಿಗೆ ಅಥವಾ ಉಳಿದ ಸದಸ್ಯರಿಗೆ ತಿಳಿಸದೆ, ಅಥವಾ ತನ್ನ ಮೇಲಧಿಕಾರಿಗೆ ಕೂಡ ತಿಳಿಸದೆ, ಕೂಡಲೆ ವರಿಷ್ಠ ಅಧಿಕಾರಿಗೆ ತಿಳಿಸುವುದು ಯೋಗ್ಯವಲ್ಲ.

೯ ತನ್ನ ಮನಸ್ಸಿನಲ್ಲಿ ಯಾವನೊಬ್ಬನ ವಿಷಯದಲ್ಲಿ ಕುಕಲ್ಪನೆ ಇದ್ದಲ್ಲಿ ಅದರ ನಿವಾರಣೆಯನ್ನು ಮಾಡಿಕೊಳ್ಳದೆ ಮನಸ್ಸಿನೊಳಗೇ ಇಟ್ಟುಕೊಳ್ಳುವುದು ಮತ್ತು ಮೇಲಧಿಕಾರಿಗೆ ತಿಳಿಸುವ ಸಂದರ್ಭವು ಬಂದಾಗಲೂ ತಿಳಿಸದಿರುವುದು, ಸಂಸ್ಥೆಯಲ್ಲಿ ಹೊಲಸು ಸೇರಲು ಇಂಬುಗೊಟ್ಟಂತೆಯೇ ಸರಿ.

೧೦ ಯಾವ ಸಂಸ್ಥೆಯಲ್ಲಿ ಸದಸ್ಯರ ದೋಷಗಳು ಗುಪ್ತವಾಗಿಯೆ ಚರ್ಚಿಸಲ್ಪಡುತ್ತವೊ, ಅವು ಮೇಲಧಿಕಾರಿಗಳ ಕಿವಿಯ ವರೆಗೂ ಹೋಗುವುದಿಲ್ಲವೊ, ಮತ್ತು ಯಾರ ವಿಷಯದಲ್ಲಿ ಸಂದೇಹ ಬಂದರೂ ಅವರೊಡನೆ ಮಾತನಾಡಿ ಸಂಶಯ ಪರಿಹಾರ ಮಾಡಿಕೊಳ್ಳುವುದಿಲ್ಲವೊ, ಅಂಥ ಸಂಸ್ಥೆಯು ತೇಜಸ್ವಿಯಾಗಿ ಬದುಕಲಾರದು. ಅದರಲ್ಲಿ ಪಾಪ, ದುರಭಿಮಾನ, ಡಾಂಭಿಕತನ, ಅಸತ್ಯ, ನಾಚಿಕೆಗೇಡಿತನ, ಮೊದಲಾದುವು ಸೇರಿ ಅದನ್ನು ಕೊಂದುಬಿಡುವವು.

೪ ಸಂಸ್ಥೆಯ ಆರ್ಥಿಕ ವ್ಯವಹಾರ

೧ ಕಲ್ಯಾಣಕಾರಕವಾದ ಯಾವುದೊಂದು ನಿಜವಾದ ಕಾರ್ಯವು, ಹಣವು ಇಲ್ಲದ್ದರಿಂದ ನಿಂತುಹೋಯಿತೆಂದು ನಾನು ಇನ್ನೂ ವರೆಗೂ ಕೇಳಿಲ್ಲ.

೨ ಭಂಡವಲು ಒಟ್ಟುಗೂಡಿಸಿ ಅದರ ಬಡ್ಡಿಯಿಂದಲೆ ವೆಚ್ಚವನ್ನು ಸಾಗಿಸಬೇಕೆಂಬ ಪ್ರವೃತ್ತಿಯು ಇರಬಾರದು. ಯಾವ ಸಂಸ್ಥೆ ಪ್ರಜೆಗಳಿಗೆ ಉಪಯುಕ್ತವೆಂದು ತೋರುವುದೋ, ಅದಕ್ಕೂ ಆದರ ನಿರ್ವಾಹಕ್ಕೂ ಹಣವು ದೊರೆಯುವು

ದೆಂಬ ದೃಢವಾದ ವಿಶ್ವಾಸ ಸಂಸ್ಥೆಯ ಸಂಚಾಲಕರಲ್ಲಿರಬೇಕು.

೩ ಸಂಸ್ಥೆಯ ಉಪಯುಕ್ತತೆಯ ಬಗೆಗೆ ಜನತೆಯಲ್ಲಿ ಎಲ್ಲಿಯ ವರೆಗೆ ವಿಶ್ವಾಸವುಂಟಾಗುವುದಿಲ್ಲವೊ, ಅಲ್ಲಿಯ ವರೆಗೆ ಅದರ ಸಂಚಾಲಕರು ಹೆಚ್ಚು ಪರಿಶ್ರಮಪಡಬೇಕಾಗುವುದೆಂಬುದು ನಿಜ. ಆದರೆ ಆ ಪರಿಶ್ರಮವು ತಪಶ್ಚರ್ಯೆಯ ಮತ್ತು ಸೇವೆಯ ಭಾಗವೇ ಎನಿಸುವುದು.

೪ ಎಷ್ಟೋ ಸಲ ಸಂಸ್ಥೆಗೆ ದ್ರವ್ಯಸಹಾಯವು ಹೇರಳವಾಗಿ ದೊರೆಯುವುದು. ಸಂಸ್ಥೆಯ ಬಳಿಯಲ್ಲಿದ್ದ ಧನಸಂಗ್ರಹವೆ ಎಷ್ಟೊ ಸಂಸ್ಥೆಗಳ ನಿರ್ಜೀವತೆಗೆ ಕಾರಣವಾಗುವುದು. ಆದ್ದರಿಂದ ಆದರ್ಶ ಸಂಸ್ಥೆಗಳು ಧನಸಂಗ್ರಹದ ಹುಚ್ಚಿಗೆ ಒಳಗಾಗಬಾರದು.

೫ ಸಾರ್ವಜನಿಕ ಧನಸಹಾಯದಿಂದ ನಡೆಯುವ ಸಂಸ್ಥೆಗಳು ಧನದ ಯೋಗ್ಯ ವಿನಿಯೋಗದ ವಿಷಯದಲ್ಲಿ ಗಮನಕೊಡುತ್ತಿರುವುದಿಲ್ಲವೆಂದು ಕಂಡು ಬಂದಿದೆ. ಇದು ಬಹು ದೊಡ್ಡ ದೋಷ. ಹಿಂದುಸ್ತಾನದಂತಹ ಬಡ ದೇಶದ ಸೇವೆಯನ್ನು ಮಾಡುವ ಸಂಸ್ಥೆಗಳು ತೀರ ಕಡಮೆ ವೆಚ್ಚದಿಂದ ನಡೆಯಬೇಕು.

೬ ಸಂಸ್ಥೆಯ ಲೆಕ್ಕಪತ್ರವನ್ನು ಚನ್ನಾಗಿ ಇಡುವುದರ ಕಡೆಗೆ ವಿಶೇಷ ಗಮನಕೊಡತಕ್ಕದ್ದು. ಚಿನಿವಾಲ-ಪದ್ಧತಿಯಂತೆ ಕಾಸು ಕಾಸಿನ ಲೆಕ್ಕವನ್ನೂ ಇಟ್ಟು ಯೋಗ್ಯ ಲೆಕ್ಕಪತ್ರ-ತಪಾಸಿಗರಿಂದ ಲೆಕ್ಕವನ್ನು ಪರೀಕ್ಷಿಸತಕ್ಕದ್ದು.